ISSN 2321 - 3590

# ಇತಿಹಾಸ ದರ್ಪಣ

(ತ್ರೈಮಾಸಿಕ)

## ಚರಿತ್ರಾಸಕ್ತರ ಅಂಕಣ

ಇತಿಹಾಸ ದರ್ಪಣ
(ತ್ರೈಮಾಸಿಕ)

*Itihasa Darpana*
(Quarterly)

ಪುಸ್ತಕ ೧೮
**Book 18**

ಜುಲೈ-ಸೆಪ್ಟೆಂಬರ್-೨೦೧೩
July-September-2013



ಸಂಪಾದಕರು
ಹಂ.ಗು. ರಾಜೇಶ್
ಸಂ.ದೂ. : ೭೮೨೯೪೦೪೦೬೩

Editor
H.G. Rajesh
Mob : 7829404063

ಉಪ ಸಂಪಾದಕರು
ಸುಂಕಂ ಗೋವರ್ಧನ
ರಶ್ಮಿ ಎಸ್.
ಶಿವಕುಮಾರಿ ಎಂ.ಎಸ್.

Sub Editors
Sunkam Govardhan
Rashmi S.
Shivakumari M.S.

ಅಕ್ಷರ ಜೋಡಣೆ
ಮಹೇಶ್ ಎಂ.
ಸಂ.ದೂ. : ೯೯೪೫೮೧೪೭೭೪

DTP
Mahesh M.
Mob : 9945814774

ಮುಖಪುಟ ವಿನ್ಯಾಸ
ಸುರೇಶ್‌ಕುಮಾರ್ ಎಚ್.
ಸಂ.ದೂ. : ೮೯೭೦೬೬೬೮೦೯

Cover Design
Sureshkumar H.
Mob : 8970666809

ಮುದ್ರಕರು
ಶ್ರೀ ರಂಗನಾಥ ಪ್ರಿಂಟರ್ಸ್
ಸಂ.ದೂ. : ೯೮೪೪೧೫೬೧೯೨

Printed at
Sri Ranganatha Printers
Mob : 9844156192

(ಖಾಸಗಿ ಪ್ರಸಾರಕ್ಕಾಗಿ)

*ಓದುಗರ ಸಲಹೆ-ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.*

*E-mail :* ***itihasadarpana@gmail.com***

*ಈ ಪತ್ರಿಕೆಯ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. -ಸಂ.*

**"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED OF OPINIONS EXPRESSED IS ENTIRELY OF THE AUTHOR AND NOT OF THE ICHR."**

# ಪರಿವಿಡಿ. . .


ನುಡಿಗನ್ನಡಿ ... ೫

**–ಹಂ.ಗು. ರಾಜೇಶ್**

೧. ಬದಲಾವಣೆಯತ್ತ ಆರಂಭಿಕ ಮಧ್ಯಕಾಲೀನ ಬೆಂಗಳೂರು ಪರಿಸರ ಹೊಸ ಪರಿವೀಕ್ಷಣೆಗಳ ವಿಶ್ಲೇಷಣೆ ... ೧೧

**–ಹಂ.ಗು. ರಾಜೇಶ್**

೨. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಉಪನಗರವಾಗಿ ಷಹರ್ ಗಂಜಾಂನ ಬೆಳವಣಿಗೆ ... ೪೩

**–ನಮಿತಾ ಪಿ.**

೩. ಹತ್ತೊಂಬತ್ತನೇ ಶತಮಾನದ ಕರ್ನಾಟಕದಲ್ಲಿನ ಬ್ರಿಟಿಷ್ ವಿರೋಧಿ ದಂಗೆಗಳು ... ೫೧

**–ಎ.ಬಿ. ವಗ್ಗರ**

೪. ಉದಾರೀಕೃತ ಭಾರತ ಮತ್ತು ಶಿಕ್ಷಣ : ಗುಸ್ತೆವೋ ಎಸ್ತೆವಾ ವಾಗ್ವಾದಗಳು ... ೫೯

**–ಪ್ರದೀಪ್‌ಕುಮಾರ್ ಶೆಟ್ಟಿ ಕೆ.**

೫. **ನುಡಿ ನಮನ**

ರಾಮ್ ಎಸ್.ಆರ್. ... ೬೭

**–ಎಮ್.ವಿ. ವಿಶ್ವೇಶ್ವರ**

ಶಾಸನತಜ್ಞ ಡಾ. ಕೆ.ವಿ. ರಮೇಶ ... ೭೭

**–ಎಸ್. ಕಾರ್ತಿಕ್**

೬. **ಪುಸ್ತಕ ವಿಮರ್ಶೆ** :

ರಾಯಚೂರು ಜಿಲ್ಲೆಯ ಚರಿತ್ರೆ : ಶಾಸನಗಳ ಹಿನ್ನೆಲೆಯಲ್ಲಿ ... ೯೪

**–ರಡ್ಡೆಪ್ಪ ಪಂಪಣ್ಣ ಹಳ್ಳಿ**







## ವಿಶೇಷ ಸಂಚಿಕೆಗಳ ಮಾರಾಟ

'ಇತಿಹಾಸ ದರ್ಪಣ'ವು ಈವರೆಗೆ ಮೂರು ಸಂಗ್ರಹ ಯೋಗ್ಯವಾದ ವಿಶೇಷ ಸಂಚಿಕೆಗಳನ್ನು ಹೊರತಂದಿದೆ. ಆಯಾ ಕ್ಷೇತ್ರದ ತಜ್ಞರಿಂದಲೇ ಬರೆಸಿ ಹೊರತಂದ ಈ ಕೃತಿಗಳು ನಮ್ಮಲ್ಲಿ ಲಭ್ಯವಿವೆ.

***೧. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ.***

ಒಟ್ಟು ಪುಟಗಳು: ೧೨೦, ಬೆಲೆ: ರೂ. ೯೦/–

ಈ ಕೃತಿಯು ನಾಡಿನ ಮತ್ತು ಹೊರನಾಡಿನ ಹಿರಿಯ ಹಾಗೂ ಯುವ ಸಂಶೋಧಕರುಗಳಾದ ಎಂ.ವಿ.ಶ್ರೀನಿವಾಸ್, ಎಸ್.ಕೆ.ಅರುಣಿ, ಫಾದರ್ ಹೆರಾಸ್, ಶ್ರೀನಿವಾಸ ಶಿಸ್ತಲ, ಕೆ.ಜಿ.ಗೋಪಾಲಕೃಷ್ಣರಾವ್, ಸಿ.ಬಿ.ಪಾಟೀಲ, ಪಿ.ವಿ.ಕೃಷ್ಣಮೂರ್ತಿ, ಎನ್.ವೆಂಕಟರಮಣಯ್ಯ, ಎಚ್.ಎಸ್.ಗೋಪಾಲ್ ರಾವ್, ಮನು ವಿ. ದೇವದೇವನ್, ಹರಿಹರ ಶ್ರೀನಿವಾಸರಾವ್, ಕೆ.ವಸಂತಲಕ್ಷ್ಮಿ, ಕೂ.ಸ.ಅಪರ್ಣ, ಗಿರಿಜಾಪತಿ, ಆರ್.ಶೇಷಶಾಸ್ತ್ರಿ, ಅ.ಲ.ನರಸಿಂಹನ್ ಹಾಗೂ ಸುಂಕಂ ಗೋವರ್ಧನ ಅವರುಗಳ ವಿದ್ವತ್ಪೂರ್ಣ ಲೇಖನಗಳನ್ನು ಒಳಗೊಂಡಿದೆ.

***೨. ನಮ್ಮ ಬೆಂಗಳೂರು.***

ಒಟ್ಟು ಪುಟಗಳು: ೧೧೨, ಬೆಲೆ: ರೂ. ೧೦೦/–

ಈ ಕೃತಿಯು ಎಚ್.ಎಸ್.ದೊರೆಸ್ವಾಮಿ, ಸುಂಕಂ.ಗೋವರ್ಧನ, ಪಿ.ವಿ.ಕೃಷ್ಣಮೂರ್ತಿ, ಎಸ್.ಕೆ.ಅರುಣಿ, ಎಂ.ಜಮುನ, ಸುರೇಶ್ ಮೂನ, ಎಸ್.ಎಲ್.ಶ್ರೀನಿವಾಸಮೂರ್ತಿ, ವೇಮಗಲ್ ಸೋಮಶೇಖರ್, ರಶ್ಮಿ.ಎಸ್, ಆರ್.ಡಿ.ಪವಮಾನ, ಅ.ಲ.ನರಸಿಂಹನ್, ಹಂ.ಗು.ರಾಜೇಶ್, ಎಂ.ಎನ್.ಉಮೇಶ್ ಅವರ ಅಮೂಲ್ಯ ಲೇಖನಗಳ ಜೊತೆಗೆ ಬೆಂಗಳೂರು ಕುರಿತು ಈವರೆಗೂ ಪ್ರಕಟವಾಗಿರುವ ಕೃತಿಗಳ ವಿವರ ಮತ್ತು ಐತಿಹಾಸಿಕ ಚಿತ್ರಗಳ ಸಂಗ್ರಹವನ್ನು ಒಳಗೊಂಡಿದೆ. ಈ ಕೃತಿಯನ್ನು ಎಸ್.ಕೆ.ಅರುಣಿ ಅವರು ಸಂಪಾದಿಸಿದ್ದಾರೆ.

***೩. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು.***

ಒಟ್ಟು ಪುಟಗಳು: ೧೭೬, ಬೆಲೆ: ರೂ. ೧೧೦/–

ಇದು ಕರ್ನಾಟಕದ ಪುರಾತತ್ವ ಅಧ್ಯಯನಗಳನ್ನು ಕುರಿತು ಸಂಕ್ಷಿಪ್ತ ಚಿತ್ರಣವನ್ನು ಕಟ್ಟಿಕೊಡುವ ಅಪರೂಪದ ಕೃತಿಯಾಗಿದೆ. ಈ ಕೃತಿಗೆ ನಾಡಿನ ಹಿರಿಯ ಮತ್ತು ಯುವ ಪುರಾತತ್ವ ತಜ್ಞರುಗಳಾದ– ಎಂ.ಎಸ್.ಕೃಷ್ಣಮೂರ್ತಿ, ಎಸ್.ನಾಗರಾಜು, ವಿ.ಶೋಭಾ, ಕೆ.ಬಿ.ಶಿವತಾರಕ್, ಎಚ್.ಎಂ.ಅನಿತಾ, ಲ.ನ.ಸ್ವಾಮಿ, ಸಿ.ಎಸ್.ವಾಸುದೇವನ್, ಜಗದೀಶ್ ಅವರುಗಳು ಕೊಡುಗೆ ನೀಡಿದ್ದಾರೆ. ಅಪೂರ್ವ ಛಾಯಾಚಿತ್ರಗಳನ್ನು ಒಂದೆಡೆ ಪ್ರತ್ಯೇಕವಾಗಿಯೇ ನೀಡಲಾಗಿದೆ. ಈ ಕೃತಿಯನ್ನು ಎಸ್.ಕೆ.ಅರುಣಿ ಮತ್ತು ಹಂ.ಗು.ರಾಜೇಶ್ ಸಂಪಾದಿಸಿದ್ದಾರೆ.

ಈ ಮೇಲಿನ ಬಿಡಿ ಕೃತಿಗಳು ಬೇಕಾದಲ್ಲಿ ಈ ಕೆಳಕಂಡ ವಿಳಾಸಕ್ಕೆ ಕೃತಿಯ ಮೊತ್ತದ ಜೊತೆಗೆ ರೂ.೨೦/– ಅಂಚೆವೆಚ್ಚ ಸೇರಿಸಿ, ಎಂ.ಓ /ಡಿ.ಡಿ ಯನ್ನು ತಮ್ಮ ವಿಳಾಸದ ಜೊತೆಗೆ ಕಳುಹಿಸಿಕೊಡಿ.

**ವಿಶೇಷ ಕೊಡುಗೆ: ರೂ.೨೫೦/– ಗಳಿಗೆ ಮೂರೂ ಕೃತಿಗಳನ್ನು ಕಳುಹಿಸಿಕೊಡಲಾಗುವುದು.**

**ವಿಳಾಸ: ಸಂಪಾದಕರು, 'ಇತಿಹಾಸ ದರ್ಪಣ', #೩೩ ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು–೫೬೦೦೯೧. ಮೊ– ೭೮೯೪೪೦೪೦೬೩.**

# ನುಡಿಗನ್ನಡಿ

## ಶಿಕ್ಷಣ ಸಂವರ್ಧನೆ

**ಸ**ಜ್ಜನರೂ, ಸಂವೇದನಾಶೀಲರೂ ಆದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಮಾನ್ಯ ಕಿಮ್ಮನೆ ರತ್ನಾಕರ್ ಅವರು ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸುವ ಕುರಿತು ಮಾತನಾಡುವ ಮೂಲಕ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಇದರ ಬೆನ್ನಲ್ಲೆ ಶಿಕ್ಷಕರ ದಿನಾಚರಣೆಯಂದು ಖಾಸಗಿ ಶಾಲೆಗಳ ಸಂಘಟನೆಯವರು ಸಚಿವರಿಗೆ ತಾಕತ್ತಿದ್ದರೆ ರಾಷ್ಟ್ರೀಕರಣಗೊಳಿಸಿ ಎಂಬಂತೆ ಗುಟುರು ಹಾಕಿದ್ದಾರೆ. ಇವತ್ತು ಶಿಕ್ಷಣ ಕ್ಷೇತ್ರ ಬಹುದೊಡ್ಡ ಉದ್ಯಮವಾಗಿರುವಾಗ ಮತ್ತು ಬಹುಪಾಲು ಖಾಸಗಿ ಶಿಕ್ಷಣ ಸಂಸ್ಥೆಗಳು ರಾಜಕಾರಣಿಗಳು ಹಾಗೂ ಧಾರ್ಮಿಕ ಸಂಸ್ಥೆಗಳ ನಿಯಂತ್ರಣದಲ್ಲಿರುವಾಗ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸುವ ಮಾತನ್ನಾಡಿರುವುದು ಮೆಚ್ಚತಕ್ಕದ್ದಾದರೂ, ಜಾರಿಗೊಳಿಸುವ ವಿಚಾರ ಬಂದಾಗ ಸಚಿವರಿಗೆ ಕೆಚ್ಚೆದೆಯ ಗುಂಡಿಗೆಯೇ ಬೇಕು. ಏಕೆಂದರೆ ಈ ವಿಚಾರ ಅವರ ಸಚಿವ ಸ್ಥಾನಕ್ಕೂ ಕುತ್ತು ತಂದರೂ ತರಬಹುದು. ಜೊತೆಗೆ ಇದು ಶಿಕ್ಷಣವನ್ನು ನಿಯಂತ್ರಿಸಬಹುದಾದ ಋಣಾತ್ಮಕ ಮಾರ್ಗ ಮಾತ್ರವಲ್ಲ ಅಷ್ಟೇ ದುರ್ಗಮ ಮಾರ್ಗವೂ ಹೌದು.

ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ನೇರ ಪ್ರಹಾರ ಮಾಡುವ ಈ ಮಾರ್ಗೋಪಾಯದ ಬದಲಿಗೆ ಸಮಾಜದ ಎಲ್ಲ ವರ್ಗದ ಜನರಿಗೂ ಸರ್ಕಾರಿ ಶಾಲೆಗಳಲ್ಲಿಯೇ ಗುಣಾತ್ಮಕ ಶಿಕ್ಷಣವು ಲಭಿಸುವಂತೆ ಮಾಡುವ ಧನಾತ್ಮಕ ಮಾರ್ಗವನ್ನು ಸರ್ಕಾರ ಅನುಸರಿಸುವುದು ಅತ್ಯಂತ ಸಮಂಜಸವಾದುದಾಗಿದೆ.

ಹಾಗಾದರೆ ಏನು ಮಾಡಬೇಕು! ಗುಣಾತ್ಮಕ ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ಸರ್ಕಾರಿ ಶಾಲೆಗಳಲ್ಲಿ ಕೊಡುವ ಸಂಬಂಧ ಕೆಲವು ಮೂಲಭೂತ ಸಮಸ್ಯೆಗಳಿವೆ. ಆ ಸಮಸ್ಯೆಗಳೇನು ಎಂಬುದನ್ನು ಅರಿತು ಅವುಗಳಿಗೆ ಮಾರ್ಗೋಪಾಯ ಕಂಡುಕೊಳ್ಳಬೇಕಿದೆ. ಸಮಸ್ಯೆಗಳನ್ನು ನೋಡುವುದಾದರೆ, ದಿನೇ ದಿನೇ ಗುಣಾತ್ಮಕ ಶಿಕ್ಷಣದಲ್ಲಿ ಕುಸಿತ ಉಂಟಾಗುತ್ತಿರುವುದೇಕೆ? ನಾವು ಕಲಿಸುವ ಪಠ್ಯಾಧಾರಿತ ಶಿಕ್ಷಣ ನಿತ್ಯದ ಬದುಕಿಗೆ ಎಷ್ಟರ ಮಟ್ಟಿಗೆ ಅನ್ವಯವಾಗುತ್ತಿದೆ? ನಾವು ನಮ್ಮ ಮಕ್ಕಳಿಗೆ ಎಂತಹ ಶಿಕ್ಷಣ ಕಲಿಸಬೇಕು? ಸಮಾಜದ ಎಲ್ಲ ವರ್ಗದ ಮಕ್ಕಳಿಗೆ ಸಮಾನ ಶಿಕ್ಷಣವನ್ನು ಕೊಡುವುದಾದರೂ ಹೇಗೆ? ಉಳ್ಳವರ ಸ್ವತ್ತಾಗಿರುವ ಶಿಕ್ಷಣವನ್ನು ಖಾಸಗಿ ಶಾಲೆಗಳ ಕಪಿಮುಷ್ಟಿಯಿಂದ ಮುಕ್ತಗೊಳಿಸುವುದು ಹೇಗೆ? ಇವೇ ಮೊದಲಾದ ನನ್ನೊಳಗಿನ ಪ್ರಶ್ನೆಗಳಿಗೆ ನನ್ನದೇಯಾದ ಉತ್ತರಗಳನ್ನು, ಅದಕ್ಕೂ ಮೊದಲು ಸಮಸ್ಯೆಯ ಮೂಲಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ನನ್ನ ಆಲೋಚನೆಯ ಸರಿತಪ್ಪುಗಳ ನಿಷ್ಕರ್ಷೆ, ವಿಮರ್ಶೆ ನಿಮಗೆ ಬಿಟ್ಟಿದ್ದು. ಒಟ್ಟಾರೆ ಹೇಳುವುದಾದರೆ ನಮ್ಮ ಶಿಕ್ಷಣದ ಸಮಸ್ಯೆಗಳನ್ನು ಇಲ್ಲಿ ಚರ್ಚಿಸುತ್ತಾ, ಶಿಕ್ಷಣದ ಬಲವರ್ಧನೆಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳ ಬಗೆಗೆ ವಿಚಾರ ನಡೆಸಿದ್ದೇನೆ.

ಮೊದಲಿಗೆ ಗುಣಾತ್ಮಕ ಶಿಕ್ಷಣದಲ್ಲಿ ದಿನೇ ದಿನೇ ಕುಸಿತ ಉಂಟಾಗುತ್ತಿರುವ ವಿಚಾರ– ಕುಸಿತವಾಗುತ್ತಿದೆ ಎಂಬುದನ್ನು ಬಹುತೇಕರು ಒಪ್ಪದಿರಬಹುದು. ಏಕೆಂದರೆ ಹಿಂದೆ ಎಸ್.ಎಸ್.ಎಲ್.ಸಿ, ಪಿ.ಯು.ಸಿಯಂತಹ ಸಾರ್ವತ್ರಿಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತಿದ್ದ ಪ್ರಮಾಣಕ್ಕೂ ಇವತ್ತು





ತೇರ್ಗಡೆಯಾಗುತ್ತಿರುವ ಪ್ರಮಾಣಕ್ಕೂ ತುಲನೆ ಮಾಡಿ ತೋರಿಸುವವರಿದ್ದಾರೆ. ಆದರೆ ಎಷ್ಟು ಮಂದಿ ಉತ್ತೀರ್ಣರಾದರು ಎಂಬುದಕ್ಕಿಂತ ಎಷ್ಟು ಮಂದಿ ಏನನ್ನು ಕಲಿತರು ಎಂಬುದು ಮುಖ್ಯ.

ಇವತ್ತಿನ ಪೋಷಕರ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಮನೋಗತವೇ ಬದಲಾಗಿದೆ. ವರ್ಷವೆಲ್ಲ ಹೆಚ್ಚಿನ ಅಂಕಗಳಿಸುವ ಒತ್ತಡದಲ್ಲಿ ಓದಿದ್ದನ್ನು ವಿದ್ಯಾರ್ಥಿ ಪರೀಕ್ಷೆ ಬರೆಯುತ್ತಲೇ ಮರೆತುಬಿಡುತ್ತಾನೆ. ಆ ವರ್ಷ ಓದಿದ್ದು ಆ ವರ್ಷದ ಕೊನೆಯಲ್ಲಿ ಬರೆದ ಪರೀಕ್ಷೆಗಷ್ಟೇ ಸೀಮಿತವಾದರೆ, ಅವನು ಕಲಿತಿದ್ದಾದರೂ ಏನು? ಪರೀಕ್ಷೆಯ ದೃಷ್ಟಿಯಿಂದ ಒತ್ತಡದಲ್ಲಿ ಕಲಿಯಲೇಬೇಕಾದ ಮಕ್ಕಳು ಒಂದು ಕಡೆಯಾದರೆ, ಶಿಕ್ಷಣದ ಅಪಮೌಲೀಕರಣದಲ್ಲಿ ಶಿಕ್ಷಕರ / ಭೋದಕರ ಪಾತ್ರ ಮತ್ತೊಂದು ಕಡೆ. ಅಧ್ಯಯನ, ಅಧ್ಯಾಪನಗಳಲ್ಲಿ ತೊಡಗಬೇಕಾದ ಶಿಕ್ಷಕ / ಭೋದಕ ವರ್ಗದಲ್ಲಿ ಬಹು ಮಂದಿ ಅದನ್ನು ಬಿಟ್ಟು ಉಳಿದ (ವ್ಯಾಪಾರ, ರಾಜಕಾರಣ, ಲೇವಾದೇವಿ ವ್ಯವಹಾರ ದಿಂದ ಹಿಡಿದು ಪರೀಕ್ಷೆ ಅಕ್ರಮಗಳವರೆಗೆ) ಏನೆಲ್ಲವನ್ನೂ ಮಾಡುತ್ತಿದ್ದಾರೆ. ಅದರಲ್ಲಿಯೂ ಉನ್ನತ ಶಿಕ್ಷಣದಲ್ಲಿರುವ ಕೆಲವು ಮಹಾ ಪ್ರಭೃತಿಗಳ ಚಟುವಟಿಕೆಗಳನ್ನು ಬಣ್ಣಿಸಲು ಪದಗಳೇ ಸಾಲದು. ಇದರಿಂದ ಬೌದ್ಧಿಕ ದಿವಾಳಿತನ ಶಿಕ್ಷಕ / ಭೋದಕ ವರ್ಗವನ್ನು ಬಾಧಿಸುತ್ತಿದೆ. ನಮ್ಮ ಪರೀಕ್ಷೆ ಮತ್ತು ಮೌಲ್ಯಮಾಪನ ಕುರಿತು ಹೇಳುವುದಾದರೆ, ಒಂದು ಕಥೆ ನೆನಪಾಗುತ್ತದೆ. ಒಂದು ಪರೀಕ್ಷೆಯಲ್ಲಿ ಆನೆಗೆ ಎಷ್ಟು ಕಾಲುಗಳು? ಎಂದು ಪ್ರಶ್ನೆಯನ್ನು ಕೇಳಲಾಗಿತ್ತು. ಮೌಲ್ಯಮಾಪನದ ವೇಳೆ ಶಿಕ್ಷಕ ಆನೆಗೆ ಮೂರು ಕಾಲು ಎಂದು ಬರೆದಿದ್ದ ಉತ್ತರಕ್ಕೆ ಸೊನ್ನೆ ನೀಡಿದ. ಅದನ್ನು ನೋಡಿದ ಮೇಲ್ವಿಚಾರಕನು ಶಿಕ್ಷಕನನ್ನು ಕರೆದು 'ಆನೆಗೆ ನಾಲ್ಕು ಕಾಲು ಎಂದು ಬರೆದಿದ್ದರೆ ನಾಲ್ಕೂ ಅಂಕಕೊಡು. ಒಂದು ವೇಳೆ ಮೂರು ಬರೆದಿದ್ದರೆ ಮೂರು ಅಂಕ, ಎರಡು ಬರೆದಿದ್ದರೆ ಎರಡು ಅಂಕ, ಆನೆಗೆ ಕಾಲೇ ಇಲ್ಲವೆಂದಿದ್ದರೆ ಸೊನ್ನೆ ಅಂಕ ಕೊಡು' ಎಂಬುದಾಗಿ ಸೂಚಿಸಿದನಂತೆ. ಈ ರೀತಿ ಪರೀಕ್ಷೆ, ಮೌಲ್ಯಮಾಪನಗಳಿಂದ ಶಿಕ್ಷಣದ ಗುಣಮಟ್ಟ ವೃದ್ಧಿಸದು. ಕೇವಲ ಅಂಕ ಪಟ್ಟಿ ಮೇಲಿನ ಅಂಕದಿಂದ ವಿದ್ಯಾರ್ಥಿಯ ಬುದ್ಧಿವಂತಿಕೆಯನ್ನು ಅಳೆಯಲಾಗದು.

ಎರಡನೆಯದಾಗಿ– ನಾವು ಕಲಿಸುವ ಶಿಕ್ಷಣ ನಿತ್ಯದ ಬದುಕನ್ನು ಎಷ್ಟರ ಮಟ್ಟಿಗೆ ರೂಪಿಸಬಲ್ಲದು? ಬದುಕಿಗೆ ಅನ್ವಯವಾಗಬಲ್ಲದು? ಒಂದು ನೈಜ ಘಟನೆಯನ್ನು ತಿಳಿಸಲಿಚ್ಚಿಸುತ್ತೇನೆ. ಒಂದು ಮನೆ ನಿರ್ಮಾಣದ ಕೆಲಸ ನಡೆಯುತ್ತಿತ್ತು. ಅಲ್ಲಿ ಹತ್ತಾರು ಗಾರೆಕೆಲಸಗಾರರು ಕೆಲಸಮಾಡುತ್ತಿದ್ದರು. ಅದನ್ನು ನೋಡಿಕೊಳ್ಳಲು ಒಬ್ಬ ಯುವ ಸಿವಿಲ್ ಎಂಜಿನಿಯರ್ ಇದ್ದ. ಆ ಮನೆಯ ಪ್ಲಾಸ್ಟ್ರಿಂಗ್ ಕೆಲಸ ನಡೆಯುತ್ತಿತ್ತು. ವೆಂಕಟೇಶ ಎಂಬ ಗಾರೆಕೆಲಸಗಾರ ಮುಂಜಾನೆಯಿಂದ ಮಾಡಿದ ಪ್ಲಾಸ್ಟ್ರಿಂಗ್ ತುಸು ದಪ್ಪವಾಗಿದೆ ಎಂದು ಮಧ್ಯಾಹ್ನ ಇಕ್ಕೆ ಬಂದ ಆ ಎಂಜಿನಿಯರ್ ಕರಣೆಯಿಡಿದು ಎಲ್ಲವನ್ನು ಕೆರೆದು ಹಾಕಿ ಮೊದಲಿನಿಂದ ಪ್ಲಾಸ್ಟ್ರಿಂಗ್ ಮಾಡುವಂತೆ ಘರ್ಜಿಸಿದ. ಇದರಿಂದ ಮುಂಜಾನೆಯಿಂದ ಮಾಡಿದ ಕೆಲಸಕ್ಕೆ ಕೂಲಿ ಕಳೆದುಕೊಂಡ ವೆಂಕಟೇಶನಿಗೆ ಸಿಟ್ಟು ನೆತ್ತಿಗೇರಿತು. ಮಟ್ಟಕೋಲು ಹಿಡಿದು ಎಂಜಿನಿಯರ್‌ಗೆ ಸರಿಯಾಗಿ ಒಂದು ಬಾರಿಸಿ "...ಮಗನೆ, ಅದೇ ಕರಣೆಯಲ್ಲಿ ನಾಲ್ಕು ಕರಣೆ ಸಿಮೆಂಟ್ ಬಳಿದು ಹೇಗೆ ಪ್ಲಾಸ್ಟ್ರಿಂಗ್ ಮಾಡಬೇಕೆಂದು ತೋರಿಸು. ನೀನು ತೋರಿಸಿದ ಹಾಗೆಯೇ ನಾನು ಮಾಡುತ್ತೇನೆ" ಎಂದ. ಅನಿರೀಕ್ಷಿತವಾಗಿ ಬಿದ್ದ ಹೊಡೆತ ಮತ್ತು ಮಾತಿನ ಆರ್ಭಟದಿಂದ ತಬ್ಬಿಬ್ಬಾದ ಎಂಜಿನಿಯರ್ ಅಲ್ಲಿಂದ ಹೇಳದೆ ಕೇಳದೆ ಕಾಲುಕಿತ್ತ.

ಒಮ್ಮೆ ನನ್ನ ಕನ್ನಡ ಮೇಷ್ಟ್ರು ಒಬ್ಬರು ಹೇಳುತ್ತಿದ್ದರು– "ನನ್ನ ಮಗ ಎಂ.ಎಸ್ಸಿ ಭೌತಶಾಸ್ತ್ರ ವಿದ್ಯಾರ್ಥಿ. ಆದ್ರೆ, ಅವನಿಗೆ ಒಂದು ಸ್ವಿಚ್ ಬದಲಾಯಿಸಲು ಬರಲ್ಲ. ಅವನಿಗೆ ನಾನು ಫೇಸ್

ಯಾವುದು? ನ್ಯೂಟ್ರಲ್ ಯಾವುದು? ಅರ್ಥಿಂಗ್ ಯಾವುದು? ಎಂಬುದನ್ನು ಹೇಳಿಕೊಟ್ಟೆ". ಇಷ್ಟರ ಮಟ್ಟಿಗೆ ನಾವು ಕಲಿಸುವ ಶಿಕ್ಷಣ ಬದುಕಿಗೆ ಹತ್ತಿರವಾಗಿದೆ!

ಇಂದು ಅಂತರ್ಶಿಸ್ತೀಯ ಅಧ್ಯಯನಗಳು ದೂರವಾಗಿ ಸ್ಪೆಷಲೈಜೇಷನ್‌ಗೆ ಹೆಚ್ಚು ಆದ್ಯತೆ ನೀಡಲಾಗುತ್ತಿರುವುದು ಹಾಗೂ ಸಿದ್ಧಾಂತ ಮತ್ತು ಪ್ರಾಯೋಗಿಕತೆ ನಡುವೆ ಸಮನ್ವಯ ಇಲ್ಲದಿರುವುದು ಮತ್ತೊಂದು ರೀತಿಯ ಸಮಸ್ಯೆಗೆ ಕಾರಣ. ಒಮ್ಮೆ ರೋಗಿಯೊಬ್ಬ ಸ್ಪೆಷಲಿಸ್ಟ್ ಕಿವಿ ವೈದ್ಯನ ಬಳಿಗೆ ಬಂದು "ಸಾರ್, ನನ್ನ ಬಲ ಕಿವಿ ನೋಯುತ್ತಿದೆ ನೋಡಿ..." ಎಂದನಂತೆ. ಅದಕ್ಕೆ ವೈದ್ಯನು "ನಾನು ಎಡ ಕಿವಿಗೆ ಮಾತ್ರ ಸ್ಪೆಷಲಿಸ್ಟ್, ಬಲ ಕಿವಿಗಾದರೆ ನೀವು ಅಲ್ಲಿ ಹೋಗಿ" ಎಂದು ಕೈ ತೋರಿಸಿದನಂತೆ. ಇದು ಸ್ಪೆಷಲೈಜೇಷನ್ ಕುರಿತು ಹೇಳುವ ತಮಾಷೆಯ ಮಾತಾದರೂ ಇವತ್ತಿನ ಸಂದರ್ಭಕ್ಕೆ ಔಚಿತ್ಯವೆನಿಸುತ್ತದೆ.

ಬಹುತೇಕ ಸಮಾಜ ಘಾತಕ ಶಕ್ತಿಗಳೆಲ್ಲ ವಿದ್ಯಾವಂತ ವರ್ಗವೇ ಆಗಿದೆ. ಅನಕ್ಷರಸ್ಥರಾದವರೆಂದೂ ಈ ಸಮಾಜಕ್ಕೆ ಕಂಠಕರಾಗಿರುವುದಕ್ಕಿಂತ ಸುಶಿಕ್ಷಿತರೇ ಅನಕ್ಷರಸ್ಥರಿಗೆ ಕಂಠಕರಾಗಿರುವುದು ಹೆಚ್ಚು. ಸಾಕ್ಷರತೆ ಕಡಿಮೆ ಇದ್ದಾಗ ಅಪರಾಧಗಳ ಸಂಖ್ಯೆ ಕಡಿಮೆ ಇತ್ತು. ಸಾಕ್ಷರತಾ ಪ್ರಮಾಣ ಹೆಚ್ಚಾಗುತ್ತಿದ್ದಂತೆ ಅಪರಾಧಗಳ ಪ್ರಮಾಣ ಕೂಡ ಹೆಚ್ಚುತ್ತಿರುವುದು ವಾಸ್ತವ ಸಂಗತಿ. ಹಾಗಾದರೆ ಶಿಕ್ಷಣದಿಂದ ನಾವು ಕಲಿಸುತ್ತಿರುವುದೇನು? ಶಿಕ್ಷಣವು ಕಳ್ಳರು, ಸುಳ್ಳರು, ಸಮಾಜ ಘಾತಕರನ್ನು ಸೃಷ್ಟಿಸುತ್ತಿದೆಯೇ? ಇನ್ನು ಡಬಲ್, ತ್ರಿಬಲ್ ಡಿಗ್ರಿ ಪಡೆದ ಅದೆಷ್ಟೋ ಜನ ಯುವಕ / ಯುವತಿಯರು ದಿನ ಬೆಳಗಾದರೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಉನ್ನತ ಶಿಕ್ಷಣ ಕಲಿಸಿದ್ದು ಇದೇನಾ? ಪ್ರಶ್ನೆ ಮಾಡಿಕೊಳ್ಳಬೇಕಿದೆ ನಮ್ಮ ಭೋದಕ ಸಮುದಾಯ.

ಅನಕ್ಷರಸ್ಥ ಗಾರೆಕೆಲಸದ ವೆಂಕಟೇಶ ಎಸೆದ ಸವಾಲನ್ನು ಸಿವಿಲ್ ಎಂಜಿನಿಯರ್ ಸ್ವೀಕರಿಸದೆ ಓಡಿಹೋದ. ನಮ್ಮ ಕನ್ನಡ ಮೇಷ್ಟ್ರು ಭೌತಶಾಸ್ತ್ರ ಪದವೀಧರ ಮಗನಿಗೆ ವಿದ್ಯುತ್ ಸರ್ಕ್ಯೂಟ್ ಬಗ್ಗೆ ಪರಿಚಯಮಾಡಿಕೊಟ್ಟರು. ಸಮಾಜ ದ್ರೋಹಿಗಳನ್ನು ಸೃಷ್ಟಿಸುತ್ತಿರುವ ಶಿಕ್ಷಣ ವ್ಯವಸ್ಥೆ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ನೈಪುಣ್ಯತೆಯನ್ನು ಕಲಿಸದ ಉನ್ನತ ಶಿಕ್ಷಣ. ವಿದ್ಯಾರ್ಥಿಗಳಿಗೆ ನಾವು ಪ್ರಾಯೋಗಿಕ ಅನುಭವಗಳನ್ನುಂಟು ಮಾಡಬೇಕಿದೆ. ಸಾಮಾಜಿಕ ಮೌಲ್ಯಗಳನ್ನು ಕಲಿಸಬೇಕಿದೆ ಮತ್ತು ಜೀವನ ಪ್ರೀತಿ, ಜೀವನ ಮೌಲ್ಯಗಳನ್ನು ಮೈಗೂಡಿಸ ಬೇಕಿದೆ. ಈ ವಿಚಾರಗಳಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ನಾವುಗಳು ಸೋತಿದ್ದೇವೆ.

ಈ ಸ್ಥಿತಿಗೆ ಮೂಲ ಕಾರಣ ಪ್ರತಿಭಾವಂತರು ಹಣದ ಬೆನ್ನೇರಿ ಹೊರಟು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸದಿರುವುದು.

ಇತ್ತೀಚಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿಯಲ್ಲಿ ಪ್ರತಿಭಾವಂತರೆನಿಸಿಕೊಂಡ ಬಹುತೇಕ 'ಕೆನೆ ಪದರ' (Cream layer) ವಿದ್ಯಾರ್ಥಿಗಳ ಆಯ್ಕೆ ಪಿ.ಯು.ಸಿಯಲ್ಲಿ ವಿಜ್ಞಾನ ವಿಷಯವಾದರೆ, ಸರಾಸರಿ ವಿದ್ಯಾರ್ಥಿಗಳ ಸಾಮಾನ್ಯ ಆಯ್ಕೆ ವಾಣಿಜ್ಯ ವಿಷಯಗಳಾಗಿರುತ್ತದೆ. ಸಾಧಾರಣ ವಿದ್ಯಾರ್ಥಿಗಳು ಕಲಾ ವಿಭಾಗದ ಕಡೆಗೆ ಹೋಗುತ್ತಾರೆ. ಪ್ರತಿಭಾವಂತರೆನಿಸಿಕೊಂಡ ವಿಜ್ಞಾನ ವಿದ್ಯಾರ್ಥಿಗಳ ಕನಸು ಪಿ.ಯು.ಸಿ ನಂತರ ವೈದ್ಯಕೀಯ / ಎಂಜಿನಿಯರಿಂಗ್ ಸೀಟುಗಳಿಸುವುದೇ ಆಗಿದ್ದರೆ, ಇನ್ನು ಕೆಲವರು ಸಾಫ್ಟ್‌ವೇರ್ ಕ್ಷೇತ್ರಕ್ಕೆ ಪ್ರವೇಶಿಸುವುದಾಗಿರುತ್ತದೆ. ಯಾವೊಬ್ಬ ರ್‍ಯಾಂಕಿಂಗ್ ವಿದ್ಯಾರ್ಥಿಯೂ 'ನಾನು ಉಪನ್ಯಾಸಕ / ಪ್ರಾಧ್ಯಾಪಕನಾಗುತ್ತೇನೆ' ಎಂದು ಹೇಳಿರುವ ನಿದರ್ಶನಗಳನ್ನು ನಾನು ಈವರೆಗೂ ಕೇಳಿಲ್ಲ. ತಮಗೆ ಕಲಿಸಿದ ಗುರುಗಳ ವೃತ್ತಿಯ ಬಗೆಗೆ ವಿದ್ಯಾರ್ಥಿಗಳಲ್ಲಿ ಯಾವ





ಭಾವನೆಗಳಿರಬಹುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಆಕರ್ಷಕ ವೃತ್ತಿಗಳಿಗೆ ಪ್ರಯತ್ನಿಸಿ ಸೀಟು ಗಿಟ್ಟಿಸುವಲ್ಲಿ ವಿಫಲರಾದವರು ಬೇರೆಲ್ಲಿಯೂ ಅವಕಾಶಗಳು ದೊರಕದಿದ್ದಾಗ ಕೊನೆಗೆ ಶಿಕ್ಷಣ ಕ್ಷೇತ್ರ ಪ್ರವೇಶಿಸುವುದು ವಾಡಿಕೆಯಾಗಿದೆ. ಕಾಮರ್ಸ್‌ನ ರ್‍ಯಾಂಕಿಂಗ್ ವಿದ್ಯಾರ್ಥಿಗಳು ಅಷ್ಟೇ, ಚಾರ್ಟೆಡ್ ಅಕೌಂಟೆಂಟ್, ಎಂ.ಬಿ.ಎ ಮೊದಲಾದ ಹಣ ಸಂಪಾದನೆಯ ವೃತ್ತಿಗಳ ಕಡೆಗೆ ಆಕರ್ಷಿತರಾದರೆ, ಕಲಾ ವಿಭಾಗದಲ್ಲಿಯೂ ಪ್ರತಿಭಾವಂತರ ಮೊದಲ ಆಯ್ಕೆ ಐ.ಎ.ಎಸ್, ಕೆ.ಎ.ಎಸ್‌ನಂತಹ ಅಧಿಕಾರಸ್ಥ ಮತ್ತು ಪ್ರಭಾವಿ ಹುದ್ದೆಗಳನ್ನು ಹೊಂದುವುದೇ ಆಗಿರುತ್ತದೆ (ಬೆಂಗಳೂರು ವಿ.ವಿ.ಯ ಅರ್ಥಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿದ್ದ ಡಾ.ರವಿ ತಿರ್ಲಾಪುರ್ ಅವರಂತಹ ಪ್ರತಿಭಾವಂತರು ತಹಶೀಲ್ದಾರರಾಗಿ ಹೋದದ್ದನ್ನು ಸ್ಮರಿಸಬಹುದು).

ಕಳೆದ ೨೦ ವರ್ಷಗಳಿಂದೀಚೆಗೆ (ಭಾರತ ಜಾಗತೀಕರಣಕ್ಕೆ ತೆರೆದುಕೊಂಡ ನಂತರ) ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗಗಳಲ್ಲಿ ಶಿಕ್ಷಕ, ಉಪನ್ಯಾಸಕ ಮತ್ತು ಪ್ರಾಧ್ಯಾಪಕ ಹುದ್ದೆಗಳಿಗೆ ಹೋಗುತ್ತಿರುವವರೆಲ್ಲ ಸಾಮಾನ್ಯವಾಗಿ ಆಯಾ ವಿಭಾಗಗಳಲ್ಲಿ ಪ್ರತಿಭಾನ್ವಿತರೆನಿಸಿ ಕೊಂಡವರೇನೂ ಅಲ್ಲ. ಒಂದು ವೇಳೆ ಹಾಗೆ ರ್‍ಯಾಂಕ್ ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದ್ದಾರೆಂದರೆ ಬಹುಶಃ ಅವರು ಬೇರೆಡೆಗಳಲ್ಲಿ ಅವಕಾಶ ವಂಚಿತ ಪ್ರತಿಭಾವಂತರಾಗಿರುತ್ತಾರೆ ಇಲ್ಲವೇ, ಮುಂದಿನ ಜಿಗಿತಕ್ಕೆ ಹಲಗೆಯಾಗಿ ಬಳಸಿಕೊಂಡು ಹೋಗುವವರಾಗಿರುತ್ತಾರೆ. ಹೀಗಾಗಿ ಶಿಕ್ಷಣ ಕ್ಷೇತ್ರ ಎಂಬುದು ಅವಕಾಶ ವಂಚಿತರ ನಿರಾಶ್ರಿತ ತಾಣ, ಮಹತ್ವಾಕಾಂಕ್ಷಿಗಳ ವಿಶ್ರಾಂತ ತಾಣ ಹಾಗೂ ಸಾಮಾನ್ಯರ ಮಹತ್ವಾಕಾಂಕ್ಷೆಯ ನೆಲಸುತಾಣವಾಗಿದೆ ಎಂದರೆ ಸಿನಿಕತನ ಎನಿಸಬಹುದು. ಆದರೂ ಇದು ವಾಸ್ತವ ಸಂಗತಿಯಲ್ಲವೆ? ಅಂತಿಮವಾಗಿ ಶಿಕ್ಷಣ ಕ್ಷೇತ್ರದಲ್ಲಿ ಉಳಿಯುತ್ತಿರುವವರು ಅವಕಾಶ ವಂಚಿತ ಅತೃಪ್ತ ಆತ್ಮಗಳು ಮತ್ತು ಸಾಧಾರಣ ಪ್ರತಿಭೆಗಳು (ಅಲ್ಲೊಬ್ಬರು ಇಲ್ಲೊಬ್ಬರು ಅಪವಾದಗಳಿರಬಹುದು). ಇಂತಹ ಶಿಕ್ಷಕ ವರ್ಗವೇ ಮುಂದಿನ ಪೀಳಿಗೆಯ ಪ್ರತಿಭಾವಂತರಿಗೆ ಕಲಿಸುತ್ತದೆ. ಕೆ.ಜಿ ಯಿಂದ ಪಿ.ಜಿ ವರೆಗೂ ಸಂಪೂರ್ಣವಾಗಿ ಎನ್ನಲಾಗದಿದ್ದರೂ ಹೆಚ್ಚಿನ ಮಟ್ಟಿಗೆ ಅಪ್ರತಿಭಾವಂತರ ಕೈಯಲ್ಲಿ ಪ್ರತಿಭಾವಂತರು ಕಲಿಯುವಂತಾಗಿದೆ! ಹೀಗೆ ದೇಶ ನಿರ್ಮಾಪಕರಾದ ಶಿಕ್ಷಕ / ಭೋದಕರ ಕೈಯಲ್ಲಿಯೇ ನಮ್ಮ ದೇಶದ ಭವಿಷ್ಯ (ವಿ)ರೂಪುಗೊಳ್ಳುತ್ತಿದೆ. ಅಯಸ್ಕಾಂತದಲ್ಲಿಯೇ ಕಾಂತಿಯಗುಣ ದುರ್ಬಲವಾಗಿದ್ದರೆ ಅದನ್ನು ಅಪ್ಪುವ ಕಬ್ಬಿಣದ ತುಣುಕುಗಳಲ್ಲಿ ಕಾಂತತ್ವವು ಹೇಗೆ ಪ್ರವಹಿಸಲು ಸಾಧ್ಯ ಹೇಳಿ? ಹೀಗೆ ಭಾರತೀಯ ಶಿಕ್ಷಣ ಕ್ಷೇತ್ರವು ಪ್ರತಿಭಾವಂತರ ಕ್ಷಾಮದಿಂದ ಕ್ಷಯಕ್ಕೆ ತುತ್ತಾಗಿದೆ. ಇದು ದೇಶದ ಭವಿಷ್ಯವನ್ನೇ ಅವಸಾನದ ಅಂಚಿಗೆ ತಳ್ಳುತ್ತಿದೆ.

ಪ್ರಸ್ತುತ ಸಂದರ್ಭದಲ್ಲಿ ದೇಶವನ್ನು ಈ ಕ್ಷಯದಿಂದ ಪಾರು ಮಾಡುವುದು ಹೇಗೆ? ಎಂದು ಆಲೋಚಿಸಬೇಕಿದೆ. ನಮ್ಮ ಸರ್ಕಾರಗಳು ಶಿಕ್ಷಣ ವಲಯವನ್ನು ಅಭಿವೃದ್ಧಿಯೇತರ ವಲಯವೆಂದು ಪರಿಗಣಿಸಿವೆ. ವಾಸ್ತವವಾಗಿ ಶಿಕ್ಷಣವು ದೀರ್ಘಾವಧಿಯಲ್ಲಿ ದೇಶದ ಅತ್ಯುತ್ತಮ ಅಭಿವೃದ್ಧಿಯುಕ್ತ ವಲಯವಾಗಿದೆ. ಅದಕ್ಕೆ ದೂರದೃಷ್ಟಿ ಶಿಕ್ಷಣ ನೀತಿಯ ಅಗತ್ಯವಿದೆ. ಒಂದು ದೇಶವನ್ನು ಸದೃಢಗೊಳಿಸುವ ಮತ್ತು ಬಲಿಷ್ಟ ರಾಷ್ಟ್ರಕಟ್ಟುವ ತಾಕತ್ತು ಇರುವುದು ಶಿಕ್ಷಣ ಕ್ಷೇತ್ರಕ್ಕೆ ಮಾತ್ರ. ಆದ್ದರಿಂದ ಹೆಚ್ಚು ಹೆಚ್ಚು 'ಕೆನೆ ಪದರ' ಪ್ರತಿಭಾವಂತರನ್ನು ಶಿಕ್ಷಣ ಕ್ಷೇತ್ರದತ್ತ ಸೆಳೆಯಬೇಕಿದೆ. ಇಂದು ಶಿಕ್ಷಕ ವೃತ್ತಿಗಿಂತಲೂ ಬೇರೆ (ಉದಾ: ಐ.ಟಿ – ಬಿ.ಟಿ ಉದ್ಯೋಗಿಗಳು, ಡಾಕ್ಟರ್, ಎಂಜಿನಿಯರ್, ಐ.ಎ.ಎಸ್ ಅಧಿಕಾರಿಗಳು ಇತ್ಯಾದಿ) ವೃತ್ತಿಯವರಿಗೆ ಹಲವು ಪಟ್ಟು ಹಣ ಸಿಗುವುದರಿಂದ ಪ್ರತಿಭಾವಂತರ ಆದ್ಯತೆ ಸಹಜವಾಗಿಯೇ ದುಡ್ಡು ಮಾಡುವ ವೃತ್ತಿಗಳ ಕಡೆಗೆ ಇರುತ್ತದೆ.

ಈ ಎಲ್ಲ ಸವಾಲುಗಳ ನಡುವೆ ಪ್ರತಿಭಾವಂತರನ್ನು ಶಿಕ್ಷಣ ಕ್ಷೇತ್ರದತ್ತ ಸೆಳೆಯಬೇಕಾದರೆ ಶಿಕ್ಷಕರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು, ಉತ್ತಮ ವೇತನ ಹಾಗೂ ಗೌರವವನ್ನು ಸರ್ಕಾರ ನೀಡುವಂತಾಗಬೇಕು. ಬೋಧನೆಗೆ ಹೊರತಾದ ಕಾರ್ಯಭಾರಗಳಿಂದ ವಿಮುಕ್ತಗೊಳಿಸಿ ನಿರಂತರ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಗಳಿಗೆ ತೆರೆದುಕೊಳ್ಳುವಂತೆ ಪೂರಕ ವಾತಾವರಣ (ವಸತಿ ಗೃಹ, ಅಂತರ್ಜಾಲ, ಗ್ರಂಥಾಲಯ, ಸಂಶೋಧನಾ ಕೇಂದ್ರ, ಪ್ರಯೋಗಾಲಯ ಇತ್ಯಾದಿಗಳನ್ನು) ಕಲ್ಪಿಸಿಕೊಡಬೇಕು. ಶಿಕ್ಷಕರ ಶೈಕ್ಷಣಿಕ ಸಾಧನೆಗಳನ್ನು ಆಧರಿಸಿ ವಿಶೇಷ ಬಡ್ತಿ, ಪ್ರಶಸ್ತಿಗಳನ್ನು ನೀಡಿ ಗೌರವಿಸಬೇಕು. ಪ್ರತಿ ಎರಡು ವರ್ಷಗಳಿಗೊಮ್ಮೆ ಜ್ಞಾನ ಸಂವರ್ಧನಾ ತರಬೇತಿ ನೀಡಬೇಕು. ಪ್ರತಿ ಮೂರು ವರ್ಷಗಳಿಗೊಮ್ಮೆ ಶಿಕ್ಷಕರ ಜ್ಞಾನ ಮೌಲ್ಯಮಾಪನ ಮಾಡುವುದಕ್ಕಾಗಿ ಪರೀಕ್ಷೆಗಳನ್ನು ನಡೆಸಬೇಕು. ಈ ಪರೀಕ್ಷೆಗಳನ್ನು ಬಹಳ ಕಟ್ಟುನಿಟ್ಟಾಗಿ ನಡೆಸಬೇಕು. ಇದರಿಂದಲಾದರೂ ಹೊಸ ಹೊಸ ವಿಚಾರಗಳ ಬಗೆಗೆ ಶಿಕ್ಷಕ / ಬೋಧಕ ತೆರೆದುಕೊಳ್ಳುತ್ತಾನೆ. ಅವುಗಳಲ್ಲಿ ಉತ್ತೀರ್ಣರಾದರೆ ಮಾತ್ರ ವಾರ್ಷಿಕ ಬಡ್ತಿ ನೀಡಬೇಕು. ಉನ್ನತ ಹುದ್ದೆಗಳಿಗೆ ಬಡ್ತಿ ನೀಡುವಾಗ ಜ್ಞಾನ ಮೌಲ್ಯಮಾಪನ ಪರೀಕ್ಷೆಗಳಲ್ಲಿನ ಅವರ ಸಾಧನೆಗಳನ್ನು ಹಾಗೂ ಸಂಶೋಧನೆ, ಬರವಣಿಗೆ, ದಕ್ಷತೆ, ಇತ್ಯಾದಿಗಳನ್ನು ಪರಿಗಣಿಸಬೇಕು. ಹೀಗಿದ್ದಾಗ ಮಾತ್ರ ಗುಣಾತ್ಮಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಲು ಸಾಧ್ಯ.

ಇಷ್ಟಾದರೆ ಶಿಕ್ಷಣ ಕ್ಷೇತ್ರವನ್ನು ಖಾಸಗಿ ಶಾಲೆಗಳ ಕೈಯಿಂದ ಬಿಡುಗಡೆಗೊಳಿಸುವ ಬಗೆ ಹೇಗೆ ಎಂಬುದನ್ನು ಚಿಂತನೆ ನಡೆಸಬೇಕಾಗಿಯೇ ಇಲ್ಲ. ಏಕೆಂದರೆ ಮೇಲಿನ ಕ್ರಮಗಳ ಮೂಲಕ ಪ್ರತಿಭಾವಂತರನ್ನು ಶಿಕ್ಷಣ ಕ್ಷೇತ್ರ ಆಕರ್ಷಿಸಿ, ಮೂಲಭೂತ ಸಮಸ್ಯೆಗಳಿಂದ ನರಳುತ್ತಿರುವ ಶಾಲೆ ಕಾಲೇಜುಗಳನ್ನು ಉನ್ನತೀಕರಿಸಿದರೆ ಸರ್ಕಾರಿ ಶಾಲೆಗಳು ತನ್ನಿಂದ ತಾನೇ ಸುಧಾರಣೆಗೊಳ್ಳುತ್ತವೆ. ಇದರ ಜೊತೆಗೆ ಶಿಕ್ಷಕರಾದಿಯಾಗಿ ಎಲ್ಲಾ ಸರ್ಕಾರಿ ನೌಕರರು ತಮ್ಮ ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲಿಯೇ ಓದಿಸಬೇಕು ಎಂಬ ನಿಯಮವನ್ನು ಜಾರಿಗೆ ತಂದರೆ ಅರ್ಧದಷ್ಟು ಖಾಸಗಿ ಶಾಲಾ ಕಾಲೇಜುಗಳು ಮುಚ್ಚಿದವೆಂದೇ ಅರ್ಥ. ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ಮಕ್ಕಳೇ ಸರ್ಕಾರಿ ಶಾಲೆಗಳಲ್ಲಿ ಓದುವಾಗ ಸಾಮಾನ್ಯ ಜನರೂ ಕೂಡ ಸರ್ಕಾರಿ ಶಾಲೆಗಳ ಕಡೆಗೆ ಮುಖಮಾಡುತ್ತಾರೆ. ಅಧಿಕಾರಿಗಳಿಗೆ ನಮ್ಮ ಮಕ್ಕಳು ಓದುವ ಶಾಲೆ–ಕಾಲೇಜುಗಳೆಂದು ಶಿಕ್ಷಣದ ವಿಚಾರದಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆಸಲು ಹೋಗದೆ ಅವುಗಳ ಅಭಿವೃದ್ಧಿಗೆ ಪ್ರಯತ್ನಿಸುತ್ತಾರೆ. ಕರ್ತವ್ಯ ಲೋಪವಾದಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ ಎಂಬ ಭಯ ಶಿಕ್ಷಕ / ಬೋಧಕರಿಗೂ ಇರುತ್ತದೆ. ಇದರಿಂದ ಖಾಸಗಿ ಶಾಲೆಗಳ ಕಪಿಮುಷ್ಠಿಯಿಂದ ಶಿಕ್ಷಣ ಮುಕ್ತಗೊಂಡು ಸಮಾನ ಶಿಕ್ಷಣ ಜಾರಿಗೊಂಡು, ಖಾಸಗಿ ಶಾಲೆಗಳು ನಡೆಸುವ ಶೋಷಣೆಯಿಂದ ಜನತೆ ಮುಕ್ತರಾಗುತ್ತಾರೆ. ಇದಕ್ಕೆ ಸಮಾನಾಂತರವಾಗಿ ಕಾಲಕಾಲಕ್ಕೆ ಪಠ್ಯವನ್ನು ಪರಿಷ್ಕರಿಸಿ ಮೇಲ್ದರ್ಜೆಗೇರಿಸಬೇಕು. ವೈಚಾರಿಕ, ವೈಜ್ಞಾನಿಕ, ನೈತಿಕ ಹಾಗೂ ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡಬೇಕು. ಹೀಗಾದಲ್ಲಿ ಮಾತ್ರ ಶಿಕ್ಷಣದ ಸಂವರ್ಧನೆ ಸಾಧ್ಯ. ಇದು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಲ್ಲಿ ದೇಶವು ಹಲವು ಸಾಮಾಜಿಕ ಸಮಸ್ಯೆಗಳಿಂದಲೂ ಮುಕ್ತವಾಗುತ್ತದೆ. ಇದೇನು ಆದರ್ಶ ಕನಸಲ್ಲ; ನನಸು ಮಾಡಬಹುದಾದ ಕೆಲಸ. ಇದಕ್ಕೆ ಇಚ್ಛಾಶಕ್ತಿ ಬೇಕಷ್ಟೆ. ಈ ಇಚ್ಛಾಶಕ್ತಿ ಮಾನ್ಯ ಶಿಕ್ಷಣ ಸಚಿವರಲ್ಲಿ ಉಂಟೆ...?

* * *





ಈ ಪುಸ್ತಕವು 4 ಪ್ರಬಂಧಗಳನ್ನು 2 ನುಡಿನಮನಗಳನ್ನು ಮತ್ತು ಪುಸ್ತಕ ವಿಮರ್ಶೆಯನ್ನು ಒಳಗೊಂಡಿದೆ.

ಈ ಪುಸ್ತಕದಲ್ಲಿನ ಎಂ.ವಿ.ವಿಶ್ವೇಶ್ವರ ಅವರ ಲೇಖನವನ್ನು ಹೊರತುಪಡಿಸಿದರೆ, ಉಳಿದೆಲ್ಲ ಪ್ರಬಂಧಗಳನ್ನು ಯುವ ಸಂಶೋಧಕರೇ ಬರೆದಿದ್ದಾರೆ ಎಂಬುದು ವಿಶೇಷ. ಇಲ್ಲಿನ ಪ್ರತಿಯೊಂದು ಪ್ರಬಂಧಗಳು ಕೂಡ ಹೊಸ ಆಲೋಚನೆ ಮತ್ತು ಚಿಂತನಾ ಕ್ರಮಗಳಿಂದ ವಿಭಿನ್ನವಾಗಿವೆ. ಇತಿಹಾಸ ಸಂಶೋಧನೆ ಎಂದರೆ ಕಾಲಿಂಗ್‌ವುಡ್ ಹೇಳಿದಂತೆ 'ಕತ್ತರಿ ಮತ್ತು ಅಂಟು ಪ್ರಯೋಗ'ವಾಗಿರುವ ಕಾಲಘಟ್ಟದಲ್ಲಿ, ಇಲ್ಲಿನ ಯುವ ಸಂಶೋಧಕರ ಬರವಣಿಗೆಗಳು ಇತಿಹಾಸ ಸಂಶೋಧನ ಕ್ಷೇತ್ರದಲ್ಲಿ ಹೊಸ ಭರವಸೆಯನ್ನು ಮೂಡಿಸಿವೆ.

ಹಂ.ಗು.ರಾಜೇಶ್ ಅವರು ತಮ್ಮ ವಿಸ್ತಾರವಾದ ಪ್ರಬಂಧದಲ್ಲಿ, ಬೆಂಗಳೂರು ಪರಿಸರದ ಆರಂಭಿಕ ಮಧ್ಯಕಾಲೀನ ಚರಿತ್ರೆಯನ್ನು ಬಹು ಆಯಾಮಗಳಿಂದ ಕಟ್ಟಿಕೊಟ್ಟಿದ್ದಾರೆ. ಈ ಪ್ರಬಂಧದ ಮೂಲಕ ಬೆಂಗಳೂರಿನ ಪರಿಸರದ ಚರಿತ್ರೆ ಮಾತ್ರವಲ್ಲ, ದಕ್ಷಿಣ ಕರ್ನಾಟಕದ ಚರಿತ್ರೆಯನ್ನೆ ವಿಭಿನ್ನವಾಗಿ ಗ್ರಹಿಸಬಹುದಾಗಿದೆ. ನಮಿತಾ ಪಿ. ಅವರ ಪ್ರಬಂಧವು ಶ್ರೀರಂಗಪಟ್ಟಣದ ಉಪನಗರವಾದ 'ಗಂಜಾಂ' ಹೇಗೆ ಹೈದರ್ ಮತ್ತು ಟಿಪ್ಪುವಿನ ಏಳಿಗೆ ಮತ್ತು ಅವನತಿಗೆ ಒಂದು ರೂಪಕವಾಗಿ ಕಾಣುತ್ತದೆ ಎಂಬುದನ್ನು ಅಭಿವ್ಯಕ್ತಿಸುವ ಮಟ್ಟಿಗೆ ಸೃಜನಶೀಲವಾಗಿದೆ. ಎ.ಬಿ.ವಗ್ಗರ ಅವರು ತಮ್ಮ ಪ್ರಬಂಧದಲ್ಲಿ, 19ನೇ ಶತಮಾನದಲ್ಲಿ ವಸಾಹತುಶಾಹಿಯನ್ನು ಪ್ರತಿಭಟಿಸಿ, ಪ್ರಾಣತೆತ್ತ ಅನೇಕ ಹುತಾತ್ಮರ ಮೇಲೆ ಬೆಳಕು ಚೆಲ್ಲಿದ್ದಾರೆ. ಇದನ್ನು ಅಲಕ್ಷಿತ ವರ್ಗದ ಅಧ್ಯಯನದ ನೆಲೆಯಲ್ಲಿ ನೋಡಬಹುದು. ಪ್ರದೀಪ್ ಕುಮಾರ್ ಶೆಟ್ಟಿ ಕೆ. ಅವರ ಪ್ರಬಂಧ ಒಂದು ಸಮಕಾಲೀನ ಚರಿತ್ರೆಯ ಮೇಲಿನ ಚಿಂತನ ಬರವಣಿಗೆ. ಗುಸ್ತೇವೋ ಎಸ್ತೆವಾ ಅವರ ಶಿಕ್ಷಣ ಕುರಿತಾದ ಚಿಂತನೆಗಳು ಶಾಸ್ತ್ರೀಯ ಚೌಕಟ್ಟುಗಳನ್ನು ಮೀರಿ ಈವರೆಗಿನ ನಂಬಿಕೆಯ ಚಿಪ್ಪನ್ನು ಒಡೆದಿವೆ. ಕಾಕತಾಳೀಯವೆಂಬಂತೆ ಸಂಪಾದಕೀಯ ಬರಹ 'ಶಿಕ್ಷಣ ಸಂವರ್ಧನೆ'ಯು ಅಲ್ಲಲ್ಲಿ ಈ ಪ್ರಬಂಧದೊಡನೆ ಸಂವಾದ ನಡೆಸುತ್ತಿರುವಂತೆ ಕಾಣುತ್ತದೆ.

ನಮ್ಮನ್ನಗಲಿದ ಹಿರಿಯ ಇತಿಹಾಸಕಾರರು, ಪುರಾತತ್ತ್ವವಿದರೂ ಆದ ಎಸ್.ಆರ್.ರಾವ್ ಹಾಗೂ ಕೆ.ವಿ.ರಮೇಶ ಅವರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರಾದವರು. ಇವರಿಬ್ಬರೂ ಕನ್ನಡಿಗರು, ಕನ್ನಡದಲ್ಲಿಯೂ ಬರೆದವರು. ಇವರ ಅಗಲಿಕೆ ಮತ್ತಷ್ಟು ನೋವನ್ನು ತರುವ ಸಂಗತಿ. ರಾವ್ ಅವರನ್ನು ಚೆನ್ನಾಗಿ ಬಲ್ಲವರಾಗಿದ್ದ ಎಂ.ವಿ.ವಿಶ್ವೇಶ್ವರ ಅವರು ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ರಾವ್ ಅವರನ್ನು ಪರಿಚಯಿಸಿ ಕೊಟ್ಟಿದ್ದಾರೆ. ಯುವ ಸಂಶೋಧಕರಾದ ಕಾರ್ತಿಕ್ ಎಸ್. ಅವರು ಕೆ.ವಿ.ರಮೇಶ ಅವರನ್ನು ಸಮೀಪದಿಂದ ಬಲ್ಲವರು. ಅವರೊಂದಿಗೆ ಸಾಕಷ್ಟು ವಿಚಾರಗಳನ್ನು ಚರ್ಚೆ ನಡೆಸಿದವರು. ಇಲ್ಲಿ ರಮೇಶ ಅವರನ್ನು ಸೂಕ್ಷ್ಮವಾಗಿ ಪರಿಚಯಿಸಿದ್ದಾರಲ್ಲದೆ, ಅವರು ಬರೆದಿರುವ ಲೇಖನ ಮತ್ತು ಗ್ರಂಥಗಳ ಸಮಗ್ರ ಸೂಚಿಯನ್ನೆ ತಯಾರಿಸಿಕೊಟ್ಟಿದ್ದಾರೆ. ಈ ಕಾರ್ಯದ ಹಿಂದಿನ ಅವರ ಶ್ರಮ ಸಾರ್ಥಕವಾಗಿದೆ. ಈ ಬರವಣಿಗೆಗಳ ಮೂಲಕ ನಿಧನರಾದ ಹಿರಿಯ ಚೇತನಗಳಿಗೆ 'ಇತಿಹಾಸ ದರ್ಪಣ'ವು ನುಡಿ ನಮನವನ್ನು ಅರ್ಪಿಸುತ್ತದೆ.

**–ಹಂ.ಗು. ರಾಜೇಶ್**

# ಬದಲಾವಣೆಯತ್ತ ಆರಂಭಿಕ ಮಧ್ಯಕಾಲೀನ ಬೆಂಗಳೂರು ಪರಿಸರ (950–1350) : ಹೊಸ ಪರಿವೀಕ್ಷಣೆಗಳ ವಿಶ್ಲೇಷಣೆ

ಹಂ.ಗು. ರಾಜೇಶ್
ಸಂಪಾದಕರು,
ಇತಿಹಾಸ ದರ್ಪಣ,
#33/ಎ, ಐ.ಟಿ.ಐ. ಕಾಲೇಜು
ಹತ್ತಿರ, ಕೆಂಪೇಗೌಡ ನಗರ,
ವಿಶ್ವನೀಡಂ–ಅಂಚೆ,
ಬೆಂಗಳೂರು–91.

–1–

ಇತಿಹಾಸದ ವಿದ್ಯಮಾನಗಳು ಸದಾ ಭೌತಿಕ ಮತ್ತು ಅಭೌತಿಕವಾದ ಆಂತರಿಕ ಮತ್ತು ಬಾಹ್ಯ ಪ್ರೇರಣೆಗಳಿಂದ ಸ್ಫುರಿಸುವ ಸಂಗತಿಗಳಿಂದ ರೂಪುಗೊಳ್ಳುವುದು. ಆದ್ದರಿಂದ ನಾವು ಯಾವುದೇ ಒಂದು ಸೀಮಿತ ಪ್ರದೇಶದ ಇತಿಹಾಸವನ್ನು ಬಿಡಿಯಾಗಿ ನೋಡದೆ ಆ ಸಮಕಾಲೀನ ಜಗತ್ತಿನ ಜೊತೆಗೆ ಹಿಡಿಯಾಗಿ ನೋಡಬೇಕಾಗುತ್ತದೆ. ಇದರಿಂದ ಚಾರಿತ್ರಿಕ ಗ್ರಹಿಕೆಯ ಸರಿಯಾದ ಕ್ರಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಕ್ರಿ.ಶ.950 ರಿಂದ 1350ರವರೆಗಿನ ಬೆಂಗಳೂರು ಪರಸರದ ರಾಜಕೀಯ ಇತಿಹಾಸವನ್ನು ಗ್ರಹಿಸುವ ಮುನ್ನ, ಈ ಕಾಲಘಟ್ಟಕ್ಕೆ ಹಿಂದಿನ ಹಾಗೂ ಸಮಕಾಲೀನ ಜಗತ್ತಿನ ಸಂದರ್ಭಗಳನ್ನು ಅರ್ಥಮಾಡಿಕೊಳ್ಳಬೇಕಿದೆ.

ಕ್ರಿ.ಶ.950 ರಿಂದ 1350ರವರೆಗಿನ ಈ ಕಾಲಾವಧಿಯ ಜಾಗತಿಕ ಇತಿಹಾಸವು ಹಲವು ಏಳುಬೀಳುಗಳನ್ನು, ಹೊಸಹೊಸ ವ್ಯವಸ್ಥೆಗಳನ್ನು, ಆವಿಷ್ಕಾರಗಳನ್ನು, ರಾಜಕೀಯ ಪಲ್ಲಟಗಳನ್ನು ಕಂಡಿದೆ. ಪಶ್ಚಿಮ ಯೂರೋಪಿನಲ್ಲಿ ಹೊಸ ಸಾಮಾಜಿಕ ವ್ಯವಸ್ಥೆ ಮತ್ತು ಸರ್ಕಾರದ ಉಗಮವನ್ನು ಗುರುತಿಸಬಹುದು. ರೋಮನ್ ಸಾಮ್ರಾಜ್ಯದ ಪತನಾನಂತರ ಊಳಿಗಮಾನ್ಯ ವ್ಯವಸ್ಥೆಯು ಬೆಳವಣಿಗೆ ಕಂಡಿತು. ಇದೊಂದು ಯೂರೋಪಿನ ಸಮಾಜದಲ್ಲಿ ಪ್ರಧಾನವಾದ ಅಂಶವಾಗಿದೆ. ರಾಜನು ಊಳಿಗಮಾನ್ಯ ವ್ಯವಸ್ಥೆಯ ಶಕ್ತಿಶಾಲಿ ಮುಖ್ಯಸ್ಥನಾಗಿ ಕಾಣುತ್ತಾನೆ. ಈ ವ್ಯವಸ್ಥೆಯಲ್ಲಿ ಎರಡು ಲಕ್ಷಣಗಳಿವೆ. ಒಂದು ಜೀತ ವ್ಯವಸ್ಥೆ ಮತ್ತೊಂದು ಸೈನಿಕ ಸಂಘಟನೆಯ ವ್ಯವಸ್ಥೆ





(Satish chandra 2009:3). ಭಾರತದಲ್ಲಿ ಜೀತ ಪದ್ಧತಿಯಾಗಲಿ ಅದನ್ನು ಒಳಗೊಂಡ ಗುತ್ತಿನಬೀಡು ವ್ಯವಸ್ಥೆ (Manor System) ಆಗಲಿ ಇಲ್ಲ. ಆದರೆ ಇಲ್ಲಿ ಕಂಡು ಬರುವ ಸಾಮಂತರುಗಳು ಊಳಿಗಮಾನ್ಯ ಧಣಿಗಳ ಹಲವು ಅಧಿಕಾರಗಳನ್ನು ಚಲಾಯಿಸುತ್ತಾರೆ ಮತ್ತು ಅವರನ್ನೇ ಅವಲಂಭಿತವಾದ ಸ್ಥಿತಿ ರೈತರದಾಗಿದೆ ಎಂದು ಸತೀಶ್‌ಚಂದ್ರ ಅವರು ಅಭಿಪ್ರಾಯಪಡುತ್ತಾರೆ (Satish chandra 2009:3). ಕರ್ನಾಟಕದ ಶಾಸನಗಳಲ್ಲಿ ಮಂಡಲೇಶ್ವರ, ಮಹಾಮಂಡಲೇಶ್ವರ, ಮಹಾಸಾಮಂತಾಧಿಪತಿ ಮತ್ತು ಸಾಮಂತ ಎಂಬ ಶಬ್ದಗಳು ಊಳಿಗಮಾನ್ಯ ಒಡೆಯ ಎಂಬ ಪರಿಪ್ರೇಕ್ಷೆಯಲ್ಲಿ ನಿರಂತರವಾಗಿ ಬಳಕೆಯಾಗಿದ್ದು, ಇವು ಈ ವ್ಯವಸ್ಥೆಯ ಏಣಿ ಶ್ರೇಣಿಗಳಲ್ಲಿನ ವಿವಿಧ ಮೆಟ್ಟಿಲುಗಳನ್ನು ಪ್ರತಿನಿಧಿಸುತ್ತದೆ ಎಂದು ಆರ್.ಎನ್.ನಂದಿ ಅಭಿಪ್ರಾಯ ಪಡುತ್ತಾರೆ (Nandi 2000:29-30). ಯೂರೋಪಿನಲ್ಲಿ ಸೈನಿಕ ಸಂಘಟನೆ ವ್ಯವಸ್ಥೆಯು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಒಂದಾಗಿದ್ದು, ಇದರಲ್ಲಿ ಕುದುರೆಯ ಮೇಲೆ ಕುಳಿತ ಸಶಸ್ತ್ರ ಸರದಾರರು ಕಂಡುಬರುತ್ತಾರೆ. ಸರದಾರರ ಆಗಮನದೊಂದಿಗೆ ಯೂರೋಪಿನ ಯುದ್ಧ ವಿಧಾನಗಳಲ್ಲಿಯೇ ಬದಲಾವಣೆಗಳುಂಟಾದವು. ಇದೇ ರೀತಿ ಅರಬ್ ಜಗತ್ತಿನಲ್ಲಿಯೂ ಗಮನಾರ್ಹ ರಾಜಕೀಯ ಬದಲಾವಣೆಗಳಾದವು. ಅರಬ್ ಬುಡಕಟ್ಟುಗಳ ಆಂತರಿಕ ಭಿನ್ನಾಭಿಪ್ರಾಯ ಮತ್ತು ನಾಗರಿಕ ದಂಗೆಗಳಿಂದ 8ನೇ ಶತಮಾನದ ಮಧ್ಯಭಾಗದಲ್ಲಿ ಡಮಾಸ್ಕಸ್‌ನಲ್ಲಿನ ಖಲೀಫನ ಸ್ಥಾನದಲ್ಲಿ ಅಬ್ಬಾಸಿದ್ ವಂಶವು ಅಧಿಕಾರಕ್ಕೆ ಬಂದಿತು. ಅವರು ಹೊಸರಾಜಧಾನಿ ನಗರವಾದ ಬಾಗ್ದಾದ್‌ದನ್ನು ಸ್ಥಾಪಿಸಿದರು. ಅಬ್ಬಾಸಿದ್ ಸಾಮ್ರಾಜ್ಯವು ಪಶ್ಚಿಮ ಮತ್ತು ಉತ್ತರ ಆಫ್ರಿಕಾಗಳನ್ನಲ್ಲದೆ ಭಾರತದೊಂದಿಗೆ ಮೆಡಿಟರೇನಿಯನ್ ಜಗತ್ತನ್ನು ಸಂಪರ್ಕಿಸುವ ಮಹತ್ವದ ವ್ಯಾಪಾರಿ ಮಾರ್ಗವನ್ನೂ ನಿಯಂತ್ರಿಸುತ್ತಿತ್ತು (Satish chandra 2009:5). ನಂತರ ಅರಬ್ ವ್ಯಾಪಾರವು ಏಷ್ಯಾ ಮತ್ತು ಯೂರೋಪಿನ ದೇಶಗಳ ನಡುವಿನ ದೊಡ್ಡ ವ್ಯಾಪಾರ ಕೊಂಡಿಯಾಗಿ ಬೆಳೆಯಿತು. ವಿಶೇಷವಾಗಿ ದಕ್ಷಿಣ ಭಾರತದೊಂದಿಗೆ ಅರಬ್ಬರ ಸಂಪರ್ಕವು ಕ್ರಿ.ಶ. ಸುಮಾರು 11ನೇ ಶತಮಾನದ ವೇಳೆಗೆ ಹೆಚ್ಚು ನಿಕಟವಾಗಿರುವುದನ್ನು ಕಾಣಬಹುದು (ಮನು 2009:66–67).

ಚೀನಾದಲ್ಲಿಯೂ ಕೂಡ 9ನೇ ಶತಮಾನದ ಮಧ್ಯಭಾಗದಲ್ಲಿ ತಂಗ್ ಸಾಮ್ರಾಜ್ಯ ಅವನತಿ ಹೊಂದಿತು. 10ನೇ ಶತಮಾನದಲ್ಲಿ ಸುಂಗ್ ವಂಶವು ಅಧಿಕಾರಕ್ಕೆ ಬಂದಿತು. ಇದೇ ರೀತಿಯ ರಾಜಕೀಯ ಬದಲಾವಣೆಗಳನ್ನು ಸುಮಾರು 10 ರಿಂದ 13ನೇ ಶತಮಾನದವರೆಗಿನ ಭಾರತದ ಚರಿತ್ರೆಯ ಒಳಗೂ ಕಾಣಬಹುದು. ಅಖಂಡ ಭಾರತದ ಮೇಲೆ ಪಾರಮ್ಯತೆ ಸ್ಥಾಪಿಸಲು ಹೊರಟ ರಾಷ್ಟ್ರಕೂಟ ಸಾಮ್ರಾಜ್ಯ 10ನೇ ಶತಮಾನದ ಉತ್ತರಾರ್ಧದಲ್ಲಿ ಅವನತಿ ಹೊಂದಿದರೆ, ಉತ್ತರ ಭಾರತದಲ್ಲಿದ್ದ ಪ್ರಬಲ ಗೂರ್ಜ, ಪ್ರತಿಹಾರ ರಾಜ್ಯಗಳು ಸಹ ಅವನತಿ ಹೊಂದಿದವು. ಈ ಕಾಲಘಟ್ಟದಲ್ಲಿಯೆ ಭಾರತದ ಮೇಲೆ ತುರುಷ್ಕರ ಆಕ್ರಮಣ ನಡೆಯುವ ಮೂಲಕ ದೆಹಲಿ ಸುಲ್ತಾನರ ಸಾಮ್ರಾಜ್ಯವು ಸ್ಥಾಪನೆಯಾಯಿತು. ಅಸ್ಥಿರ ರಾಜಕೀಯ ಕಾರಣದಿಂದ ಭಾರತದ ಚರಿತ್ರೆಯಲ್ಲಿ ಸಾಮ್ರಾಜ್ಯವು ಸ್ಥಾಪನೆಗೊಳ್ಳುವಲ್ಲಿ ವಿಫಲಗೊಂಡ ಕ್ರಿ.ಶ 1000 ದಿಂದ 1300ರ ಅವಧಿಯನ್ನು ಆರ್.ಸಿ.ಮಜುಂದಾರ್‌ಅವರು 'ಸಾಮ್ರಾಜ್ಯಕ್ಕಾಗಿ ಹೋರಾಟ'ದ ಕಾಲ ಎಂದು ಗುರುತಿಸಿದ್ದಾರೆ (ಮಜುಂದಾರ್ 2000:ಪೀಠಿಕೆ ನೋಡಿ.). ಆದರೆ ಆರ್.ಎಸ್.ಶರ್ಮ ಅವರು 1000–1200ರ ಕಾಲಾವಧಿಯನ್ನು ಭಾರತದ ಮಟ್ಟದಲ್ಲಿ ರಾಜಕೀಯ ಊಳಿಗಮಾನ್ಯ ಪದ್ಧತಿಯ ಪ್ರೌಢಯುಗವೆಂದು ಕರೆದಿದ್ದಾರೆ (ಶರ್ಮ 2007:148–198).

ಈ ಕಾಲಾವಧಿಯಲ್ಲಿ (950–1350) ಕರ್ನಾಟಕ ಕೂಡ ಇಂತಹದೇ ರಾಜಕೀಯ ಅಸ್ಥಿರತೆಯನ್ನು ಹೊಂದಿತ್ತು. ದಕ್ಷಿಣ ಕರ್ನಾಟಕದಲ್ಲಿ ದೀರ್ಘಕಾಲ ಆಳ್ವಿಕೆ ನಡೆಸಿದ ಗಂಗ ಮನೆತನವು ಈ ವೇಳೆಗೆ ಅವನತಿಯ ಹಾದಿ ಹಿಡಿದಿತ್ತು. ಉತ್ತರ ಕರ್ನಾಟಕದಲ್ಲಿ ರಾಷ್ಟ್ರಕೂಟರೂ ಅವನತಿ ಹೊಂದಿ, ಕಲ್ಯಾಣ ಚಾಲುಕ್ಯ ಮನೆತನವು ಪ್ರವರ್ಧಮಾನಕ್ಕೆ ಬಂದಿತು. ದಕ್ಷಿಣ ಕರ್ನಾಟಕದಲ್ಲಿ ದೀರ್ಘಕಾಲ ಆಳಿದ ಗಂಗಮನೆತನವನ್ನು ಪಲ್ಲಟಗೊಳಿಸಿ ತಮಿಳುನಾಡಿನ ಚೋಳರು ಕಾವೇರಿ ಕೊಳ್ಳದ ಕರ್ನಾಟಕವನ್ನು ಆಕ್ರಮಿಸಿದರು. ನಂತರ ತಮ್ಮ ಗಮನವನ್ನು ತುಂಗಾಭದ್ರ ಮತ್ತು ಕೃಷ್ಣಾ ನದಿ ಕೊಳ್ಳದ ಕಡೆಗೆ ಹರಿಸಿದರು. ಆರಂಭದಲ್ಲಿ ಅಪಜಯವನ್ನುಂಡರೂ, ಅಂತಿಮವಾಗಿ ಚಾಲುಕ್ಯರಿಂದ ಕೃಷ್ಣಾ ನದಿ ಬಯಲನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾದರು. ಇದೇ ಕಾಲಘಟ್ಟದಲ್ಲಿ ಮಲೆನಾಡಿನಲ್ಲಿ ಏಳಿಗೆಗೆ ಬಂದ ಹೊಯ್ಸಳ ಮನೆತನವು ಮಲೆನಾಡಿನಿಂದ ಬಯಲು ಸೀಮೆಯತ್ತ ತಮ್ಮ ರಾಜ್ಯವನ್ನು ವಿಸ್ತರಿಸುತ್ತಾ ಬಂದು ಚೋಳರನ್ನು ಮುಖಾಮುಖಿಗೊಂಡರು. ಪರಿಣಾಮ: ಒಂದು ಶತಮಾನದ ನಂತರ ಚೋಳರನ್ನು ಕರ್ನಾಟಕದಿಂದ ಹೊರಗಟ್ಟಿದರಲ್ಲದೆ, ತಮಿಳುನಾಡಿಗೂ ಪ್ರವೇಶಿಸಿದರು. ಆಮೇಲೆ ಒಂದು ಶತಮಾನದ ನಂತರ ಹೊಯ್ಸಳರಾಜ್ಯವು ಇಬ್ಭಾಗವಾಯಿತು. ಹೀಗಾಗಿ ವಿಜಯನಗರ ಸಾಮ್ರಾಜ್ಯ ಆರಂಭವಾಗುವವರೆಗೂ ರಾಜಕೀಯ ಸ್ಥಿರತೆಯನ್ನು ಕಾಣಲಾಗದಿದ್ದರೂ, ಕೃಷಿ, ವ್ಯಾಪಾರ, ಮಾರುಕಟ್ಟೆ ಸೇರಿದಂತೆ ಆರ್ಥಿಕ ಕ್ಷೇತ್ರದಲ್ಲಿ ಮಾತ್ರವಲ್ಲದೆ ಸೈನಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿಯೂ ತೀವ್ರ ಬದಲಾವಣೆಗಳು ಆರಂಭವಾದವು. ಈ ರಾಜಕೀಯ ಅಸ್ಥಿರತೆಯು 14ನೆಯ ಶತಮಾನದ ಹೊತ್ತಿಗೆ ಘನೀಕರಣಗೊಂಡು ಒಂದು ವ್ಯವಸ್ಥೆಯಾಗಿ ರೂಪುಗೊಳ್ಳುವುದರಲ್ಲಿ ಪರ್ಯಾವಸಾನಗೊಂಡಿತು. ಇಂತಹ ಅನಿರೀಕ್ಷಿತ ಬದಲಾವಣೆಗಳಿಂದ ಬೆಂಗಳೂರು ಪರಿಸರ ಸಹ ಹೊರತಲ್ಲ ಎಂಬುದನ್ನು ಗಮನಿಸಬೇಕು. ಪರಿಣಾಮವಾಗಿ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಅಸ್ಥಿತ್ವಕ್ಕೆ ಬಂದರೆ, ಬೆಂಗಳೂರು ಪರಿಸರದಲ್ಲಿ ಯಲಹಂಕ ಪ್ರಭುಗಳು ಪ್ರವರ್ಧಮಾನಕ್ಕೆ ಬಂದರು.

**–2–**

950–1350ರವರೆಗಿನ 400 ವರ್ಷಗಳ ಕಾಲಾವಧಿಯ ಬೆಂಗಳೂರಿನ ಪರಿಸರದ ಚರಿತ್ರೆಯನ್ನು ಅರಿಯಲು ನಮಗಿರುವ ಪ್ರಮುಖ ಮೂಲ ಆಕರ ಎಂದರೆ ಶಾಸನಗಳು. ಅವುಗಳನ್ನು ಬಿಟ್ಟರೆ ಎಂ.ಎ.ಆರ್ (ಮೈಸೂರ್ ಆರ್ಕಿಯಾಲಜಿಕಲ್ ರಿಪೋರ್ಟ್ಸ್) ಮತ್ತು ಕೈಫಿಯತ್‌ಗಳಿವೆ. ಇವುಗಳ ಜೊತೆಗೆ ಪೂರಕವಾದ ಇತರ ಅನುಷಂಗಿಕ ಆಕರಗಳನ್ನು ನೆಚ್ಚಿಕೊಳ್ಳಬೇಕು. ಈ ಕಾಲಾವಧಿಯ ಶಾಸನಗಳಲ್ಲಿ ಸುಮಾರು ಅರ್ಧದಷ್ಟು ಶಾಸನಗಳು ತಮಿಳಿನಲ್ಲಿವೆ. ಉಳಿದವು ಕನ್ನಡದಲ್ಲಿದ್ದು ಒಂದೇ ಒಂದು ಶಾಸನ ಮಾತ್ರ ತೆಲುಗಿನಲ್ಲಿದೆ. ಸುಮಾರು 997ರಲ್ಲಿ ಆರಂಭವಾದ ಚೋಳರ ಆಳ್ವಿಕೆಯ ಕಾಲದಲ್ಲಿ ತಮಿಳು ಶಾಸನಗಳು ಆರಂಭವಾಗುತ್ತವೆ. ಅವರ ಆಳ್ವಿಕೆ 1118ರ ಸುಮಾರಿಗೆ ಅಂತ್ಯಗೊಂಡರೂ ಕೂಡ ಹೊಯ್ಸಳರ ಕಾಲದಲ್ಲಿಯೂ, ಆನಂತರದ ವಿಜಯನಗರ ಅರಸರ ಆರಂಭಕಾಲದಲ್ಲಿಯೂ ತಮಿಳು ಶಾಸನಗಳು ಬೆಂಗಳೂರು ಪರಿಸರದಲ್ಲಿ ಮುಂದುವರೆಯುವುದನ್ನು ಗಮನಿಸಿದರೆ ಕನ್ನಡಿಗರ ಭಾಷಾಭಿಮಾನ ಶೂನ್ಯತೆ ಚಾರಿತ್ರಿಕವಾದದು ಎಂದು ಕಂಡುಬರುತ್ತವೆ.

ಇಲ್ಲಿನ ಬೆಂಗಳೂರು ಪರಿಸರ ಎಂದರೆ ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಲ ತಾಲ್ಲೂಕು ಭಾಗಗಳಾದ ಮಾಗಡಿ, ನೆಲಮಂಗಲ, ದೇವನಹಳ್ಳಿ,





ದೊಡ್ಡಬಳ್ಳಾಪುರ, ಹೊಸಕೋಟೆ, ಆನೇಕಲ್ಲು, ಕಾನಕಾನಹಳ್ಳಿ (ಕನಕಪುರ), ರಾಮನಗರವನ್ನು ಒಳಗೊಂಡ ಚನ್ನಪಟ್ಟಣ ತಾಲ್ಲೂಕುಗಳ ಶಾಸನಗಳನ್ನು ಸಾಂದರ್ಭಿಕವಾಗಿ ತೆಗೆದುಕೊಳ್ಳಲಾಗಿದೆ. ಶಾಸನಗಳನ್ನು ಉಲ್ಲೇಖಿಸುವಾಗ ತಾಲ್ಲೂಕಿನ ಹೆಸರನ್ನು ಸಂಕ್ಷಿಪ್ತ ರೂಪಗಳಾಗಿ ಬಳಸಿದ್ದು, ಅವು ಈ ರೀತಿ ಇವೆ: ಬೆಂಗಳೂರು –ಬೆಂ, ಮಾಗಡಿ –ಮಾ, ನೆಲಮಂಗಲ –ನೆ, ದೇವನಹಳ್ಳಿ –ದೇ, ದೊಡ್ಡಬಳ್ಳಾಪುರ –ದೊ.ಬ, ಆನೇಕಲ್ಲು –ಆ, ಹೊಸಕೋಟೆ –ಹೊ, ಕಾನಕಾನಹಳ್ಳಿ (ಕನಕಪುರ) –ಕಾ, ಚನ್ನಪಟ್ಟಣ –ಚ. ನಂತರ ಆಯಾ ತಾಲ್ಲೂಕಿನ ಶಾಸನ ಸಂಖ್ಯೆಯನ್ನು ಕೊಡಲಾಗಿದೆ. ಅವಶ್ಯವಿದ್ದ ಕಡೆ ಆವರಣದಲ್ಲಿ ಶಾಸನಗಳ ಕಾಲವನ್ನು ನೀಡಲಾಗಿದೆ.

**–3–**

950ರ ಕಾಲಕ್ಕೆ ಬೆಂಗಳೂರು ಪರಿಸರವು ಗಂಗ ಮತ್ತು ನೊಳಂಬ ಅರಸರಿಂದ ಆಳಲ್ಪಡುತ್ತಿತ್ತು. 950ರ ಕೊಂಡಹಳ್ಳಿ ಶಾಸನದ ಪ್ರಕಾರ (ರೈಸ್ 1905, 9: ಹೊ–37) ಇರಿವ ನೊಳಂಬಾದಿರಾಜ (ಇರಿವ ನೊಳಂಬ ದಿಲೀಪ)ನ ಕಾಲದಲ್ಲಿ ನಂದಿಗೊಳಿ ಗಾವುಂಡನು ಮಿಯಭಸಪ್ಪನಿಗೆ ಕೈವಾರನಾಡು ಮತ್ತು ನೆಕ್ಕುಂದಿ ನಾಡಿನ ಎಲ್ಲ ದೇವಾಲಯಗಳ ದತ್ತಿಯ ವ್ಯವಸ್ಥಾಪಕ ಮತ್ತು ಪಟ್ಟಣದ ಆಡಳಿತಕಾರ್ಯಗಳನ್ನು ವಹಿಸಿದಂತೆ ತಿಳಿದು ಬರುತ್ತದೆ. ಇರಿವ ನೊಳಂಬ ದಿಲೀಪ ಹಾಗೂ ರಾಷ್ಟ್ರಕೂಟರ ಮೂರನೇ ಕೃಷ್ಣ ಮಿತ್ರರಾಗಿದ್ದರು. ಕೃಷ್ಣನು ಚೋಳರ ಮೇಲೆ ಕೈಗೊಂಡ ದಂಡಯಾತ್ರೆಯಲ್ಲಿ ದಿಲೀಪನೂ ಸಹ ಪಾಲ್ಗೊಂಡಿದ್ದನು (ಬಸವರಾಜು 2005:39). ಅದೇ ರೀತಿ ಗಂಗ ದೊರೆ ಭೂತುಗ ಮತ್ತು ಕೃಷ್ಣನ ನಡುವೆ ಒಳ್ಳೆಯ ಬಾಂದವ್ಯವಿತ್ತು. ಕೃಷ್ಣನು ಚೋಳರ ಪರಾಂತಕನ ಮೇಲೆ ದಂಡೆತ್ತಿ ಹೋಗಲಾಗಿ ತೆಕ್ಕೊಳಂ ಎಂಬಲ್ಲಿ 949ರಲ್ಲಿ ಯುದ್ಧಜರುಗಿತು. ಈ ಯುದ್ಧದಲ್ಲಿ ಕೃಷ್ಣನ ಪರವಾಗಿ ಭಾಗವಹಿಸಿದ್ದ ಭೂತುಗನು ಪರಾಂತಕನ ಮಗನಾದ ರಾಜಾದಿತ್ಯನನ್ನು ಕೊಂದನು. ಇದಕ್ಕೆ ಪ್ರತಿಯಾಗಿ ಕೃಷ್ಣನು ಭೂತುಗನಿಗೆ ಬನವಾಸಿ–12000, ಪುಲಿಗೆರೆ ಮೊದಲಾದ ಪ್ರದೇಶಗಳ ಒಡೆತನವನ್ನು ವಹಿಸಿಕೊಟ್ಟನು (Sheik ali 1976:125-133). ನಂತರ ಗಂಗರು ರಾಷ್ಟ್ರಕೂಟರಿಗೆ ನಿಷ್ಠರಾಗಿದ್ದರು. ಮೂರನೇ ಕೃಷ್ಣನ ಕಾಲದಲ್ಲಿ 966ರ ಶಾಸನವೊಂದರ ಪ್ರಕಾರ (ರೈಸ್ 1905, 9: ಮಾ–75) ಪಟ್ಟಣವು (ಮಣ್ಣೆ ?) ಲೂಟಿಗೆ ಒಳಗಾದಾಗ ಮಣ್ಣೆನಾಡು–300ರ ನಾಳ್ಗಾವುಂಡನಾದ ಗಂಗಗಚ್ಚಿಯ ಹಿರಿಯ ಮಗ 'ದಡಿಗ'ನು ಶತೃಗಳ ವಿರುದ್ಧ ಹೊರಾಡಿ ಸತ್ತನು. ಅವನ ಹೆಸರಿನಲ್ಲಿ 'ದಡಿಗೇಶ್ವರ' ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ನೀಡಿದ ಬಗ್ಗೆ ತಿಳಿಸುತ್ತದೆ.

ಗಂಗರಲ್ಲಿ ಅಧಿಕಾರಕ್ಕೆ ಬಂದ ಮಾರಸಿಂಹನು (963–75) ನೊಳಂಬವಾಡಿಯ ಮೇಲೆ ಆಕ್ರಮಣ ನಡೆಸಿದನು. ಹಲವು ಕಡೆಗಳಲ್ಲಿ ನೊಳಂಬರಿಗೂ ಗಂಗರಿಗೂ ಯುದ್ಧ ಜರುಗಿತು. ಅಂತಿಮವಾಗಿ ಮಾರಸಿಂಹನು ಜಯಶೀಲನಾಗಿ ನೊಳಂಬವಾಡಿಯನ್ನು ಉಳಿಸಿಕೊಳ್ಳಲು ನನ್ನಿನೊಳಂಬನು ಪಶ್ಚಿಮ ಚಾಲುಕ್ಯ ದೊರೆ ಇಮ್ಮಡಿ ತೈಲಪನೊಡನೆ ಮೈತ್ರಿ ಮಾಡಿಕೊಂಡನು (ಕೃಷ್ಣಮೂರ್ತಿ 1980:121). ಮಾರಸಿಂಹನ ಮರಣಾನಂತರ ನಾಲ್ಕನೆಯ ರಾಚಮಲ್ಲನು ಅಧಿಕಾರಕ್ಕೆ ಬಂದನು. ಆಗ ನೊಳಂಬರ ಇಮ್ಮಡಿ ಮಹೇಂದ್ರನು 977ರಲ್ಲಿ ನೊಳಂಬವಾಡಿಯನ್ನು ಮತ್ತೆ ಗೆದ್ದುಕೊಳ್ಳುವಲ್ಲಿ ಯಶಸ್ವಿಯಾದನು (ಕೃಷ್ಣಮೂರ್ತಿ 1980:124). 980ರ ಸುಮಾರಿನ ಹಡಕನಹಳ್ಳಿಯ ಶಾಸನವೊಂದರ ಪ್ರಕಾರ (ರೈಸ್ 1905, 9: ಹೊ–47) ನೊಳಂಬಾದಿ ರಾಜ ಇಮ್ಮಡಿ ಮಹೇಂದ್ರನು ಆಳುವಾಗ ಬಿಜಯಿತ

ಮಂಗಲ (ಬೇತಮಂಗಲ)ದಲ್ಲಿ ನೊಳಂಬರ ಸೇನೆ ಬೀಡು ಬಿಟ್ಟಿದ್ದಾಗ ಚೋಳರೊಂದಿಗೆ ನಡೆದ ಹೋರಾಟದಲ್ಲಿ 'ಪೆಳ್ದೆಳೆ' ಎಂಬಲ್ಲಿ ನೊಳಂಬರಸನು ಕಾದಾಡಿ ಸತ್ತನೆಂದು ತಿಳಿಸುತ್ತದೆ. ಸತ್ತವನು ಬಹುಶಃ ನೊಳಂಬಾದಿರಾಜ ಇಮ್ಮಡಿ ಮಹೇಂದ್ರನೇ ಇರಬಹುದು. ಇದೇ ಕಾಲದ ಮತ್ತೊಂದು ಶಾಸನದಲ್ಲಿ (ರೈಸ್ 1905, 9: ಹೊ–48) ಅಂಗರಕ್ಷಕ ರಣುಗಯ್ಯನ ತಮ್ಮ, ನೊಳಂಬರಸರ ಮಲ್ಲಪ್ಪನು ಮನ್ನಾರನ ಜೊತೆ ಕಾದಾಡಿ ಮನ್ನಾರನನ್ನು ಕೊಂದ ಬಗ್ಗೆ ತಿಳಿಸುತ್ತದೆ. ಕಮ್ಮಸಂದ್ರದ 977ರ ಶಾಸನದಲ್ಲಿ (ರೈಸ್ 1905, 9: ಹೊ–111) ರಾಜರಾಜ ಚೋಳನ ಕಾಲದಲ್ಲಿ ದಳಿಗವಾಡಿಯ ಕುರುಕ್ಷಂದಳ್ಚನ್ನು ನೊಳಂಬರ ಅಯ್ಯಪ್ಪದೇವನ ಮಗ ಗನ್ನರಸನು ಆಳುತ್ತಿದ್ದನು. ಶ್ರೀಧರಯ್ಯ ಅವನ ದಂಡನಾಯಕನಾಗಿದ್ದನು ಮತ್ತು ನಾಳ್ಗಾವುಂಡನ ಸಮ್ಮುಖದಲ್ಲಿ ಸತ್ತಿಮಂಗಲದ ಭೂಮಿಯ ವಿಚಾರದಲ್ಲಿ ಮಾರಯ್ಯ ಮತ್ತು ಪುಣಿಸೆಯಮ್ಮ ಅವರು ಚಾವಂಡಯ್ಯ ಎಂಬಾತನಿಗೆ ತಮ್ಮಲೋಪಾದಿ ಕೊಟ್ಟಬಗ್ಗೆ ತಿಳಿಸುತ್ತದೆ. ಬಹುಶಃ ಇದು ತಮ್ಮಡೋಪಾದಿಯಾಗಿದ್ದು, ಧಾರ್ಮಿಕ ಗುರುವಿಗೆ ಕೊಟ್ಟ ಕೊಡುಗೆ ಅಥವಾ ಪ್ರಶಸ್ತಿ ಆಗಿದ್ದರಬಹುದು. ಇದು ಬೆಂಗಳೂರು ಪರಿಸರದಲ್ಲಿ ದೊರೆತಿರುವ ಮೊದಲ ಚೋಳರ ಶಾಸನವಾಗಿದ್ದು, ಕನ್ನಡದಲ್ಲಿ ಇರುವುದು ಮತ್ತೊಂದು ವಿಶೇಷ.

ಬೆಂಗಳೂರು ಪರಿಸರದ 950–1000ದವರೆಗಿನ ಕಾಲಾವಧಿಯು ತೀವ್ರ ರಾಜಕೀಯ ಸಂಘರ್ಷದ ಕಾಲಾವಧಿಯಾಗಿತ್ತು. ಈ ಅವಧಿಯಲ್ಲಿ ಗಂಗ, ನೊಳಂಬ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ಚೋಳರು ರಾಜಕೀಯ ಮೇಲಾಟ ನಡೆಸಿದರು. ಮಹತ್ವಾಕಾಂಕ್ಷಿಯಾದ ರಾಜರಾಜಚೋಳನು (985–1014) ಚೇರರಾಜ ವಿಲ್ಲವನನ ನೌಕೆಗಳನ್ನು ಕಾಂದಲೂರು ಶೋಲೈನಲ್ಲಿ ನಾಶಪಡಿಸಿದ ನಂತರ ತನ್ನ ಸೈನ್ಯಬಲದಿಂದ ವೆಂಗೈನಾಡು, ಗಂಗಪಾಡಿ, ನೊಳಂಬವಾಡಿ, ತಡಿಗೈವಳಿ ಮುಂತಾದವುಗಳನ್ನು ಗೆದ್ದನೆಂದು ಕೆಲವು ಶಾಸನಗಳು ತಿಳಿಸುತ್ತವೆ (ರೈಸ್ 1905, 9: ನೆ–25, ದೇ–75, ಚ–128). ಉತ್ತರದ ಕಲ್ಯಾಣ ಚಾಲುಕ್ಯರ ರಾಜ್ಯದ (ಗೋಧಾವರಿ, ಕೃಷ್ಣಾ ಮತ್ತು ತುಂಗಭದ್ರಾ ನದಿಗಳಿಂದ ಫಲವತ್ತಾಗಿದ್ದ ಪ್ರದೇಶವದಾಗಿತ್ತು) ಮೇಲೆ ಆಸಕ್ತಿಹೊಂದಿದ್ದ ರಾಜರಾಜನಿಗೆ ಚೋಳ ಮತ್ತು ಚಾಲುಕ್ಯರ ರಾಜ್ಯದ ನಡುವೆ ತಡೆ ರಾಜ್ಯಗಳಾಗಿದ್ದ ಗಂಗ, ನೊಳಂಬ ಮೊದಲಾದ ರಾಜ್ಯಗಳನ್ನು ಗೆಲ್ಲುವುದರ ಅವಶ್ಯಕತೆ ಇತ್ತು. ತಿರುವನಂತಪುರದ ಕಾಂದಲೂರು ಶೋಲೈನಲ್ಲಿ ಚೇರರ ನೌಕಾಕೇಂದ್ರವನ್ನು ನಾಶಪಡಿಸುವ ಮೂಲಕ ತನ್ನ ಮೊದಲ ಮಹತ್ವದ ವಿಜಯ ಸಾಧಿಸಿದ್ದು ಅವನ ಮುಂದಿನ ಜೈತ್ರಯಾತ್ರೆಗೆ ಉತ್ತೇಜನ ನೀಡಿರಬಹುದು. ಕಾಂದಲೂರು ಶೋಲೈ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆಯಾದರೂ ಬಹು ಒಪ್ಪಿತವಾದ ಅಭಿಪ್ರಾಯವನ್ನು ನೀಡಿದವರು ಎಂ.ಜಿ.ಎಸ್.ನಾರಾಯಣನ್‌ರವರು. ಅವರ ಪ್ರಕಾರ: ಕಾಂದಲೂರು ಶೋಲೈ ದಕ್ಷಿಣ ಭಾರತದ ಅನೇಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾಗಿದ್ದು, ವಟುಗಳಿಗೆ ಸೈನಿಕಶಾಸ್ತ್ರ ಮತ್ತು ಶಿಕ್ಷಣ ಎರಡು ವಿಭಾಗಗಳಲ್ಲಿ ತರಬೇತಿ ನೀಡುತ್ತಿತ್ತು. ಘಟಿಕಾ ಸ್ಥಾನದಂತಿದ್ದ ಇದನ್ನು ನಾಶಪಡಿಸುವ ಮೂಲಕ ಚೋಳ ಪ್ರಭುತ್ವವು ಶತ್ರುವಿನ ಶಕ್ತಿಯನ್ನು ಚಿವುಟಿಹಾಕಿತು (Kesavan 2012:164). ರಾಜರಾಜನು ಒಂದು ಸೈನಿಕ ತರಬೇತಿ ಕೇಂದ್ರ ಮತ್ತು ನೌಕಾನೆಲೆಯನ್ನು ನಾಶಮಾಡಿದ ಸ್ಫೂರ್ತಿಯಲ್ಲಿ ಗಂಗವಾಡಿ, ನೊಳಂಬವಾಡಿ ಮೊದಲಾದವುಗಳನ್ನು ಗೆದ್ದು ಬಿರುಸಿನಿಂದ ಚಾಲುಕ್ಯ ರಾಜ್ಯದ ಕಡೆಗೆ ಮುನ್ನಡೆದನು. ಚಾಲುಕ್ಯರ ಇಮ್ಮಡಿ ತೈಲಪನಿಂದ ಸೋತನಾದರೂ,





ತೈಲಪನ ಮರಣಾನಂತರ ಕಲ್ಯಾಣ ಚಾಲುಕ್ಯ ದೊರೆ ಸತ್ಯಾಶ್ರಯನನ್ನು ಸೋಲಿಸಿ, ಅವನ ಖಜಾನೆಯ ಕೆಲಭಾಗವನ್ನು ವಶಪಡಿಸಿಕೊಂಡನೆಂದು ತಿಳಿದು ಬರುತ್ತದೆ (Nilakanta sastri 2000:175). ಗಂಗವಾಡಿಯು ಚೋಳರ ವಶಕ್ಕೆ ಹೋಗುವ ಮೂಲಕ ಬೆಂಗಳೂರು ಪರಿಸರವೂ ಅವರ ತೆಕ್ಕೆಗೆ ಹೋಯಿತು. ಸುಮಾರು 997 ರಿಂದ 1118ರವರೆಗೆ ಬೆಂಗಳೂರು ಪರಿಸರವು ಚೋಳ ರಾಜ್ಯದ ಭಾಗವಾಗಿತ್ತು. ಚೋಳರ ಮೂರು ಮಂಡಲಗಳ ವ್ಯಾಪ್ತಿಯೊಳಗೆ ಬೆಂಗಳೂರು ಪರಿಸರ ಹಂಚಿಕೆಯಾಗಿತ್ತು. ಆ ಮಂಡಲಗಳು ವಳನಾಡುಗಳು ಮತ್ತು ಅನೇಕ ನಾಡುಗಳನ್ನು ಹೊಂದಿದ್ದವು.

ರಾಜರಾಜಚೋಳನು 990ರಲ್ಲಿ ನೊಳಂಬ ರಾಜ್ಯದ ದಕ್ಷಿಣ ಭಾಗವನ್ನು ಆಕ್ರಮಿಸಿಕೊಂಡನು. ಹೀಗಾಗಿ ನೊಳಂಬರು ಚೋಳರ ಅಧೀನರಾಗಿ ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಆಳ್ವಿಕೆ ನಡೆಸಿದರು ಮತ್ತು ಇರಿವನೊಳಂಬನೂ ಸೇರಿದಂತೆ ದೀವಬ್ಬರಸಿಯು ಕಲ್ಯಾಣ ಚಾಲುಕ್ಯರ ಆಶ್ರಯಕ್ಕೆ ಹೋದರು. ತಂದೆ ರಾಜರಾಜನ ಕಾಲದಲ್ಲಿಯೇ ಆಳ್ವಿಕೆಯಲ್ಲಿ ತೊಡಗಿದ ರಾಜೇಂದ್ರಚೋಳನ (1012–1044) ಶಾಸನಗಳು ಬೆಂಗಳೂರು ಪರಿಸರದಲ್ಲಿ ಸಾಕಷ್ಟು ದೊರೆತಿವೆ. 1029ರಲ್ಲಿ ರಾಜೇಂದ್ರ ಚೋಳನ ದಂಡನಾಯಕನಾದ ಅಪ್ಪಣಯ್ಯನ ಮಗ ವಾಮನಯ್ಯನು ತನ್ನ ಗುರು ಮೌನಿಭಟ್ಟಾರಕರ ಸ್ಮರಣಾರ್ಥ ಸಿದ್ದೇಶ್ವರ ದೇಗುಲವನ್ನು ದಡಿಗಾವಳಿ (ದಡಿಗವಾಡಿ)ಯಾದ ವಿಕ್ರಮಚೋಳ ಮಂಡಲದ ಕುಕ್ಕನೂರು ನಾಡಿನ ಕೋಳಿಸಾಂಬೂಚ್ಚಿ (ಐಗಂಡಪುರ)ಯಲ್ಲಿ ಮಾಡಿಸಿದನು (ರೈಸ್ 1905, 9: ನೆ–1). ಈ ದೇವರಿಗೆ 1033ರಲ್ಲಿ ಕುಕ್ಕನೂರು ನಾಡಗಾಮುಂಡನಾದ ರಾಜೇಂದ್ರ ಚೋಳಕಾಮುಂಡನ್, ವಾಣಪುರದ ಗಾಮುಂಡ ಮೊದಲಾದವರು ದೇವದಾನ ಕೊಟ್ಟರೆ, ವಾಮನಯ್ಯನು ವಾಣಪುರ (ಬಾಣಾವರ)ದ ಕೆರೆಯ ಹಿಂದಿನ 2 ವೇಳಿ ಗದ್ದೆಯನ್ನು ಚಿನ್ನಕೊಟ್ಟು ಖರೀದಿಸಿ ದೇವಾಲಯಕ್ಕೆ ಬಿಟ್ಟನು (ರೈಸ್ 1905, 9: ನೆ–37). ನಾಡಗಾಮುಂಡನಾದ ರಾಜೇಂದ್ರ ಚೋಳ ಗಾಮುಂಡನು ಬಿನ್ನಮಂಗಲಕ್ಕೆ ಸೇರಿದವನು (ರೈಸ್ 1905, 9: ನೆ–7 ಎ). ರಾಜೇಂದ್ರ ಚೋಳನ ಕಾಲದಲ್ಲಿ ಬೆಂಗಳೂರು ಪರಿಸರದಲ್ಲಿ ಮಹಿಳೆಯರು ಆಡಳಿತದಲ್ಲಿ ಮಾತ್ರವಲ್ಲ ಶೌರ್ಯದಲ್ಲಿಯೂ ಕೀರ್ತಿವಂತರಾಗಿದ್ದರು. 1023ರಲ್ಲಿ ಪದಿಯರಕ್ಕ ಜೋಳಯ್ಯಗಾವುಂಡನ ಮಗ ಪಲಯ್ಯಗಾವುಂಡ ಎಂಬಾತನ ತಂಗಿ ಮಣ್ಣಿಯಬ್ಬೆಯು ಕಾರಪಾಕರ್ (ಪ್ರತಿನಿಧಿ) ಆಗಿದ್ದಳು. ಇವಳು ತನ್ನ ಅಣ್ಣನಿಗೆ ಧರ್ಮವಾಗಲೆಂದು ಕೆರೆ ಅಭಿವೃದ್ಧಿಗೆ, ಬ್ರಾಹ್ಮಣರು ಮತ್ತು ತಪಸ್ವಿಗಳಿಗೆ ನಿರುಗುಂಡ ಸೆಟ್ಟಿ ಎಂಬ ಮತ್ತೊಬ್ಬ ಕಾರಪಾಕರ್ ಜೊತೆಯಲ್ಲಿ ಹಣ ನೀಡಿದಳು (ರೈಸ್ 1905, 9: ಹೊ–10). 1041ರಲ್ಲಿ ಮಾಚಗಾವುಂಡನ ಮಗಳು ಲಕ್ಷಮ್ಮ ಗಾವುಂಡಿಯು ಕೈವಾರನಾಡಿನ ಸರಕ್ಕನೂರಿನ ಎಮ್ಮೆ ಹಸುಗಳನ್ನು ಶತೃಗಳು ಹೊಯ್ಯುತ್ತಿರುವುದನ್ನು ತಿಳಿದು ಶತೃಗಳೊಡನೆ ಹೋರಾಡಿ ಹಸುಗಳನ್ನು ಮರಳಿಸಿ ಸತ್ತಳು (ರೈಸ್ 1905, 9: ಹೊ–11). ಇದರಿಂದ ಬೆಂಗಳೂರಿನ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಮಹಿಳೆಯರು ಆಡಳಿತ ಮತ್ತು ಹೋರಾಟದಲ್ಲಿ ಭಾಗಿಯಾಗಿದ್ದರೆಂದು ತಿಳಿಯುತ್ತದೆ. ಅಲ್ಲದೆ ಶತೃಗಳು ಹಸುಗಳನ್ನಷ್ಟೆ ಅಲ್ಲ ಎಮ್ಮೆಗಳನ್ನೂ ಸಹ ಹೊಯುತ್ತಿದ್ದರೆಂದು ತಿಳಿಯುತ್ತದೆ.

ರಾಜಾಧಿರಾಜ ಚೋಳ (1018–1055) ಕಾಲದಲ್ಲಿ ಕುರುಡಿ ವಸಾವಯನ್ ವೀಮನ್ ಅಲಿಯಾಸ್ ಜಯಗೊಂಡ ಚೋಳ ವೇಳಾನ್‌ನು ವಿಕ್ರಮಚೋಳ ಮಂಡಲದಲ್ಲಿನ

ಸಣ್ಣೈನಾಡಿನ ಗಾವುಂಡನಾಗಿದನು. ಚಾಮುಂಡನ್ ಕಲಿಯನ್ ಅಲಿಯಾಸ್ ತಯಿಲ ಕುಲಕಾಲ ವೇಳಾನ್‌ನು ಗಂಗಾಪುರದ (ಗಂಗಾವರಂ) ಮುಖಂಡನಾಗಿದ್ದನು (ರೈಸ್ 1905, 9: ದೇ–75). 1050ರ ಶಾಸನವೊಂದು ಸೇನಾಪತಿ ರಾಜೇಂದ್ರಚೋಳ ಬ್ರಹ್ಮ ಮಾರಾಯರ್‌ಗೆ ಅವನ ಜೀವನ ಪರ್ಯಾಂತವಾಗಿ ವಿಕ್ರಮ ಚೋಳ ಮಂಡಲದ ಸಣ್ಣೈನಾಡಿನ ಉತ್ಪನ್ನದಲ್ಲಿ ನಿರ್ದಿಷ್ಟ ಪಾಲನ್ನು ಪಡೆಯುವಂತೆ ತಿಳಿಸುತ್ತದೆ (ರೈಸ್ 1905, 9: ದೇ–76). 1050ರಲ್ಲಿ ವಿಕ್ರಮಚೋಳ ಮಂಡಲದ ಕುಕ್ಕನೂರು ನಾಡಿನ ಗಾಮುಂಡ ರಾಜಾಧಿರಾಜ ವೇಳಾನ್ ಆಗಿದ್ದನು (ರೈಸ್ 1905, 9: ನೆ–38 ಸಿ). ಇದೇ ಕಾಲದಲ್ಲಿ ಇದೇ ಮಂಡಲಕ್ಕೆ ಸೇರಿದ ಮಣ್ಣೆನಾಡಿನಲ್ಲಿ ಸೇನಾಪತಿಯಾಗಿದ್ದವನು ವಾಣಕೋವರಯ್ಯ (ರೈಸ್ 1905, 9: ನೆ–25). 1065ಕ್ಕೆ ಸೇರಿದ ರಾಜಮಹೇಂದ್ರ ಚೋಳನ ಕಾಲದ ಶಾಸನವೊಂದು ತಿಳಿಸುವಂತೆ ಕಣವಯ್ಯನ್ ಇರುಗಯ್ಯನ್ ಅಲಿಯಾಸ್ ಗಂಡರ್ ಮಾಣಿಕ್ಕ ಬ್ರಹ್ಮಮಾರಾಯನನು ವಿಜ್ಯೈರಾಜೇಂದ್ರ ಮಂಡಲದ ಕೈವಾರನಾಡಿನಲ್ಲಿ ಗಾವುಂಡನಾಗಿದ್ದನು (ರೈಸ್ 1905, 9: ಹೊ–36). 1067ಕ್ಕೆ ಸೇರಿದ ಶಾಸನವೊಂದು ತಿಳಿಸುವಂತೆ ವಿಕ್ರಮಚೋಳ ಮಂಡಲದ ಸಣ್ಣೈನಾಡಿನ ತಿಪ್ಪೂರ ಭೂ ಒಡೆಯನಾದ ವಸವಯ್ಯನ ಹೆಂಡತಿ ಸೋಮಕ್ಕ ಅಗ್ನಿ ಪ್ರವೇಶಿಸಿದ ಬಗ್ಗೆ ತಿಳಿಸುತ್ತದೆ (ರೈಸ್ 1905, 9: ದೇ–14)

ಕುಲೋತ್ತುಂಗ ಚೋಳನ (1070–1120) ಕಾಲದಲ್ಲಿ ಸಣ್ಣೈನಾಡನ್ನು ಕಾಡೆಯ ನಾಯಕ ಎಂಬ ನಾಡಗಾವುಂಡ ಆಳುತ್ತಿದ್ದನು. ಅವನ ಭಂಟನಾಗಿದ್ದವನು ಮುಮ್ಮಡಿ ಸೆಟ್ಟಿಯ ಮಗ ಗೂಳಿಯಣ್ಣ (ರೈಸ್ 1905, 9: ಬೆಂ–32, (1080)). ಕುಲೊತ್ತುಂಗ ಚೋಳನು ವಿಕ್ರಮ ಚೋಳ ಮಂಡಲದ ಕುಕ್ಕನೂರು ನಾಡಿನ ವಿನ್ನಮಂಗಲ (ಬಿನ್ನಮಂಗಲ)ದ ಮುಕ್ತಿನಾಥ ದೇವರಿಗೆ ಅದೇ ನಾಡಿನ ನಕ್ಕೂರು (ಲಕ್ಕೂರು) ಮತ್ತು ಅದರ ಸುತ್ತಲ ಹೊಲಗದ್ದೆಯ ಉತ್ಪನ್ನದ ಮೇಲಿನ ತೆರಿಗೆ, ಊರಿನ ಮಗ್ಗ, ನೇಗಿಲು, ಹಸು ಮೊದಲಾದವುಗಳ ಮೇಲಿನ ತೆರಿಗೆಯನ್ನು 'ದೇವದಾನ' ಕೊಡುಗೆಯಾಗಿ ನೀಡಿದನು (ರೈಸ್ 1905, 9: ನೆ–3). ಅಲ್ಲದೆ ಇದೇ ನಾಡಿನ ಪೆರಿಯ ಮತ್ತಕೂರಿನ (ಐಗಂಡಪುರವು) (ಶಾಸನಗಳಲ್ಲಿ ಈ ಊರಿನ ಹೆಸರು ಭಿನ್ನ ಭಿನ್ನವಾಗಿ ಉಲ್ಲೇಖಗೊಂಡಿದೆ ನೋಡಿ– *ಇತಿಹಾಸ ದರ್ಪಣ (ನಮ್ಮ ಬೆಂಗಳೂರು) ಪುಸ್ತಕ–8* ಪು:22–23) ಐವರ್‌ಕಂಡೀಶ್ವರಂ ದೇವರಿಗೆ ವೇಲಪಾಳ ಗ್ರಾಮದ ಸುತ್ತಮುತ್ತಲ ಹೊಲಗದ್ದೆಯನ್ನು ದೇವದಾನವಾಗಿ ನೀಡಿದನು (ರೈಸ್ 1905, 9: ನೆ–38 ಎ).

**ಬೆಂಗಳೂರು ಪರಿಸರದ ಮೇಲೆ ಚೋಳರ ಪ್ರಭಾವ:** ಸುಮಾರು 120 ವರ್ಷಗಳ ಕಾಲ ಬೆಂಗಳೂರು ಪರಿಸರವನ್ನು ಒಳಗೊಂಡಂತೆ ಗಂಗವಾಡಿ, ನೊಳಂಬವಾಡಿ ಮೊದಲಾದ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ಚೋಳರು ಆಡಳಿತದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಇವರು ಆರಂಭದಲ್ಲಿ ಕನ್ನಡದಲ್ಲಿಯೇ ಶಾಸನಗಳನ್ನು ಹಾಕಿದರಾದರೂ ನಂತರ ತಮಿಳಿನಲ್ಲಿ ಬರೆಸಲಾರಂಭಿಸಿದರು. ಇವರ ಆಡಳಿತದ ಪ್ರಭಾವ ಎಷ್ಟು ತೀವ್ರವಾಗಿತ್ತೆಂದರೆ ಹೊಯ್ಸಳ ದೊರೆಗಳು ತಮ್ಮ ಬಹುತೇಕ ಶಾಸನಗಳನ್ನು ತಮಿಳಿನಲ್ಲಿಯೇ ಬೆಂಗಳೂರು ಪರಿಸರದಲ್ಲಿ ಹಾಕಿಸಿದರು. ಆರಂಭಿಕ ವಿಜಯನಗರ ದೊರೆಗಳು ಸಹ ತಮಿಳು ಮೋಹಕ್ಕೆ ಒಳಗಾಗಿ ಶಾಸನ ಹಾಕಿಸಿದರು. ಹರಿಹರ ಬುಕ್ಕರು ಮೂರನೇ ಬಲ್ಲಾಳನ ಕಾಲದಲ್ಲಿ ಬೆಂಗಳೂರಿನ ಪರಿಸರದಲ್ಲಿಯೇ ಆಳ್ವಿಕೆ ನಡೆಸುತ್ತಿದ್ದರಿಂದ ಬಹುಶಃ ಅವರ ಮೇಲೂ ತಮಿಳು ಪ್ರಭಾವ





ತೀವ್ರವಾಗಿದ್ದಿರಬಹುದು. ಚೋಳರ ಆಡಳಿತದಲ್ಲಿ ಗಮನಿಸಬಹುದಾದ ಪ್ರಮುಖ ಅಂಶ ಎಂದರೆ ಸ್ಥಳೀಯ ಆಡಳಿತಗಾರರನ್ನು ಮತ್ತು ಗ್ರಾಮಗಳ ಹೆಸರುಗಳನ್ನು ತಮಿಳೀಕರಣಗೊಳಿಸಿದ್ದು, ಆಡಳಿತಗಾರರನ್ನು ತಮಿಳು ಪ್ರದೇಶದಿಂದಲೂ ಕರೆತಂದು ನೇಮಿಸಿದ್ದು. ಸ್ವತಂತ್ರ ಪೂರ್ವದಲ್ಲಿ ಇಂಗ್ಲಿಷ್ ಬಲ್ಲವನಷ್ಟೆ ಸರ್ಕಾರಿ ನೌಕರಿ ಪಡೆಯಲು ಹೇಗೆ ಅರ್ಹನಿದ್ದನೋ ಹಾಗೆಯೇ ಚೋಳರ ಕಾಲದಲ್ಲಿಯೂ ಮತ್ತು ಆನಂತರ ಬಂದ ಹೊಯ್ಸಳರ ಕಾಲದಲ್ಲಿಯೂ ತಮಿಳು ಬಲ್ಲವರಷ್ಟೆ ಅರ್ಹರಿದ್ದಂತೆ ಕಾಣುವುದು. ಜನಸಾಮಾನ್ಯರ ಭಾಷೆ ಕನ್ನಡವಾಗಿದ್ದರೂ ಮೇಲ್ವರ್ಗದ ಆಡಳಿತ ಭಾಷೆ ತಮಿಳಾಗಿತ್ತು. ನಾಡಗಾವುಂಡರು ಮೊದಲಾದ ಅಧಿಕಾರಿಗಳು ತಮ್ಮ ಹೆಸರಿನ ಜೊತೆಗೆ ರಾಜನ ಹೆಸರನ್ನು ಒಳಗೊಂಡ ಪ್ರತಿನಾಮದೇಯವನ್ನು ಹೊಂದಿದ್ದರು. ಉದಾ: ರಾಜಾಧಿರಾಜ ಚೋಳನ ಕಾಲದಲ್ಲಿ ಕುಕ್ಕನೂರು ಗಾಮುಂಡ ರಾಜಾಧಿರಾಜ ವೇಳಾನ್ ಎಂದು ಕರೆದುಕೊಂಡರೆ (ರೈಸ್ 1905, 9: ನೆ–38 ಸಿ), ರಾಜೇಂದ್ರಚೋಳನ ಕಾಲದಲ್ಲಿದ್ದ ಕುಕ್ಕನೂರು ಗಾಮುಂಡನು ರಾಜೇಂದ್ರ ಚೋಳ ಕಾಮುಂಡನ್ (ರೈಸ್ 1905, 9: ನೆ–37) ಎಂತಲೂ, ಸಣ್ಣೈನಾಡ ಗಾಮುಂಡ ಕುರುಡಿ ವಸಾವಯನ್ ವೀಮನ್ ಎಂಬಾತ ಜಯಗೊಂಡ ಚೋಳ ವೇಳಾನ್ ಎಂತಲೂ (ರೈಸ್ 1905, 9: ದೇ–14) ಪ್ರತಿನಾಮದೇಯ ಹೊಂದಿದರು. ಇದು ಅವರ ಸ್ವಾಮಿನಿಷ್ಟೆಯ ಪ್ರತೀಕವಿರಬಹುದು. ಅದೇ ರೀತಿ ವಿಕ್ಕೂರು ಗ್ರಾಮವು ಪ್ರತಿನಾಮದೇಯವಾದ ಜಯಗೊಂಡ ಚೋಳಪುರಂ (ರೈಸ್ 1905, 9: ಹೊ–36) ಆಗಿದೆ. ಕೇವಲ ಗ್ರಾಮಗಳು ಮಾತ್ರವಲ್ಲ ನಾಡ ಹೆಸರನ್ನೆ ಬದಲಿಸಿರುವುದುಂಟು. ಉದಾ: ದಡಿಗಾವಳಿನಾಡು 'ವಿಕ್ರಮ ಚೋಳ ಮಂಡಲ'ವಾಗಿದೆ (ರೈಸ್ 1905, 9: ನೆ–1). ಚೋಳರು ಅಗ್ರಹಾರಗಳಿಗೆ ಪ್ರತಿನಾಮದೇಯವಿಟ್ಟು ಕೊಟ್ಟಿರುವ ಉಲ್ಲೇಖಗಳಿವೆ. ಈ ಪರಿಪಾಠ ಹೊಯ್ಸಳರ ಕಾಲದಲ್ಲಿಯೂ ಮುಂದುವರೆಯಿತು.

ಚೋಳರ ಕಾಲದ ಆಡಳಿತದಲ್ಲಿನ ಮತ್ತೊಂದು ವಿಶೇಷ ಎಂದರೆ ವಿವಿಧ ರೀತಿಯ ಆಡಳಿತ ವಿಭಾಗಗಳು ಮತ್ತು ಅಧಿಕಾರಿವರ್ಗಗಳನ್ನು ಪರಿಚಯಿಸಿದ್ದಾಗಿದೆ. ಬೆಂಗಳೂರಿನ ಪರಿಸರದಲ್ಲಿನ ಚೋಳರ ಶಾಸನಗಳನ್ನು ಅವಲೋಕಿಸಿದರೆ ದಂಡನಾಯಕ, ಸೇನಾಪತಿ, ನಾಡಗಾವುಂಡ, ಮಹಾಮಾತ್ರ, ನಾಡನಾಯಗನ್ ಮೊದಲಾದ ಅಧಿಕಾರಿ ವರ್ಗಗಳು ಹಾಗೂ ಮಂಡಲ, ವಳನಾಡು, ಪರ್ರು, ನಾಡು ಮೊದಲಾದ ಆಡಳಿತ ವಿಭಾಗಗಳನ್ನು ಹೆಸರಿಸಬಹುದಾಗಿದೆ. ಬೆಂಗಳೂರಿನ ಪರಿಸರದ ಶಾಸನಗಳಲ್ಲಿ ದಂಡನಾಯಕನ ಮೊದಲ ಉಲ್ಲೇಖ ಸಿಗುವುದೇ ಚೋಳರ ಮೊದಲ ಶಾಸನದಲ್ಲಿ (ರೈಸ್ 1905, 9: ಹೊ–111, 997). ಅದರಲ್ಲಿ ದಂಡನಾಯಕ ಶ್ರೀಧರಯ್ಯನನ್ನು ಉಲ್ಲೇಖಿಸಿದೆ. ನಂತರ 1029ರ ಸೋಲದೇವನಹಳ್ಳಿ ಶಾಸನದಲ್ಲಿ ವಾಮನಯ್ಯ ದಂಡನಾಯಕನ ಹೆಸರಿದೆ (ರೈಸ್ 1905, 9: ನೆ–1). ಚೋಳರಿಗೆ ಪೂರ್ವದ ಶಾಸನಗಳಲ್ಲಿ ದಂಡನಾಯಕ ಎಂಬ ಸೇನಾ ಮುಖ್ಯಸ್ಥನ ಪ್ರಸ್ತಾಪ ಕಂಡು ಬರುವುದಿಲ್ಲವಾದ್ದರಿಂದ ಇದು ಚೋಳರ ಆಡಳಿತದ ಕಾಣಿಕೆ ಎನ್ನಬಹುದು. ತಮ್ಮ ನಂತರದ ಆಡಳಿತದಲ್ಲಿ ಚೋಳರ ಪ್ರಭಾವ ಎಷ್ಟಿತ್ತೆಂದರೆ ಹೊಯ್ಸಳರು ಚೋಳರ ತಮಿಳು ಅಧಿಕಾರಿಗಳನ್ನೆ ಮುಂದುವರೆಸಿದಂತೆ ಕಾಣುತ್ತದೆ (ರೈಸ್ 1905, 9: ಬೆಂ–85 ಸಿ). ಇದರಿಂದಾಗಿ ಒಂದು ಕಾಲಘಟ್ಟದಲ್ಲಿ ಬೆಂಗಳೂರು ತಮಿಳುಮಯವಾದ ಆಡಳಿತದಿಂದ ಕೂಡಿತ್ತು ಎಂಬುದಂತೂ ನಿಶ್ಚಿತ.

**ಹೊಯ್ಸಳರ ವಿಕ್ರಮ:** ಹೊಯ್ಸಳ ವಿಷ್ಣುವರ್ಧನನು (1108–1142) ಗಂಗರಾಜನ ಅಧೀನದಲ್ಲಿ ಸೈನ್ಯವಿರಿಸಿ ತಲಕಾಡನ್ನು ಮುತ್ತಿದನು. ತಲಕಾಡಿನಲ್ಲಿದ್ದ ಚೋಳರ ಆದಿಯಮನು ಯುದ್ಧದಲ್ಲಿ ಮಡಿದನು. ಅಂತಿಮವಾಗಿ ತಲಕಾಡು 1117ರಲ್ಲಿ ಹೊಯ್ಸಳರ ಕೈವಶವಾಯಿತು (ಸುರೇಂದ್ರರಾವ್ 1997:117). ಆದರೆ ಬೆಂಗಳೂರಿನ ಪರಿಸರದಲ್ಲಿ ಕಂಡುಬರುವ ಹೊಯ್ಸಳ ವಿಷ್ಣುವರ್ಧನನ ಆರಂಭಿಕ ಶಾಸನಗಳಲ್ಲಿ (ರೈಸ್ 1905, 9: ನೆ–67 ಮತ್ತು ದೊ.ಬ–11) 'ತಲಕಾಡು ಕೊಂಡ' ಎಂಬ ಬಿರುದಿದೆ. ಈ ಶಾಸನಗಳಲ್ಲಿ ಕಾಲದ ಸ್ಪಷ್ಟ ಉಲ್ಲೇಖಗಳಿಲ್ಲದಿದ್ದರೂ ರೈಸರು ಅವುಗಳ ಕಾಲವನ್ನು 1115 ಎಂದು ನಿರ್ಧರಿಸಿದ್ದಾರೆ. ಬಹುಶಃ ಈ ಶಾಸನಗಳ ಕಾಲವನ್ನು ಮರುಪರಿಶೀಲಿಸಬೇಕಿದೆ (ದೊ.ಬ–11ರಲ್ಲಿ ವಿಷ್ಣುವರ್ಧನನು ಅಧಿಕಾರಕ್ಕೆ ಬಂದ 12ನೇ ವರ್ಷ ಎಂದಿರುವುದರಿಂದ ಇದರ ಕಾಲ 1120 ಆಗುತ್ತದೆ. ಆದರೆ ರೈಸರು 1115 ಸೂಚಿಸಿದ್ದಾರೆ). ಹೆಗ್ಗುಂದದ ಶಾಸನದ ಪ್ರಕಾರ (ರೈಸ್ 1905, 9: ನೆ–67, (1115?)) ವೀರಗಂಗ ಪೊಯ್ಸಳದೇವ (ವಿಷ್ಣುವರ್ಧನ)ನ ಕಾಲದಲ್ಲಿ ನಿಗರಿಲಿ ಚೋಳ ಮಂಡಲಕ್ಕೆ ಸೇರಿದ ಮಣ್ಣೆಯನಾಡನ್ನು ಹೊಯ್ಸಳ ಸಾಮಂತನಾಗಿ ತ್ರಿಭುವನಮಲ್ಲ ಎಂಬಾತನು ಆಳುತ್ತಿದ್ದರೆ, ವಿಕ್ರಮಚೋಳ ಮಂಡಲದಲ್ಲಿರುವ ಮಣ್ಣೆನಾಡಿನ ಗಾಮುಂಡನಾಗಿ ಚತ್ತಯನ್ ಅಲಿಯಾಸ್ ವಿರುಂತರಾಯ ಭಯಂಕರ ಆಳುತ್ತಿದ್ದನು (ರೈಸ್ 1905, 9: ದೊ.ಬ–11). ತ್ರಿಭುವನಮಲ್ಲನ ಅಧೀನದಲ್ಲಿ ನಾಡಗಾವುಂಡನಾಗಿ ಚತ್ತಯನ್ ಆಳಿದ್ದಿರಬಹುದು. ಆದರೆ ಇಲ್ಲಿನ ಪ್ರಮುಖ ಗೊಂದಲ ಎಂದರೆ ಒಂದು ಶಾಸನದಲ್ಲಿ ಮಣ್ಣೆನಾಡು ನಿಗರಿಲಿ ಚೋಳಮಂಡಲಕ್ಕೆ ಸೇರಿರುವುದಾಗಿ ತಿಳಿಸಿದರೆ, ಮತ್ತೊಂದರಲ್ಲಿ ವಿಕ್ರಮಚೋಳಮಂಡಲಕ್ಕೆ ಸೇರಿರುವುದಾಗಿ ತಿಳಿಸುತ್ತದೆ. ಇದನ್ನು ಮುಂದೆ ಆಡಳಿತ ವಿಭಾಗದಲ್ಲಿ ಚರ್ಚಿಸಲಾಗುವುದು. 1128ರಲ್ಲಿ ಕೈವಾರ ನಾಡನ್ನು 'ಗಂಡಮಾಣಿಕ್ಯ ಬ್ರಹ್ಮಾಧಿರಾಜನ್' ಎಂಬುವವನು ಆಳುತ್ತಿದ್ದನು (ರೈಸ್ 1905, 9: ಹೊ–18). ವಿಷ್ಣುವರ್ಧನನು 1140ರಲ್ಲಿ ತನ್ನ ತಾಯಿಯ ಸ್ಮರಣಾರ್ಥವಾಗಿ ಬೋಚಸಮುದ್ರ ಕೆರೆಯನ್ನು ಮತ್ತು ತಂದೆಯ ಹೆಸರಿನಲ್ಲಿ ಅದಲಸಮುದ್ರವಾದ ವಿಷ್ಣುಸಮುದ್ರ ಕೆರೆಯನ್ನು ಹಾಗೂ ದೇವಾಲಯವನ್ನು ಕಟ್ಟಿಸಿದನು (ರೈಸ್ 1905, 9: ನೆ–84). ಚಿಕ್ಕಬಾಣಾವರದ ಶಾಸನವೊಂದರ (ರೈಸ್ 1905, 9: ಬೆಂ–25) ಪ್ರಕಾರ ವಿಷ್ಣುವರ್ಧನನ ದಂಡನಾಯಕ ಉದೆಯಮಯ್ಯ ಎಂಬಾತನು ಕಡಂಬೂರಿನಲ್ಲಿ ಯುದ್ಧ ಮಾಡುವಾಗ ಮಾಚಿದೇವನು ಶತೃಗಳನ್ನು ಕೊಂದು ಸತ್ತನು.

ವಿಷ್ಣುವರ್ಧನನ ನಂತರ ಹೊಯ್ಸಳರಲ್ಲಿ ಅಧಿಕಾರಕ್ಕೆ ಬಂದ ಅವನ ಮಗ ಒಂದನೇ ನರಸಿಂಹನ (1142–1173) ಕಾಲದ ವೋಬಳೇನಹಳ್ಳಿ ಶಾಸನವು (ರೈಸ್ 1905, 9: ಹೊ–40) ತಿಳಿಸುವಂತೆ ನಿಗರಿಲಿ ಚೋಳ ಮಂಡಲಕ್ಕೆ ಸೇರಿದ ಕೈವಾರನಾಡಿನ ಗಾವುಂಡನಾಗಿದ್ದ ನರಸಿಂಹ ಪೊಯ್ಸಳ ಬ್ರಹ್ಮಾಧಿರಾಜನು ದೊಡ್ಡ ಕೆರೆಯೊಂದರ ಹಿಂದಿನ ಭೂಮಿಯನ್ನು ದೇವಾಲಯಕ್ಕೆ ಕೊಟ್ಟ ಬಗ್ಗೆ ತಿಳಿಸುತ್ತದೆ. ಚೋಳರ ಕಾಲದಲ್ಲಿ ತಮ್ಮ ರಾಜನಲ್ಲಿನ ನಿಷ್ಠೆಯನ್ನು ಪ್ರದರ್ಶಿಸುವಂತೆ ಹೊಯ್ಸಳರ ಕಾಲದಲ್ಲಿಯೂ ನಾಡ್ಗಾವುಂಡ ಮೊದಲಾದ ಅಧಿಕಾರಿಗಳು ತಮ್ಮ ಹೆಸರನ್ನು ರಾಜನ ಹೆಸರಿನಿಂದಲೇ ಕರೆದು ಕೊಳ್ಳುತ್ತಿದ್ದ ಪದ್ಧತಿ ಮುಂದುವರೆದಂತೆ ಕಂಡು ಬರುವುದನ್ನು ಗಮನಿಸಬಹುದು. ನರಸಿಂಹನ ಕಾಲದಲ್ಲಿಯೇ ಕುಕ್ಕಲನಾಡ ತಿಪ್ಪೂರು ಮೇಲೆ ಮುರಸಾದಿರಾಯರು ಧಾಳಿಮಾಡಿದಾಗ ಹಲವು ನಾಡಗಾಮುಂಡರು ಪಟ್ಟಣ ರಕ್ಷಿಸಲು ಹೋಗಿ ಪ್ರಾಣ ತೆತ್ತರು (ರೈಸ್ 1905, 9: ಬೆಂ–112). ಅಚ್ಚಲೈಯನ್ ಎಂಬಾತನು ತಿಪ್ಪೂರಿನ ಪೆರ್ಕಡಿ (ಹೆಗ್ಗಡೆ)ಯಾಗಿದ್ದನು.





ಸ್ಥಳೀಯ ಮಟ್ಟದಲ್ಲಿ ಗ್ರಾಮ, ಪಟ್ಟಣಗಳ ರಕ್ಷಣೆಯ ಜವಾಬ್ದಾರಿಯು ಗಾಮುಂಡ, ಪೆರ್ಗಡೆ ಅವರದಾಗಿತ್ತೆಂದು ತಿಳಿಯಬಹುದು.

ಒಂದನೇ ನರಸಿಂಹನ ನಂತರ ಅಧಿಕಾರಕ್ಕೆ ಬಂದ ಎರಡನೇ ವೀರಬಲ್ಲಾಳನು (1173–1220) ಹೊಯ್ಸಳ ದೊರೆಗಳಲ್ಲಿ ಪ್ರಮುಖನಾದವನು. ಆದರೆ ಇವನ ಶಾಸನಗಳು ಈ ಭಾಗದಲ್ಲಿ ಹೆಚ್ಚು ಕಂಡು ಬಂದಿರುವುದಿಲ್ಲ. ಎರಡನೇ ಬಲ್ಲಾಳನ ನಂತರ ಬಂದ ಎರಡನೇ ವೀರನರಸಿಂಹನು (1220–1235) ಅಧಿಕಾರಕ್ಕೆ ಬಂದನು. ಇವನು ಕಾಲದಲ್ಲಿ ಬೆಂಗಳೂರಿನ ಪರಿಸರಕ್ಕೆ ಸೇರಿದ ಇಲೈಪ್ಪಾಕ್ಕನಾಡನ್ನು (ಯಲಹಂಕನಾಡು) ಚಿಕ್ಕದೇವರ್ ಎಂಬಾತನು ಆಳುತ್ತಿದ್ದನು. ಆಗ ಹಿರಿಯ ತ್ರಿಲೋಕಶೆಟ್ಟಿ ಎಂಬಾತನು ಕಾಚರಕನಹಳ್ಳಿ ಶಿವಾಲಯಕ್ಕೆ ಗೋಪುರ ಮಾಡಿಸಿದನು (ರೈಸ್ 1905, 9: ಬೆಂ–139 ಎ).

ಎರಡನೇ ನರಸಿಂಹನ ನಂತರ ಅವನ ಮಗ ಸೋಮೇಶ್ವರನು (1235–1254) ಅಧಿಕಾರಕ್ಕೆ ಬಂದನು. ಇವನು ದೀರ್ಘಕಾಲ ಉಣ್ಣಾಮಲೈ (ತಮಿಳುನಾಡಿನ ದಕ್ಷಿಣ ಆರ್ಕಾಟಿನ ಅಣ್ಣಾಮಲೈ –ಕಣ್ಣಾನೂರು)ನಲ್ಲಿಯೇ ನೆಲೆನಿಂತು ತಮಿಳುನಾಡಿನ ರಾಜಕರಣದಲ್ಲಿಯೇ ಸಕ್ರಿಯನಾದನು (ಸೂರ್ಯನಾಥ ಕಾಮತ್ 1997:116). ಬೆಂಗಳೂರಿನ ಪರಿಸರದಲ್ಲಿ ಇವನ ಹೆಸರನ್ನು ಉಲ್ಲೇಖಿಸುವ ಶಾಸನಗಳು ಕಡಮೆ. ಇವನ ಕಾಲಘಟ್ಟಕ್ಕೆ ಸೇರಿದ ಮಡಿವಾಳದ ಒಂದು ತಮಿಳು ಶಾಸನದಲ್ಲಿ ತಾಮರೈಕ್ಕೆರೈ (ತಾವರೇಕೆರೆ) ಸೋಮೇಶ್ವರ ದೇವರಿಗೆ ವೆಪ್ಪೂರಿನ (ಬೇಗೂರು) ಪೆಮ್ಮತ್ತೈಯಾರನು 'ವೆಂಗಳೂರು' ದೊಡ್ಡಕೆರೆಯ ಕೆಳಗೆ ನಿರ್ದಿಷ್ಟ ಭೂಮಿಯನ್ನು ಕೊಟ್ಟ ಬಗ್ಗೆ ತಿಳಿಸುತ್ತದೆ. 1247ಕ್ಕೆ ಸೇರಿದ ಈ ಶಾಸನದಲ್ಲಿ (ರೈಸ್ 1905, 9: ಬೆಂ–68) ಬೆಂಗಳೂರನ್ನು 'ವೆಂಗಳೂರು' ಎಂದು ಉಲ್ಲೇಖಿಸಿದೆ. ಇದು ಬೆಂಗಳೂರಿನ ಉಲ್ಲೇಖ ಇರುವ ಎರಡನೇ ಪ್ರಾಚೀನ ಶಾಸನವಾಗಿದೆ (9ನೆಯ ಶತಮಾನದ ಬೇಗೂರು ಶಾಸನದಲ್ಲಿರುವ 'ಬೆಂಗುಳೂರು' ಎಂಬ ಉಲ್ಲೇಖವು ಮೊದಲನೆಯದೆಂಬುದನ್ನು ಇಲ್ಲಿ ಸ್ಮರಿಸಬಹುದು). ಬನ್ನೇರುಘಟ್ಟದ ಚಂಪಕಸ್ವಾಮಿ ದೇವಾಲಯವನ್ನು ಹೊಯ್ಸಳರ ತಮಿಳು ಅಧಿಕಾರಿಗಳಾದ ಪೂರ್ವಾಧಿರಾಯರು 1257ರಲ್ಲಿ ನಿರ್ಮಿಸಿದರು (MAR 1947-56:31). 1266ರ ದೊಮ್ಮಲೂರಿನ ಶಾಸನದ (ರೈಸ್ 1905, 9: ಬೆಂ–70) ಪ್ರಕಾರ ತೊಂಬಲೂರ್ (ದೊಮ್ಮಲೂರ್)ಗೆ 'ದೇಶಿ ಮಾಣಿಕ್ಯ ಪಟ್ಟಣ' ಎಂಬ ಪ್ರತಿನಾಮವಿತ್ತು. ಇಲ್ಲಿನ ತ್ರಿಪುರಾಂತಕ ಪೆರುಮಾಳ್ ದೇವಾಲಯಕ್ಕೆ ತ್ರಿಪುರಾಂತಕ ಶೆಟ್ಟಿಯು (ಅಧಿಕಾರಿ ಇರಬಾರದು?) ಜಾಲಪಳ್ಳಿ (ಜಾಲಹಳ್ಳಿ) ಮತ್ತು ವಿನ್ನಮಂಗಲ (ಬಿನ್ನಮಂಗಲ) ಕೆರೆಗಳ ಹಿಂದಿನ ಚತುರ್ಸೀಮೆ ಭೂಮಿಯನ್ನು ಹಾಗೂ ದೊಮ್ಮಲೂರ ದೊಡ್ಡಕೆರೆಯ ಹಿಂದಿನ ಭೂಮಿಯನ್ನು ದೇವಾಲಯಕ್ಕೆ ಬಿಟ್ಟಂತೆ ತೋರುತ್ತದೆ. ಅದೇ ರೀತಿ ಗಂಗಾಪುರದ ಪೂಜಾರಿಗೆ ಭಯಪೆಪಳ್ಳಿ (ಬಯ್ಯಪ್ಪನಹಳ್ಳಿ) ಗ್ರಾಮದ 8 ಪೊನ್ನಿನ ಭೂಮಿಯನ್ನು ಕೊಡುಗೆಯಾಗಿ ನೀಡಿದನು. ಇದೇ ವೆಂಬಿದೇವ ಅಲಿಯಾಸ್ ನಂದಿದೇವನು ನಿಗರಿಲಿ ಚೋಳ ಮಂಡಲದ ಸಣ್ಣೆನಾಡಿನ ಉತ್ತರ ಭಾಗದ ಕೊಡವತ್ತಿಯ ಕುಳೈಮಾಪಳ್ಳಂ ಕೆರೆಯ ಹಿಂದಿನ ಭೂಮಿಯನ್ನು 32 ಬ್ರಾಹ್ಮಣರಿಗೆ ಕೊಟ್ಟನೆಂದು 1283ರ ಕಾರಹಳ್ಳಿ (ಆವತಿ–ಹೋ.) ಶಾಸನವು (ರೈಸ್ 1905, 9: ದೇ–28) ತಿಳಿಸುತ್ತದೆ.

ಹೊಯ್ಸಳ ದೊರೆ ಸೋಮೇಶ್ವರನು ತನ್ನ ಕೊನೆಗಾಲದಲ್ಲಿ ರಾಜ್ಯವನ್ನು ತನ್ನ ಇಬ್ಬರು ರಾಣಿಯರ ಮಕ್ಕಳಾದ (ಬಿಜ್ಜಳೆಯ ಮಗ) ರಾಮನಾಥ ಮತ್ತು (ದೇವಿಕಾದೇವಿಯ ಮಗ) ಮೂರನೇ ನರಸಿಂಹನ ನಡುವೆ 1254ರಲ್ಲಿ ಹಂಚಿಕೊಟ್ಟನು. ರಾಮನಾಥನು

ಕಣ್ಣಾನೂರಿನಿಂದಲೂ, ನರಸಿಂಹನು ದ್ವಾರಸಮುದ್ರದಿಂದಲೂ ಆಳುತ್ತಿದ್ದರು (ಸೂರ್ಯನಾಥ ಕಾಮತ್ 1997:166). 1267ರ ಶಾಸನವೊಂದು (ರೈಸ್ 1905, 9: ದೊ.ಬ–31 ಎ) ನರಸಿಂಹನು ದ್ವಾರಸಮುದ್ರದಲ್ಲಿ ರಾಜ್ಯವಾಳುವಾಗ ಅವನ ಮಹಾಮಂಡಲೇಶ್ವರ, ಭಂಗಿಕುಲದ ಬೇಚಿದೇವನು (ಬಹುಶಃ ವೆಂಬಿದೇವ (ನಂದಿದೇವ)ನೇ ಇರಬೇಕು) ಯಲಹಂಕ ನೆಲೆವೀಡಿನಿಂದ ಆಳುತ್ತಿದ್ದುದಾಗಿ ತಿಳಿಸುತ್ತದೆ. ಅಂದರೆ ಬೆಂಗಳೂರು ಪರಸರವು ನರಸಿಂಹನಿಗೆ ಸೇರಿತ್ತು. ಆದರೆ 1290ರ ಹೊತ್ತಿಗೆ ರಾಮನಾಥನು ಬೆಂಗಳೂರು ಪರಿಸರದ ಕಡೆಗೆ ಬಂದಂತೆ ಕಾಣುತ್ತದೆ. ಏಕೆಂದರೆ ಪಾಂಡ್ಯರು ರಾಮನಾಥನನ್ನು ಕಣ್ಣಾನೂರಿನಿಂದ ಹೊರದೂಡಿದಾಗ (ಸು.1280), ಅವನು ಕುಂದಾಣಿಗೆ ಬಂದು ನರಸಿಂಹನ ಪಾಲಿನ ಕನ್ನಡ ಪ್ರದೇಶದಲ್ಲಿಯೇ ಒತ್ತುವರಿ ನಡೆಸಲು ಆರಂಭಿಸಿದನೆಂದು ಸೂರ್ಯನಾಥ ಕಾಮತ್ ಅವರು ಅಭಿಪ್ರಾಯ ಪಡುತ್ತಾರೆ (ಸೂರ್ಯನಾಥ ಕಾಮತ್ 1999:116). ರಾಮನಾಥನ 1290ರ ದೊಮ್ಮಲೂರು ಶಾಸನದಲ್ಲಿ (ರೈಸ್ 1905, 9: ಬೆಂ–11) ಚೆಲ್ಲಪಿಳ್ಳೈ ಎಂಬ ಯಲಹಂಕನಾಡಿನ ಅಧಿಕಾರಿಯೊಬ್ಬನ ಉಲ್ಲೇಖವಿದೆ. ಈ ನಾಡಿನಲ್ಲಿ ನರಸಿಂಹನ ಕಾಲದಲ್ಲಿ ನಂದಿದೇವನು ಮಹಾಮಂಡಲೇಶ್ವರನಾಗಿದ್ದ ಎಂಬುದನ್ನು ಸ್ಮರಿಸಬಹುದು. ರಾಮನಾಥ ಮತ್ತು ನರಸಿಂಹನಿಗೂ 1260 ರಿಂದ 1290ರ ನಡುವೆ ಆರು ಬಾರಿ ಯುದ್ಧಗಳಾಗಿ, ರಾಮನಾಥನು ಬೆಂಗಳೂರು ಪರಿಸರಕ್ಕೂ ಬಂದು, ಹೊಯ್ಸಳ ರಾಜ್ಯದ ಒಳಕ್ಕೂ ಸಾಗಿದ್ದನು (Hayavadana Rao 1930:1390). 1291ರಲ್ಲಿ ನರಸಿಂಹನು ಮೃತನಾದುದರಿಂದ ಸಂಘರ್ಷ ತಾತ್ಕಾಲಿಕವಾಗಿ ನಿಂತಿತು. ನರಸಿಂಹನ ನಂತರ ಅವನ ಮಗ ಮೂರನೇ ಬಲ್ಲಾಳ (1291–1342) ಅಧಿಕಾರಕ್ಕೆ ಬಂದನು. ಕೆಲಕಾಲದ ನಂತರ 1292ರಲ್ಲಿ ನರಸಿಂಹನ ರಾಜ್ಯದ ಮೇಲೆ ರಾಮನಾಥನ ಸೇನೆಯು ಅನಿರೀಕ್ಷಿತ ಧಾಳಿ ನಡೆಸಿದಾಗ ಮಾರದೇವ ಎಂಬ ವೀರನು ಮಡಿದನು (ರೈಸ್ 1905, 9: ಕಾ–28). 1294ರಲ್ಲಿ ರಾಮನಾಥನ ಸೇನೆ ದೊಡ್ಡಗಂಗವಾಡಿ ಊರ ಮೇಲೆ ಧಾಳಿ ಮಾಡಿದಾಗ ಹಿರಿಯ(ದೊಡ್ಡ)ಗಂಗವಾಡಿಯ ಬಳಹರಿಗೌಡನ ಮಗ ಕೇತಣ್ಣ ಶತೃಗಳಿಗೆ ಇರಿದು ಸತ್ತನು (ರೈಸ್ 1905, 9: ಚ–183).

ಹೀಗೆ ರಾಮನಾಥನ ಕಿರುಕುಳ ಬಲ್ಲಾಳನಿಗೆ ತಲೆನೋವಾಗಿ ಪರಿಣಮಿಸುವ ಹೊತ್ತಿಗೆ ರಾಮನಾಥ 1295ರಲ್ಲಿ ಮರಣಹೊಂದಿದನು. ಇದರಿಂದ ಬಲ್ಲಾಳ ನಿಟ್ಟುಸಿರು ಬಿಡುವ ಮೊದಲೇ ರಾಮನಾಥನ ನಂತರ ಅಧಿಕಾರಕ್ಕೆ ಬಂದ ವಿಶ್ವನಾಥನು ಬಲ್ಲಾಳನಿಗೆ ತೊಂದರೆ ನೀಡಲಾರಂಭಿಸಿದ. ಅಂತಿಮವಾಗಿ ವಿಶ್ವನಾಥನು 1300ರಲ್ಲಿ ಗತಿಸಿದ ಪರಿಣಾಮ ತಮಿಳುನಾಡಿನ ಶಾಖೆಯ ಹೊಯ್ಸಳ ರಾಜ್ಯವನ್ನು ಬಲ್ಲಾಳ ತನ್ನ ರಾಜ್ಯದಲ್ಲಿ ಸೇರಿಸಿಕೊಂಡನು.

ಸುಮಾರು 50 ವರ್ಷಗಳಿಗೂ ಹೆಚ್ಚುಕಾಲ ಹೊಯ್ಸಳ ರಾಜ್ಯವನ್ನು ಆಳಿದ ಮೂರನೇ ಬಲ್ಲಾಳನು ಹೊಯ್ಸಳರ ಕೊನೆಯ ಪ್ರಸಿದ್ಧ ದೊರೆಯಾಗಿದ್ದಾನೆ. ಅವನ ಅಪಾರ ಸಂಖ್ಯೆಯ ಶಾಸನಗಳು ಬೆಂಗಳೂರು ಪರಿಸರದಲ್ಲಿ ಲಭ್ಯವಾಗುತ್ತವೆ. ಬೆಂಗಳೂರು ಪರಿಸರಕ್ಕೆ ಸಂಬಂಧಿಸಿದಂತೆ ಮೂರನೇ ಬಲ್ಲಾಳನ ಕಾಲದ ರಾಜಕೀಯ ವ್ಯವಸ್ಥೆಯು ಹಲವು ವೈಶಿಷ್ಟ್ಯತೆಗಳಿಂದ ಕೂಡಿರುವುದನ್ನು ಕಾಣಬಹುದು. 1304ರ ಶಾಸನವು (ರೈಸ್ 1905, 9: ಬೆಂ–53) ಬಲ್ಲಾಳನು ಉತ್ತರದ ಅರಿಯರ ವಿರುದ್ಧದ ಆಕ್ರಮಣದಲ್ಲಿ ನಾಕ್ಕಿಗುಂಡಿಯ (ದೊಡ್ಡ ನೆಕ್ಕುಂಡಿ) ಕೋಟೆಯನ್ನು ನಾಶಪಡಿಸಿ ಜಯಗಳಿಸಿದಂತೆ ತಿಳಿಸುತ್ತದೆ. ಇದೇ





ಕಾಲದ ಮತ್ತೊಂದು ಶಾಸನವು (ರೈಸ್ 1905, 9: ಬೆಂ–75) ವೀರಬಲ್ಲಾಳ ದೇವನಾಡಿನ ನಾಡನಾಯಗನ್ (ಅಧೀಕ್ಷಕ) ಚೆಂಬಿದೇವರ್ ಆಗಿದ್ದನೆಂದು ತಿಳಿಸುತ್ತದೆ. ಈ ಹಿಂದೆ ಮಹಾಮಂಡಲೇಶ್ವರನಾಗಿದ್ದ ವೆಂಬಿದೇವನೇ ಚೆಂಬಿದೇವನಾಗಿರಬಹುದು. 1305ರ ಶಾಸನವೊಂದರಲ್ಲಿ (ರೈಸ್ 1905, 9: ಬೆಂ–133) ಪೆರುಮಾಳ್‌ದೇವ ದಂಡನಾಯಕನ ಮಗ ಚಕ್ರವರ್ತಿ ದಂಡನಾಯಕನು ದೇವಾಲಯವೊಂದಕ್ಕೆ ಸರ್ವಮಾನ್ಯ ಬಿಟ್ಟ ಬಗ್ಗೆ ತಿಳಿಸುತ್ತದೆ.

1307ರ ವಿಭೂತಿಪುರದ ಶಾಸನ (ರೈಸ್ 1905, 9: ಬೆಂ–133) ವಿಶಿಷ್ಟ ಮಾಹಿತಿಯೊಂದನ್ನು ನೀಡುತ್ತದೆ. ವೀರಬಲ್ಲಾಳ ಮತ್ತು ವಲ್ಲಪ್ಪ ದಂಡನಾಯಕರಿಗೆ ಒಳಿತಾಗಲೆಂದು ಮಹಾಪ್ರಸಾಹಿತ್ತ 'ನಿನ್ರಾನ್', ಮಾಸಂದಿನಾಡಿನ ಪಶ್ಚಿಮ ಭಾಗದ (ಬಹುಶಃ ವೀರಬಲ್ಲಾಳ ದೇವನಾಡು ಮಾಸಂದಿನಾಡಿನ ಪಶ್ಚಿಮಕ್ಕೆ ಬರಬಹುದು) ಅಧೀಕ್ಷಕ ಚೆಂಬಿದೇವರ್, ವಿಲ್ಲಗಾಮುಂಡರ್ ಮತ್ತು ನಾಡ ನಿವಾಸಿಗಳು ಕೂಡಿ, ಪೆರು ಎರುಮೂರಿಗೆ ಹೊಂದಿಕೊಂಡಿದ್ದ ಕಾಡನ್ನು ಕಡಿದು ಭೂಮಿಯನ್ನು ಸಮತಟ್ಟು ಮಾಡಿ ಗ್ರಾಮ ಮತ್ತು ಕೆರೆಯೊಂದನ್ನು ನಿರ್ಮಿಸಿ ಗ್ರಾಮಕ್ಕೆ 'ವಾಚ್ಚಿದೇವರ್ (ವಾಸುದೇವ)ಪುರ' ಎಂದು ಹೆಸರಿಟ್ಟು, ಅದಕ್ಕೆ ಹೊಂದಿಕೊಂಡ ಹೊಲಗದ್ದೆಯನ್ನು ವಾಚ್ಚಿದೇವರಿಗೆ ಕೊಡಿಗೆ ಕೊಟ್ಟ ಬಗ್ಗೆ ತಿಳಿಸುತ್ತದೆ. 1316ರ ಗಾಣಾಳುಕೊಪ್ಪದ ಶಾಸನದಲ್ಲಿ (ರೈಸ್ 1905, 9: ಕಾ–6) ಸಿಂಗಯ ದಂಡನಾಯಕನ ನಿಷ್ಠಾವಂತನಾದ ಮಾಚೆಯನಾಯಕ, ಹೊಮ್ಮಳಿಗನಾಡ ಜನರು ಮತ್ತು ಚೊಕ್ಕನಾಡ ರೈತರೆಲ್ಲರು 'ಗಾಳಿಹಾಳು'ನಲ್ಲಿ ಸಂತೆಯನ್ನು ಸ್ಥಾಪಿಸಿದಕ್ಕೆ ಪಟ್ಟಣಸ್ವಾಮಿಯಾದ ನಾಗಪ್ಪನ ಮಗ ಚೊಕ್ಕಸೆಟ್ಟಿಗೆ ಕೆರೆಯ ಹಿಂದಿನ ಭೂಮಿಯನ್ನು ಕೊಡಿಗೆ ಕೊಟ್ಟರು. ಇದೇ ಕಾಲಕ್ಕೆ ಸೇರಿದ ತುಂಗಣಿ ಗ್ರಾಮದ ಶಾಸನದಲ್ಲಿ ವೀರಬಲ್ಲಾಳನ ಮಗ ವೀರ ಸೋಮಪ್ಪ ದಂಡನಾಯಕನು ಸೀಗಲ್ ನಾಡನ್ನು ಆಳುವಾಗ ಮಾರದೇವನು ವನ್ನಿಗಹಳ್ಳಿಯನ್ನು ಆಳುತ್ತಿದ್ದನು. ತುಂಗಣಿ ಗೋಪಯ್ಯ ನಾಯಕ ಮತ್ತು ದಲ್ಲಲಪನಾಯಕರು ತನ್ನೂರಿನಲ್ಲಿ ಕೆರೆಕಟ್ಟಿಸಿದ ಎರುಮಲಸೆಟ್ಟಿಗೆ ಕೊಡುಗೆ ನೀಡಿದರು. ಈ ಕಾಲಘಟ್ಟದಲ್ಲಿ ಆರ್ಥಿಕವಾಗಿ ಮಹತ್ವದ ಬದಲಾವಣೆಯಾಗುತ್ತಿರುವುದನ್ನು ಕಾಣಬಹುದು. 1318ರ ಮತ್ತೊಂದು ಶಾಸನದಲ್ಲಿ (ರೈಸ್ 1905, 9: ಚ–73) ಬಲ್ಲಾಳನ ಮನೆಯ ಪ್ರಧಾನನಾದ ಮಹಾಮಂಡಲೇಶ್ವರ ಸೋಮರಸನು ಕೆಳವಲನಾಡಲ್ಲಿರುವ ಮುಗುವನಹಳ್ಳಿಯ ಚಿಟ್ಟಾರಿ ಬಲಸೆಟ್ಟಿ ಮತ್ತು ಮಸಣಸೆಟ್ಟಿಯರಿಗೆ ಕೊಟ್ಟ ಶಾಸನದಲ್ಲಿ ಹೀಗೆ ಹೇಳಿದೆ: ಮುಗುಳನಹಳ್ಳಿ (ಮೊಗೇನಹಳ್ಳಿ)ಯಲ್ಲಿ ಯಾರಾದರೂ ತಮ್ಮಾಡಿ (ಬಹುಶಃ ಸನ್ಯಾಸ ಸ್ವೀಕರಿಸಿದರೆ) ತಮ್ಮನ ಆಸ್ತಿ ಅಣ್ಣನಿಗೆ, ಅಣ್ಣನ ಆಸ್ತಿ ತಮ್ಮನಿಗೆ, ಅವರಾರೂ ಇಲ್ಲದಿದ್ದರೆ ನಂಟರಿಷ್ಟರು, ತೊತ್ತಿನ ಮಗನಿಗೆ (ಸೇವಕನಿಗೆ) ಸೇರುವುದು. ಅವರೂ ಇಲ್ಲದಿದ್ದರೆ ದೇವಾಲಯಕ್ಕೆ ಹಸುಕೊಡುವುದು ಯಾವುದೂ ಆಗದಿದ್ದರೆ ಸರ್ವಮಾನ್ಯವಾಗಿ ಆ ಮುಗಳನಹಳ್ಳಿಯನ್ನು ನಾನಾದೇಶಿ ಪಟ್ಟಣವಾಗಿ ಸಂತೆಕಟ್ಟಿ ನಡೆಸಿಕೊಂಡು ಹೋಗುವುದು. ಅಂದರೆ ವಾರಸುದಾರರಿಲ್ಲದ ಆಸ್ತಿಯಿಂದ ಸಂತೆಯನ್ನು ಕಟ್ಟಿ ಮುಳುಗನಹಳ್ಳಿಯನ್ನು ನಾನಾದೇಶಿ ಪಟ್ಟಣವಾಗಿಸಲು ಮಹಾಮಂಡಲೇಶ್ವರನು ತಿಳಿಸಿದ್ದಾನೆ.

ಮೇಲಿನ ಎಲ್ಲಾ ವಿದ್ಯಮಾನಗಳು ಅಂದಿನ ಸಮಾಜದ ವಾಣಿಜ್ಯ ವ್ಯಾಪಾರ ಮತ್ತು ನಗರೀಕರಣದ ಬಗೆಗಿನ ತುಡಿತವನ್ನು ಅಭಿವ್ಯಕ್ತಿಸುತ್ತಿವೆ. ಅಂತಹದೇ ಮತ್ತೊಂದು ವಿಚಾರವನ್ನು 1319ರ ಚನ್ನಮಾನಹಳ್ಳಿಯ ಶಾಸನವು ತಿಳಿಸುತ್ತದೆ (ರೈಸ್ 1905, 9:

ಚ–12) ವೀರಬಲ್ಲಾಳನ ಮಹಾಮಂಡಲೇಶ್ವರ, ಸಾಹನಿ (ರಾಜನ ಅಶ್ವಶಾಲೆಯ ಶಿಕ್ಷಕ – ನೋಡಿ: Sircar 1966:285) ಮತ್ತಿತರರು ಸೇರಿ ವಳನಾಡಿನಲ್ಲಿರುವ ಚಂದಿಮಾದಿಯಹಳ್ಳಿಯನ್ನು ರೈತರ ಮತ್ತು ಪ್ರಜೆಗಾವುಂಡರ ಸಮ್ಮುಖದಲ್ಲಿ ಪಟ್ಟಣ ಮಾಡಿ ಸಂತೆಯನ್ನು ಕಟ್ಟಿದ ಬಗ್ಗೆ ತಿಳಿಸುತ್ತದೆ. ಇದೇ ಕಾಲದ ಮತ್ತೊಂದು ಶಾಸನವು (ರೈಸ್ 1905, 9: ಕಾ–69 (1319)) ಮಹಾಮಂತ್ರಿ ದಾದಿ ಸೋಮೆಯ ದಂಡನಾಯಕ ಮತ್ತು ಮಾರದೇವಿದೇವರು ಜೋಗ್ಯೆ ಅಕ್ಕಲಾಡು ಪಟ್ಟಣಸ್ವಾಮಿಯಾದ ಪಾರೆಪಸೆಟ್ಟಿಗೆ ಕೊಡುಗೆ ನೀಡಿದ ಬಗ್ಗೆ ತಿಳಿಸುತ್ತದೆ. 'ಪಟ್ಟಣ ಸ್ವಾಮಿ'ಯು ಸಂತೆಯನ್ನು ಕಟ್ಟಿ, ಪಟ್ಟಣವನ್ನು ಅಭಿವೃದ್ಧಿ ಪಡಿಸುವ, ಸುಂಕ ಸಂಗ್ರಹಿಸುವ ಮತ್ತು ನಿರ್ವಹಿಸುವವನಾಗಿರುತ್ತಾನೆ. ಸಾಮಾನ್ಯವಾಗಿ ಪಟ್ಟಣಸ್ವಾಮಿಯಂತಹ ಹೊಣೆಗಾರಿಕೆಯನ್ನು ವ್ಯಾಪಾರ ಸಮುದಾಯವಾದ ಸೆಟ್ಟಿಗಳಿಗೆ ವಹಿಸುತ್ತಿದ್ದುದುಂಟು. ಹೂಡಿಯ 1332ರ ಶಾಸನದಲ್ಲಿ (ರೈಸ್ 1905, 9: ಬೆಂ–61) ಬೆಳಗ ಬೆಮೆಯನಾಯಕ, ತಂಬಿನಾಯಕ, ತೊರವಳಿನಾಡ ಎಲ್ಲ ಪ್ರಭುಗೌಡರು ಬೊಮ್ಮಿಸೆಟ್ಟಿಯ ಮಗ ಮುಕುತಿಸಟ್ಟಿಗೆ ಚಿಕ್ಕಹೂಡಿಯ ಪಟ್ಟಣಸ್ವಾಮಿಯಾಗಿ ಸಂತೆಯನ್ನು ಕಟ್ಟುವುದಕ್ಕೆ ಅಪಾರ ಕೊಡುಗೆಯನ್ನು ನೀಡಿದರು.

ಮೂರನೇ ಬಲ್ಲಾಳನ ಕಾಲದ ಆಡಳಿತದಲ್ಲಿ ಮಹಾಪ್ರಧಾನರು ಮತ್ತು ದಂಡನಾಯಕರ ಪಾತ್ರ ಪ್ರಮುಖವಾದುದು. ಮಹಾಪ್ರಧಾನ ಪೊನ್ನಣ್ಣನ ಮಗ ಕಾಮಯದಣ್ಣಾಯಕನು ಹಲವು ಗ್ರಾಮಗಳ ಚತುರ್ಸೀಮೆಯನ್ನು ಕೊಡುಗೆ ಕೊಟ್ಟಂತೆ ತಿಳಿದು ಬರುತ್ತದೆ (ರೈಸ್ 1905, 9: ದೇ–1 ಮತ್ತು 60, ದೊ.ಬ–14). ಬೆಳಗ(ಂಚಿ) ಮಯಿನಾಯಕ (ರೈಸ್ 1905, 9: ಬೆಂ–63), ಮಹಾಸಾಮಂತಾಧಿಪತಿ ವೈಯಿಚಗಾವುಂಡ ವೀರಬಲ್ಲಾಳನ ಮಗ ಸಿಂಗೆದಂಡನಾಯಕ (ರೈಸ್ 1905, 9: ಹೊ–104), ಮಹಾಸಾಮಂತಾಧಿಪತಿ ಲಕುಮ ನಾಯಕನ ಮಗ ಕಳ್ಳಯ ನಾಯಕ (ರೈಸ್ 1905, 9: ಬೆಂ–44), ಮಹಾಪ್ರಧಾನ ಕಾಮೆಯ ದಂಡನಾಯಕನ ಮಗ ಕಾಮೆಯ ದಂಡನಾಯಕ (ರೈಸ್ 1905, 9: ಬೆಂ–31) ಮೊದಲಾದ ಅಧಿಕಾರಿಗಳು ಭೂಕೊಡುಗೆ, ಸರ್ವಮಾನ್ಯ ಕೊಡುಗೆಗಳನ್ನು ಅಪಾರ ಪ್ರಮಾಣದಲ್ಲಿ ನೀಡಿರುವುದನ್ನು ನೋಡಬಹುದು. ಸರ್ವಮಾನ್ಯ ಎಂದರೆ ಎಲ್ಲ ರೀತಿಯ ತೆರಿಗೆಯಿಂದ ಮುಕ್ತಗೊಂಡ ಭೂಮಿ / ಗ್ರಾಮಗಳು (Sircar 1966:303).

ಹೊಯ್ಸಳ ಆಡಳಿತದಲ್ಲಿ ಕಂಡುಬರುವ ಮಹಾಪ್ರಧಾನ, ದಂಡನಾಯಕರು, ನಾಡಗಾವುಂಡರು ರಾಜಪರಿವಾರದ ಹತ್ತಿರದ ಸಂಬಂಧಿಗಳಾಗಿರುತ್ತಿದ್ದರು. ದಾದಿಯ ಸೋಮಯ ನಾಯಕನನ್ನು ಕೊರಟ ಗ್ರಾಮದ ಶಾಸನದಲ್ಲಿ 'ತಸ್ಯ ರಾಜಾನ್ವಯ' ಎಂದಿದೆ (ರೈಸ್ 1905, 9: ಹೊ–43). ಅಂದರೆ ರಾಜಸಂತತಿಯಿಂದ ಬಂದ ಪ್ರಧಾನ. ಅದೇ ರೀತಿ ಮತ್ತೊಬ್ಬ ಪ್ರಧಾನ ಮಹಾಸಾಮಂತನಾದ ಮಯಿಲಿನಾಯಕನು ವೀರಬಲ್ಲಾಳನ ಕುಮಾರನೆಂದು 1340ರ ಶಾಸನವೊಂದು ಮಾಹಿತಿ ನೀಡುತ್ತದೆ (ರೈಸ್ 1905, 9: ಮಾ–81). ಬಲ್ಲಾಳನ ಮಹಾಸಾಮಂತಾಧಿಪತಿಯಾಗಿದ್ದ ಮಯಿಲೆನಾಯಕನು 1340ರ ಸುಮಾರಿನಲ್ಲಿಯೇ (ರೈಸ್ 1905, 9: ನೆ–1) ವಿಜಯನಗರದ ಹರಿಹರನ ಮಹಾಸಾಮಂತನಾಗಿ ಕುಕ್ಕಲನಾಡನ್ನು ಆಳುತ್ತಿದ್ದುದಾಗಿ ತಿಳಿದು ಬರುತ್ತದೆ.

ಮೂರನೇ ಬಲ್ಲಾಳನು 1318ರ ನಂತರ ಆಗಾಗ್ಗೆ ದೊರಸಮುದ್ರ, ಅಣ್ಣಾಮಲೈ (ಕಣ್ಣಾನೂರು)ಗಳಲ್ಲಿ ನೆಲೆಸುತ್ತಿದ್ದನು. ಇವುಗಳಲ್ಲದೆ ಹೊಸಬೆಟ್ಟ, ಹೊಸನಾಡು, ವೀರವಿಜಯ





ವಿರೂಪಾಕ್ಷಪುರಗಳನ್ನೂ ನೆಲೆವೀಡುಗಳಾಗಿ ಮಾಡಿಕೊಂಡಿದ್ದಂತೆ ತಿಳಿದು ಬರುತ್ತದೆ. ಬೆಂಗಳೂರು ಪರಿಸರದ ಶಾಸನಗಳನ್ನೆ ಉದ್ಧರಿಸಿ ಹೇಳುವುದಾದರೆ ಬಲ್ಲಾಳನು ಮೊದಲಬಾರಿಗೆ 1318ರಲ್ಲಿ ಅರುಣಸಮುದ್ರ (ಅಣ್ಣಾಮಲೈ)ದಿಂದ ಆಡಳಿತ ನಡೆಸಿದನು (ರೈಸ್ 1905, 9: ಚ–73). ಮರುವರ್ಷ ದೋರಸಮುದ್ರದಿಂದ ಆಳುತ್ತಿದ್ದನು (ರೈಸ್ 1905, 9: ಕಾ–68, ಚ–12 (1319)). ಪುನಃ 1328ರಲ್ಲಿ ಅಣ್ಣಾಮಲೈನಿಂದ ಆಳಲಾರಂಭಿಸುತ್ತಾನೆ (ರೈಸ್ 1905, 9: ದೇ–1, ದೊ.ಬ–18, 14, ಹೊ–124). 1331ರವರೆಗೆ ಅಲ್ಲಿಯೇ ಇದ್ದವನು (ರೈಸ್ 1905, 9: ಚ–71), 1333ರಲ್ಲಿ ಹೊಸಬೆಟ್ಟವನ್ನು ನೆಲೆವೀಡು ಮಾಡಿಕೊಂಡು ಆಳತೊಡಗಿದನು (ರೈಸ್ 1905, 9: ನೆ–9). ಹೊಸಬೆಟ್ಟ, ಹೊಸನಾಡು, ಹೊಸವೀಡು, ಹೊಸದುರ್ಗ ಎಂದೆಲ್ಲ ಶಾಸನಗಳಲ್ಲಿ ಕರೆಯಲಾಗಿರುವ ಈ ಸ್ಥಳ ಯಾವುದೆಂದು ನಿಕರವಾಗಿ ಗುರುತಿಸಲಾಗಿಲ್ಲ. ರೈಸರು ಇದನ್ನು ಗೌರಿಬಿದನೂರು ತಾಲ್ಲೂಕಿನ ಹೊಸೂರು ಮತ್ತು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗವೆಂದು ಸಂಶಯಿಸುತ್ತಾರೆ (ರೈಸ್, 1905, 10: ಪ್ರಸ್ತಾವನೆ ಪುಟ–32). ಕೃಷ್ಣಶಾಸ್ತ್ರೀ ಅವರು ಬಳ್ಳಾರಿ ಜಿಲ್ಲೆಯ ಹೊಸಪೇಟೆಯೇ ಹೊಸಪಟ್ಟಣ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಬಲ್ಲಾಳನು ಮತ್ತೆ 1334–1339ರವರೆಗೆ ದೋರಸಮುದ್ರದಲ್ಲಿ ನೆಲೆಸಿರುತ್ತಾನೆ (ರೈಸ್ 1905, 9: ಚ–7 (1334), ಬೆಂ–110 (1336), 117 (1339)). 1339ರಲ್ಲಿ ವೀರವಿಜಯ ವಿರೂಪಾಕ್ಷಪುರಕ್ಕೆ ಹೋಗುತ್ತಾನೆ (ರೈಸ್ 1905, 9: ಹೊ–43). ಮರುವರ್ಷ ಮತ್ತೆ ಹೊಸನಾಡಿನಲ್ಲಿ ನೆಲಸುತ್ತಾನೆ (ರೈಸ್ 1905, 9: ದೊ–43 (1340)). ಇದನ್ನು ಗಮನಿಸಿದರೆ ವಿರೂಪಾಕ್ಷಪುರ ಮತ್ತು ಹೊಸನಾಡುಗಳು ದೋರಸಮುದ್ರದ ಉತ್ತರಕ್ಕೆ ಇರದೆ ದೋರಸಮುದ್ರ ಮತ್ತು ಅಣ್ಣಾಮಲೈ ನಡುವೆಯೇ ಇರುವ ಸಾಧ್ಯತೆ ಇದೆ. 1340ರಲ್ಲಿ ಅಣ್ಣಾಮಲೈಗೆ ಹೋಗಿ ನೆಲೆಸಿದ ನಂತರ ಮತ್ತೊಮ್ಮೆ ವಿರೂಪಾಕ್ಷಪುರಕ್ಕೆ ಹೋಗಿ ಬಂದಂತೆ ಕಾಣುತ್ತದೆ (ರೈಸ್ 1905, 9: ದೇ–21, (1342)). ಏಕೆ ಹೀಗೆ ನೆಲೆಯನ್ನು ಬದಲಿಸುತ್ತಿದ್ದ ಎಂಬ ಸಂಶಯ ಸಹಜವಾಗಿಯೆ ಮೂಡುತ್ತದೆ. 1310ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನು ದೋರಸಮುದ್ರದ ಮೇಲೆ ಧಾಳಿಮಾಡಿದ ನಂತರ, ಮಹಮದ್ ಬಿನ್ ತೊಗಲಕನು 1326ರಲ್ಲಿ ಎರಡನೇ ಆಕ್ರಮಣವನ್ನು ಎಸಗುತ್ತಾನೆ. ಈ ದಾಳಿಯಲ್ಲಿ ನಗರವು ಸಂಪೂರ್ಣವಾಗಿ ನಾಶವಾಗುತ್ತದೆ (Hayavadana Rao 1930:1401). ಆನಂತರ ಅಣ್ಣಾಮಲೆಗೆ ಹೋಗಿ ನೆಲೆಸಿರುವಂತೆ ಕಾಣುತ್ತದೆ. ಅವನಿಗೆ ವಯಸ್ಸಾದ್ದರಿಂದ ವಿಶ್ರಾಂತಿಯನ್ನು ಬಯಸಿ ಸುರಕ್ಷಿತ ಸ್ಥಳಗಳಿಗೆ ಹೋಗುತ್ತಿದ್ದಿರಲೂ ಸಾಧ್ಯವಿದೆ. ಏಕೆಂದರೆ ಮೂರನೇ ಬಲ್ಲಾಳನ ತಂದೆ ಮೂರನೇ ನರಸಿಂಹನು 1240ರಲ್ಲಿ ಜನಿಸಿದವನು (Hayavadana Rao 1930:1390). ಹಾಗಾದಲ್ಲಿ 1330ರ ವೇಳೆಗೆ ಬಲ್ಲಾಳನಿಗೆ 65–70 ವರ್ಷ ವಯಸ್ಸಾಗಿರಲು ಸಾಧ್ಯವಿದೆ. ಮಹಮ್ಮದೀಯರು ಮತ್ತೊಮ್ಮೆ 1342ರಲ್ಲಿ ರಾಜ್ಯದ ಮೇಲೆ ಆಕ್ರಮಣ ಮಾಡಿದರು. ಹೀಗೆ ಪದೇ ಪದೇ ನಡೆಯುತ್ತಿದ್ದ ಮಹಮ್ಮದೀಯರ ಆಕ್ರಮಣದಿಂದ ವೃದ್ಧ ಬಲ್ಲಾಳನು ಕುಪಿತಗೊಂಡಿರಬಹುದು. ಅಂತಿಮವಾಗಿ ಬಲ್ಲಾಳನು ಅವರ ಮೇಲೆ ಧಾಳಿ ನಡೆಸಿದನಾದರೂ ಬೆರಿಲಿಯ ಕದನದಲ್ಲಿ 8 ಸೆಪ್ಟಂಬರ್ 1342ರಲ್ಲಿ ಮರಣ ಹೊಂದಿದನೆಂದು ಆನಂತರದ ಶಾಸನವೊಂದು ತಿಳಿಸುತ್ತದೆ (ರೈಸ್ 1901, 6: ಕಡೂರು–75 (1367)). ಇದನ್ನು ಇಬನ್ ಬಟೂಟ ಕೂಡ ಖಚಿತಪಡಿಸುತ್ತಾನೆ. 80ರ ವಯೋಮಾನದ ಹಾಸು ಪಾಸಿನಲ್ಲಿದ್ದಿರಬಹುದಾದ ಬಲ್ಲಾಳನಿಗೆ ಈ ಯುದ್ಧ ಸಹಜವಾಗಿಯೇ

ಸೋಲನ್ನು ಸಾವನ್ನು ತಂದಿದೆ ಎನ್ನಬಹುದು. ಮೂರನೇ ಬಲ್ಲಾಳನ ನಂತರ ಅವನ ಮಗ ವೀರ ವಿರೂಪಾಕ್ಷ ಬಲ್ಲಾಳನು ಅಧಿಕಾರಕ್ಕೆ ಬಂದರೂ ಆತನೂ 1346ರಲ್ಲಿ ತೀರಿಕೊಳ್ಳುತ್ತಾನೆ. ಅಲ್ಲಿಗೆ ಹೊಯ್ಸಳ ಮನೆತನ ಕೊನೆಗೊಳ್ಳುತ್ತದೆ.

ಒಬ್ಬ ಬಲಿಷ್ಠ ರಾಜನ ಅಂತ್ಯದೊಂದಿಗೆ ಹೊಯ್ಸಳ ಮನೆತನ ಈ ರೀತಿ ದಿಢೀರನೆ ಕಣ್ಮರೆಯಾಗಲು ಕಾರಣಗಳೇನಿರಬಹುದು? ಹಲವು ಕಾರಣಗಳ ನಡುವೆ ಬಲ್ಲಾಳನ ಕಾಲದಲ್ಲಿ ನಡೆದ ಮಹಮದ್ದೀಯರ ಆಕ್ರಮಣಗಳು ಒಂದು. ಆದರೆ ಬಹಳ ಮುಖ್ಯವಾದ ಕಾರಣವೆಂದರೆ ಮೂರನೇ ಬಲ್ಲಾಳನ ಕಾಲದಲ್ಲಿ ಅಪಾರ ಪ್ರಮಾಣದಲ್ಲಿ ನೀಡಲಾದ ಸರ್ವಮಾನ್ಯ ಕೊಡುಗೆಗಳು ಹಾಗೂ ಸಾಮಂತ ಮತ್ತು ಮಾಂಡಲಿಕರು ಪ್ರಬಲರಾಗುತ್ತಾ ಹೋಗಿದ್ದು, ಚಕ್ರವರ್ತಿಯನ್ನು ದುರ್ಬಲಗೊಳಿಸಿತು. ಇದಕ್ಕೆ ನಿದರ್ಶನ ಬೆಂಗಳೂರು ಪರಿಸರದಲ್ಲಿ ಇದ್ದ ಸಮಕಾಲೀನ ಮಹಾಸಾಮಂತಾಧಿಪತಿಗಳು, ದಂಡನಾಯಕರುಗಳನ್ನು ನೋಡಬಹುದು. ಅಂತಿಮವಾಗಿ ಹೊಯ್ಸಳರ ನಂತರ ಸ್ಥಾಪನೆಗೊಂಡದ್ದು ವಿಜಯನಗರ ಸಾಮ್ರಾಜ್ಯ. ಇದರ ಸ್ಥಾಪಕರಾದ ಹರಿಹರ ಮತ್ತು ಬುಕ್ಕರಾಯರು (ಶಾಸನಗಳಲ್ಲಿ ಹರಿಯಪ್ಪ, ಬುಕ್ಕಣ್ಣ) ಕೂಡ ಹೊಯ್ಸಳರ ಮಾಂಡಲಿಕರಾಗಿಯೇ ಇದ್ದವರು. ನಂತರ ಇವರು ರಾಜಕೀಯವಾಗಿ ನಿಧಾನವಾಗಿ ಮೇಲುಗೈ ಸಾಧಿಸಿದರು. ಹರಿಹರ ಮತ್ತು ಬುಕ್ಕರಾಯರ ಆರಂಭ ಕಾಲದ ಶಾಸನಗಳು ಕೋಲಾರ ಮತ್ತು ಬೆಂಗಳೂರು ಪರಿಸರದಲ್ಲಿಯೇ ಕಂಡುಬರುತ್ತವೆ. 1340ರ ಬಾಣಸವಾಡಿ ಶಾಸನದಲ್ಲಿ ಮಹಾಮಂಡಲೇಶ್ವರ ವೀರ ಹರಿಯಪ್ಪ ವಡೆಯನ ಕಾಲದಲ್ಲಿ ಮಹಾಸಾಮಂತಾಧಿಪತಿ ಮಯಿಲೆಯ ನಾಯಕನು ಕುಕ್ಕಲುನಾಡನ್ನು ಆಳುತ್ತಿದ್ದ ಬಗ್ಗೆ ತಿಳಿಸುತ್ತದೆ (ರೈಸ್ 1905, 9: ನೆ–19). ಆದರೇ ಇದೇ ವರ್ಷಕ್ಕೆ ಸೇರಿದ ರಾಮಸಮುದ್ರದ ಶಾಸನವೊಂದರಲ್ಲಿ 'ವೀರ ಬಲ್ಲಾಳ ದೇವರು ಪ್ರಿಥ್ವೀರಾಜ್ಯಂಗೇಯಿವಲಿ... ದೇವರ ಕುಮಾರ ಮಹಾಸಾಮಂತಾಧಿಪತಿ ನರಲೋಕಗಂಡ ಕೋಡಿಯನಾಯಕರ ಮಕ್ಕಳು, ನರಲೋಕಗಂಡ ಮಯಿಲೆಯ ನಾಯಕರ ತಮ್ಮ ಚೆನ್ನೆಯ ನಾಯಕರು' ರಾಮಸಮುದ್ರ ಕೆರೆಯನ್ನು 3000 ಹೊನ್ನು ವೆಚ್ಚದಲಿ ಕಟ್ಟಿದ ಬಗ್ಗೆ ತಿಳಿಸುತ್ತದೆ. ಅದೇ ರೀತಿ 1342ರ ಶಾಸನದಲ್ಲಿ ವಲ್ಲಪ್ಪ ದಂಡನಾಯಕನು ಹೊಯ್ಸಳ ಬಲ್ಲಾಳನ ಅರಮನೆಯ ಮಹಾಪ್ರಧಾನ ಎಂದು ಹೇಳುತ್ತದೆ (ರೈಸ್ 1905, 9: ಹೊ–90). ಅಲ್ಲದೆ 1343ರವರೆಗೆ ವಲ್ಲಪ್ಪನ ಶಾಸನದಲ್ಲಿ ಬಲ್ಲಾಳನ ಹೆಸರನ್ನು ಹೇಳುವುದುಂಟು. ಆದರೆ 1346 ವಲ್ಲಪ್ಪನ ಶಾಸನದಲ್ಲಿ ಮಹಾಮಂಡಲೇಶ್ವರ ಹರಿಯಪ್ಪ ವಡೆಯರ ಹೆಸರನ್ನು ಉಲ್ಲೇಖಿಸುತ್ತದೆ (ರೈಸ್ 1905, 9: ಬೆಂ–47). 1361ರ ಶಾಸನದಲ್ಲಿ ಅರಿಯಪ್ಪ ವಡೆಯರ ಮಹಾಮಂಡಲೇಶ್ವರರಲ್ಲಿ ಒಬ್ಬನಾದ ವಲ್ಲಪ್ಪದಂಡನಾಯಕ ಎಂದು ದಾಖಲಾಗಿದೆ (ರೈಸ್ 1905, 9: ಬೆಂ–101). ಈ ವಲ್ಲಪ್ಪ ದಂಡನಾಯಕನು ಹರಿಹರನ ಮಗಳನ್ನು ಮದುವೆಯಾಗಿದ್ದನೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ (ಶೇಷಗಿರಿರಾವ್ 2005:9–10). ಒಟ್ಟಾರೆ ಯಾವುದೇ ರಕ್ತಪಾತವಿಲ್ಲದೆ ಹೊಯ್ಸಳರಿಂದ ವಿಜಯನಗರದ ಅರಸರಿಗೆ ಒಪ್ಪಿತ ರೀತಿಯಲ್ಲಿ ರಾಜಕೀಯ ಶಕ್ತಿಯು ವರ್ಗಾವಣೆಗೊಂಡಿದೆ ಎಂದು ಹೇಳಬಹುದು.

**–4–**

**ಹೊಯ್ಸಳರ ಆಡಳಿತಶಾಹಿ:** ಬೆಂಗಳೂರು ಪರಿಸರದಲ್ಲಿ ಮೇಲ್ನೋಟಕ್ಕೆ ಹೊಯ್ಸಳರು ಚೋಳರ ಆಡಳಿತ ಪದ್ಧತಿ ಮತ್ತು ಅಧಿಕಾರಿಗಳನ್ನು ಮುಂದುವರೆಸಿದಂತೆ ಕಂಡು





ಬರುತ್ತದೆಯಾದರೂ, ಹೊಯ್ಸಳರು ಬೆಂಗಳೂರು ಪರಿಸರದಲ್ಲಿ ಸೈನಿಕವಾಗಿ ಮತ್ತು ಆಡಳಿತಾತ್ಮಕವಾಗಿ ತಮ್ಮದೇಯಾದ ಹೊಸ ಪದವಿಗಳನ್ನು ಸೃಜಿಸಿದರು. ಅವುಗಳಲ್ಲಿ ಮುಖ್ಯವಾಗಿ ಮಹಾಮಂಡಲೇಶ್ವರ ಮಹಾಸಾಮಂತಾಧಿಪತಿ, ಸೇನಬೋವ ಮೊದಲಾದವುಗಳನ್ನು ಹೆಸರಿಸಬಹುದು. ಸಾಮಂತ / ಮಹಾಸಾಮಂತ ಎಂಬ ಮೊದಲ ಉಲ್ಲೇಖ ಚನ್ನಪಟ್ಟಣದ ಶಾಸನ –141ರಲ್ಲಿ ಕಂಡು ಬರುತ್ತದೆಯಾದರೂ ಸಾಕಷ್ಟು ತ್ರುಟಿತವಾಗಿರುವ ಶಾಸನದ ಕಾಲ ತಿಳಿಯುವುದಿಲ್ಲ. ಆದರೆ ರೈಸರು ಇದರ ಕಾಲ ಸುಮಾರು 900 ಎಂದು ಅಂದಾಜಿಸಿದ್ದಾರೆ. ಆ ನಂತರ ಸುಮಾರು 1115ಕ್ಕೆ ಸೇರಿದ ವಿಷ್ಣುವರ್ಧನನ ಶಾಸನದಲ್ಲಿ 'ಪೊಯ್ಸಳ ಸಾಮಂತ ಮಣ್ಣೈನಾಡ ಆಳ್ವನ್' ಎಂಬ ಉಲ್ಲೇಖ ಸಿಗುತ್ತದೆ (ರೈಸ್ 1905, 9: ನೆ–67). ನಂತರ 1140ರ ಶಾಸನದಲ್ಲಿ 'ಸಾಮಂತ ಕುಂಜಾಸನಂ' ಎಂದು ಉಲ್ಲೇಖವಾಗಿದೆ (ರೈಸ್ 1905, 9: ನೆ–84). ಇದನ್ನು ಬಿಟ್ಟರೆ ಮತ್ತೆ 1315 ಶಾಸನದಲ್ಲಿಯೇ (ರೈಸ್ 1905, 9: ಹೊ–159) ಸಿಗುವುದು. ಅದರಲ್ಲಿ 'ಮಹಾಸಾಮಂತಾಧಿಪತಿ' ಎಂದು ಉಲ್ಲೇಖವಾಗಿದೆ. ಅದೇ ರೀತಿ ಮಂಡಲೇಶ್ವರ / ಮಹಾಮಂಡಲೇಶ್ವರ ಉಲ್ಲೇಖ ಕೂಡ 1115ಕ್ಕೆ ಸೇರಿದ ವಿಷ್ಣುವರ್ಧನ ಕಾಲದ ಶಾಸನದಲ್ಲಿಯೇ ಮೊದಲು ಕಂಡುಬರುವುದು (ರೈಸ್ 1905, 9: ನೆ–67). ಇದು ವಿಷ್ಣುವರ್ಧನನ ಬಿರುದಾಗಿದೆ. ನಂತರ 1145ರ ಶಾಸನದಲ್ಲಿ ಮಹಾಮಂಡಲೇಶ್ವರ ಎಂಬುದು ನರಸಿಂಹನ ಬಿರುದಾಗಿ ದಾಖಲಾಗಿದೆ. ಎರಡನೇ ಬಲ್ಲಾಳ ಕೂಡ 1196ರ ಶಾಸನದಲ್ಲಿ (ರೈಸ್ 1905, 9: ಚ–72) ಮಹಾಮಂಡಲೇಶ್ವರ ಎಂದು ಕರೆದುಕೊಂಡಿದ್ದಾನೆಯಾದರೂ, ಆನಂತರ ಅವನು ಹೊಯ್ಸಳರನ್ನು ಸ್ವತಂತ್ರ ಚಕ್ರವರ್ತಿಗಳ ವಂಶವಾಗಿ ಮಾಡಿದನು. ಅದಕ್ಕೆ ತಕ್ಕಂತೆ ಮಹಾರಾಜಾಧಿರಾಜ, ರಾಜಪರಮೇಶ್ವರ ಮುಂತಾದ ಚಕ್ರವರ್ತಿಯ ಬಿರುದುಗಳನ್ನು ಧರಿಸಿದನು (ಸುರೇಂದ್ರರಾವ್ 1997:120).

ಮಹಾಮಂಡಲೇಶ್ವರ, ಮಹಾಸಾಮಂತರ ಸ್ಥಾನಮಾನಗಳನ್ನು ನೋಡುವುದಾದರೆ 1267ರ ಶಾಸನದಲ್ಲಿ ಪ್ರತಾಪ ಚಕ್ರವರ್ತಿ ಹೊಯ್ಸಳ ವೀರ ನರಸಿಂಹನು ದೋರ ಸಮುದ್ರದಲ್ಲಿ ಆಳುವಾಗ ಮಹಾಮಂಡಲೇಶ್ವರ ಬೇಚಿದೇವರಸನು ಯಲಹಂಕ ನೆಲೆವೀಡಿನಲ್ಲಿ ರಾಜ್ಯವಾಳುತ್ತಿದ್ದನು (ರೈಸ್ 1905, 9: ದೊ.ಬ–31). ಅದೇ ರೀತಿ 1115ರ ಶಾಸನದಲ್ಲಿ ಮಹಾಮಂಡಲೇಶ್ವರ, ವೀರಗಂಗ ಪೊಯ್ಸಳದೇವ (ವಿಷ್ಣುವರ್ಧನ) ಆಳುವಾಗ ಮಣ್ಣೈನಾಡಾಳ್ವನ್ ಕೋರಗಾವುಂಡನ ಮಗ ಸೋಮಗಾವುಂಡ ಎಂದಿದೆ (ರೈಸ್ 1905, 9: ನೆ–67). ಸ್ವತಂತ್ರ ರಾಜನೊಬ್ಬ ತನ್ನನ್ನು ಚಕ್ರವರ್ತಿ ಎಂದು ಕರೆದು ಕೊಂಡರೆ ಅವನ ಅಧೀನನನ್ನು ಮಹಾಮಂಡಲೇಶ್ವರ ಎಂದು, ಅವನ ಅಧೀನ ಆಡಳಿತಗಾರರನ್ನು ಸಾಮಂತ ಅಥವಾ ಮಹಾಸಾಮಂತರೆಂದು ಸಂಭೋಧಿಸಲಾಗುತ್ತಿತ್ತು.

ಮಹಾಪ್ರಧಾನ ಪದವಿಯನ್ನು ರಾಜಪರಿವಾರಕ್ಕೆ ಸಂಬಂಧಿಸಿದವರು ಅಥವಾ ಹತ್ತಿರದವರು ಅಲಂಕರಿಸುತ್ತಿದ್ದರು. ರಾಜನ ಜೊತೆ ನಿಕಟ ಸಂಬಂಧವನ್ನು ಹೊಂದಿರುತ್ತಿದ್ದರು. 1343ರ ಶಾಸನದಲ್ಲಿ ಮಹಾಪ್ರಧಾನ ದಾದಿ ಸೋಮಯ ದಂಡನಾಯಕನು ಬಲ್ಲಾಳದೇವರಿಗೆ ಶಿರಪ್ರಧಾನನಾದವನೆಂದು ಬಣ್ಣಿಸಿದೆ (ರೈಸ್ 1905, 9: ಹೊ–75). ಇದೇ ಸೋಮಯನನ್ನು 1339ರ ಶಾಸನದಲ್ಲಿ 'ತಸ್ಯ ರಾಜಾನ್ವಯ' (ರಾಜ ವಂಶದಿಂದ ಬಂದ ಪ್ರಧಾನ) ಎಂದಿದೆ (ರೈಸ್ 1905, 9: ಹೊ–43). ಇದರಿಂದ

ಆತ ರಾಜಮನೆತನಕ್ಕೆ ಹತ್ತಿರದವನೆಂದು ತಿಳಿಯಬಹುದು. ರಾಜನ ಆಸ್ಥಾನದಲ್ಲಿಯು ಈ ಮಹಾಪ್ರಧಾನರು ಇದ್ದಂತೆಯೂ ತೋರುತ್ತದೆ.

ಮತ್ತೊಂದು ಪ್ರಮುಖವಾದ ಅಧಿಕಾರ ಪದವಿ 'ದಂಡನಾಯಕ'. ಇದು ಚೋಳರಿಂದ ಬೆಂಗಳೂರಿನ ಪರಿಸರದಲ್ಲಿ ಪರಿಚಯಗೊಂಡಿತು. ದಂಡನಾಯಕ ಹೆಸರೇ ಸೂಚಿಸುವಂತೆ ಸೇನೆಯ ಪದವಿಯಾಗಿದೆ. ನಾಡುಗಳಲ್ಲಿ ಸಾಮಾನ್ಯವಾಗಿ ನಾಡಗಾವುಂಡರು ಆಡಳಿತವನ್ನು ನೋಡಿಕೊಳ್ಳುವುದುಂಟು. ಕೆಲಮೊಮ್ಮೆ ದಂಡನಾಯಕರನ್ನು ನಾಡಗಾವುಂಡರಾಗಿ ನೇಮಿಸಿರುವುದನ್ನೂ ಕಾಣಬಹುದು. 1330ರ ಶಾಸನವು ಜಾಲೆಯ ದಂಡನಾಯಕನು ಕುಕ್ಕಲನಾಡನ್ನು ಆಳುತ್ತಿದ್ದನೆಂದು ತಿಳಿಸುತ್ತದೆ (ರೈಸ್ 1905, 9: ನೆ–12). 1332ರ ಶಾಸನವೊಂದು ಮಹಾಸಾಮಂತಾಧಿಪತಿ ವೈಯಿಚ್ಚಗಾವುಂಡ, ಕೊಂಗ ಇರಾಮೆ ನಾಯಕ್ಕರ್ ಇವರುಗಳು ವೀರ ಬಲ್ಲಾಳ ದೇವರ ಮಗ ಸಿಂಗೆ ದಂಡನಾಕನ ಅಧೀನ ಅಧಿಕಾರಿಗಳಾಗಿದ್ದರೆಂದು ತಿಳಿಸುತ್ತದೆ (ರೈಸ್ 1905, 9: ಹೊ–104) ಇದರಿಂದ ದಂಡನಾಯಕನ ಅಧೀನದಲ್ಲಿ ಮಹಾಸಾಮಂತರಿದ್ದರೆಂದು ತಿಳಿಯುತ್ತದೆ. ನಾಡುಗಳ ರಕ್ಷಣೆಗೂ ಸ್ಥಳೀಯ ದಂಡನಾಯಕರಿರುತ್ತಿದ್ದರು. ಅದೇ ರೀತಿ ರಾಜನ ಆಸ್ಥಾನದಲ್ಲಿಯೂ ದಂಡನಾಯಕರಿರುತ್ತಿದ್ದರು. 1317ರ ಶಾಸನದಲ್ಲಿ ಅಲುವ ದಂಡನಾಯಕನ ಮಗ ಗಂಗೆಯ ದಂಡನಾಯಕನು ರಾಜ ಆಸ್ಥಾನದ ದಂಡನಾಥರಲ್ಲಿ ಒಬ್ಬ ಎಂದು ತಿಳಿಸುತ್ತದೆ (ರೈಸ್ 1905, 9: ಮಾ–59). ಗಾವುಂಡ / ನಾಳ್ಗಾವುಂಡ ಪದವಿಗಳು ಗ್ರಾಮ ಅಥವಾ ನಾಡುಗಳ ಆಡಳಿತ, ರಕ್ಷಣೆ ಮತ್ತು ಸೇನಬೋವ ನೆರವಿನಿಂದ ಕಂದಾಯ ಸಂಗ್ರಹದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕಾದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ನಾಡೊಳಗೆ ಅಥವಾ ಗ್ರಾಮದಲ್ಲಿ ಭೂಮಿಯನ್ನು ದಾನ ಅಥವಾ ಕೊಡುಗೆ ನೀಡುವಾಗ ಇವರ ಉಪಸ್ಥಿತಿ ಮುಖ್ಯವಾಗಿರುತ್ತದೆ. ಅಲ್ಲದೆ ನಾಡು ಮತ್ತು ಗ್ರಾಮಗಳ ಯಾವುದೇ ಕಾರ್ಯ ಚಟುವಟಿಕೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ಮುಖಂಡರಾಗಿರುತ್ತಾರೆ. ಗ್ರಾಮಗಳಲ್ಲಿ ಒಬ್ಬನಿಗಿಂತ ಹೆಚ್ಚು ಗಾಮುಂಡರಿದ್ದುದಾಗಿಯೂ ಶಾಸನಗಳಿಂದ ತಿಳಿದು ಬರುತ್ತದೆ.

ಪರ್ಗಡೆ ಎಂಬ ಅಧಿಕಾರಿಯ ಉಲ್ಲೇಖ ಶಾಸನಗಳಲ್ಲಿ ಕಂಡುಬರುತ್ತದೆ. ಪೆರ್ಗಡೆಯಾದ ಮಾಚ್ಚಗಾವುಂಡನು ಸಣ್ಣೈನಾಡಿನ ಆವಂತಿಯೂರ ಭೂಒಡೆಯ ಎಂದು 1133ರ ಶಾಸನವು ತಿಳಿಸಿದರೆ (ರೈಸ್ 1905, 9: ದೇ–20), 1156ರ ಶಾಸನದಲ್ಲಿ ಕುಕ್ಕಲನಾಡ ಆಳ್ವಾರರ ರಾಜ್ಯದ ಪೆರ್ಕಡಿಯಾದ ಅಚ್ಚಲೈಯನ್ ಎಂದು ತಿಳಿಸುತ್ತದೆ (ರೈಸ್ 1905, 9: ಬೆಂ–112 (1156)). ಪೆರ್ಗಡೆಗೂ ಕೂಡ ಭೂಮಿಯನ್ನು ಸರ್ವಮಾನ್ಯವಾಗಿ ಕೊಟ್ಟಿರುವುದನ್ನು ಕಾಣಬಹುದು (ರೈಸ್ 1905, 9: ಬೆಂ–47, 1346). ಮೂಲತಃ ರಾಜಾಧಿಕಾರಿಯಾದ ಪೆರ್ಗಡೆ ನಿಧಾನವಾಗಿ ಗ್ರಾಮಾಡಳಿತದ ಜೊತೆಗೆ ಸೇರಿಕೊಂಡರು (Adiga 2006:164). ಮತ್ತೊಬ್ಬ ಅಧಿಕಾರಿ ಸೇನಬೋವ. ಸೇನಬೋವನು ಸ್ಥಳೀಯವಾಗಿ ಪ್ರಭಾವಿಯಾದ ಅಧಿಕಾರಿ. ಇವನು ತೆರಿಗೆ ಸಂಗ್ರಹಿಸುವ, ಶಿಲಾಶಾಸನಗಳನ್ನು ಬರೆಯುವ ಮತ್ತು ದಾಖಲೆಗಳನ್ನು ಇಡುವಂತಹ ಪ್ರಮುಖ ಕಾರ್ಯವನ್ನು ನಿರ್ವಹಿಸುವವನು. ಯಾವುದೇ ಕೊಡುಗೆ, ಸರ್ವಮಾನ್ಯಗಳನ್ನು ನೀಡುವಾಗ ಮೇಲ್ವರ್ಗದ ಅಧಿಕಾರಿಗಳ ಜೊತೆ ಸೇನಬೋವ ಕೂಡ ಇರುವುದನ್ನು ಕೆಲವು ಶಾಸನಗಳಲ್ಲಿ ನೋಡಬಹುದು. ಎರಡು ಗ್ರಾಮಗಳ ಚತುರ್ಸಿಮೆಯನ್ನು ದೇವಾಲಯಕ್ಕೆ ಕೊಟ್ಟ 1328ರ ಶಾಸನವೊಂದರಲ್ಲಿ





(ರೈಸ್ 1905, 9: ದೇ–60) ಮಹಾಪ್ರಧಾನ, ದಂಡನಾಯಕ, ನಾಡಗೌಡರ ಜೊತೆಯಲ್ಲಿ ಸೇನಬೋವ ಅಲ್ಲಾಳನೂ ಉಪಸ್ಥಿತನಿದ್ದನು. ಯಲಹಂಕನಾಡಿನ ಸೇನಬೋವನಾದ ಅಲ್ಲಾಳನಿಗೆ ಸಾಕಷ್ಟು ಕೊಡುಗೆಗಳನ್ನು ಕೊಟ್ಟ ಬಗ್ಗೆ ಶಾಸನಗಳಿವೆ. ಇವನನ್ನು ಕುರಿತು ಪ್ರತ್ಯೇಕವಾಗಿ ನೋಡಲಾಗುವುದು.

ಬೆಂಗಳೂರಿನ ಪರಿಸರದ ಶಾಸನಗಳಲ್ಲಿ ಉಕ್ತವಾಗಿರುವ ಈ ಮಂಡಲೇಶ್ವರ, ಮಹಾಮಂಡಲೇಶ್ವರ, ಸಾಮಂತ, ಮಹಾಸಾಮಂತಾಧಿಪತಿ ಮೊದಲಾದವುಗಳು ಊಳಿಗಮಾನ್ಯ ಒಡೆಯ ಮತ್ತು ಊಳಿಗಮಾನ್ಯ ಏಣಿಶ್ರೇಣಿಯಲ್ಲಿನ ವಿವಿಧ ಹಂತಗಳನ್ನು ಪ್ರತಿನಿಧಿಸುತ್ತವೆ ಎಂದು ಆರ್.ಎನ್.ನಂದಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ರಾಜನಿಂದ ಗಾಮುಂಡನವರೆಗೆ ಇರುವ ವಿವಿಧ ಆಡಳಿತ ಮತ್ತು ಅಧಿಕಾರದ ಪದವಿಗಳು ಒಂದು ಪಿರಮಿಡ್ಡಿನ ಏಣಿಶ್ರೇಣಿಯೊಳಗೆ ಕಾರ್ಯ ನಿರ್ವಹಿಸುವಂತೆ ತೋರುವುದರಿಂದ ಇದನ್ನು ಊಳಿಗಮಾನ್ಯ ವ್ಯವಸ್ಥೆಗೆ ಸಮೀಕರಿಸಬಹುದು.

## –5–

**ಬೆಂಗಳೂರು ಪರಿಸರದ ಆಡಳಿತ ವಿಭಾಗಗಳು:** ಕರ್ನಾಟಕದಲ್ಲಿ ಶಾಸನಗಳ ನೆರವಿನಿಂದ ನಾಡುಗಳನ್ನು ಕುರಿತು ವಿಶೇಷ ಅಧ್ಯಯನ ನಡೆಸಿರುವ ವಿದ್ವಾಂಸರಲ್ಲಿ ಪಿ.ವಿ.ಕೃಷ್ಣಮೂರ್ತಿ ಅವರೂ ಒಬ್ಬರು. ಅವರು 'ಬೆಂಗಳೂರು ಜಿಲ್ಲೆಯ ಪ್ರಾಚೀನ ಪ್ರಾದೇಶಿಕ ವಿಭಾಗಗಳು' ಎಂಬ ಪ್ರಬಂಧದಲ್ಲಿ ಬೆಂಗಳೂರು ಜಿಲ್ಲೆಯ ಸು.500 ರಿಂದ 1350ರವರೆಗಿನ ಶಾಸನಗಳಲ್ಲಿ ಕಂಡು ಬರುವ ನಾಡುಗಳು, ವಳನಾಡುಗಳು ಮತ್ತು ಮಂಡಲಗಳನ್ನು ಕುರಿತು ಒಳ್ಳೆಯ ಸಮೀಕ್ಷೆ ನಡೆಸಿದ್ದಾರೆ (ಕಲಬುರ್ಗಿ 1999:184–201). ಈ ಸಮೀಕ್ಷೆಯನ್ನೇ ಆಧರಿಸಿ ನೋಡುವುದಾದರೆ 950ರಿಂದ 1350ರ ವರೆಗಿನ ಅವಧಿಯಲ್ಲಿ ಬೆಂಗಳೂರು ಪರಿಸರದಲ್ಲಿದ್ದ ನಾಡುಗಳ ಸಂಖ್ಯೆ 25. ವಳನಾಡುಗಳ ಸಂಖ್ಯೆ 4 ಹಾಗೂ ಮಂಡಲಗಳು ಮೂರು. ಚೋಳರ ಆಗಮನ ನಂತರ ಆಡಳಿತ ವಿಭಾಗಗಳು ಕ್ರಮವಾಗಿ ಮಂಡಲ, ವಳನಾಡು, ನಾಡು ಮತ್ತು ಗ್ರಾಮಗಳಾಗಿ ವಿಂಗಡಿಸಲ್ಪಟ್ಟಿದ್ದವು. ಅವು ಈ ರೀತಿ ಇವೆ:

**ಮಂಡಲಗಳು:** 1. ಮುಡಿಗೊಂಡ ಚೋಳ ಮಂಡಲ 2. ವಿಕ್ರಮ ಚೋಳ ಮಂಡಲ 3. ನಿಗರಿಲಿ ಚೋಳ ಮಂಡಲ.

**ವಳನಾಡುಗಳು:** 1. ಕರಿಕಾಲ ಚೋಳ ವಳನಾಡು 2. ಕ್ಷತ್ರಿಯ ಶಿಖಾಮಣಿ ವಳನಾಡು 3. ರಾಜರಾಜ ಚೋಳ ವಳನಾಡು 4. ರಾಜೇಂದ್ರ ಚೋಳ ವಳನಾಡು.

**ನಾಡುಗಳು:** 1.ಮೊರಸುನಾಡು (ಬೆಂಗಳೂರು ದಕ್ಷಿಣ, ಆನೆಕಲ್ಲು, ಹೊಸಕೋಟೆ ಪರಿಸರ) 2.ಮಣ್ಣೆನಾಡು (ನೆಲಮಂಗಲ, ಮಾಗಡಿ ಸುತ್ತಲ ಪ್ರದೇಶ) 3.ನಕ್ಕುಂದಿನಾಡು (ಹೊಸಕೋಟೆ ಪರಿಸರ) 4.ಕೈವಾರನಾಡು (ಹೊಸಕೋಟೆ, ಕೊಲಾರ ಮತ್ತು ಚಿಂತಾಮಣಿ ತಾ. ಸುತ್ತಲಪ್ರದೇಶ) 5.ಸಣ್ಣೆನಾಡು (ದೇವನಹಳ್ಳಿ ತಾ.) 6.ಬಿದೆಕಂಡನಾಡು (ಬೆಂಗಳೂರು) 7.ಕುಕ್ಕನೂರುನಾಡು (ಅರ್ಕಾವತಿ ನದಿ ಕಣಿವೆ ಪ್ರದೇಶ) 8.ಕುಕ್ಕಲನಾಡು (ಅರ್ಕಾವತಿ ನದಿ ಕಣಿವೆ ಪ್ರದೇಶ) 9.ಕೆಳವಲನಾಡು (ರಾಮನಗರ ಮತ್ತು ಚನ್ನಪಟ್ಟಣ ತಾ. ಪರಿಸರ) 10.ಎರುಮರೈನಾಡು (ಆನೆಕಲ್ಲು ತಾ. ಉತ್ತರಭಾಗ). 11.ಎಲಹಕ್ಕನಾಡು (ಬೆಂಗಳೂರು, ಹೊಸಕೋಟೆ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾ.ಗಳ ಪರಿಸರ)

12.ಕೆಳಲೈನಾಡು (ರಾಮನಗರ ಮತ್ತು ಚನ್ನಪಟ್ಟಣ ಪರಿಸರ) 13.ಕುಂಜಿನಾಡು (ಹೊಸಕೋಟೆ ತಾ.) 14.ಪೆರಿಯನಾಡು (ಬನ್ನೇರುಘಟ್ಟದ ಸುತ್ತಲ ಪ್ರದೇಶ) 15.ಚಿಕ್ಕಗಂಗವಾಡಿನಾಡು (ಕನಕಪುರ, ರಾಮನಗರ, ಚನ್ನಪಟ್ಟಣ, ಮದ್ದೂರು ತಾಲ್ಲೂಕಿನ ಭಾಗಗಳು) 16.ತುರೈವಳಿನಾಡು (ಬೆಂಗಳೂರಿನ ಹೂಡಿ, ಕಾಡುಗೋಡಿ, ಸಾದರಮಂಗಲ ಭಾಗ) 17.ಪುಲಿಯೂರುನಾಡು (ಹೊಸಕೋಟೆ ತಾ.) 18.ಬಾಣತಿಹಳ್ಳಿಯನಾಡು (ಚಿಕ್ಕಗಂಗವಾಡಿಯಲ್ಲಿನ ಒಂದು ಉಪನಾಡು) 19.ಮಾಶಂಡಿನಾಡು (ಆನೇಕಲ್ಲು ಉತ್ತರಭಾಗ, ಮಾಲೂರು ಮುಂತಾದ ಭಾಗ) 20.ವೆಪ್ಪೂರುನಾಡು (ಬೆಂಗಳೂರು ದಕ್ಷಿಣ, ಆನೇಕಲ್ಲು ತಾ. ಪರಿಸರ) 21.ವೆಯೂರನಾಡು (ಬೆಂಗಳೂರು ದಕ್ಷಿಣ ತಾ. ಪ್ರದೇಶ) 22.ಸೀಗಲನಾಡು (ಕನಕಪುರ, ಚನ್ನಪಟ್ಟಣ ತಾ. ಪರಿಸರ) 23.ಸಾವಿತೆಯನಾಡು (ಆನೇಕಲ್ಲು ತಾ.) 24.ಹೊಮ್ಮಳಿಗೆನಾಡು (ಕನಕಪುರ ತಾ.) 25.ಕಲಿನಾಡು (ದೊಡ್ಡಬಳ್ಳಾಪುರ ತಾ.).

ವಿಕ್ರಮಚೋಳ ಮಂಡಲದ ಒಳಗೆ ಬರುವ ಕುಕ್ಕನೂರು ನಾಡಿನ ಉಲ್ಲೇಖ 1033 (ರೈಸ್ 1905, 9: ನೆ–37) ಮತ್ತು 1113 (ರೈಸ್ 1905, 9: ನೆ–38 ಎ) ಶಾಸನಗಳಲ್ಲಿ ಇದೆ. ಆದರೆ ಆನಂತರ ಕುಕ್ಕನೂರು ನಾಡು ಉಲ್ಲೇಖವು ಶಾಸನಗಳಲ್ಲಿ ಕಣ್ಮರೆಯಾಗುತ್ತದೆ. ಬದಲಿಗೆ 1156ರಲ್ಲಿ  ಕುಕ್ಕಲನಾಡು (ರೈಸ್ 1905, 9: ಬೆಂ–112) ಎಂಬ ಉಲ್ಲೇಖ ಕಾಣುತ್ತದೆ. ಆದರೆ ಇದಕ್ಕೆ ಮೊದಲು ಕುಕ್ಕಲನಾಡು ಎಂಬ ಸ್ಪಷ್ಟ ಉಲ್ಲೇಖ ಗೋಚರಿಸುವುದಿಲ್ಲ (ಕಲಬುರ್ಗಿ 1999:40). ಬಹುಶಃ 1113 ರಿಂದ 1156ರ ನಡುವೆ ಯಾವಾಗಲೋ ಕುಕ್ಕನೂರು ನಾಡು > ಕುಕ್ಕಲನಾಡು ಆಗಿ ಪರಿವರ್ತನೆಯಾಗಿರಬೇಕು. ಮುಂದೆ ಕುಕ್ಕಲನಾಡಿನ ಉಲ್ಲೇಖವು 1340 (ರೈಸ್ 1905, 9: ಮಾ–81)ರ ವರೆಗೆ ಶಾಸನಗಳಲ್ಲಿಯೂ ಕಂಡುಬರುತ್ತದೆ. ಮಣ್ಣೆನಾಡಿನ ಉಲ್ಲೇಖವು 966ರಿಂದಲೂ ಇದ್ದು, 1029 (ರೈಸ್ 1905, 9: ನೆ–1) ಮತ್ತು 1050 (ರೈಸ್ 1905, 9: ನೆ–25) ಶಾಸನಗಳಲ್ಲಿ ವಿಕ್ರಮಚೋಳಮಂಡಲಕ್ಕೆ ಸೇರಿರುವುದಾಗಿ ದಾಖಲಾಗಿದೆ. ಆದರೆ ಇದೇ ಮಣ್ಣೆನಾಡು 1115ರಲ್ಲಿ (ರೈಸ್ 1905, 9: ನೆ–67) ನಿಗರಿಲಿ ಚೋಳ ಮಂಡಲದಲ್ಲಿರುವುದಾಗಿ ತಿಳಿದು ಬರುತ್ತದೆ. ಬಹುಶಃ 1050 ರಿಂದ 1115ರ ನಡುವೆ ಯಾವಾಗಲೋ ಆಡಳಿತದ ಅನುಕೂಲಕ್ಕಾಗಿ ಹೊಸದಾಗಿ 'ನಿಗರಿಲಿ ಚೋಳ ಮಂಡಲಂ'ಅನ್ನು ರಚಿಸಿ, ಆ ಮಂಡಲದ ವ್ಯಾಪ್ತಿಗೆ ವಿಕ್ರಮಚೋಳ ಮಂಡಲಕ್ಕೆ ಸೇರಿದ್ದ ಮಣ್ಣೆನಾಡನ್ನು ತಂದಿರುವ ಸಾಧ್ಯತೆ ಇದೆ. ಇದಕ್ಕೆ ಪೂರಕವಾಗಿ 1065ರ ಶಾಸನವು (ರೈಸ್ 1905, 9: ಹೊ–36) ಕೈವಾರನಾಡು ವಿಜಯ ರಾಜೇಂದ್ರ ಮಂಡಲದ ಭಾಗವೆಂದು ಹೇಳುತ್ತದೆ. ಆದರೆ 1145ರ ಶಾಸನ (ರೈಸ್ 1905, 9: ಹೊ–40)ದಲ್ಲಿ ಕೈವಾರನಾಡು ನಿಗರಿಲಿ ಚೋಳ ಮಂಡಲದ ಭಾಗವೆಂದು ತಿಳಿಸುತ್ತದೆ. ಇದರಿಂದ ನಾವು ಗ್ರಹಿಸಬಹುದಾಗಿರುವುದೇನೆಂದರೆ 1065 ರಿಂದ 1115ರ ನಡುವೆ 'ನಿಗರಿಲಿ ಚೋಳ ಮಂಡಲ' ಎಂಬ ಹೊಸ ಮಂಡಲವನ್ನು ಆಡಳಿತದ ಅನುಕೂಲಕ್ಕಾಗಿ ರಚಿಸಿದ್ದಿರಬಹುದು. ಆ ಹೊಸ ಮಂಡಲದ ವ್ಯಾಪ್ತಿಗೆ ಮಣ್ಣೆನಾಡು ಮತ್ತು ಕೈವಾರನಾಡುಗಳನ್ನು ತಂದಿರುವ ಸಾಧ್ಯತೆಗಳಿವೆ. ಆಡಳಿತದ ಅನುಕೂಲಕ್ಕಾಗಿ ಚೋಳರು ನಾಡು ಮತ್ತು ಮಂಡಲಗಳನ್ನು ಆಗಾಗ್ಗೆ ಪುನರ್ರಚಿಸುತ್ತಿದ್ದರು ಎಂಬ ಅಂಶ ಇದರಿಂದ  ತಿಳಿಯುತ್ತದೆ.





–6–

**ಹೊಸ ಪರಿವೀಕ್ಷಣೆಗಳು:** ಕ್ರಿ.ಶ.950 ರಿಂದ 1350ರವರೆಗಿನ ಬೆಂಗಳೂರಿನ ಪರಿಸರದ ರಾಜಕೀಯ ಚರಿತ್ರೆಯಲ್ಲಿ ಆರ್ಥಿಕ, ಸೈನಿಕ, ಸಾಮಾಜಿಕ ಮೊದಲಾದ ಹಲವು ಕ್ಷೇತ್ರಗಳಲ್ಲಿ ಉಂಟಾದ ಕ್ಷಿಪ್ರಬದಲಾವಣೆಯನ್ನು ಗುರುತಿಸಬಹುದು.

**ಆರ್ಥಿಕ ಬದಲಾವಣೆಗಳು:** ಆರ್ಥಿಕ ಬದಲಾವಣೆಗಳನ್ನು ಅವಲೋಕಿಸುವುದಾದರೆ ಕಡಲು ವ್ಯಾಪಾರ ಚಟುವಟಿಕೆಯಲ್ಲಿ ಹತ್ತನೇ ಶತಮಾನದ ಉತ್ತರಾರ್ಧದಿಂದ ಹಿಂದೆಂದಿಗಿಂತಲೂ ಹೆಚ್ಚಿನ ಬೆಳವಣಿಗೆ ಕಂಡಿತು. ಇದಕ್ಕೆ ಕಾರಣ ಆ ಸಂದರ್ಭದಲ್ಲಿ ಏಷ್ಯಾದ ರಾಜಕೀಯದಲ್ಲಿ ಉಂಟಾದ ಬದಲಾವಣೆಗಳೆಂದು ಕೆಲವರು ಗುರುತಿಸಿದರೆ, ಮನು ವಿ. ದೇವದೇವನ್ ಅವರು ಹಿಂದೂ ಮಹಾಸಾಗರ ಪ್ರದೇಶದ ವಿವಿಧ ದೇಶಗಳಲ್ಲಿ ನಡೆದ ಕೃಷಿ ವಿಸ್ತರಣೆಯ ಪರಿಣಾಮವಾಗಿ ಬೆಳೆದುಬಂದ ಹೊಸ ಆರ್ಥಿಕ ವರ್ಗಗಳೇ ಕಾರಣವೆಂದಿದ್ದಾರೆ. ಈ ವರ್ಗದ ಬಹುತೇಕರು ಕೃಷಿಯ ಸಮೃದ್ಧಿ ಸಂದರ್ಭದಲ್ಲಿ ಪಶುಪಾಲನೆಯಿಂದ ವ್ಯಾಪಾರ ಚಟುವಟಿಕೆಗಳ ಕಡೆಗೆ ಮುಂದೆ ಊರು, ನಾಡು, ಮಂಡಲಾದಿಗಳಲ್ಲಿ ಅಧಿಕಾರಕ್ಕೆ ಬರುವಲ್ಲಿಯೂ, ಭೂಒಡೆತನವನ್ನು ಹೊಂದುವಲ್ಲಿಯೂ ಯಶಸ್ವಿಯಾದರೆಂದು ಅಭಿಪ್ರಾಯ ಪಡುತ್ತಾರೆ (ಮನು 1999:65). ಈ ಕಾಲದ ಶಾಸನಗಳನ್ನು ಅವಲೋಕಿಸಿದಾಗ ಸೇನೆ ಮತ್ತು ಆಡಳಿತದಲ್ಲಿ ಬೇಡ, ಕುರುಬ, ನಾಯಕ ಸಮುದಾಯದವರು ಪ್ರವೇಶಿಸುವುದನ್ನು ಗಮನಿಸಬಹುದು. ಈ ಕಾಲಘಟ್ಟವು ಸದಾ ಒಂದಿಲ್ಲೊಂದು ದಾಳಿ, ಕದನ, ಸಂಘರ್ಷಗಳಿಂದ ಕೂಡಿದ್ದು, ರಾಜಕೀಯವಾಗಿ ಪ್ರಕ್ಷುಬ್ದತೆಯ ವಾತಾವರಣ ನೆಲೆಸಿತ್ತು. ಆದ್ದರಿಂದ ಸದಾ ಸಿದ್ಧ ಸೇನೆಯ ಅಗತ್ಯತೆ ಇತ್ತು. ಆ ವರೆಗೂ ಅರೆಕಾಲೀಕ ಸೈನಿಕರಾಗಿ ದುಡಿಯುತ್ತಿದ್ದ ರೈತವರ್ಗವು ಪೂರ್ಣಪ್ರಮಾಣದ ಸೈನಿಕಸೇವೆಯಲ್ಲಿ ತೊಡಗುವುದು ಕಷ್ಟಸಾಧ್ಯವಾಗಿತ್ತು. ಏಕೆಂದರೆ ಕೃಷಿ ಉತ್ಪಾದನೆಯು ಕೂಡ ರಾಜ್ಯಕ್ಕೆ ಅಷ್ಟೇ ಮುಖ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಒಂದು ಕಡೆ ಶೌರ್ಯ ಮತ್ತು ಸಾಹಸಕ್ಕೆ ಹೆಸರಾದ ಬೇಡ, ಕುರುಬ ಮೊದಲಾದ ಬುಡಕಟ್ಟು ಸಮುದಾಯದ ಜನರು ಪ್ರಾಮುಖ್ಯತೆಗೆ ಬಂದರು. ಮತ್ತೊಂದು ಕಡೆ ಕೃಷಿಕ ಸಮುದಾಯವು ಹೆಚ್ಚಿನ ಪ್ರಮಾಣದಲ್ಲಿ ಸೈನಿಕ ಸೇವೆಯಿಂದ ಕೃಷಿ ಚಟುವಟಿಕೆಯತ್ತ ಮರಳಿದಂತೆ ತೋರುತ್ತದೆ. ಇದರಿಂದ ಸೈನ್ಯ ಮತ್ತು ಉತ್ಪಾದನೆ ಎರಡೂ ವಲಯದಲ್ಲಿನ ಸಮಸ್ಯೆಗಳು ಬಗೆಹರಿದಂತಾಯಿತು. ಅದಕ್ಕೆ ಪೂರಕವೆಂಬಂತೆ ಹೊಸ ಗ್ರಾಮ, ಕೆರೆಗಳ ನಿರ್ಮಾಣಗಳನ್ನು ಗುರುತಿಸಬಹುದು.

**ನಗರೀಕರಣ ಪ್ರಕ್ರಿಯೆ:** ವಿಭೂತಿ ಪುರದ ಶಾಸನದಲ್ಲಿ ಮಹಾಪ್ರಸಾಹಿತ್ತ 'ನಿನ್ರಾನ್' ಮತ್ತು ಮಾಸಂದಿನಾಡಿನ ಅಧಿಕಾರಿಗಳು ಹಾಗೂ ನಿವಾಸಿಗಳು ಪೆರುಎರುಮೂರಿಗೆ ಹೊಂದಿಕೊಂಡಿದ್ದ ಕಾಡನ್ನು ಸವರಿ, ಭೂಮಿಯನ್ನು ಸಮತಟ್ಟು ಮಾಡಿ ಗ್ರಾಮ ಮತ್ತು ಕೆರೆಯನ್ನು ನಿರ್ಮಿಸಿ ಗ್ರಾಮಕ್ಕೆ 'ವಾಚ್ಚಿದೇವರ್‌ಪುರ' ಎಂದು ಹೆಸರಿಟ್ಟು ವೀರಬಲ್ಲಾಳ ಮತ್ತು ವಲ್ಲಪ್ಪ ದಂಡನಾಯಕರಿಗೆ ಒಳಿತಾಗಲೆಂದು ಗದ್ದೆ, ಹೊಲವನ್ನು ದೇವರಿಗೆ ಬಿಟ್ಟರೆಂದು ತಿಳಿಸುತ್ತದೆ (ರೈಸ್ 1905, 9: ಬೆಂ–133 (1307)). ಬಹುಶಃ ಇದು ಬೆಂಗಳೂರು ಪರಿಸರದಲ್ಲಿ ದಾಖಲಾದ ಮೊದಲ ನಗರೀಕರಣ ಪ್ರಕ್ರಿಯೆ ಎಂದು ಕರೆಯಬಹುದು.

**ಕೃಷೀಕರಣ:** ಅದೇ ರೀತಿ ಕೃಷಿಯನ್ನು ಪ್ರೋತ್ಸಾಹಿಸುವ ಅಂಶಗಳೂ ಬೆಂಗಳೂರು ಪರಿಸರದ ಶಾಸನಗಳಲ್ಲಿ ದಾಖಲಾಗಿವೆ. 1050ರ ಶಾಸನದಲ್ಲಿ ಮಣ್ಣೆನಾಡಿನ ಗ್ರಾಮವೊಂದರಲ್ಲಿ

ಭೂಮಾಲಿಕರು ನೀರಾವರಿ ಬೆಳೆಗಳ ಉತ್ಪನ್ನದ ಮೇಲೆ 2/5 ಭಾಗವನ್ನು, ಒಣ ಪ್ರದೇಶದ ಬೆಳೆಗಳ ಮೇಲೆ 1/4 ಭಾಗವನ್ನು ತಮ್ಮ ಪಾಲಾಗಿ ಸ್ವೀಕರಿಸುವಂತೆ ಕಟ್ಟುನಿಟ್ಟಿನ ಆದೇಶವನ್ನು ಸೇನಾಪತಿ ವಾಣಕೋವರಯ್ಯ ನೀಡುತ್ತಾನೆ (ರೈಸ್ 1905, 9: ನೆ–25). ಇದೇ ಕಾಲದ ಮತ್ತೊಂದು ಶಾಸನದಲ್ಲಿ ಸಣ್ಣೈನಾಡಿನಲ್ಲಿ ಸೇನಾಪತಿ ರಾಜೇಂದ್ರ ಚೋಳ ಬ್ರಹ್ಮಮಾರಯಾರನು ಕೃಷಿ ಉತ್ತೇಜಕ ಅಂಶವೊಂದನ್ನು ಘೋಷಿಸುತ್ತಾನೆ. ಅದರಂತೆ ಗದ್ದೆಯ ಉತ್ಪನ್ನದಲ್ಲಿ ಒಂದು ಭಾಗ ಸರ್ಕಾರದ ಪಾಲದರೆ, ಒಂದೂವರೆ ಭಾಗ ರೈತನಪಾಲು. ಅರಣ್ಯಭೂಮಿ ಮತ್ತು ಉಳುಮೆಗೆ ಒಳಪಟ್ಟ ಭೂಮಿಯ ಉತ್ಪನ್ನದಲ್ಲಿ ಒಂದು ಪಾಲು ಸರ್ಕಾರಕ್ಕೂ, ಮೂರುಪಾಲು ರೈತರಿಗೂ ಸೇರುವುದೆಂದು ಆದೇಶಿಸಿದ್ದಾನೆ (ರೈಸ್ 1905, 9: ದೇ–76, (1050)). ಹೀಗೆ ಅರಣ್ಯವನ್ನು ಕಡಿದು ಗ್ರಾಮವನ್ನು, ಕೆರೆಕಟ್ಟೆಯನ್ನು ನಿರ್ಮಿಸುವ ಹಾಗೂ ಹೊಸದಾಗಿ ಕೃಷಿ ಭೂಮಿಯಾಗಿ ಪರಿವರ್ತಿಸುವ ಚಟುವಟಿಕೆಗಳು 11ನೇ ಶತಮಾನದಲ್ಲಿ ತೀವ್ರಗತಿಯಲ್ಲಿ ಸಾಗಲಾರಂಭಿಸಿತು. ಇದರ ಜೊತೆಗೆ ಮೇಲೆ ತಿಳಿಸಿದಂತೆ ಸಿದ್ಧ ಸೈನ್ಯವು ಅಸ್ಥಿತ್ವಕ್ಕೆ ಬರಲಾಗಿ ಬುಡಕಟ್ಟು ಸಮುದಾಯದವರು ಸೇನೆಯನ್ನು ಪ್ರವೇಶಿಸಿದರು. ಇದರಿಂದ ಕೃಷಿ ಮತ್ತು ಸೇನೆ ಎರಡರಲ್ಲಿಯೂ ಸೇವೆ ಸಲ್ಲಿಸುತ್ತಿದ್ದ ಕೃಷಿಕ ಸಮುದಾಯದವರನ್ನು ಒತ್ತಡದಿಂದ ಮುಕ್ತಿಗೊಳಿಸಿ ಕೃಷಿಗೆ ಮರಳಿಸಿದಂತೆ ತೋರುತ್ತದೆ. ಇದು ಕೂಡ ಅಂದಿನ ಕಾಲಘಟ್ಟದಲ್ಲಿ ಕೃಷಿಯ ವಿಸ್ತರಣೆ ಮತ್ತು ಉತ್ಪಾದನೆ ತೀವ್ರಗೊಳ್ಳಲು ಕಾರಣವಾಗಿದ್ದಿರಬಹುದು.

ಈ ಹೊತ್ತಿಗೆ ಅರಬ್ ಮತ್ತು ಯೂರೋಪಿನ ದೇಶಗಳು ಅಕ್ಕಿಯ ಬೇಡಿಕೆಗೆ ದಕ್ಷಿಣ ಭಾರತವನ್ನೆ ಆಶ್ರಯಿಸಿದ್ದವು. ಅಕ್ಕಿಯು ಅರಬರ ಮೂಲಕ ಯೂರೋಪಿಗೆ ರಫ್ತಾಗುತ್ತಿತ್ತು. ಅಕ್ಕಿಗೆ ಅರಬ್ ಭಾಷೆಯಲ್ಲಿ 'ಅರೋಜ಼್' ಎಂಬ ಪ್ರಯೋಗಕ್ಕೆ ತಮಿಳಿನ 'ಅರಿಸಿ' ಶಬ್ದವು ಮೂಲವಾಗಿದ್ದು ಇದು ಗ್ರೀಕ್‌ನಲ್ಲಿ oruza, ಫ್ರೆಂಚ್‌ನಲ್ಲಿ ris ಮತ್ತು ಇಂಗ್ಲೀಷ್‌ನಲ್ಲಿ rice ರೂಪ ಪಡೆದಿರುವುದು ಈ ವ್ಯಾಪಾರದ ವ್ಯಾಪ್ತಿಯನ್ನು ಸೂಚಿಸುತ್ತದೆ (ಮನು 1999:66). ಇದರಿಂದಾಗಿ ಗದ್ದೆಗೆ ಹೆಚ್ಚಿನ ಮಹತ್ವ, ಬೆಲೆ ಸೃಷ್ಟಿಯಾಗಲಾರಂಭಿಸಿತು. ಇದು ಶಾಸನಗಳಲ್ಲಿ ಅಭಿವ್ಯಕ್ತಗೊಳ್ಳುವುದನ್ನು ನೋಡಬಹುದು. ಐಗಂಡಪುರದ ಶಾಸನವು ವಾಮನಯ್ಯ ಎಂಬ ದಂಡನಾಯಕನು ವಾಣಪುರಂ ಕೆರೆಯ ಹಿಂದೆ 2 ವೇಳಿಗದ್ದೆಯನ್ನು ಚಿನ್ನಕೊಟ್ಟು ಖರೀದಿಸಿದನೆಂದು ತಿಳಿಸುತ್ತದೆ (ರೈಸ್ 1905, 9:ನೆ–37 (1033)). ಅದೇ ರೀತಿ 1024ರ ಶಾಸನವೊಂದರಲ್ಲಿ ಕಿಳಲೈನಾಡಿನ ಗ್ರಾಮ ಸಭೆಯೊಂದು 300 ಕುಳಿ ಭೂಮಿಯನ್ನು ಮಾರಾಟಮಾಡಿ ರಾಜನಿಂದ ಹಣಪಡೆದ ಬಗ್ಗೆ ತಿಳಿಸುತ್ತದೆ (ರೈಸ್ 1905, 9: ಚ–84). ಇವು ಆ ವೇಳೆಗೆ ಗದ್ದೆಯು ಪಡೆದುಕೊಂಡಿದ್ದ ಮಹತ್ವವನ್ನು ತಿಳಿಸುತ್ತವೆ.

**ಭೂ ಒಡೆತನ:** ಭೂಮಿಯ ಮೇಲಿನ ನಿಜವಾದ ಒಡೆತನವು ರಾಜ ಪ್ರಭುತ್ವ, ಗ್ರಾಮ ಸಭೆಯಂತಃ ಸಾಂಸ್ಥಿಕ ಸ್ವರೂಪಕ್ಕೆ ಸೇರಿತ್ತೆ? ಅಥವಾ ಖಾಸಗಿ ವ್ಯಕ್ತಿಯದಾಗಿತ್ತೆ? ಎಂಬುದು ಸಹಜವಾಗಿಯೇ ಕಾಡುವ ಪ್ರಶ್ನೆಯಾಗಿದೆ. ಭೂಮಿಯು ಕೆಲವು ಬಾರಿ ಖಾಸಗಿ ಆಸ್ತಿಯದಾಗಿಯೂ, ಕೆಲವೊಮ್ಮೆ ಗ್ರಾಮದ ಸುತ್ತಲ ಭೂಮಿ ಆಯಾ ಗ್ರಾಮಕ್ಕೆ ಸೇರಿರುವಂತೆಯೂ ಕಾಣುತ್ತದೆ. ಕೊಡುಗೆ ಅಥವಾ ದಾನ ಶಾಸನಗಳನ್ನು ಅವಲೋಕಿಸಿದಾಗ ಸಂಬಂಧ ಪಟ್ಟ ಗ್ರಾಮದ ಸಮಸ್ತ ಗಾಮುಂಡರು, ಗ್ರಾಮಸಭೆಯ ಸದಸ್ಯರು, ನಾಡಾಳ್ವರು, ದಂಡನಾಯಕ ಅಥವಾ ಮಹಾ ಸಾಮಂತ, ಸೇನಬೋವ ಮೊದಲಾದ ಊಳಿಗಮಾನ್ಯ





ಅಧಿಕಾರಿ ವರ್ಗವು ಸಮಸ್ತ ಜನರ ಸಮ್ಮುಖದಲ್ಲಿ ದೇವಾಲಯಕ್ಕೊ, ವ್ಯಕ್ತಿಗೊ ಊರಿನ ಚತುರ್ಸಿಮೆಯಲ್ಲಿ ನಿರ್ದಿಷ್ಟ ಪಡಿಸಿದ ಭೂಮಿಯನ್ನು ನೀಡಿರುವುದುಂಟು (ರೈಸ್ 1905, 9: ಬೆಂ–85ಸಿ (1110), 61 (1332), ದೇ–75 (1046) ಹೊ–75 (1343) ಇತ್ಯಾದಿ). ಚತುರ್ಸಿಮೆ ಎಂಬ ಶಬ್ದ ಪ್ರಯೋಗವು ಗ್ರಾಮದ ಸುತ್ತಲ ಜಮೀನನ್ನು ತಿಳಿಸುವುದಾಗಿದ್ದು, ನೀಡಿದ ಕೊಡುಗೆಗೆ ಮಾನ್ಯತೆ ದೊರಕಬೇಕಾದರೆ ಅಧಿಕಾರಿಗಳು ಮತ್ತು ಸಮಸ್ತ ಗ್ರಾಮಮುಖಂಡರ ಸಮ್ಮುಖದಲ್ಲಿ ಒಪ್ಪಿತವಾಗಿಯೇ ನೀಡಬೇಕು. ಅಂದರೆ ಆ ಭೂಮಿಯ ಮೇಲೆ ಎಲ್ಲರ ಹಕ್ಕು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇದ್ದೇ ಇರುತ್ತದೆ. ಮಾಗೇನಹಳ್ಳಿ ಗ್ರಾಮದ ಶಾಸನದಲ್ಲಿ ಬಲ್ಲಾಳನ ಮನೆಪ್ರಧಾನ ಮಹಾಮಂಡಲೇಶ್ವರ ಸೋಮರಸನು ಕೆಳವಲನಾಡಿನ ಮಗುವನಹಳ್ಳಿಯ ಚಿಟ್ಟಾರಿಬಲಸೆಟ್ಟಿ, ಮಸಣಸೆಟ್ಟಿಗೆ ಈ ರೀತಿ ಸೂಚನೆ ಕೊಡುತ್ತಾನೆ: ಆ ಊರಲ್ಲಿ ಯಾರಾದರೂ ತಮ್ಮಡಿಯಾದರೆ (ಸನ್ಯಾಸ ದೀಕ್ಷೆ ತೆಗೆದುಕೊಂಡರೆ ಇರಬಹುದೆ?) ಅವರ ಆಸ್ತಿಗೆ ಯಾರೂ ವಾರಸುದಾರರಿಲ್ಲದಿದ್ದಲ್ಲಿ ಆಸ್ತಿಯನ್ನು ಸರ್ವಮಾನ್ಯವಾಗಿ ಪರಿಗಣಿಸಿ ಹಳ್ಳಿಯನ್ನು ನಾನಾದೇಸಿಪಟ್ಟಣವಾಗಿ ಸಂತೆಕಟ್ಟುವುದು ಎಂದು ತಿಳಿಸುತ್ತದೆ (ರೈಸ್ 1905, 9: ಚ–73 (1318)). 1330ರ ಕಿತ್ತನಹಳ್ಳಿಯ ಶಾಸನದಿಂದಲೂ ಇಂತಹದೇ ಮಾಹಿತಿ ಹೊರಬೀಳುತ್ತದೆ. ಇಲ್ಲಿ ಹಲರು ಎಂಬ ರೈತವರ್ಗದಲ್ಲಿ ಯಾರಾದರೂ ಸತ್ತುಹೋದ ಸಂದರ್ಭದಲ್ಲಿ ಆತನ ಆಸ್ತಿಯು ಯಾರಿಗೆ ಸೇರಬೇಕು ಎಂಬುದೇ ಪ್ರಮುಖ ವಿಷಯ. ಹಲರು ಜಾತಿಯಲ್ಲಿ ಯಾರಾದರು ಸತ್ತರೆ ಅವನ ಆಸ್ತಿ ಮಕ್ಕಳಿಗೆ ಸಲ್ಲಬೇಕು. ಅವರಿಲ್ಲದಿದ್ದರೆ ಅಣ್ಣತಮ್ಮಂದಿರಿಗೆ, ಅವರೂ ಇಲ್ಲದ ಪಕ್ಷದಲ್ಲಿ ಅಳಿಯ ಮೊಮ್ಮಗಳಿಗೆ ಸಲ್ಲಬೇಕು ಎಂದು ತಿಳಿಸುತ್ತದೆ. ಯಾರೂ ಇಲ್ಲದಿದ್ದರೆ ಆ ಪಂಗಡದ ಮಠಕ್ಕೊ ದೇವಾಲಯಕ್ಕೊ ನೀಡಲು ತಿಳಿಸಿದೆ (ರೈಸ್ 1905, 9: ನೆ–12). ಇವು ಒಟ್ಟಾರೆ ಖಾಸಗಿ ಆಸ್ತಿಯ ಅಸ್ತಿತ್ವವನ್ನು ಪ್ರಕಟಪಡಿಸುತ್ತಿವೆ. 997ರ ಕಮ್ಮಸಂದ್ರದ ಶಾಸನವು ಮಾರಯ್ಯ ಮತ್ತು ಪುಣಿಸೆಯಮ್ಮರು ಸತ್ತಿಮಂಗಲದ ಭೂಮಿಯ ಸಂಬಂಧವಾಗಿ ಚಾವಂಡಯ್ಯನಿಗೆ ದತ್ತಿಯೊಂದನ್ನು ನೀಡಿದಂತೆ ತಿಳಿಯುತ್ತದೆ. ಈ ಕೊಡುಗೆಯನ್ನು ಮಾನ್ಯಮಾಡಲು ದಂಡನಾಯಕ, ನಾಳ್ಗವುಂಡ, ನಾಡ ಸಮಸ್ತರ ಸಮ್ಮುಖದಲ್ಲಿ ಕೊಟ್ಟರು (ರೈಸ್ 1905, 9: ಹೊ–111). ಇದರಿಂದ ನೀಡಿದ ಯಾವುದೇ ಖಾಸಗಿ ಆಸ್ತಿಯು ಮಾನ್ಯತೆ ಹೊಂದಲು ಅಧಿಕಾರಿಗಳ ಉಪಸ್ಥಿತಿ ಅಗತ್ಯವಿತ್ತು ಎಂಬುದನ್ನು ಇದು ನಿರೂಪಿಸುವುದಲ್ಲದೆ ಖಾಸಗಿ ಸ್ವತ್ತನ್ನು ಖಚಿತ ಪಡಿಸುತ್ತದೆ. ಇದರಿಂದ ಎರಡು ರೀತಿ ಭೂ ಒಡೆತನ ಅಸ್ತಿತ್ವದಲ್ಲಿತ್ತು. ಗ್ರಾಮ ಸಭೆ ಅಥವಾ ಗ್ರಾಮ ಮುಖಂಡ ಹಾಗೂ ಪ್ರಭುತ್ವದ ನಿಯಂತ್ರಣದಲ್ಲಿರುವ ಸಾಂಸ್ಥಿಕ ಸ್ವರೂಪದ ಭೂಮಿ (ಗೋಮಾಳ, ಗುಂಡುತೋಪುಗಳು ಇದ್ದಹಾಗೆ). ಮತ್ತೊಂದು ಖಾಸಗಿಯ ಭೂಮಿ. ಇವೆರಡರ ಮೇಲು ಪ್ರಭುತ್ವಕ್ಕೆ ಇದ್ದಿರಬಹುದಾದ ಏಕರೀತಿಯ ಸಂಬಂಧ ಎಂದರೆ ತೆರಿಗೆಯನ್ನು ಪಡೆಯುವುದು. ಈ ಸ್ವರೂಪದ ಭೂ ಒಡೆತನವು ಚೋಳರ ಆಡಳಿತದ ಕಾಲಾವಧಿಯಿಂದ ಆರಂಭವಾದಂತೆ ತೋರುತ್ತದೆ.

**ಜಲಸಂವರ್ಧನೆ:** ಬೆಂಗಳೂರು ಪರಿಸರದ ಕ್ರಿ.ಶ.950 ರಿಂದ 1350ರ ನಡುವಿನ 400 ವರ್ಷಗಳ ಅವಧಿಯ ಶಾಸನಗಳಲ್ಲಿ 40ಕ್ಕೂ ಹೆಚ್ಚು ಕೆರೆಗಳ ಉಲ್ಲೇಖ ಕಂಡುಬರುತ್ತದೆ. ಅವುಗಳಲ್ಲಿ ಹತ್ತಾರು ಕೆರೆಗಳು ಈ ಅವಧಿಯಲ್ಲಿಯೇ ನಿರ್ಮಾಣಗೊಂಡಿವೆ. 1043ರಲ್ಲಿ ಸಣ್ಣೈನಾಡ ಗಾವುಂಡನಾದ ರಾಜರಾಜ ವೇಳಾನನು ಪಟ್ಟಂದೂರಿನಲ್ಲಿ ಕೆರೆಯೊಂದನ್ನು

ನಿರ್ಮಿಸಿ ಮೂರು ತೂಬುಗಳನ್ನು ಮಾಡಿಸಿದನು (ರೈಸ್ 1905, 9: ಹೊ–142). ಹೊಯ್ಸಳ ದೊರೆ ವಿಷ್ಣುವರ್ಧನನು ತನ್ನ ತಂದೆ ಮತ್ತು ತಾಯಿಯ ಹೆಸರಿನಲ್ಲಿ 1140ರಲ್ಲಿ ಎರಡು ಕೆರೆಗಳನ್ನು ನಿರ್ಮಿಸಿದನು (ರೈಸ್ 1905, 9: ನೆ–84). ಆನೆಕಲ್ಲು ತಾ. ಮಯಿಸಂದ್ರದಲ್ಲಿ 1274ರಲ್ಲಿ ಸೋಮಗಾವುಂಡನು ಕೆರೆಯೊಂದನ್ನು ನಿರ್ಮಿಸಿದನು (ರೈಸ್ 1905, 9: ಆ–45). ಜಿಗಣಿಯಲ್ಲಿ ಮಾರಪ್ಪ ಎಂಬಾತನು 1302ರಲ್ಲಿ ಸ್ವಂತ ಖರ್ಚಿನಲ್ಲಿ ಕೆರೆಗೆ ಏರಿಹಾಕಿಸಿದನು. ಚಿಕ್ಕನಲ್ಲೂರಿನಲ್ಲಿ ತಯಿಲ ಸಿಯಾರನ ಮಗ ವೈಯಣ್ಣನು 1330ರಲ್ಲಿ ಕೆರೆ ಕಟ್ಟಿಸಿದನು (ರೈಸ್ 1905, 9: ಹೊ–81). ಮುಗಬಾಳ ಗ್ರಾಮದಲ್ಲಿ ತಿರುಕುಂಜಿನಾಡ ಅಧೀಕ್ಷಕ (ನಾಡ ನಾಯಗನ್) ಅಮ್ಮೈನಾಯನ್‌ನು ಕೆರೆ ಮತ್ತು ತೂಬುಗಳನ್ನು ಮಾಡಿಸಿದನು (ರೈಸ್ 1905, 9: ಹೊ–96 (1334) ಮತ್ತು 97 (1331)). ದೇವಸೆಟ್ಟಿಹಳ್ಳಿಯಲ್ಲಿ ಮೈಯಿಲ ಗಾವುಂಡನ ಮಗ ವೈಚಣ್ಣ ಎಂಬಾತನು ಕೆರೆಯನ್ನು ಕಟ್ಟಿಸಿದನು (ರೈಸ್ 1905, 9: ಹೊ–140 ಎ (1331)). ಮಯಿಲೆನಾಯಕ ಮತ್ತು ಚನ್ನಯ ನಾಯಕರು ಪಶು, ಪಕ್ಷಿ ಮತ್ತು ಸಕಲ ಜೀವರಾಶಿಗಳಿಗಾಗಿ ಹಾಗೂ ಗಂಗಾದೇವಿಯ ಸೇವೆಯಾಗಿ 1340ರಲ್ಲಿ 3000 ಹೊನ್ನು ವೆಚ್ಚಮಾಡಿ ರಾಮಸಮುದ್ರ ಕೆರೆಯನ್ನು ಕಟ್ಟಿಸಿದರು. ಹೀಗೆ ರಾಜರು, ಅಧಿಕಾರಿಗಳು, ಜನಸಾಮಾನ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕೆರೆಗಳನ್ನು ಪುಣ್ಯ ಕಾರ್ಯವಾಗಿ ನಿರ್ಮಾಣ ಮಾಡಿಸಿದ್ದಾರೆ. ಆದ್ದರಿಂದ ಕೆರೆಗಳು ಇಂದಿಗೂ ಧಾರ್ಮಿಕ ಮಹತ್ವವನ್ನು ಹೊಂದಿವೆ. ಕೆರೆಗಳಲ್ಲಿ ಗಂಗೆಯ ಪೂಜೆ ಮತ್ತು ಬಾಗಿನ ಅರ್ಪಿಸುವ ಸಂಪ್ರದಾಯಗಳು, ಕೆರೆಗೆಹಾರದಂತಹ ಆಚರಣೆಗಳು (ಜಾನಪದ ಕಥೆಗಳಲ್ಲಿ) ಪ್ರಾಚೀನಕಾಲದಿಂದಲೂ ನಡೆದುಕೊಂಡು ಬರುತ್ತಿವೆ. ಧಾರ್ಮಿಕ ಮಹತ್ವದ ಹಿನ್ನೆಲೆಯಲ್ಲಿ ನಿರ್ಮಾಣವಾದ ಕೆರೆಗಳು ಆರ್ಥಿಕ ಮೂಲ ಸ್ವರೂಪವನ್ನು ಪಡೆದುಕೊಂಡವು. ಇದರಿಂದ ಕೃಷಿಯ ಏಳಿಗೆ ಮತ್ತು ಹೆಚ್ಚುವರಿ ಉತ್ಪಾದನೆಯಾಗಲಾರಂಭಿಸಿತು.

**ಕೃಷೀಕರಣದಿಂದ ವಾಣಿಜ್ಯೀಕರಣದೆಡೆಗೆ:** ಕೃಷಿಯ ಜೊತೆಗೆ ತೋಟಗಳು ಕೂಡ ಆರಂಭಗೊಂಡವು. 1299ರ ಶಾಸನವೊಂದರಲ್ಲಿ ದೇವಾಲಯದ ನಿತ್ಯಚಟುವಟಿಕೆಗಾಗಿ ಕೊಟ್ಟ ದೇವದಾನದಲ್ಲಿ ಗದ್ದೆ, ಹೊಲದ ಜೊತೆಗೆ ತೋಟವನ್ನು ಉಲ್ಲೇಖಿಸಿದೆ (ರೈಸ್ 1905, 9: ಕಾ–76). ಕೃಷಿಯಲ್ಲಿನ ತಂತ್ರಜ್ಞಾನ ಬಳಕೆ ಮತ್ತು ವೈವಿಧ್ಯ ಬೆಳೆಗಳ ಉತ್ಪಾಧನೆಯಲ್ಲಿಯೂ ಹೆಚ್ಚಳ ಉಂಟಾಯಿತು (Nandi 2000: 5 ಮತ್ತು 6ನೆಯ ಅಧ್ಯಾಯವನ್ನು ಗಮನಿಸಿ). ಅದರ ಜೊತೆಯಲ್ಲಿಯೇ ಮಗ್ಗಗಳಿಂದ ಬಟ್ಟೆ ಉತ್ಪಾದನೆ, ಉತ್ತಮ ತಳಿಯ ಹಸು ಸಾಕಾಣಿಕೆಯ ಮೂಲಕ ಹೈನು ಉತ್ಪಾದನೆ ನಡೆಯುತ್ತಿತ್ತೆಂಬ ಸುಳಿವು ಶಾಸನಗಳಲ್ಲಿ ಸಿಗುತ್ತದೆ (ರೈಸ್ 1905, 9: ನೆ–38). ಬಡಗಿ, ಕಮ್ಮಾರ, ಅಕ್ಕಸಾಲಿಗ ಮೊದಲಾದ ವೀರಪಾಂಚಾಲ ವೃತ್ತಿ ಜಾತಿಯ ಜನರು ಉತ್ಪಾದನೆಯಲ್ಲಿ ಸಕ್ರಿಯರಾಗಿದ್ದರು. (ರೈಸ್ 1905, 9: ದೊ.ಬ–52 (1306), ಮಾ–15 (1315)). ಇದರಿಂದ ಸ್ಥಳಿಯವಾಗಿ ಸಂತೆ, ಪೇಟೆ, ಪಟ್ಟಣ, ವ್ಯಾಪಾರಿ ಸಂಘಗಳ ಬೆಳವಣಿಗೆಯಾಯಿತು. ಹೀಗೆ ವಾಣಿಜ್ಯೀಕರಣಗೊಂಡು ನಗರೀಕರಣದ ಪ್ರಕ್ರಿಯೆಗೆ ದೊಡ್ಡ ಮಟ್ಟದ ಚಾಲನೆ ದೊರೆಯಿತು. ಇದಕ್ಕೆ ಪೂರಕವಾಗಿ ರಸ್ತೆಗಳ ನಿರ್ಮಾಣಗಳಾಗಿವೆಯಾದರೂ ಶಾಸನಗಳಲ್ಲಿ ಅವುಗಳ ಮಾಹಿತಿಯ ಕೊರತೆ ಇದೆ. ಸಾವಂದಿ (ಸಾವನದುರ್ಗಕ್ಕೆ ಹೊಗುವ) ರಸ್ತೆಯು ಶಾಸನವೊಂದರಲ್ಲಿ ಉಲ್ಲೇಖವಾಗಿದೆ. ನಾಡ ಒಳಗೆ ಆಂತರಿಕವಾಗಿ ಉಂಟಾದ ಆರ್ಥಿಕ ಬದಲಾವಣೆಗೆ ಸಮನಾಂತರವಾಗಿ ಹೊರಜಗತ್ತಿನಲ್ಲಿ ನಡೆಯುತ್ತಿದ್ದ ಆರ್ಥಿಕ ಚಟುವಟಿಕೆಗಳು ಪೂರಕವಾಗಿ ಸ್ಪಂದಿಸಿದವು.





**ವಾಣಿಜ್ಯೀಕರಣದಿಂದ ನಗರೀಕರಣದೆಡೆಗೆ:** ಕೃಷಿಯಲ್ಲಿನ ಹೆಚ್ಚುವರಿ ಉತ್ಪಾದನೆಯು ಮಧ್ಯಕಾಲೀನ ಕರ್ನಾಟಕದಲ್ಲಿ ಸಂತೆ, ಪೇಟೆ, ಪಟ್ಟಣಗಳು ವಿಕಾಸಗೊಂಡು ನಗರೀಕರಣ ಪ್ರಕ್ರಿಯೆಗೆ ಪ್ರೇರಣೆ ನೀಡಿತು. 1316ರ ಶಾಸನದಲ್ಲಿ ಸಿಂಗಯ ದಂಡನಾಯಕನ ನಿಷ್ಠಾವಂತನಾದ ಮಾಚೆಯ ನಾಯಕ ಮತ್ತು ಹೊಮ್ಮಳಿಗೆನಾಡ ಜನರು ಹಾಗೂ ಚೊಕ್ಕನಾಡ ಸಮಸ್ತ ರೈತರು 'ಗಾಳಿಹಾಳು'ನಲ್ಲಿ ಸಂತೆಯನ್ನು ಸ್ಥಾಪಿಸಿದ ಪಟ್ಟಣಸ್ವಾಮಿಯಾದ ನಾಗಪ್ಪನ ಮಗ ಚೊಕ್ಕಸೆಟ್ಟಿಗೆ ಭೂಮಿಯನ್ನು ಕೊಡಿಗೆ ನೀಡಿದರು (ರೈಸ್ 1905, 9: ಕಾ–6). ಅದೇ ರೀತಿ 1332ರ ಹೂಡಿ ಶಾಸನದಲ್ಲಿ ವಿವಿಧ ನಾಯಕರು ಹಾಗೂ ತೊರವಳಿನಾಡ ಎಲ್ಲ ಪ್ರಭುಗೌಡರು ಸೇರಿ ಮುಕುತಿಸೆಟ್ಟಿಗೆ ಚಿಕ್ಕಹೂಡಿಯ ಪಟ್ಟಣಸ್ವಾಮಿಯಾಗಿ ಸಂತೆಯನ್ನು ಕಟ್ಟುವುದಕ್ಕೆ ಕೆರೆಗಳ ಹಿಂದಿನ ಅಪಾರ ಭೂಮಿಯನ್ನು ಕೊಡುಗೆಯಾಗಿ ನೀಡಿದರಲ್ಲದೆ ಪಟ್ಟಣಕೇರಿಯಲ್ಲಿ ವಸೂಲಿ ಮಾಡುವ ದಂಡವನ್ನು ಅವನಿಗೆ ಬಿಟ್ಟುಕೊಡುತ್ತಾರೆ (ರೈಸ್ 1905, 9: ಬೆಂ–61). ಚನ್ನಮಾನಹಳ್ಳಿಯ 1319ರ ಶಾಸನದಲ್ಲಿ ಹಳ್ಳಿಯನ್ನು ಗುಡಿಸಿ ಪಟ್ಟಣವನ್ನು ಮಾಡಿ, ಸಂತೆಯನ್ನು ಕಟ್ಟಿಸುವ ಸಂಗತಿಯ ಜೊತೆಗೆ ತೆರಿಗೆಯ ಪ್ರಸ್ತಾಪವನ್ನು ಮಾಡಿದೆ (ರೈಸ್ 1905, 9: ಚ–12). ಇದೇ ಕಾಲದ ಮತ್ತೊಂದು ಶಾಸನದಲ್ಲಿ ಸೋಮಯ ದಂಡನಾಯಕನು ಜೋಗೈ ಅಕ್ಕಲಾಡುವಿನ ಪಟ್ಟಣಸ್ವಾಮಿ ಪಾರೆಪ ಸೆಟ್ಟಿಗೆ ಕೊಡಿಗೆ ನೀಡಿದ ಬಗ್ಗೆ ತಿಳಿಸುತ್ತದೆ (ರೈಸ್ 1905, 9: ಕಾ–69). ಈ ಕಾಲದಲ್ಲಿ ದೊಡ್ಡಬಳ್ಳಾಪುರ ಪ್ರಮುಖ ಪೇಟೆಯಾಗಿ 'ಬಲ್ಲಾಳಪುರ' ಎಂಬ ಮೂಲ ಹೆಸರು ಪಡೆದಿತ್ತು (ಶೇಷಗಿರಿ ರಾವ್ 2005:9). ಅದೇ ರೀತಿ ದೊಮ್ಮಲೂರನ್ನು 'ದೇಶಿ ಮಾಣಿಕ್ಯ ಪಟ್ಟಣ' ಎಂದು ಕರೆಯಲಾಗುತ್ತಿತ್ತು (ರೈಸ್ 1905, 9: ಬೆಂ–10 (1266)). ಬಹುಶಃ ಆ ಕಾಲಕ್ಕೆ ದೊಮ್ಮಲೂರು ಕೂಡ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದಂತೆ ತೋರುತ್ತದೆ. ಹೀಗೆ ಗ್ರಾಮ ನಿರ್ಮಾಣದ ಜೊತೆಗೆ, ಸಂತೆ, ಪೇಟೆ, ಪಟ್ಟಣಗಳ ಬೆಳವಣಿಗೆ ಕಂಡಂತೆ ನಗರಗಳು ರೂಪುಗೊಳ್ಳತೊಡಗಿದವು. ಇದರೊಂದಿಗೆ ವ್ಯಾಪಾರಿ ಸಂಘಗಳು, ವರ್ತಕ ಸಮುದಾಯಗಳು ತಲೆ ಎತ್ತಿ ದೂರದ ಊರುಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಬೆಸೆದುಕೊಳ್ಳತೊಡಗಿದವು. ಹೊರಗಿನ ವ್ಯಾಪಾರಿಗಳು, ವರ್ತಕ ಸಂಘಗಳು ಬೆಂಗಳೂರಿನ ಪರಿಸರಕ್ಕೂ ಆಗಮಿಸತೊಡಗಿದರು. ಅವುಗಳಲ್ಲಿ ನಾನಾದೇಸಿ ಎಂಬ ಕೇರಳದ ವ್ಯಾಪಾರಿ ಸಂಘ ಕೂಡ ಒಂದು. ನಾನಾದೇಸಿ ಎಂದರೆ ಹೊರಗಿನಿಂದ ಆಗಮಿಸಿದ ವ್ಯಾಪಾರಿ ಶ್ರೇಣಿಯಾಗಿದೆ (Sircar 1966:211). 1288ರ ನಿಟ್ಟೂರಿನ ಶಾಸನದಲ್ಲಿ ಮಹಾ ವಡ್ಡವ್ಯಾಪಾರಿ, ಉಭಯ ನಾನಾದೇಶಿ, ಮಲಯಾಳ ಮುಖ್ಯಸ್ಥನಾದ ವಾಸುದೇವ ನಾಯಕನು ಕಿಳಲೈನಾಡಿನ ನೆಟ್ಟೂರಿನಲ್ಲಿ ಅಂಕನಾಥೇಶ್ವರ ದೇವಾಲಯದ ವಿಮಾನವನ್ನು ಜೀರ್ಣೋದ್ಧಾರ ಮಾಡಿಸಿದನು. ಅಲ್ಲದೆ ಚಿನ್ನದ ನಾಣ್ಯಗಳನ್ನು ಕೊಟ್ಟು ಭೂಮಿಯನ್ನು ಖರೀದಿಸಿ ದೇವರಿಗೆ ದತ್ತಿಬಿಟ್ಟನು ಮತ್ತು ಹಲವು ಕೊಡುಗೆಗಳನ್ನು ನೀಡಿದನು (ರೈಸ್ 1905, 9: ಕಾ–77). ಇದೇ ವಾಸುದೇವ ನಾಯಕನ ಮಗ ನಾರಣ್ಣ ನಾಯಕನು 1299ರಲ್ಲಿ ಇದೇ ಅಂಕನಾಥದೇವರಿಗೆ ಗದ್ದೆ, ಹೊಲ, ತೋಟವನ್ನು ದೇವದಾನವಾಗಿ ಕೊಟ್ಟನು (ರೈಸ್ 1905, 9: ಕಾ–76). 1219ರ ವಡ್ಡರಹಳ್ಳಿ ಶಾಸನದಲ್ಲಿ ಮಹಾವಡ್ಡವ್ಯವಹಾರಿ ಉಭಯ ನಾನಾದೇಸಿಯರಿಗೆ ಮುಖ್ಯನಾದ ಬಾನವಾಡಿಯ ಕಲಿನಾತಸೆಟ್ಟಿ, ಬಲ್ಲಾಳಸೆಟ್ಟಿಯ ಬೊಮ್ಮಣ ಮೊದಲಾದ ಪ್ರಜೆಗೌಡುಗಳ ಪುರಪತಿಗಳು (ಪುರಪತಿ ಎಂಬುದು ಪಟ್ಟಣ ಮುಖ್ಯಸ್ಥ ಅಥವಾ ಪಟ್ಟಣ ಸ್ವಾಮಿಯನ್ನು ಸೂಚಿಸುತ್ತದೆ) ಚಿಕ್ಕನಾರಣಗವುಡನಿಗೆ ಮಲಾಸಮುದ್ರವನ್ನು

ಕೊಡುಗೆ ನೀಡಿದ ಬಗ್ಗೆ ತಿಳಿಸುತ್ತದೆ (ರೈಸ್ 1905, 9: ಮಾ–78). 1267ರ ಶಾಸನದಲ್ಲಿ ಐಹೊಳೆಯ ಅಯ್ಯೂರ್ಬ್ಬ ಸ್ವಾಮಿಗಳು ಮತ್ತು ನಾನಾದೇಶಿ ಬಲ್ಲಾಳಸೆಟ್ಟಿ ಗವರೇಶ್ವರ ದೇವರ ಸೇವೆಗೆ ವಿವಿಧ ಕಾಣಿಕೆ ನೀಡಿದರು (ರೈಸ್ 1905, 9: ದೊ.ಬ–31). ಈ ನಾನಾದೇಶಿಗಳ ವ್ಯಾಪಾರ ಚಟುವಟಿಕೆ ಅಂದಿನ ಸಮಾಜದ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿತೆಂದರೆ ಮಾಗೇನಹಳ್ಳಿಯನ್ನು ನಾನಾದೇಶಿ ಪಟ್ಟಣವಾಗಿ ಸಂತೆಯನ್ನು ಕಟ್ಟಬೇಕು ಎಂದು ಅಪೇಕ್ಷಿಸುವುದನ್ನು ಕಾಣಬಹುದು (ರೈಸ್ 1905, 9: ಚ–73, (1318)). ಇದರಿಂದಾಗಿ ಬೆಂಗಳೂರು ಪರಿಸರವು ಪ್ರಮುಖ ವ್ಯಾಪಾರ ಚಟುವಟಿಕೆಯ ಕೇಂದ್ರವಾಗಿ 13–14ನೇ ಶತಮಾನದ ಹೊತ್ತಿಗೆ ಹೊರಹೊಮ್ಮುತ್ತಿತ್ತು. ಈ ನಾನಾದೇಶಿಗಳು ಅಂಕನಾಥೇಶ್ವರ, ಗವರೇಶ್ವರ ದೇವರುಗಳಿಗೆ ಕೊಟ್ಟಿರುವ ದಾನದತ್ತಿಗಳನ್ನು ಗಮನಿಸಿದರೆ ಕಾಳಾಮುಖ ಪಂಥದೊಂದಿಗೆ ಸಂಬಂಧ ಹೊಂದಿದ್ದರೆಂದು ಊಹಿಸಲು ಸಾಧ್ಯವಿದೆ. ಕಾಳಾಮುಖ ಪಂಥದ ಆಚಾರ್ಯರಲ್ಲಿ ಕೇರಳದಿಂದ ಬಂದ ದೊಡ್ಡ ಮಲಯಾಳಪಂಡಿತನು ಅಂದಿನ ರಾಜಕೀಯ ವಿದ್ಯಮಾನಗಳ ಮೇಲೆ ದೊಡ್ಡ ಪ್ರಭಾವ ಬೀರಲು ಯಶಸ್ವಿಯಾಗಿದ್ದನು (ಮನು 1999:69). ಬೆಂಗಳೂರು ಪರಿಸರದ ಮೊದಲ ತೆಲುಗು ಶಾಸನವಾದ 1366ರ ಕ್ಯಾಲಸನಹಳ್ಳಿ ಶಾಸನದಲ್ಲಿ ಗುಂಡಪಲ್ಲಿಯ ಮಹಾವಡ್ಡವ್ಯವಹಾರಿ ಬಸವಸೆಟ್ಟಿಯ ಮಗ ನಾರಪಸೆಟ್ಟಿಯ ಹೆಂಡತಿ ನಾಗಸಾನಿಯು ಕೆರೆಯನ್ನು ಕಟ್ಟಿಸಿದಳು (ರೈಸ್ 1905, 9: ಬೆಂ–56). ತೆಲುಗಿನಲ್ಲಿರುವ ಈ ಶಾಸನದಿಂದ ಇವರು ತೆಲುಗು ಮೂಲದವರೆಂದು ಊಹಿಸಬಹುದು. ಒಟ್ಟಾರೆ ಮಲಯ, ತೆಲುಗು ಭಾಗಗಳ ವ್ಯಾಪಾರಿಗಳು ಬೆಂಗಳೂರಿನ ಪರಿಸರದಲ್ಲಿ ತಮ್ಮ ವ್ಯಾಪಾರ ಚಟುವಟಿಕೆಯ ಜೊತೆಗೆ ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದರು. ವ್ಯಾಪಾರಿ ಸಮುದಾಯಗಳು ಮತ್ತು ಧಾರ್ಮಿಕ ಗುರುಗಳು ಕೂಡ ಅಂದಿನ ರಾಜಕೀಯ ವಿದ್ಯಮಾನಗಳ ಮೇಲೆ ಪ್ರಭಾವಬೀರಬಲ್ಲವರಾಗಿದ್ದರು.

**ರಕ್ಷಣ ವ್ಯವಸ್ಥೆಯಲ್ಲಿನ ಬದಲಾವಣೆಗಳು:** ವ್ಯಾಪಾರ ಜಾಲ ವಿಸ್ತರಿಸಿದಂತೆ ಮತ್ತು ಪೇಟೆ ಪಟ್ಟಣಗಳು ಸಂಪತ್ತಿನ ಸಂಚಯನ ಕೇಂದ್ರಗಳಾಗತೊಡಗಿದವು. ಇದರಿಂದ ಕಳ್ಳಕಾಕರಿಂದ ರಸ್ತೆ ದರೋಡೆ, ಗ್ರಾಮ, ಪಟ್ಟಣಗಳ ಮೇಲೆ ಆಕ್ರಮಣಗಳು 12ನೇ ಶತಮಾನದ ಹೊತ್ತಿಗೆ ತೀವ್ರಗೊಳ್ಳತೊಡಗಿದವು. ಕೇವಲ ಕಳ್ಳಕಾಕರಲ್ಲದೆ, ಆಳುವವರಿಂದಲೂ ಬೇರೆ ರಾಜ್ಯ, ಪಟ್ಟಣಗಳ ಮೇಲೆ ದಾಳಿಗಳು ನಡೆಯುತ್ತಿದ್ದವು. ಮೂರನೇ ಬಲ್ಲಾಳನ ಕಾಲದಲ್ಲಿ ದೋರಸಮುದ್ರದ ಮೇಲೆ ದೆಹಲಿ ಸುಲ್ತಾನರು ಆಕ್ರಮಣ ಮಾಡಿದ್ದನ್ನು ಸ್ಮರಿಸಬಹುದು. 966ರ ಶಾಸನವೊಂದರ ಪ್ರಕಾರ (ರೈಸ್ 1905, 9: ಮಾ–75) ಪಟ್ಟಣವು ಲೂಟಿಗೆ ಒಳಗಾದಾಗ ಮಣ್ಣೆನಾಡು–300ರ ನಾಳ್ಗಾವುಂಡನಾದ ಗಂಗಗಚ್ಚಿಯ ಹಿರಿಯ ಮಗ 'ದಡಿಗ'ನು ಶತೃಗಳ ವಿರುದ್ಧ ಪ್ರಯಾಸದ ಗೆಲುವು ಪಡೆದು ಸತ್ತನು. 1156ರಲ್ಲಿ ಕುಕ್ಕಲ ನಾಡಳ್ವರ್ ರಾಜ್ಯದ ಪೆರ್ಗಡಿ (ಅಧಿಕಾರಿ)ಯಾದ ಅಚ್ಚಲಯ್ಯನ್ ಎಂಬಾತನು ತಿಪ್ಪೂರು ಪಟ್ಟಣದ ಮೇಲೆ ಶತೃಗಳು ಧಾಳಿಮಾಡಿದಾಗ ಪಟ್ಟಣವನ್ನು ರಕ್ಷಿಸಿ ಹಲವರನ್ನು ಕೊಂದನು (ರೈಸ್ 1905, 9: ಬೆಂ–112). ಕೈವಾರನಾಡಿನಲ್ಲಿ ಚೋಳಮಾರಸಿಂಗತೂರು (ನಂದಗುಡಿ–ಹೋ. ಸಿದ್ಧನಹಳ್ಳಿ) ಒಂದು ಪಟ್ಟಣವಾಗಿತ್ತು. ಆ ಪಟ್ಟಣದ ಮೇಲೆ ಶತೃಗಳೂ ಧಾಳಿ ಮಾಡಿದಾಗ ಮಾಚ್ಚಗಾಮುಂಡನ ಅಂಕಕಾರ (ಯೋಧ) ಸಾಮಗನ್ ಎಂಬಾತನು ಶತೃಗಳ ವಿರುದ್ಧ ಹೋರಾಡಿ ಮಡಿದನು (ರೈಸ್ 1905, 9: ಹೊ–18). 1294ರ ದೊಡ್ಡಗಂಗವಾಡಿ ಶಾಸನದಲ್ಲಿ ರಾಮನಾಥನ ಸೇನೆಯು ಊರೊಳಗೆ ನುಗ್ಗಿದಾಗ





ಬಲಹರಿಗೌಡನ ಮಗ ಕೇತಣ್ಣನು ಶತೃಗಳನ್ನು ಇರಿದು ಸತ್ತನು (ರೈಸ್ 1905, 9: ಚ–183). 1340ರ ಶಾಸನವೊಂದರಲ್ಲಿ ಮಾಡಂಬಾಳ ದಂತ್ತಿಸೆಟ್ಟಿಯ ಮಗ ಅಲಪ್ಪನು ಸಾವಂದಿಯ ದಾರಿಯಲ್ಲಿ ಕಳ್ಳರೊಂದಿಗೆ ಕಾದಾಡಿ ಸತ್ತನು (ರೈಸ್ 1905, 9: ಮಾ–13). ಇವೆಲ್ಲವುಗಳ ಹಿನ್ನೆಲೆಯಲ್ಲಿ ಹನ್ನೊಂದನೆಯ ಶತಮಾನದಿಂದ ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸಬಲ್ಲ ಸೈನಿಕ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದ ಬದಲಾವಣೆಗಳನ್ನು ಗುರುತಿಸಬಹುದು. ಕೋಟೆಗಳಿಗೆ ದೊರೆತ ಮಹತ್ವ ಮತ್ತು ಸೇನೆಯಲ್ಲಿ ಕುದುರೆಗಳು ಪಡೆದುಕೊಂಡ ಪ್ರಾಮುಖ್ಯತೆ ಹಾಗೂ ಸೇನೆಯೊಳಗೆ ಬುಡಕಟ್ಟು ಸಮುದಾಯ ಮತ್ತು ವ್ಯಾಪಾರ ಸಮುದಾಯದ ಸಕ್ರಿಯತೆಯೇ ಆ ಬದಲಾವಣೆಗಳಾಗಿವೆ.

**ಕೋಟೆಗಳು:** ಜೀವ ಮತ್ತು ಸಂಪತ್ತಿನ ರಕ್ಷಣೆಯ ದೃಷ್ಟಿಯಿಂದ ಕೋಟೆಗಳ ಅವಶ್ಯಕತೆ ಸಹಜವಾಗಿಯೆ ತೋರಿತು. ಇದರಿಂದ ಅಲ್ಲಲ್ಲಿ ಕೋಟೆಗಳು ಈ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣಗೊಂಡಂತೆ ಕಾಣುತ್ತದೆ. ಇವು ಸಹಜವಾಗಿ ಬೆಂಗಳೂರು ಪರಿಸರದ ಶಾಸನಗಳಲ್ಲಿಯೂ ಉಲ್ಲೇಖಗೊಂಡಿವೆ. 1169ರ ಕರ್ಲಮಂಗಲದ ಶಾಸನವು ಕೋಟೆಯ ಮೇಲೆ ನಡೆದ ದಾಳಿಯನ್ನು ಉಲ್ಲೇಖಿಸುತ್ತದೆ (ರೈಸ್ 1905, 9: ಮಾ–14). 1304ರ ಶಾಸನದಲ್ಲಿ ನಾಕ್ಕಿಗುಂಡಿ (ದೊಡ್ಡ ನಕ್ಕುಂಡಿ)ಯಲ್ಲಿ ಕೋಟೆ ಇದ್ದ ಬಗ್ಗೆ ತಿಳಿದು ಬರುತ್ತದೆ. ಈ ಕೋಟೆಯನ್ನು ನಾಶಪಡಿಸಿ ಮೂರನೇ ಬಲ್ಲಾಳನು ಜಯಸಾಧಿಸಿದನು (ರೈಸ್ 1905, 9: ಬೆಂ–53). 1340ರ ಅಲ್ಲಾಳಸಂದ್ರದ ಶಾಸನದಿಂದ ಹಾರಮರವೂರಲ್ಲಿ ಕೋಟೆಯಿತ್ತೆಂದು ತಿಳಿಯುತ್ತದೆ (ರೈಸ್ 1905, 9: ಬೆಂ–31). 1369ರ ಚಿಕ್ಕನಲ್ಲಾಲ ಗ್ರಾಮದ ಶಾಸನದಲ್ಲಿ (ರೈಸ್ 1905, 9: ಹೊ–103) ವಯಿಂಜನ್ ಎಂಬಾತನು ಶತೃಗಳು ಕೋಟೆಗೆ ಲಗ್ಗೆ ಇಟ್ಟಾಗ ಅವರೊಡನೆ ಹೋರಾಡಿ ಗಾಯಗೊಂಡು ಸತ್ತನೆಂದು ತಿಳಿಸುತ್ತದೆ. ಈ ಕೋಟೆಗಳು ಪ್ರಮುಖವಾಗಿ ಎರಡು ಕಾರಣಗಳಿಂದ ಅಸ್ತಿತ್ವಕ್ಕೆ ಬರಲಾರಂಭಿಸಿದವು. ಒಂದು– ಹೆಚ್ಚುತ್ತಿದ್ದ ವ್ಯಾಪಾರ ವಹಿವಾಟಿನಿಂದ ಹೆಚ್ಚಿನ ಸುಂಕ ಸಂಗ್ರಹವಾಗತೊಡಗಿದಾಗ, ವಸ್ತು ಅಥವಾ ಧಾನ್ಯರೂಪದ ಸುಂಕಗಳನ್ನು ಸಂಗ್ರಹಿಸಿಡಲು ಕೋಟೆಗಳು ಬೇಕಾಗಿತ್ತು ಮತ್ತು ಸುಂಕಕ್ಕೆ ಪ್ರತಿಯಾಗಿ ಕಳ್ಳಕಾಕರಿಂದ ವ್ಯಾಪಾರಿಗಳಿಗೆ ರಕ್ಷಣೆಯನ್ನು ಪ್ರಭುತ್ವ ನೀಡಬೇಕಾಗಿತ್ತು (ಸಂಗ್ರಹವಾದ ಸುಂಕರೂಪದ ಧಾನ್ಯ ಮತ್ತು ವಸ್ತುಗಳನ್ನು ಮಾರಾಟಮಾಡಲು ಕೋಟೆಗಳ ಸಮೀಪದಲ್ಲಿಯೇ ವಾರದ ಸಂತೆ ಅಥವಾ ಪೇಟೆಗಳು ಆರಂಭಗೊಂಡವು). ಎರಡು– ವ್ಯಾಪಾರ ಮತ್ತು ವಾಣಿಜ್ಯದ ಪ್ರವರ್ಧಮಾನದಿಂದ ಆಕ್ರಮಣಗಳು ದಾಳಿಗಳು ಹೆಚ್ಚಿದಂತೆ ರಕ್ಷಣೆಯ ಅವಶ್ಯಕತೆಯೂ ಹೆಚ್ಚತೊಡಗಿ ಪೇಟೆ, ಪಟ್ಟಣಗಳಿಗೆ ಕೋಟೆಯ ಅವಶ್ಯಕತೆ ಉಂಟಾಯಿತು. ಅಲ್ಲದೆ ರಕ್ಷಣೆಯ ದೃಷ್ಟಿಯಿಂದ ಸೇನೆಯ ಠಾಣ್ಯಗಳಿಗೆ ಶಾಶ್ವತವಾದ ನೆಲೆಯನ್ನು ಕಲ್ಪಿಸಲು ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಯನ್ನು ಕಟ್ಟಲಾರಂಭಿಸಿದರು. ಮಾಗಡಿಯಿಂದ ಬೆಂಗಳೂರಿಗೆ ಬರುವ ಹಳೆಮಾರ್ಗ ಎನ್ನಲಾಗುವ ಮಾಗಡಿ ರಸ್ತೆಯಲ್ಲಿ ಸುಂಕದಕಟ್ಟೆ ಎಂಬ ಸ್ಥಳವಿದ್ದು, ಹೆಸರೇ ಸೂಚಿಸುವಂತೆ ಅದು ಒಂದು ಕಾಲದ ಸುಂಕ ಸಂಗ್ರಹದ ಠಾಣವಾಗಿರಬಹುದು.

**ಕುದುರೆಗಳ ಪ್ರಾಮುಖ್ಯತೆ:** ಈ ವೇಳೆಗೆ ಅಂತಾರಾಷ್ಟ್ರೀಯ ವಾಣಿಜ್ಯದಲ್ಲಿ ಪರ್ಷಿಯನ್ನರು ಮತ್ತು ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರು. ಅರೇಬಿಯಾದ ಯುದ್ಧಕುದುರೆಗಳಿಗೆ ಪೂರ್ವದೇಶಗಳಲ್ಲಿ ಅಪಾರ ಬೇಡಿಕೆಯಿದ್ದಿತು (ಜಯಪ್ಪಗೌಡ 1983:196). ನಿಧಾನವಾಗಿ ಅರಬರ ಚಟುವಟಿಕೆಗಳು ವಿಸ್ತರಿಸಿದಂತೆ ಒಳನಾಡಿನಲ್ಲಿಯೂ ವ್ಯಾಪಾರ ಮತ್ತು ಕೃಷಿ



ಚಿತ್ರ–1



ಚಿತ್ರ–2

**ಕ್ರಿ.ಶ. 890ರ ಬೇಗೂರು (ಚಿತ್ರ–1) ವೀರಗಲ್ಲಿನಲ್ಲಿ ಕುದುರೆ ಸವಾರರ ಶಿಲ್ಪದಲ್ಲಿ ರಿಕಾಪು ಇಲ್ಲದಿರುವುದನ್ನು ಹಾಗೂ ಕ್ರಿ.ಶ. 12ನೆಯ ಶತಮಾನದ (ಚಿತ್ರ–2) ನಾಗಲಾಪುರದ ಶಿಲ್ಪದಲ್ಲಿ ರಿಕಾಪು ಬಳಕೆಗೊಂಡಿರುವುದನ್ನು ಗಮನಿಸಬಹುದು.**

ಚಟುವಟಿಕೆಗಳು ಗರಿಗೆದರಲು ಬಾಹ್ಯ ಪ್ರೇರಣೆನೀಡಿತು. ಆರ್ಥಿಕವಾಗಿ ಚಲನಶೀಲವಾದ ಈ ಕಾಲಘಟ್ಟದಲ್ಲಿ ಸೈನಿಕವಾಗಿಯೂ ಸುಧಾರಣೆ ಅವಶ್ಯವಾಗಿತ್ತು. ಆವರೆಗೂ ಯುದ್ಧಗಳಲ್ಲಿ ಆನೆಗಳು ಬಹುಮುಖ್ಯ ಪಾತ್ರವಹಿಸುತ್ತಿದ್ದವು. ಆದ್ದರಿಂದ ಯುದ್ಧದಲ್ಲಿ ಶತ್ರುಗಳ ಆನೆಗಳನ್ನೂ ಕೂಡ ವಶಪಡಿಸಿಕೊಳ್ಳುತ್ತಿದ್ದರು. 992ರಲ್ಲಿ ರಾಜರಾಜ ಚೋಳನಿಗೂ ಕಲ್ಯಾಣ ಚಾಲುಕ್ಯ ದೊರೆ ಇಮ್ಮಡಿ ತೈಲಪನಿಗೂ ನಡೆದ ಯುದ್ಧದಲ್ಲಿ ಜಯಶೀಲನಾದ ತೈಲಪನು ರಾಜರಾಜನ 150 ಆನೆಗಳನ್ನು ವಶಪಡಿಸಿಕೊಂಡುದನು ಸ್ಮರಿಸಬಹುದು (Nilakanta sastri 2000:175). ಪ್ರಾಚೀನ ಕಾಲದಿಂದಲೂ ಕುದುರೆಗಳು ಕೂಡ ಸೇನೆಯಲ್ಲಿ ಇದ್ದವಾದರೂ ಆನೆಗಳಿಗಿದ್ದ ಪ್ರಾಮುಖ್ಯತೆ ಅವುಗಳಿಗಿರಲಿಲ್ಲ. ಮಲೆನಾಡಿನಲ್ಲಿದ್ದ ಹೊಯ್ಸಳರಿಗೆ ಕರಾವಳಿಯ ತೀರದ ವ್ಯಾಪಾರ ವ್ಯವಹಾರ ಕೂಡ ದಕ್ಕಿತು. ಅರಬ್ಬರ ಸಂಪರ್ಕದಿಂದ ಅವರ ಸೇನೆಗೆ ಉತ್ತಮ ಕುದುರೆಗಳು ಸೇರ್ಪಡೆಗೊಂಡವು. ಆನೆ ಮತ್ತು ಕುದುರೆಗಳ ಸಮನ್ವಯದಿಂದ ಕೂಡಿದ ಸೇನೆ ಅವರದಾಗಿತ್ತು. ದೇವಾಲಯಗಳ ಭಿತ್ತಿಯ ಮೇಲೆ ಕೂಡ 11ನೆಯ ಶತಮಾನಕ್ಕೆ ಮೊದಲು ಕುದುರೆಗಳ ಸಾಲುಗಳು ಕಂಡುಬರುವುದಿಲ್ಲ. ವಿಶೇಷವಾಗಿ ಹೊಯ್ಸಳ ಕಾಲದ ದೇವಾಲಯದ ಭಿತ್ತಿಯ ಮೇಲೆ ಈ ಯುದ್ಧ ಕುದುರೆಗಳ ಸಾಲುಗಳನ್ನು ಕಾಣಬಹುದು. ಕುದುರೆಗಳಿಗೆ ಮಹತ್ವ ದೊರೆಯಲು ಕೆಲವು ಕಾರಣಗಳಿವೆ. ಆನೆಗಳ ನಿರ್ವಹಣೆಗಿಂತ ಕುದುರೆಗಳ ನಿರ್ವಹಣೆ ಸುಲಭವಾಗಿತ್ತು. ಅಲ್ಲದೆ ಕುದುರೆಯ ಸವಾರಿಯಲ್ಲಿ ಉಂಟಾದ





ತಾಂತ್ರಿಕವಾದ ಪ್ರಗತಿಯೊಂದು ಕುದುರೆಗಳಿಗೆ ಹೆಚ್ಚಿನ ಮಹತ್ವ ತಂದುಕೊಟ್ಟಿತು. ಅದೇನೆಂದರೆ ಕುದುರೆಯನ್ನು ಏರಿ ಭದ್ರವಾಗಿ ಕುಳಿತು ಭಾರವಾದ ಆಯುಧವನ್ನು ಹಿಡಿದು ಯೋಧನು ಕಾದಾಡಲು ಅನುಕೂಲಕರವಾದ ಕಬ್ಬಿಣದ ರಿಕಾಪು (Iron stirrup)ಗಳ ಬಳಕೆ. ಕ್ರಿ.ಶ890ರ ಬೇಗೂರು ಶಾಸನದಲ್ಲಿ (ರೈಸ್ 1905, 9: ಬೆಂ–83) ರಣಾಂಗಣದ ದೃಶ್ಯವನ್ನು ಆಕರ್ಷಕವಾಗಿ ಚಿತ್ರಿಸಿದ್ದು, ಇದೊಂದು ಶಿಲ್ಪಕಾವ್ಯವಾಗಿದೆ. ಪ್ರಸ್ತುತ ಬೆಂಗಳೂರು ಮ್ಯೂಸಿಯಂನಲ್ಲಿರುವ ಈ ಶಾಸನದ ಬಲಭಾಗದಲ್ಲಿ ವೀರನೊಬ್ಬ ಕುದುರೆಯ ಮೇಲೆಕುಳಿತು ಕಾದಾಡುತ್ತಿದ್ದಾನೆ. ಸುಂದರವಾಗಿಯೂ, ಸ್ಪಷ್ಟವಾಗಿಯೂ ಕಾಣುವ ಈ ಶಿಲ್ಪಶಾಸನದಲ್ಲಿ ಕುದುರೆಯ ಮೇಲೆ ಕುಳಿತಿರುವ ವ್ಯಕ್ತಿ ರಿಕಾಪು ಬಳಸಿರುವ ಕುರಿತು ಯಾವ ಸುಳಿವು ಗೋಚರಿಸುವುದಿಲ್ಲ. ಆದರೆ ಹೊಯ್ಸಳರ ಕಾಲಕ್ಕೆ ಬಂದಾಗ ಅವರ ದೇವಾಲಯದ ಭಿತ್ತಿಯ ಮೇಲಿನ ಕುದುರೆ ಸವಾರರ ಶಿಲ್ಪಗಳಲ್ಲಿ ರಿಕಾಪು ಬಳಸಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದರಿಂದಾಗಿ ತೂಕವಾಗಿರುವ ಭರ್ಜಿಯಂತಹ ಉದ್ದವಾದ ಆಯುಧವನ್ನು ಹಿಡಿದು ಹೋರಾಟ ಮಾಡುವಾಗಲೂ ಸಮತೋಲನ ತಪ್ಪದೇ ಸ್ಥಿರವಾಗಿ ಕೂರಲು ಸಾಧ್ಯವಾಯಿತು. ಇದನ್ನು ಕುರಿತು ಸತೀಶ್‌ಚಂದ್ರ ಅವರು ಪೂರ್ವ ಏಷ್ಯಾದಲ್ಲಿ ಮಾಡಿದ ಈ ರಿಕಾಪುಗಳ ಶೋಧ 10ನೇ ಶತಮಾನದ ನಂತರ ಭಾರತದಲ್ಲಿ ಪ್ರಸಾರಗೊಂಡಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ (Satish Chandra 2009:4). ಇದರಿಂದ ಕುದುರೆಗೆ ಹೆಚ್ಚಿನ ಮಹತ್ವ ಬಂದಿತು. ಹೀಗೆ ಕುದುರೆಗಳ ಧನಾತ್ಮಕ ಅಂಶಗಳ ಜೊತೆಗೆ ಆನೆಗಳ ಋಣಾತ್ಮಕ ಅಂಶಕೂಡ ಕುದುರೆಯ ಮಹತ್ವವನ್ನು ಹೆಚ್ಚಿಸಿತು. ಸಿಡಿಮದ್ದಿನ ಪ್ರಯೋಗಗಳು ಯುದ್ಧದಲ್ಲಿ ಬಳಕೆಗೆ ಬರುವವರೆಗೂ ಶತ್ರುಪಾಳಯಕ್ಕೆ ಅಪಾಯಕಾರಿಯಾಗಿ ಕಾಡುತ್ತಿದ್ದ ಆನೆಗಳು ಅನಂತರ ಮಿತ್ರ ಪಾಳಯಕ್ಕೂ ತಲೆನೋವಾಗಿ ಪರಿಣಮಿಸಿದವು. ಇದರಿಂದಾಗಿ ನಿಧಾನವಾಗಿ ಆನೆಗಳ ಸ್ಥಾನವನ್ನು ಶೀಘ್ರಚಲನೆಗೆ ಹೆಸರಾದ ಮತ್ತು ತೀಕ್ಷ್ಣ ಬುದ್ಧಿಯ ಕುದುರೆಗಳು ಆಕ್ರಮಿಸತೊಡಗಿದವು. ಈ ಕಾಲದಲ್ಲಿ ತುರುಷ್ಕ ದೇಶದ ಕುದುರೆಗಳು ಪ್ರಸಿದ್ಧವಾಗಿದ್ದವು ಎಂಬ ಅಂಶವನ್ನು ಗಮನಿಸಬಹುದು (ಚಿದಾನಂದಮೂರ್ತಿ 2002:294). ಆದ್ದರಿಂದ ಹೊಯ್ಸಳರು ಕುದುರೆಗಳ ಬಗೆಗೆ ಹೆಚ್ಚಿನ ಆಸ್ಥೆವಹಿಸಿದ್ದನ್ನೂ ಕಾಣಬಹುದು. ರಾಮನಾಥನು 1292ರಲ್ಲಿ ತನ್ನ ರಾಜ್ಯ ವಿಸ್ತರಣೆಗಾಗಿ ಮೂರನೇ ಬಲ್ಲಾಳನ ರಾಜ್ಯದ ಮೇಲೆ ಅನಿರೀಕ್ಷಿತ ಧಾಳಿ ನಡೆಸುತ್ತಾನೆ. ಆಗ ಭೀಮೆಯ ಸಾಹಣಿಯ ತಮ್ಮ ಮಾರದೇವ ಎಂಬಾತನು ಶತ್ರು ಸೇನೆಯೊಳಗೆ ಮುನ್ನುಗ್ಗಿ ವೀರಾವೇಶದಿಂದ ಹೋರಾಡಿ ಮಡಿಯುತ್ತಾನೆ (ರೈಸ್ 1905, 9: ಕಾ–28). ಮಾರದೇವನ ಅಣ್ಣನಾದ ಭೀಮೆಯ ಸಾಹಣಿಯ ಹೆಸರನ್ನು ಗಮನಿಸಿದರೆ ಅವನು ಅಶ್ವ ತರಬೇತಿ ನೀಡುವವನಾಗಿದ್ದಿರಬಹುದು. ಸಾಹಣಿ ಎಂದರೆ ರಾಜನ ಅಶ್ವಶಾಲೆಯ ಶಿಕ್ಷಕ. ಈ ರೀತಿಯ ಅಶ್ವ ಶಿಕ್ಷಕರು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿಯೂ ಇದ್ದರು (ಶೇಷಶಾಸ್ತ್ರಿ 2004:229).

ಯೂರೋಪಿನ ಊಳಿಗಮಾನ್ಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಸರದಾರರಿಗೂ ಈ ಕಾಲಘಟ್ಟದಲ್ಲಿ ಪ್ರವರ್ಧಮಾನಕ್ಕೆ ಬಂದ ರಾವುತರಿಗೂ ಕೆಲವು ಸಾಮ್ಯತೆಗಳನ್ನು ಗುರುತಿಸಬಹುದು (Nandi 2000: ಕೃತಿಯ 1 ಮತ್ತು 2ನೆಯ ಅಧ್ಯಾಯ ನೋಡಿ). ಇದರಿಂದ ಬೆಂಗಳೂರಿನ ಪರಿಸರದ ರಾಜಕೀಯ ವ್ಯವಸ್ಥೆಯು ಊಳಿಗಮಾನ್ಯ ವ್ಯವಸ್ಥೆಯಾಗಿತ್ತು ಎಂಬುದಕ್ಕೆ ಈ ಅಂಶವೂ ಪೂರಕವಾಗಿದೆ.

ಆನಂತರ ಕಾಲದ ಯುದ್ಧಗಳಲ್ಲಿ ಕುದುರೆಗಳು ಪಡೆದುಕೊಂಡಿದ್ದ ಮಹತ್ವವನ್ನು ಅವಲೋಕಿಸಬಹುದು. 949ರಲ್ಲಿ ನಡೆದ ತೆಕ್ಕೋಳಂ ಕದನದಲ್ಲಿಯೂ ಬೂತುಗನು ರಾಜಾದಿತ್ಯನನ್ನು ಕೊಂದ ನಂತರ ರಾಷ್ಟ್ರಕೂಟರ ಮೂರನೆಯ ಕೃಷ್ಣನು ಆನೆ ಮತ್ತು ಅಪಾರ ಸಂಪತ್ತಿನ ಜೊತೆಗೆ, ಅಪಾರ ಸಂಖ್ಯೆಯ ಕುದುರೆಗಳನ್ನು ವಶಪಡಿಸಿಕೊಂಡನು (Sheik Ali 1976:227-229). ಕ್ರಿ.ಶ.1171ರ ಕಾಲಕ್ಕೆ ಸೇರಿದ ಕನಕಪುರ ತಾ. ಮುಳ್ಳಹಳ್ಳಿಯ ಶಾಸನವು (ರೈಸ್ 1905, 9: ಕಾ–44) ತೊಂಡಲಪಾಡಿಯ ಭೂ ಒಡೆಯನಾದ ಅಂಕಯ ನಾಯಕನು ಯುದ್ಧದಲ್ಲಿ ಕುದುರೆಗಳನ್ನು ಮತ್ತು ಸವಾರರನ್ನು ಇರಿದು ಕೊಂದು ಸೇನೆಯ ಮುಂಪಡೆಯನ್ನು ನಾಶ ಮಾಡಿ, ಕುದುರೆಗಳನ್ನು ಸ್ವರ್ಗಕ್ಕಟ್ಟಿದ ಎಂದು ತಿಳಿಸುತ್ತದೆ. ಅದೇ ರೀತಿ 1191ರ ಕಾಲಕ್ಕೆ ಸೇರಿದ ಕೊಳಗೊಂಡಹಳ್ಳಿ ಶಾಸನದಲ್ಲಿ (ರೈಸ್ 1905, 9: ಕಾ–26) ಶತೃಗಳಾದ ಸಿಗಲ್‌ನಾಡು (ಕನಕಪುರ ಪರಿಸರ) ಮತ್ತು ಮುರಸಾದಿ ರಾಯರುಗಳ 50 ಕುದುರೆಗಳನ್ನು ವೀರಬಲ್ಲಾಳನ ಸೇನೆ ತುಂಬಿಕಿರೆಯಲ್ಲಿ ಬೀಡು ಬಿಟ್ಟಿದ್ದಾಗ ವಶಪಡಿಸಿಕೊಂಡಿದ್ದನ್ನು ಉಲ್ಲೇಖಿಸುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಸೇನೆಯಲ್ಲಿ ಕುದುರೆಗಳು ಮಹತ್ವದ ಪಾತ್ರ ವಹಿಸುತ್ತಿದ್ದುದರಿಂದ ಶತೃಗಳಿಗೆ ಮೊದಲು ಗುರಿಯಾಗುತ್ತಿದ್ದವು. ಆದ್ದರಿಂದ ಶತೃಗಳ ಕುದುರೆಗಳನ್ನು ಸಾಧ್ಯವಾದರೆ ವಶಪಡಿಸಿಕೊಳ್ಳಬೇಕು ಇಲ್ಲವಾದರೆ ಕೊಂದು ಹಾಕಬೇಕು ಎಂಬ ನಿರ್ಧಾರಕ್ಕೆ ಅಂದಿನ ಯೋಧರು ಬಂದಿದ್ದಂತೆ ಕಾಣುತ್ತದೆ. ಕುದುರೆಗಳ ಮಹತ್ವ ದಿನೇ ದಿನೇ ಹೆಚ್ಚಿದಂತೆ ತುರುಗೋಳ್ ಕಾಳಗಗಳು 12ನೇ ಶತಮಾನದ ನಂತರ ಕಡಿಮೆಯಾಗುವುದನ್ನು ಶಾಸನಗಳ ಹಿನ್ನೆಲೆಯಲ್ಲಿ ಪ್ರಮಾಣಾತ್ಮಕವಾಗಿ ಗುರುತಿಸಬಹುದು. ಈ ಅವಧಿಯಲ್ಲಿ ಹಸುಗಳಿಗಿಂತ ಕುದುರೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆಯುವುದರಿಂದ ಹಸುಗಳ ಸ್ಥಾನ ಪಲ್ಲಟಗೊಳ್ಳುವುದನ್ನು ಗಮನಿಸಬಹುದು. ಜೊತೆಗೆ ಹಸುಗಳನ್ನು ಈ ಹಿಂದೆ ಸಂಪತ್ತೆಂದು ಪರಿಗಣಿಸಿ ವಿನಿಮಯ ಮಾಧ್ಯಮವಾಗಿ ಬಳಸುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಹಿಂದಿನ ಯಾವ ರಾಜಮನೆತನದವರೂ ಪರಿಚಯಿಸದಷ್ಟು ಅಂದರೆ ಸುಮಾರು 11 ಮಾದರಿಯ ನಾಣ್ಯಗಳನ್ನು ಚಲಾವಣೆಗೆ ತಂದರು (ನರಸಿಂಹಮೂರ್ತಿ 2003:89). ಇದರಿಂದ ನಾಣ್ಯರೂಪದ ವಿನಿಮಯ ಮಾಧ್ಯಮ ಹೆಚ್ಚಿದಂತೆ, ಹಸುವಿನ ಪ್ರಾಮುಖ್ಯತೆ ಕೂಡ ಕಡಿಮೆಯಾಯಿತು. ಹೊಯ್ಸಳರ ಕಾಲವು ಆರ್ಥಿಕವಾಗಿಯೂ ಸದೃಢವಾಗಿತ್ತು ಎನ್ನುವುದಕ್ಕೆ ಆ ಕಾಲದ ಚಿನ್ನದ ನಾಣ್ಯಗಳೆ ಸಾಕ್ಷಿ. ಗದ್ಯಾಣ ಎಂಬ ಚಿನ್ನದ ನಾಣ್ಯವು 62 ಗ್ರೇನ್ ತೂಕವಿದ್ದು, ದಕ್ಷಿಣ ಕರ್ನಾಟಕದಲ್ಲಿ ಆವರೆಗೆ ಬಂದ ಚಿನ್ನದ ನಾಣ್ಯಗಳಲ್ಲಿಯೇ ಹೆಚ್ಚಿನ ತೂಕದ ನಾಣ್ಯವಾಗಿತ್ತು. ಈ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳ ಸ್ವರೂಪ (ಗುಣಾತ್ಮಕ ಮತ್ತು ಪ್ರಮಾಣತ್ಮವಾಗಿ) ಕೂಡ ಹೊಯ್ಸಳ ಆರ್ಥಿಕ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ. ರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು ಅಲ್ಲದೆ ವ್ಯಾಪಾರಿಗಳೂ ಕೂಡ ನೂರಾರು ದೇವಾಲಯ ಮತ್ತು ಬಸದಿಗಳನ್ನು ಕಟ್ಟಿಸಿದರು (ಸುರೇಂದ್ರ ರಾವ್ 1997:262–263).

ಕುದುರೆಯ ವಿಚಾರವಾಗಿ ಹೇಳುವುದಾದರೆ, 1150ರ ಕಾಲಕ್ಕೆ ಸೇರಿದ ಬೆಂಗಳೂರು ಮ್ಯೂಸಿಯಂನಲ್ಲಿರುವ ತಾಮ್ರ ಶಾಸನದಲ್ಲಿ (ರೈಸ್ 1905, 9: ಬೆಂ–142) ಗಂಗವಾಡಿಕಾರ ಮುಖ್ಯಸ್ಥನಾದ ಚಲುಕಿಯ ವಡ್ಡವ್ಯಾಪಾರಿ ಮಾರೋಸೆಟ್ಟಿಯು ಹೆಂಜೇರು ಕಾಳಗದಲ್ಲಿ





ಕಿಲ್ವರಾಜನ ಕುದುರೆಗೆ ಇರಿದು ಕೊಂದ ಬಗ್ಗೆ ತಿಳಿದು ಬರುತ್ತದೆ. ಇಲ್ಲಿ ಹಿರಿಯ ವ್ಯಾಪಾರಿಯಾಗಿದ್ದ ಮಾರೋಸೆಟ್ಟಿ ಎಂಬಾತ ಗಂಗವಾಡಿಕಾರ ಮುಖ್ಯಸ್ಥನಾಗಿರುವುದ್ದನ್ನು ಗಮನಿಸಬೇಕು. ಈ ಕಾಲದಲ್ಲಿ ವ್ಯಾಪಾರಿ ಸಮುದಾಯ ಬಹಳವಾಗಿ ಆಡಳಿತ ಕ್ಷೇತ್ರವನ್ನು ಪ್ರವೇಶಿಸಿತ್ತು ಎಂಬುಕ್ಕೆ ಹಲವು ಶಾಸನಗಳ ನಿದರ್ಶನವಿರುವುದರಿಂದ ಇದು ಈ ಕಾಲಘಟ್ಟದ ವಿಶೇಷಗಳಲ್ಲಿ ಒಂದೆನ್ನಬಹುದು. ಇನ್ನೊಂದು ಗಮನಿಸಬೇಕಾದ ಅಂಶ ಎಂದರೆ ಈ ಶಾಸನದಲ್ಲಿಯೂ ಕೂಡ ಯುದ್ಧದಲ್ಲಿ ಕುದುರೆಯನ್ನು ಗುರಿಯಾಗಿಸಿ ಕೊಳ್ಳುತ್ತಿದ್ದರು ಎಂಬುದಕ್ಕೆ ನಿದರ್ಶನವಿದೆ.

ಈ ಕಾಲಘಟ್ಟದ ಸೇನೆಯಲ್ಲಿ ಉಂಟಾದ ಮತ್ತೊಂದು ಬೆಳವಣಿಗೆ ಎಂದರೆ 11ನೇಶತಮಾನದ ಆರಂಭದಲ್ಲಿ ಅಸ್ತಿತ್ವಕ್ಕೆ ಬಂದ ಅರಣ್ಯವಾಸಿಗಳಾದ ಹೊಯ್ಸಳರಿಗೆ ಸಮೃದ್ಧವಾದ ಅರಣ್ಯ ಸಂಪತ್ತು ದೊರಕಿತು. ಶೌರ್ಯ ಮತ್ತು ಪರಾಕ್ರಮಕ್ಕೆ ಹೆಸರಾದ ಚುರುಕು ಸ್ವಭಾವದ ಬೇಡರು (ನಾಯಕರು) ಮತ್ತು ಕುರುಬರನ್ನು ತಮ್ಮ ಸೇನೆಯಲ್ಲಿ ಸೇರಿಸಿಕೊಂಡು ಬಲಿಷ್ಟ ಸೇನೆಯನ್ನು ಸಂಘಟಿಸಿದರು. ಇವರುಗಳು ಮುಂದೆ ನಾಯಕ, ಅಮರನಾಯಕ, ಸಾಮಂತ, ಮಹಾಸಾಮಂತರಾಗಿ ರಾಜಕೀಯದಲ್ಲಿ ಸಕ್ರಿಯರಾದರು.

**ಸಾಮಾಜಿಕ ಬದಲಾವಣೆ:** ವಾಣಪುರ (ಬಾಣವರ)ದ ಗಾಮುಂಡನಾದ 'ನಿತ್ಯ ವಿನೋದ' ಮಾಣಿಕ್ಕ ಚೆಟ್ಟಿ ಎಂಬಾತನು 11ನೇ ಶತಮಾನದ ಪ್ರಭಾವಿ ವ್ಯಕ್ತಿಯಾಗಿದ್ದನು. ಇವನಲ್ಲದೆ ಅನೇಕ ಸೆಟ್ಟಿಗಳು ಅಡಳಿತದಲ್ಲಿಯೂ, ಸೈನ್ಯದಲ್ಲಿಯೂ ಕಂಡುಬರುತ್ತಾರೆ. ವರ್ತಕ ಸಮುದಾಯವು ರಾಜಕರಣದಲ್ಲಿ ಸಕ್ರಿಯಗೊಳ್ಳುವುದು ಈ ಕಾಲದ ಮತ್ತೊಂದು ವಿಶೇಷ. ಈ 'ನಿತ್ಯ ವಿನೋದ' ಎಂಬುದು ಏನನ್ನು ಸೂಚಿಸುತ್ತದೆ? ಇದರ ಚಹರೆಗಳನ್ನು 'ವಿಪ್ರವಿನೋದಿ' ಎಂಬ ವರ್ಗದಲ್ಲಿ ಕಾಣಬಹುದು. ಮೂಲತಃ ಕೆಳವರ್ಗದವರಾದ ಇವರು ಗಾರುಡಿಗ / ಮಾಂತ್ರಿಕ ಚಟುವಟಿಕೆಗಳಿಂದ ಸಮಾಜದಲ್ಲಿ ಗೌರವ ಪಡೆದವರು. ಪೂಜಾರಿ ವರ್ಗವಾಗಿ ಮಾರ್ಪಟ್ಟು ಬ್ರಾಹ್ಮಣರ ಹಕ್ಕುಗಳನ್ನು ಕಸಿಯಲು ಸಂಘರ್ಷ ನಡೆಸಿದರು (Saletore 1934:59-60). ಶೂದ್ರ ಸಮುದಾಯವು ಸಮಾಜದಲ್ಲಿ ಮೇಲೇರುವ ಪ್ರಯತ್ನವನ್ನು ಗುರುತಿಸಬಹುದಾಗಿದ್ದು, ಈ ಕಾಲದಲ್ಲಿಯೇ 'ವಿಪ್ರವಿನೋದಿ, ವೀರ ಪಾಂಚಾಲ'ಎಂಬ ಸಾಮಾಜಿಕ ಪಂಗಡ ಬೆಳೆದು ಬಂದಿತೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ (ಶ್ರೀನಿವಾಸಮೂರ್ತಿ ಇತರರು 1995:216). ಆದರೆ ವೀರ ಪಾಂಚಾಲರು 14ನೇ ಶತಮಾನದ ಆರಂಭದಲ್ಲಿಯೇ ಇದ್ದ ಜಾತಿ ಸಮುದಾಯ. ಹೀಗೆ ಸಮಾಜದಲ್ಲಿ ವಿಪ್ರವಿನೋದಿ ಎಂಬ ಹೊಸ ವರ್ಗ ಸೃಷ್ಟಿಯಾದಂತೆಯೇ 'ನಿತ್ಯವಿನೋದ' ಎಂಬುದು ಒಂದು ವರ್ಗವಾಗಿ ರೂಪುಗೊಂಡಿರುವ ಸಾಧ್ಯತೆ ಇದೆ.

ಒಟ್ಟಾರೆ ಹೇಳುವುದಾದರೆ, 10ನೆಯ ಶತಮಾನದಿಂದ 14ನೆಯ ಶತಮಾನದವರೆಗಿನ ಬೆಂಗಳೂರು ಪರಿಸರದ ಇತಿಹಾಸವು ಸಾಪೇಕ್ಷವಾಗಿ ಕರ್ನಾಟಕ ಮತ್ತು ಭಾರತದ ಚರಿತ್ರೆಯ ಒಂದು ಪ್ರತಿಬಿಂಬವಾಗಿ ಕಾಣುತ್ತದೆ. ಚರಿತ್ರೆ ಎಂಬುದು ಎಲ್ಲಾ ಘಟನೆಗಳ ಕಾಲ ಜಾಲವಾಗಿರುವುದು' (History is a all events of time network). ಆದ್ದರಿಂದ ಇತಿಹಾಸವು ಕೇವಲ ಆಂತರಿಕ ಪ್ರೇರಣೆಯಿಂದ ಸ್ಪುರಿಸಿದ ಸಂಗತಿಗಳಾಗಿರದೆ, ಬಾಹ್ಯ ಜಗತ್ತಿನ ಸಂಬಂಧಗಳಿಂದಲೂ ರೂಪುಗೊಂಡಿದೆ.

———

**ಕೃತಜ್ಞತೆಗಳು:** ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ 'ಬೆಂಗಳೂರು ನಮ್ಮ ಅರಿವು' ಉಪನ್ಯಾಸ ಮಾಲಿಕೆಯಲ್ಲಿ ನೀಡಿದ ಉಪನ್ಯಾಸದ ಪರಿಷ್ಕೃತ ಆವೃತ್ತಿಯಾಗಿದೆ. ಉಪನ್ಯಾಸ ನೀಡಲು ಅವಕಾಶ ಮಾಡಿಕೊಟ್ಟ ಜಿಲ್ಲಾ ಕ.ಸಾ.ಪ ಅಧ್ಯಕ್ಷರಾದ ತಿಮ್ಮೇಶ್ ಅವರಿಗೂ, ಕಾರ್ಯಕ್ರಮದ ಸಂಯೋಜಕರು ಹಾಗೂ ನನ್ನ ಗುರುಗಳಾದ ಎಚ್.ಎಸ್.ಗೋಪಾಲ ರಾವ್ ಅವರಿಗೂ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಈ ಪ್ರಬಂಧವನ್ನು ಸಿದ್ಧಪಡಿಸುವಾಗ ಹಲವು ಒಳನೋಟಗಳನ್ನುಳ್ಳ ಮೌಲಿಕ ಚರ್ಚೆ ನಡೆಸಿ, ಉತ್ತೇಜಿಸಿದ ಐ.ಐ.ಟಿ ಮಂಡಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಗೆಳೆಯ ಮನು ವಿ. ದೇವದೇವನ್ ಅವರಿಗೂ, ಶಾಸನಗಳಿಗೆ ಸಂಬಂಧಿಸಿದ ಅನುಮಾನಗಳನ್ನು ಪರಿಹರಿಸಿದ ಹಾಗೂ ಚಿತ್ರಗಳನ್ನು ಒದಗಿಸಿ ಕೊಟ್ಟು ಸಹಕರಿಸಿದ ಒಡನಾಡಿ ಸುಂಕಂ ಗೋವರ್ಧನ ಅವರಿಗೂ ಹಾಗೂ ಎಸ್.ಕೆ.ಅರುಣಿ, ಐ.ಸಿ.ಎಚ್.ಆರ್ ಮತ್ತು ಗುರುಗಳಾದ ಬೆಂಗಳೂರು ವಿ.ವಿ. ಇತಿಹಾಸ ವಿಭಾಗದ ಅಶ್ವತ್ಥನಾರಾಯಣ್ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

## ಆಕರ ಗ್ರಂಥಗಳು

### ಮೂಲ ಆಕರಗಳು


- ರೈಸ್ ಬಿ.ಎಲ್ (ಸಂ.)– 1905, *ಎಪಿಗ್ರಾಫಿಯ ಕರ್ನಾಟಿಕ ಸಂ–9.* ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು,
- ರೈಸ್ ಬಿ.ಎಲ್ (ಸಂ.)– 1905, *ಎಪಿಗ್ರಾಫಿಯ ಕರ್ನಾಟಿಕ ಸಂ–10.* ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು,
- ರೈಸ್ ಬಿ.ಎಲ್ (ಸಂ.)– 1901, *ಎಪಿಗ್ರಾಫಿಯ ಕರ್ನಾಟಿಕ ಸಂ–6.* ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು,
- *MAR* (ಮೈಸೂರ್ ಆರ್ಕಿಯಾಲಜಿಕಲ್ ರಿಪೋರ್ಟ್ಸ್) ವರ್ಷ:1947–56.


### ಅನುಷಂಗಿಕ ಆಕರಗಳು


- ಕಲಬುರ್ಗಿ ಎಂ.ಎಂ. (ಸಂ.) 1999. *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ–1.* ಹಂಪಿ: ಕನ್ನಡ ವಿ.ವಿ.
- ಚಿದಾನಂದಮೂರ್ತಿ ಎಂ. 2002. *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಬೆಂಗಳೂರು: ಸಪ್ನ ಬುಕ್ ಹೌಸ್.
- ಜಯಪ್ಪಗೌಡ ಡಿ.ಎಸ್. 1983. *ಕರ್ನಾಟಕದ ಕಡಲಾಚೆಯ ಸಂಪರ್ಕಗಳು.* ಮೈಸೂರು: ಶುಭೋದಯ ಪ್ರಕಾಶನ,
- ನರಸಿಂಹಮೂರ್ತಿ ಎ.ವಿ. 2003, *ಕರ್ನಾಟಕ ನಾಣ್ಯ ಪರಂಪರೆ.* ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
- ಪುಟ್ಟಸ್ವಾಮಿ ಬಿ.ಎಸ್. 2011. *ಯಲಹಂಕ ನಾಡಪ್ರಭು ಕೆಂಪೇಗೌಡ ಮತ್ತು ಆತನ ವಂಶಸ್ಥರು.* ಬೆಂಗಳೂರು: *ಮನೋಜ್ ಪಬ್ಲಿಕೇಷನ್.*
- ಬಸವರಾಜು ಕೆ.ಆರ್. 2005. *ನೊಳಂಬರ ಇತಿಹಾಸ ದರ್ಶನ.* ಬೆಂಗಳೂರು: ನೊಳಂಬ ವೀರಶೈವ ಸಂಘ.
- ಮಜುಂದಾರ್ ಆರ್.ಸಿ. (ಪ್ರ.ಸಂ). (ಅನು.) 2000. *ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ಸಂ–9.* ಬೆಂಗಳೂರು: ಭಾರತೀಯ ವಿದ್ಯಾಭವನ.







- ಮನು ವಿ. ದೇವದೇವನ್. 2009. *ಪೃಥ್ವಿಯಲ್ಲೊದಗಿದ ಘಟವು... ಕರ್ನಾಟಕದ ನಿನ್ನೆಗಳು.* ಹೆಗ್ಗೋಡು: ಅಕ್ಷರ ಪ್ರಕಾಶನ.
- ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ). 2010. *ಭಾರತ ಉಪಖಂಡದ ಆಧುನಿಕಪೂರ್ವ ಚರಿತ್ರೆ.* ಹಂಪಿ: ಪ್ರಸಾರಾಂಗ, ಕನ್ನಡ ವಿ.ವಿ.
- ಶರ್ಮ ಆರ್.ಎಸ್. (ಅನು: ಜಯವೀರನಾಥ). 2007. *ಭಾರತೀಯ ಊಳಿಗಮಾನ್ಯ (ಸರಂಜಾಮಿ) ಪದ್ಧತಿ.* ಬೆಂಗಳೂರು: ಸಿವಿಜಿ ಪಬ್ಲಿಕೇಷನ್.
- ಶ್ರೀನಿವಾಸಮೂರ್ತಿ ಹೆಚ್.ವಿ., ಆರ್.ರಾಮಕೃಷ್ಣ. 1995. *ಸಮಗ್ರ ಕರ್ನಾಟಕ ಚರಿತ್ರೆ.* ಬೆಂಗಳೂರು: ಓರಿಯಂಟಲ್ ಲಾಂಗ್‌ಮನ್.
- ಶೇಷಗಿರಿರಾವ್ ಎಲ್.ಎಸ್. (ಪ್ರ.ಸಂ). 2005. *ಬೆಂಗಳೂರು ದರ್ಶನ ಸಂ–1.* ಬೆಂಗಳೂರು: ಉದಯಭಾನು ಕಲಾಸಂಘ.
- ಶೇಷಶಾಸ್ತ್ರಿ ಆರ್. 2004. *ಕರ್ನಾಟಕದ ವೀರಗಲ್ಲುಗಳು.* ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
- ಸುಂಕಂ ಗೋವರ್ಧನ. 2011. "ಶಾಸನೋಕ್ತ ಗ್ರಾಮಗಳ ಇತಿಹಾಸ". *ಇತಿಹಾಸ ದರ್ಪಣ– ನಮ್ಮ ಬೆಂಗಳೂರು ವಿಶೇಷ. ಪುಸ್ತಕ–8.* ಪು:17–34.
- ಸುರೇಂದ್ರರಾವ್ ಬಿ. (ಸಂ.). 1997. *ಕರ್ನಾಟಕ ಚರಿತ್ರೆ ಸಂಪುಟ–2.* ಹಂಪಿ: ಪ್ರಸಾರಾಂಗ, ಕನ್ನಡ ವಿ.ವಿ.
- ಸೂರ್ಯನಾಥ ಕಾಮತ್. 1999. *ಕರ್ನಾಟಕದ ಸಂಕ್ಷಿಪ್ತ ಇತಿಹಾಸ.* ಬೆಂಗಳೂರು: ಜೂಪಿಟರ್ ಬುಕ್ಸ್.
- Adiga, Malini. 2006. *The making of Southern Karnataka Society, Polity and Culture in the early medieval period, AD 400-1030.* Chennai: Orient Longman.
- Hayavadana Rao C. (Ed.) 1930. *Mysore Gazetteer Vol-II, Part-II.* Bangalore: Govt. Press.
- Kesavan Veluthat. 2012. *The Political Structure of Early Medieval South India.* New Delhi: Orient Black Swan.
- Kosambi D.D. 2008. *An Introduction to the study of Indian History.* Bombay: Popular Prakashan.
- Krishnamurthi M.S. 1980. *The Nolambas.*Mysore: Prasaranga, University of Mysore.
- Nandi R.N. 2000. *State formation agrarian growth and social change in Feudal South India C. A D 600-1200.* New Delhi: Manohar.
- Nilakanta Sastri K.A. 2000. *The colas.* Chennai: Madras University.
- Saletore B.A. 1934. *Social and Political life in the Vijayanagara Empire (A.D.1346-1646) Vol-II.* Madras: B.G.Paul & Co. Pulishers.
- Satish Chandra. 2009. History of medieval India. New Delhi: Orient Black Swan.
- Sheik Ali B. 1976. *History of the Western Gangas.* Mysore: Prasaranga, University of Mysore.
- Sircar D.C. 1966. *Indian Epigraphical Glossary.* New Delhi: Motilal Banarsidass.

# ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಉಪನಗರವಾಗಿ ಷಹರ್ ಗಂಜಾಂನ ಬೆಳವಣಿಗೆ

## (ವಿಶೇಷವಾಗಿ ಆರ್ಥಿಕ ಪರಿಸ್ಥಿತಿ ಅನುಲಕ್ಷಿಸಿದಂತೆ)

**ನಮಿತಾ ಪಿ.**
ಸಂಶೋಧನಾ ವಿದ್ಯಾರ್ಥಿ
ಎಂ.ಎಲ್.ಶ್ರೀಕಂಠೇಶಗೌಡ
ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ)
ಮಂಡ್ಯ

**18ನೇ** ಶತಮಾನದ ದಕ್ಷಿಣ ಭಾರತದಲ್ಲಿ ನಡೆದ ರಾಜಕೀಯ ಘಟನೆಗಳಲ್ಲಿ ಶ್ರೀರಂಗಪಟ್ಟಣದ ಪಾತ್ರ ಅತ್ಯಂತ ಗಮನಾರ್ಹವಾದುದು. ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರುಗಳ ಕಾಲದಲ್ಲಿ ಪ್ರಮುಖ ಆಡಳಿತ ಕೇಂದ್ರವಾಗಿ ಗುರುತಿಸಲ್ಪಟ್ಟ ಈ ಪ್ರದೇಶವು, ಆರಂಭಿಕ ಮೈಸೂರು ಒಡೆಯರು, ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಮೈಸೂರು ರಾಜ್ಯದ ರಾಜಧಾನಿ ಕೇಂದ್ರವಾಗಿ ಕಾರ್ಯ ನಿರ್ವಹಿಸಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆಯಿತು. ಇದು ಕೇವಲ ರಾಜಕೀಯ ಕೇಂದ್ರವಾಗಿ ಮಾತ್ರವಲ್ಲದೇ ಪ್ರಮುಖ ಆರ್ಥಿಕ ಕೇಂದ್ರವಾಗಿಯೂ ಗುರುತಿಸಿಕೊಂಡಿದ್ದು ಇದರ ಹೆಗ್ಗಳಿಕೆ.

ಒಂದು ರಾಜ್ಯದ ಶಕ್ತಿಕೇಂದ್ರ ರಾಜಧಾನಿಯಾಗಿರುತ್ತದೆ. ರಾಜಧಾನಿಯ ಸುರಕ್ಷತೆಯಲ್ಲಿ ಇಡೀ ರಾಜ್ಯದ ಸುರಕ್ಷತೆಯು ಅಡಗಿರುತ್ತದೆ. ಒಂದು ವೇಳೆ ರಾಜಧಾನಿ ಶತ್ರುಗಳ ವಶವಾದರೆ ಬಹುತೇಕ ರಾಜ್ಯವೇ ಶತ್ರುಗಳ ವಶವಾದಂತೆ. ಆದ್ದರಿಂದ ರಾಜಧಾನಿಯ ರಕ್ಷಣೆಗೆ ಬಲಿಷ್ಠ ಕೋಟೆ ಹಾಗೂ ಗ್ಯಾರಿಸನ್ (ಸರ್ಪಗಾವಲು)ಗಳನ್ನು ಇಟ್ಟಿರುವುದನ್ನು ಕಾಣಬಹುದು (Bipan Chandra 2006:1). ರಾಜಧಾನಿಯಲ್ಲಿ ರಾಜಪರಿವಾರ, ಅಧಿಕಾರಿ ವರ್ಗ ಹಾಗೂ ಸೇನಾ ತುಕಡಿಗಳಿರುವುದನ್ನು ಕಾಣಬಹುದು. ರಾಜಧಾನಿಯ ಕೋಟೆ ಪ್ರದೇಶಕ್ಕೆ ಅಗತ್ಯವಾದ ದಿನನಿತ್ಯದ ಸರಕು ಸರಂಜಾಮುಗಳನ್ನು ಪೂರೈಸುವ ಸಲುವಾಗಿ ರಾಜಧಾನಿಯ ಕೋಟೆ ಸಮೀಪವೇ ಪೇಟೆಯನ್ನು ನಿರ್ಮಿಸುವುದು ವಾಡಿಕೆ. ಪೇಟೆಯನ್ನು ಕೋಟೆ ಪ್ರದೇಶದಿಂದ ಪ್ರತ್ಯೇಕವಾಗಿಯೇ ನಿರ್ಮಿಸುವುದು ರಾಜಧಾನಿ





ಹಿತದೃಷ್ಟಿಯಿಂದಲೂ ಮುಖ್ಯವಾಗಿರುತ್ತದೆ. ಏಕೆಂದರೆ ಹೊರ ರಾಜ್ಯಗಳಿಂದಲೂ ವರ್ತಕರು ತಮ್ಮ ಸರಕು ಸರಂಜಾಮುಗಳೊಡನೆ ಬರುವುದರಿಂದ ಅವರನ್ನು ರಕ್ಷಣೆ ದೃಷ್ಟಿಯಿಂದ ಕೋಟೆಯೊಳಗಿನ ಪೇಟೆಯೊಳಗೆ ಬಿಡದಂತೆ ತಡೆಯ ಬೇಕಾಗುತ್ತದೆ. ಇದು ವ್ಯಾಪಾರ ವ್ಯವಹಾರದ ದೃಷ್ಟಿಯಿಂದಲೂ ಸಮಂಜಸ ಕ್ರಮವಾದುದು.

ಹೀಗೆ ರಾಜಧಾನಿಗಳು ನಿರ್ಮಾಣವಾದಾಗ ಅದರೊಂದಿಗೆ ಉಪನಗರಗಳೂ ಕೂಡ ನಿಮಾಣವಾಗುತ್ತದೆ. ಇವುಗಳನ್ನು ಕೃಷಿ ಉತ್ಪನ್ನ ವಲಯಗಳೆಂದು ಗುರುತಿಸ ಬಹುದಾಗಿದ್ದು, ರಾಜಧಾನಿಯ ದೈನಂದಿನ ಅಗತ್ಯ ವಸ್ತುಗಳನ್ನು ಪೂರೈಸುತ್ತಿದ್ದವು (ರೈ 2006:15). ಶ್ರೀರಂಗಪಟ್ಟಣವು ಪ್ರಮುಖ ರಾಜಧಾನಿ ಕೇಂದ್ರವಾಗಿ ಗುರುತಿಸಲ್ಪಟ್ಟಾಗ ಇದರ ಬೇಡಿಕೆಯನ್ನು ಪೂರೈಸುವ ಹಾಗೂ ಸಂಸ್ಕೃತಿಯ ಪ್ರತೀಕವಾಗಿ ಬೆಳವಣಿಗೆ ಹೊಂದಿದ್ದೇ ಉಪನಗರವಾದ ಷಹರ್ ಗಂಜಾಂ. ಇದು ರಾಜಧಾನಿ ಪಟ್ಟಣವಾಗಿಯೇ ಬೆಳೆದು ರಾಜಧಾನಿ ಪಟ್ಟಣವಾಗಿಯೇ ಅವನತಿ ಹೊಂದಿತು.

ಈವರೆಗೆ ನಡೆದಿರುವ ಸಂಶೋಧನೆಗಳಲ್ಲಿ ಸಂಶೋಧಕರು ಕೋಟೆ ಪ್ರದೇಶವಾದ ಶ್ರೀರಂಗಪಟ್ಟಣಕ್ಕೆ ಆದ್ಯತೆಯನ್ನು ನೀಡಿ ಪೇಟೆ ಪ್ರದೇಶವಾದ ಷಹರ್ ಗಂಜಾಂಗೆ ಒಂದು ಐತಿಹಾಸಿಕ ಹಿನ್ನೆಲೆ ಇರುವುದನ್ನು ಕಡೆಗಣಿಸಿದ್ದಾರೆ. ಷಹರ್ ಗಂಜಾಂ ಒಂದು ಮಹತ್ವದ ಉಪನಗರವಾಗಿತ್ತೆಂಬುದನ್ನು ತೋರಿಸಿಕೊಡುವುದೇ ಈ ಪ್ರಬಂಧದ ಉದ್ದೇಶವಾಗಿದೆ. ಇಲ್ಲಿ ಸಮಕಾಲೀನ ಸಾಹಿತ್ಯ, ದಾಖಲೆಗಳು, ಪ್ರವಾಸಿ ಕಥನಗಳು ಮೊದಲಾದ ಮೂಲ ಆಕರಗಳ ಜೊತೆಗೆ ಕ್ಷೇತ್ರಕಾರ್ಯ, ಸಂದರ್ಶನಗಳನ್ನು ಬಳಸಿಕೊಂಡಿದ್ದೇನೆ. ಅಲ್ಲದೆ ಅನುಷಂಗಿಕ ಆಕರಗಳನ್ನು ಇಲ್ಲಿ ಸಮರ್ಪಕವಾಗಿ ಬಳಸಿಕೊಂಡಿದ್ದೇನೆ.

ಶ್ರೀರಂಗಪಟ್ಟಣವು ನೈಸರ್ಗಿಕವಾಗಿ ನದಿಯಿಂದ ಸುತ್ತುವರಿಯಲ್ಪಟ್ಟಿದ್ದು, ರಾಜಧಾನಿಯ ನಿರ್ಮಾಣಕ್ಕೆ ಉತ್ತಮವಾದ ಭೌಗೋಳಿಕ ಸನ್ನಿವೇಶಗಳು ಹಾಗೂ ರಕ್ಷಣೆಯ ದೃಷ್ಟಿಯಿಂದಲೂ ಸೂಕ್ತವಾದ ಸ್ಥಳವಾಗಿತ್ತು. ಈ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಾಗ ಪ್ರಾಂತ್ಯಾಧಿಕಾರಿಯಾಗಿದ್ದ ನಾಗಮಂಗಲದ ತಿಮ್ಮಣ್ಣ ಹೆಬ್ಬಾರನು ಕ್ರಿ.ಶ.1454ರಲ್ಲಿ ವಿಜಯನಗರದ ಅರಸರ ಅಪ್ಪಣೆ ಪಡೆದು ಶ್ರೀರಂಗಪಟ್ಟಣದಲ್ಲಿ ಕೋಟೆಯನ್ನು ನಿರ್ಮಿಸಿದನು (Rice 1897:295). ನಂತರ ಶ್ರೀರಂಗಪಟ್ಟಣವು ಹೆಚ್ಚು ಪ್ರಸಿದ್ಧಿಯನ್ನು ಪಡೆದು ಜನನಿಬಿಡ ಪ್ರದೇಶವಾಗಿ 'ಕೋಟೆ – ಪೇಟೆ' ಎನ್ನುವಂತಹ ಎರಡು ಪ್ರತ್ಯೇಕ ಘಟಕಗಳಾಗಿ ಮಾರ್ಪಟ್ಟಿತು. ವಿಜಯನಗರ ಅವನತಿಯ ನಂತರ ಹಂಪೆಯ ಕಡೆಯಿಂದ ವಲಸೆ ಬಂದಂತಹ ಕುಶಲ ಕರ್ಮಿಗಳು ಪೇಟೆಯ ಪ್ರದೇಶದಲ್ಲಿ ನೆಲೆಸಿದರು (ವೆಂಕಟ ಕೃಷ್ಣ 2004:103). ನಂತರ ಮೈಸೂರು ಒಡೆಯರ ಕಾಲದಲ್ಲಿ ಈ ಪ್ರದೇಶವು ಹಂತ ಹಂತವಾಗಿ ಅಭಿವೃದ್ಧಿಯನ್ನು ಪಡೆದು ಜನವಸತಿಯ ತಾಣವಾಗಿ 'ಶುಕ್ರವಾರ ಪೇಟೆ'ಯಾಗಿ (Hayavadana Rao 1946:189) ಮಾರ್ಪಟ್ಟಿತ್ತು.

ಹೈದರಾಲಿಯು ಮೈಸೂರು ರಾಜ್ಯದ ನವಾಬನಾಗಿ ಅಧಿಕಾರಕ್ಕೆ ಬಂದಾಗ ಶ್ರೀರಂಗಪಟ್ಟಣದ ಕೋಟೆಯ ಪೂರ್ವಭಾಗದಲ್ಲಿನ 'ಶುಕ್ರವಾರ ಪೇಟೆ'ಯ ಪ್ರದೇಶವನ್ನು ಒಂದು ದೊಡ್ಡ ಮಾರುಕಟ್ಟೆಯ(ಬಜಾರ್) ಪ್ರದೇಶವನ್ನಾಗಿ ಪರಿವರ್ತಿಸಿ ಅದಕ್ಕೆ 'ಷಹರ್ ಗಂಜಾಂ' ಎಂದು ಹೆಸರಿಟ್ಟನು (M A R 1930:101). ಷಹರ್ ಗಂಜಾಂ ಎಂಬುದು

ಪರ್ಶಿಯನ್ ಪದ. ಷಹರ್ ಎಂದರೆ ನಗರವೆಂದೂ, ಗಂಜ್ ಎಂದರೆ ಮಾರುಕಟ್ಟೆಯೆಂದೂ, ಆಮ್ ಎಂದರೆ ಪ್ರದೇಶವೆಂದೂ ಅರ್ಥ ಕೊಡುತ್ತದೆ. ಒಟ್ಟಾರೆ 'ಷಹರ್ ಗಂಜಾಂ' ಎಂದರೆ 'ನಗರ ಮಾರುಕಟ್ಟೆ ಪ್ರದೇಶ'ವೆಂಬ ಅರ್ಥ ಬರುತ್ತದೆ (ಕರೀಮುದ್ದಿನ್ ಅವರ ಸಂದರ್ಶನದಿಂದ). ಹೈದರಾಲಿಯು ಶ್ರೀರಂಗಪಟ್ಟಣದ ಆಡಳಿತಾತ್ಮಕ ದೃಷ್ಟಿಯಿಂದ ಮತ್ತು ಕೋಟೆಯ ರಕ್ಷಣಾ ದೃಷ್ಟಿಯಿಂದ ಸಾಮಾನ್ಯ ಜನರು, ವ್ಯಾಪಾರಿಗಳು ಮತ್ತು ಸೈನಿಕರು ಕೋಟೆಯಲ್ಲಿ ನೆಲೆಸಿರುವುದು ಸರಿಯಲ್ಲವೆಂದು ತಿಳಿದು ಅವರನ್ನು ಪೇಟೆಯ ಪ್ರದೇಶವಾದ ಷಹರ್ ಗಂಜಾಂಗೆ ಸ್ಥಳಾಂತರಿಸಿದನು (ನಮಿತಾ 2008:18). ಹೀಗೆ ಕ್ರಿ.ಶ.1761 ರಿಂದ ಕ್ರಿ.ಶ.1799ರವರೆಗೆ 'ಷಹರ್ ಗಂಜಾಂ' ಶ್ರೀರಂಗಪಟ್ಟಣದ ಉಪನಗರವಾಗಿ ಕಾರ್ಯನಿರ್ವಹಸಿತು.

ಟಿಪ್ಪುಸುಲ್ತಾನನು ತನ್ನ ಆಳ್ವಿಕೆಯಲ್ಲಿ ನಗರ ಕೇಂದ್ರಗಳಿಗೆ ಸಂಬಂಧಿಸಿದಂತೆ ಅದರಲ್ಲೂ ನಗರದ ಆಡಳಿತ ಕುರಿತು ಅನೇಕ ಮಹತ್ತರ ಬದಲಾವಣೆಗಳನ್ನುಂಟು ಮಾಡಿದನು. ಇದಕ್ಕೆ ಮೂಲ ಕಾರಣ ವ್ಯಾಪಾರ ಕ್ಷೇತ್ರದಲ್ಲಿ ಕಂಡು ಬಂದ ಬ್ರಿಟಿಷರ ಮಹತ್ವಾಕಾಂಕ್ಷಿ ಧೋರಣೆಗಳು. ಟಿಪ್ಪು ಸುಲ್ತಾನ್ ತನ್ನ ಆಳ್ವಕೆಗೆ ಒಳಪಟ್ಟ ನಗರಗಳನ್ನು ತನ್ನ ಅನುಕೂಲಗಳಿಗೆ ಸರಿಹೊಂದುವ ವೇದಿಕೆಗಳನ್ನಾಗಿ ಸಜ್ಜುಗೊಳಿಸುವ ಕಾರ್ಯದಲ್ಲಿ ತೊಡಗಿದನು (ರೈ, 2006:65). ವ್ಯಾಪಾರ–ವಾಣಿಜ್ಯಗಳ ಉದ್ದೇಶಕ್ಕಾಗಿ ಹೊಸ ಪ್ರಯೋಗಗಳನ್ನು ಮಾಡಿದನು. ಶ್ರೀರಂಗಪಟ್ಟಣದ ಮಾರುಕಟ್ಟೆ ಪ್ರದೇಶವಾಗಿದ್ದ ಷಹರ್ ಗಂಜಾಂನಲ್ಲಿ ಮುಸ್ಲಿಂ ಜನಸಂಖ್ಯೆಯನ್ನು ಹೆಚ್ಚಿಸಿ ಒಂದು ದೊಡ್ಡ ಕೈಗಾರಿಕಾ ನಗರವಾಗಿ ಪರಿವರ್ತಿಸಬೇಕೆಂದು ಕ್ರಮಗಳನ್ನು ಕೈಗೊಂಡನು. ಮೊಗಲ್ ಆಳ್ವಿಕೆಯ ದಕ್ಷಿಣ ಪ್ರಾಂತ್ಯವಾದ ತುಮಕೂರು ಜಿಲ್ಲೆಯ ಶಿರಾದಿಂದ 12,000 ಮುಸ್ಲಿಂ ಕುಟುಂಬದವರನ್ನು ಕರೆತಂದು ಇಲ್ಲಿ ನೆಲೆಸುವಂತೆ ಮಾಡಿದನು (Hayavadana Rao: 1930:658). ಜೊತೆಗೆ ಬಿಜಾಪುರದ ಕಡೆಯಿಂದ ಉರ್ದು ಮಾತನಾಡುವ ಮುಸ್ಲಿಮರು, ಮದರಾಸು ಭಾಗದಿಂದ ತಮಿಳು ಮಾತನಾಡುವ ಲಬ್ಬೆ ಮುಸ್ಲಿಮರು, ಕೇರಳದಿಂದ ಮಾಪಿಳ್ಳೆ ಸಮುದಾಯದವರು ಶ್ರೀರಂಗಪಟ್ಟಣಕ್ಕೆ ವಲಸೆ ಬಂದರೆಂದೂ, ಉತ್ತರ ಭಾರತದ ಲಕ್ನೊದಿಂದ ಹಾಗೂ ಇರಾನ್ ದೇಶದಿಂದ ಗುಡಿ ಕೈಗಾರಿಕೆಗಳಲ್ಲಿ ಕೌಶಲ್ಯವುಳ್ಳವರನ್ನು ಕರೆಯಿಸಲಾಯಿತೆಂದೂ ತಿಳಿದು ಬರುತ್ತದೆ (ಪಾರ್ಥಸಾರಥಿ 2003:163).

ಮೊದಲನೇ ಮತ್ತು ಎರಡನೇ ಆಂಗ್ಲೋ–ಮೈಸೂರು ಯುದ್ಧದ ಸಮಯದಲ್ಲಿ ಕರಾವಳಿಯ ಕ್ರೈಸ್ತರು ಬ್ರಿಟಿಷರಿಗೆ ಸಹಾಯ ಮಾಡಿದರು ಎಂಬ ಕಾರಣದಿಂದ ಟಿಪ್ಪು ಸುಲ್ತಾನನು ಕ್ರಿ.ಶ.1784ರಲ್ಲಿ ಸಾವಿರಾರು ಕರಾವಳಿ ಕ್ರೈಸ್ತರನ್ನು ಗಂಜಾಂಗೆ ಸ್ಥಳಾಂತರಿಸಿದನು (ಅಂತಪ್ಪ 1994:353–54). ಶ್ರೀರಂಗಪಟ್ಟಣವಿರುವಾಗ ಮೈಸೂರಿನ ಕೋಟೆ ಮತ್ತು ನಗರವೇಕೆಂದು ಎಲ್ಲವನ್ನೂ ಒಡೆಸಿ, ಅಲ್ಲಿನ ಜನರನ್ನು ಶ್ರೀರಂಗಪಟ್ಟಣದ ಸಮೀಪದ ಸುಲ್ತಾನ ಪೇಟೆ ಮತ್ತು ಷಹರ್ ಗಂಜಾಂಗೆ ಬಂದು ನೆಲೆಸುವಂತೆ ಆಜ್ಞೆ ಮಾಡಿದನು (ಅನಂತರಾಮು 1982:344). ಟಿಪ್ಪುವಿನ ಈ ಎಲ್ಲಾ ಯೋಜನೆಗಳಿಂದ ಷಹರ್ ಗಂಜಾಂ ಒಂದು ದೊಡ್ಡ ಜನ ವಸತಿಯ ಕೇಂದ್ರವಾಯಿತು. 20 ಮೇ, 1800ರಂದು ಶ್ರೀರಂಗಪಟ್ಟಣಕ್ಕೆ ಸರ್ವೇಕ್ಷಣೆಗೆ ಬಂದ ಫ್ರಾನ್ಸಿಸ್ ಬುಕಾನಾನನು ಷಹರ್ ಗಂಜಾಂ ಒಳಗೊಂಡಂತೆ ಶ್ರೀರಂಗಪಟ್ಟಣ ದ್ವೀಪದಲ್ಲಿ ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ 5,00,000 ಜನಸಂಖ್ಯೆ





ಇತ್ತೆಂದು ವರ್ತಕರು ಹೇಳಿರುವುದನ್ನು ದಾಖಲಿಸುತ್ತಾನೆ. ಮುಂದುವರೆದು ಇಲ್ಲಿ 1,50,000 ಜನಸಂಖ್ಯೆ ವಾಸಿಸಲಷ್ಟೆ ಸಾಧ್ಯವಿತ್ತೆಂದು ತನ್ನ ವರದಿಯಲ್ಲಿ ದಾಖಲಿಸಿದ್ದಾನೆ (Buchanan *(Vol.-1)*, 1988:76-77).

ಷಹರ್ ಗಂಜಾಂನ ನಿರ್ಮಾತೃ ಹೈದರನಾದರೂ ಸಹ ಇದನ್ನು ಒಂದು ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯಗಳ ಆರ್ಥಿಕಾ ಚಟುವಟಿಕಾ ಕೇಂದ್ರವಾಗಿ ನಿರ್ಮಿಸಿದ್ದು ಟಿಪ್ಪು ಸುಲ್ತಾನ್. ಭಾರತೀಯ ಅರ್ಥವ್ಯವಸ್ಥೆಗೆ ಪಾಶ್ಚಾತ್ಯ ವ್ಯಾಪಾರಶಾಹಿಯನ್ನು ಕಸಿಮಾಡಿ ಸ್ಥಳೀಯ ಊಳಿಗಮಾನ್ಯ ಪದ್ಧತಿಯ ಹಾನಿಕರ ಪರಿಣಾಮಗಳನ್ನು ಹೋಗಲಾಡಿಸಿ, ಟಿಪ್ಪುವು ಭಾರತದ ಬಂಡವಾಳ ಶಾಹಿಯು ಬೆಳೆಯಲು ಪ್ರೋತ್ಸಾಹವಿತ್ತನು. ಅರ್ಥನೀತಿ ಮತ್ತು ಆರ್ಥಿಕ ಕ್ರಮಗಳ ಕ್ಷೇತ್ರದಲ್ಲಿ ಟಿಪ್ಪುವಿನ ಪಾತ್ರವು ಭಾರತೀಯ ಅರಸರ ಪೈಕಿ ಅತ್ಯಂತ ವಿಶಿಷ್ಟವಾಗಿ ನಿಲ್ಲುತ್ತದೆ. ಅವನು ಮೂಲಭೂತ ಬದಲಾವಣೆ ಮಾಡಬಯಸಿದನು. ಅದು ಕೃಷಿಯಾಗಲಿ, ವ್ಯಾಪಾರವಾಗಲಿ, ಕೈಗಾರಿಕೋದ್ಯಮವಾಗಲಿ ಯಾವುದೇ ಆರ್ಥಿಕ ವಲಯದಲ್ಲಿ ಸುಧಾರಣೆಯನ್ನು ತರಬಯಸಿದನು (ಷೇಕ್ ಅಲಿ 1997:448). ಇದಕ್ಕೆ ಒಂದು ಅತ್ಯುತ್ತಮ ನಿದರ್ಶನವೆಂದರೆ ಶ್ರೀರಂಗಪಟ್ಟಣದ ಪೇಟೆ ಪ್ರದೇಶವಾದ ಷಹರ್ ಗಂಜಾಂನ್ನು ಉಪನಗರವಾಗಿ ಮಾರ್ಪಡಿಸಿದ್ದು.

ಟಿಪ್ಪು ತನ್ನ ರಾಜತಾಂತ್ರಿಕ ಮತ್ತು ವ್ಯಾಪಾರ–ವಾಣಿಜ್ಯಗಳ ಉದ್ಧೇಶಕ್ಕಾಗಿ ಹೊಸ ಪ್ರಯೋಗಗಳನ್ನು ಮಾಡಿದನು. ವಿದೇಶಿ ಮತ್ತು ದೇಶಿ ವರ್ತಕರಿಗೆ ಎಲ್ಲಾ ಬಗೆಯ ಸೌಲಭ್ಯ–ಸವಲತ್ತುಗಳನ್ನು ನೀಡಿ ಮೈಸೂರಿಗೆ ಆಕರ್ಷಿಸುವುದು, ಹೊಸ ವಾಣಿಜ್ಯವಿಭಾಗವನ್ನು ಸ್ಥಾಪಿಸುವುದು, ಫಿರಂಗಿ ಹಾಗೂ ಇನ್ನಿತರ ಅತ್ಯಾಧುನಿಕ ಯುದ್ಧೋಪಕರಣಗಳ ನಿರ್ಮಾಣ ಇವೇ ಮುಂತಾದ ಹಲವಾರು ಪ್ರಯೋಗಗಳನ್ನು ಮಾಡುವ ಮೂಲಕ ನಗರ ಕೇಂದ್ರಗಳು ಚುರುಕುಗೊಳ್ಳುವಂತೆ ಮಾಡಿದನು (ರೈ 2006:48). ಅದರಂತೆ ಷಹರ್ ಗಂಜಾಂ ಕೂಡ ಇವನ ಹೊಸ ಪ್ರಯೋಗಗಳಿಗೆ ಪ್ರಯೋಗ ಶಾಲೆಯಾಗಿ ಕಾರ್ಯನಿರ್ವಹಿಸಿತು. ಟಿಪ್ಪು ಈ ಪ್ರದೇಶದಲ್ಲಿ ಮುಸ್ಲಿಂರನ್ನು ವ್ಯವಸಾಯ ಕ್ಷೇತ್ರಕ್ಕೆ ಹೆಚ್ಚಾಗಿ ತೊಡಗಿಸಲು, ವ್ಯವಸಾಯದಲ್ಲಿ ಪರಿಣತಿ ಹೊಂದಿದ್ದ ಲಬ್ಬೆ ಮುಸ್ಲಿಂರನ್ನು ಮದರಾಸು ಕಡೆಯಿಂದ ಕರೆ ತಂದನು. ಸ್ವಾಭಾವಿಕ ಕೃಷಿಗೆ ಹೆಚ್ಚಿನ ಒತ್ತು ನೀಡಿದ್ದರಿಂದ ಕಾವೇರಿ ನೀರಾವರಿ ಪ್ರದೇಶದಲ್ಲಿ ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯಲು ಅವಕಾಶವಿದ್ದರೂ ಸಹ ಭೂಮಿಯ ಫಲವತ್ತತೆಯ ದೃಷ್ಟಿಯಿಂದ ವರ್ಷಕ್ಕೆ ಒಂದೇ ಬೆಳೆ ಬೆಳೆಯಲು ಅವಕಾಶ ನೀಡಿದನು (Habib 1999:163). ರೇಷ್ಮೆ ಉದ್ಯಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರಿಂದ ಹಿಪ್ಪುನೇರಳೆ ವ್ಯವಸಾಯ ಈ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಹೈದರಾಲಿ ಮತ್ತು ಟಿಪ್ಪು ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ ಬೆಂಗಳೂರು ಮತ್ತು ಷಹರ್ ಗಂಜಾಂನಲ್ಲಿ ಕೃಷಿ ಪ್ರಾಯೋಗಿಕ ಕ್ಷೇತ್ರ (Agricultural farms)ಗಳನ್ನು ಮತ್ತು ಸಸ್ಯ ವಿಜ್ಞಾನಕ್ಕೆ ಸಂಬಂಧಿಸಿದ ಉದ್ಯಾನಗಳನ್ನು ಸ್ಥಾಪಿಸಿದರು (ಮಹದೇವಮ್ಮ 2009:16). ಹೈದರಾಲಿಯು ಇವುಗಳಿಗೆ 'ಲಾಲ್ ಬಾಗ್' ಎಂದು ಹೆಸರಿಟ್ಟನು. ಈ ಉದ್ಯಾನವನಗಳಿಗೆ ದೆಹಲಿ, ಲಾಹೋರ್, ಮುಲ್ತಾನ್, ಫ್ರಾನ್ಸ್, ಚೀನಾ, ಕಾಬೂಲ್, ಕಾಂದಹಾರ್ ಮತ್ತು ದಕ್ಷಿಣ ಆಫ್ರಿಕಾದಿಂದ ಬೀಜಗಳನ್ನು ಹಾಗೂ ಸಸಿಗಳನ್ನು

ಗುಡ್‌ಹೋಪ್ ಭೂಶಿರದಿಂದ, ಇಂಗ್ಲೆಂಡಿನಿಂದ ಓಕ್, ಮೆಕ್ಸಿಕೋದಿಂದ ಅರೋಕ್ಯಾಡೋಸ್ ಗಿಡಗಳನ್ನು ತರಿಸಿಕೊಂಡು ಅವುಗಳ ಬೆಳೆಯು ಇಲ್ಲಿ ಸಾಧ್ಯವೋ ಅಸಾಧ್ಯವೋ ಎಂದು ಕಂಡುಹಿಡಿದು ಅದರ ಬೆಳೆಯನ್ನು ಪ್ರಗತಿಗೆ ತರಬೇಕೆಂಬುದೇ ಸುಲ್ತಾನನ ಧ್ಯೇಯವಾಗಿತ್ತು (ಮಹದೇವಮ್ಮ 2009:17). ಇದರಿಂದ ಷಹರ್ ಗಂಜಾಂನ ಲಾಲ್ ಬಾಗ್ ಉದ್ಯಾನವನದಲ್ಲಿ ಹಿಪ್ಪು ನೇರಳೆ, ಮಾವು, ಸೇಬು, ಕಿತ್ತಳೆ, ಅಂಜೂರ, ಸಪೋಟಾ, ಸೀಬೆ, ಕಲ್ಲಂಗಡಿ, ಜಾಯಿಕಾಯಿ, ದ್ರಾಕ್ಷಿ, ಚಕ್ಕೋತ ಹಣ್ಣುಗಳನ್ನು ಬೆಳೆಯಲಾಗುತ್ತಿತ್ತು (ಷೇಕ್‌ಅಲಿ 1997:451). ಇಂದಿಗೂ ಸಹ 'ಗಂಜಾಂ ಕಲ್ಲಂಗಡಿ', 'ಗಂಜಾಂ ಅಂಜೂರ' ಮತ್ತು 'ಗಂಜಾಂ ಸೀಬೆ' ಎಂಬುದು ಪ್ರಖ್ಯಾತವಾಗಿದೆ. ಅದರ ಜೊತೆಗೆ ಟಿಪ್ಪು ಸುಲ್ತಾನನು ಈ ಉದ್ಯಾನವನದಲ್ಲಿ ಪರ್ಷಿಯಾದಿಂದ ತರಿಸಿದ ಕೇಸರಿ ಬೆಳೆಗಾಗಿ ಕೂಡ ಪ್ರಯೋಗ ನಡೆಸಿದ್ದನು (ಷೌಕತ್‌ಅಲಿ 1965:121). ಟಿಪ್ಪು ತೋಟಗಾರಿಕಾ ಕ್ಷೇತ್ರಕ್ಕೆ ನೀಡಿದ ಪ್ರೋತ್ಸಾಹ ಮತ್ತು ಆಸಕ್ತಿ ಎಷ್ಟಿತ್ತೆಂದರೆ ಚಿಕ್ಕ ಪುಟ್ಟ ಅಪರಾಧವೆಸಗಿದವರು ಹಣದ ರೂಪದಲ್ಲಿ ಜುಲ್ಮಾನೆ ಕೊಡ ಬೇಕಾಗಿದ್ದಲ್ಲಿ, ಅವರು ಊರಿನ ಮುಂದೆ ಎರಡು ಬಾದಾಮಿ ಮಾವಿನ ಗಿಡ ಮತ್ತು ಸೇಬಿನ ಸಸಿಗಳನ್ನು ನೆಟ್ಟು ಕೆಲಕಾಲದವರೆಗೆ (ಮೂರು ಅಡಿ ಎತ್ತರ ಬೆಳೆಯುವವರೆಗೆ) ಆರೈಕೆ ಮಾಡಿದರೆ ಅಪರಾಧವನ್ನು ಮನ್ನಿಸುವುದಾಗಿ ಆಜ್ಞೆ ಮಾಡಿದನು (ಗಿದ್ವಾನಿ 2013:268).

ಟಿಪ್ಪು ಕೃಷಿ ಮತ್ತು ತೋಟಗಾರಿಕೆಗಿಂತ ಮಿಗಿಲಾಗಿ ಅಧಿಕ ಆಸಕ್ತಿ ತೋರಿಸಿದ ಕ್ಷೇತ್ರ ವಾಣಿಜ್ಯ ಮತ್ತು ಕೈಗಾರಿಕೆ. ಬೆಂಗಳೂರು, ಬಿದನೂರು, ಚಿತ್ರದುರ್ಗ ಮತ್ತು ಶ್ರೀರಂಗಪಟ್ಟಣದಲ್ಲಿ ಹಲವು ಬಗೆಯ ಕಾರ್ಖಾನೆಗಳನ್ನು ಟಿಪ್ಪು ಸ್ಥಾಪಿಸಿದನು (ಮನು 2009:114). ಇವುಗಳಲ್ಲಿ ಐರೋಪ್ಯ ಮತ್ತು ಭಾರತೀಯ ಕೆಲಸಗಾರರನ್ನು ನೇಮಿಸಿದನು. ಅದರಂತೆ ಶ್ರೀರಂಗಪಟ್ಟಣದ ಷಹರ್ ಗಂಜಾಂನಲ್ಲೂ ವಿವಿಧ ರೀತಿಯ ಕಾರ್ಖಾನೆಗಳಿದ್ದವು. ರೇಷ್ಮೆ ಮತ್ತು ಹತ್ತಿ ಬಟ್ಟೆ ಕೈಗಾರಿಕೆ, ಕಾಗದದ ಕಾರ್ಖಾನೆ, ಕಬ್ಬಿಣ ಮತ್ತು ಶಸ್ತ್ರಾಸ್ತ್ರಗಳ ಕಾರ್ಖಾನೆ, ಗಾಡಿ ತಯಾರಿಕಾ ಕಾರ್ಖಾನೆ ಮೊದಲಾದವುಗಳು ಕಾವೇರಿ ನದಿಯ ತೀರದಲ್ಲಿಯೇ ಹೆಚ್ಚಾಗಿ ಕೇಂದ್ರಿಕೃತವಾಗಿದ್ದವು. ಮೈಸೂರು ರಾಜ್ಯದಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಪಡಿಸಬೇಕೆಂದು ಟಿಪ್ಪು ಬಂಗಾಳ, ಮಸ್ಕಟ್ ಮತ್ತು ಚೀನಾ ದೇಶಗಳಿಂದ ಹುಳುಗಳನ್ನು ತರಿಸಿ (ಹಸನ್ 1988:515–16) ಉದ್ಯಾನಗಳಲ್ಲಿ ಹಿಪ್ಪುನೇರಳೆ ಗಿಡಗಳನ್ನು ನೆಟ್ಟು 21 ಕೇಂದ್ರಗಳಲ್ಲಿ ರೇಷ್ಮೆ ಕಾರ್ಖಾನೆಗಳನ್ನು ಸ್ಥಾಪಿಸಿ, ಮಲ್ಬರಿ ಕೃಷಿಯನ್ನು ಆರಂಭಿಸಿದನು. ಇದರಿಂದ ಧನಗೂರ್ ಮತ್ತು ಕುಣಿಗಲ್‌ನಲ್ಲಿ ರೇಷ್ಮೆ ಕೈಗಾರಿಕೆ ಆರಂಭವಾಯಿತು. ಅಲ್ಲಿಂದ ರೇಷ್ಮೆಯನ್ನು ಬೆಂಗಳೂರು ಮತ್ತು ಶ್ರೀರಂಗಪಟ್ಟಣದ ಷಹರ್ ಗಂಜಾಂಗೆ ತಂದು ಬಟ್ಟೆಯನ್ನು ತಯಾರು ಮಾಡಲಾಗುತ್ತಿತ್ತು (ಷೌಕತ್‌ಅಲಿ 1965:120). ಟಿಪ್ಪು ಒಮ್ಮೆ ಷಹರ್ ಗಂಜಾಂನಲ್ಲಿ ತಯಾರಾದ ವಸ್ತ್ರವನ್ನು ವಿದೇಶಿ ರುಮಾಲಿನೊಂದಿಗೆ ಪ್ರದರ್ಶಿಸಿ, ಇಲ್ಲಿನ ವಸ್ತ್ರದ ಗುಣಮಟ್ಟದ ಶ್ರೇಷ್ಠತೆಯನ್ನು ಎತ್ತಿಹಿಡಿದಿದ್ದನು (ಪಾರ್ಥಸಾರಥಿ 2003:353).

ಟಿಪ್ಪು ಕಾಗದ ತಯಾರಿಕೆಯನ್ನು ಹೊಸ ವಿಧಾನಗಳಿಂದ ನವೀಕರಿಸಿದನು. ಸೋಡ ಮತ್ತು ಸುಣ್ಣವು ಷಹರ್ ಗಂಜಾಂನಲ್ಲಿ ಹೆಚ್ಚಾಗಿ ದೊರೆಯುತ್ತಿದುದ್ದರಿಂದ ಇಲ್ಲಿ ಶ್ರೇಷ್ಠ ದರ್ಜೆಯ ಕಾಗದವನ್ನು ತಯಾರಿಸಲಾಗುತ್ತಿತ್ತು. ಅದು ಅನೇಕ ವರ್ಷಗಳವರೆಗೆ ಮಸುಕಾಗುತ್ತಿರಲಿಲ್ಲ. ಈಗಲೂ ಈ ತರಹದ ಕಾಗದವನ್ನು ದರಿಯ ದೌಲತ್ ಅರಮನೆಯ





ಭಿತ್ತಿ ಚಿತ್ರಗಳಲ್ಲಿ ನೋಡಬಹುದಾಗಿದೆ. ಕ್ರಿ.ಶ.1799ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡ ನಂತರ ಷಹರ್ ಗಂಜಾಂನಲ್ಲಿ ಪ್ರಾಚೀನ ಮಾದರಿಯ ಕಾಗದ ತಯಾರಿಕೆಯನ್ನು ನಿಲ್ಲಿಸಲಾಯಿತು (ರೈಸ್ 1897:247).

ಟಿಪ್ಪುವಿನ ರಾಜ್ಯದಲ್ಲಿ ಕಬ್ಬಿಣ ಕರಗಿಸುವುದು ಮತ್ತು ಎರಕ ಹೊಯ್ಯುವ ಕೆಲಸವನ್ನು ಮಧುಗಿರಿ, ಚೆನ್ನರಾಯನ ದುರ್ಗ, ಹಾಗಲವಾಡಿ ಮತ್ತು ದೇವರಾಯನ ದುರ್ಗಗಳಲ್ಲಿ ಕೈಗೊಳ್ಳಲಾಗುತ್ತಿತ್ತು. ಶ್ರೀರಂಗಪಟ್ಟಣದ ಷಹರ್ ಗಂಜಾಂ ಅದರ ಮುಖ್ಯ ಕೇಂದ್ರವಾಗಿತ್ತು. ಇಲ್ಲಿ ಬಂದೂಕುಗಳು, ಕೋವಿಗಳು, ಫಿರಂಗಿಗಳು, ಚಾಕುಗಳು, ಗುರಾಣಿಗಳು, ಕತ್ತರಿಗಳು, ತೋಪುಗಳು, ಮದ್ದು ಗುಂಡುಗಳು ಮತ್ತು ಕೈಗಡಿಯಾರಗಳನ್ನು ತಯಾರಿಸಲಾಗುತ್ತಿತ್ತು (ಮಹಾದೇವಮ್ಮ 2009:28). ಹೀಗೆ ಟಿಪ್ಪುವು ಫಿರಂಗಿ, ಬಂದೂಕುಗಳನ್ನು ಉತ್ಪಾಧಿಸುವ ಕಾರ್ಖಾನೆಗಳಿಗೆ 'ತಾರಾಮಂಡಲ' ಎಂದು ಹೆಸರಿಟ್ಟಿದ್ದನು. ಯುದ್ಧೋಪಕರಣಗಳ ತಯಾರಿಕೆಗೆ ಟಿಪ್ಪು ನೈಪುಣ್ಯ ಹೊಂದಿದ ಫ್ರೆಂಚ್ ಕುಶಲ ಕರ್ಮಿಗಳನ್ನು ಫ್ರಾನ್ಸಿನಿಂದ ಕರೆಸಿಕೊಂಡಿದ್ದನು. ಇಲ್ಲಿನ ಕಬ್ಬಿಣದ ಕಾರ್ಖಾನೆಯು ದೇಶಾದಾದ್ಯಂತ ಪ್ರಸಿದ್ಧವಾಗಿತ್ತೆಂದು ಕಿರ್ಮಾನಿಯು ತನ್ನ 'ನಿಷಾನ್–ಐ–ಹೈದರಿ'ಯಲ್ಲಿ ಬರೆದಿದ್ದಾನೆ. ಇಲ್ಲಿ ತಯಾರಾದ ವಸ್ತುಗಳು ಯುರೋಪಿನ ವಸ್ತುಗಳಿಗೆ ಸರಿ ಸಮನಾಗಿದ್ದುವು. ತನ್ನ ಕಬ್ಬಿಣದ ಕಾರ್ಖಾನೆಗಳಿಗೆ ಟಿಪ್ಪುವು ತಾರಾಮಂಡಲಗಳೆಂದು ಹೆಸರಿಟ್ಟಿದ್ದನು. ಶ್ರೀರಂಗಪಟ್ಟಣದ ಷಹರ್ ಗಂಜಾಂನ ಕಾರ್ಖಾನೆಯಲ್ಲಿ ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವ ಐದು ಘಟಕಗಳಿದ್ದವು (ಷೇಕ್ ಅಲಿ 1997:479). ಈ ಕಾರ್ಖಾನೆಗಳಲ್ಲಿ ದಿನಕ್ಕೆ ಹತ್ತು ಬಂದೂಕುಗಳನ್ನು ತಯಾರಿಸುತ್ತಿದ್ದರು. ಈ ಮದ್ದು ಗುಂಡುಗಳನ್ನು ಶ್ರೀರಂಗಪಟ್ಟಣದ ಕೋಟೆಯಲ್ಲಿ ಸಂಗ್ರಹಿಸಿಡಲಾಗುತ್ತಿತ್ತು. ಟಿಪ್ಪುವಿನ ಮರಣದ ನಂತರ ಆಶ್ರಯದ ಕೊರತೆ ಮತ್ತು ಬ್ರಿಟಿಷರು ಮದ್ರಾಸಿನಿಂದ ಶಸ್ತ್ರಾಸ್ತ್ರಗಳು ಹಾಗೂ ಮದ್ದು ಗುಂಡುಗಳನ್ನು ಮೈಸೂರು ರಾಜ್ಯಕ್ಕೆ ಆಮದು ಮಾಡಿಕೊಂಡಿದ್ದರ ಪರಿಣಾಮವಾಗಿ ಈ ಕೈಗಾರಿಕೆಗಳು ಅವನತಿ ಹೊಂದುವಂತಾಯಿತು. ಕ್ರಿ.ಶ.1830ರಲ್ಲಿ ಷಹರ್ ಗಂಜಾಂನಲ್ಲಿದ್ದ ಸೈನ್ಯದ ತುಕಡಿ ಹಾಗೂ ಬಂದೂಕಿನ ಗುಂಡುಗಳ ತಯಾರಿಕಾ ಕೇಂದ್ರವನ್ನು ಬ್ರಿಟಿಷರು ಮದ್ರಾಸಿನ ಸೇಂಟ್ ಜಾರ್ಜ್‌ಗೆ ಸ್ಥಳಾಂತರಿಸಿದರು (ನಮಿತಾ 2008:41).

ಷಹರ್ ಗಂಜಾಂನಲ್ಲಿದ್ದ ಮತ್ತೊಂದು ಪ್ರಮುಖವಾದ ಉದ್ಯಮವೆಂದರೆ ಗಾಡಿಗಳ ತಯಾರಿಕೆ. ಟಿಪ್ಪು ಈ ಗಾಡಿ ತಯಾರಿಕಾ ಪ್ರವೀಣರನ್ನು ತಮಿಳು ಮತ್ತು ಮರಾಠಿ ಭಾಗಗಳಿಂದ ಕರೆ ತಂದು ನೆಲೆಗೊಳಿಸಿದನು. ಸಾಮಾನು ಸರಂಜಾಮುಗಳನ್ನು ಬೇಗ ಬೇಗನೇ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಾಣೆಮಾಡಲು ಮತ್ತು ಮತ್ತು ಪ್ರಾಣಿಗಳಿಗೆ ಶ್ರಮ ಕಡಿಮೆ ಮಾಡಲು ಗಾಡಿ ತಯಾರಿಕೆ ತಂತ್ರಜ್ಞಾನವನ್ನು ಟಿಪ್ಪು ಯುದ್ಧದ ಕಾರ್ಯಾವರಣೆಗಳಿಗೆ ಹೆಚ್ಚಾಗಿ ಬಳಸಿಕೊಂಡನು. ಇದರ ಜೊತೆಗೆ ದರಿಯ ದೌಲತ್‌ಬಾಗ್ ಅರಮನೆಯ ಮರಗೆಲಸ ಮತ್ತು ಕುಶಲ ಕಲೆಗಳಲ್ಲೂ ಇವರ ಪ್ರಾವೀಣ್ಯತೆಯನ್ನು ಬಳಸಿ ಕೊಂಡಿದ್ದನ್ನು ನೋಡಬಹುದಾಗಿದೆ (ನಮಿತಾ 2008:42).

ಷಹರ್ ಗಂಜಾಂ ಶ್ರೀರಂಗಪಟ್ಟಣ ಮತ್ತು ಸುತ್ತ ಮುತ್ತಲ ಪ್ರದೇಶಗಳ ಜನರ ಬೇಡಿಕೆಯ ವಸ್ತುಗಳನ್ನು ಪೂರೈಸುವಂತಹ ವಾಣಿಜ್ಯ ಕೇಂದ್ರವಾಗಿತ್ತು. ಉಪ ಪಟ್ಟಣದ

ಪ್ರವೇಶ ದ್ವಾರದಲ್ಲಿ ಒಂದು ಸುಂಕದ ಕಟ್ಟೆ ಇದ್ದು, ಇದನ್ನು ಹರಾಜಿನ ಮೂಲಕ ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗುತ್ತಿತ್ತು. ಇಲ್ಲಿ ಶಿರಾ ಬಜಾರ್ ಮತ್ತು ಕೌಲ್ ಬಜಾರ್ ಎಂಬ ದೊಡ್ಡ ಮಾರುಕಟ್ಟೆಗಳು ಮತ್ತು ಒಂದೊಂದೇ ವಸ್ತುಗಳನ್ನು ಪ್ರತ್ಯೇಕವಾಗಿ ವ್ಯಾಪಾರ ಮಾಡುವ ಮಾರುಕಟ್ಟೆಗಳು ಅಸ್ತಿತ್ವದಲ್ಲಿದ್ದವು. ಈ ಉಪನಗರಕ್ಕೆ ಶಿರಾ, ಗುಬ್ಬಿ ಮತ್ತು ಸುತ್ತ ಮುತ್ತಲ ಪ್ರದೇಶಗಳಿಂದ ವ್ಯಾಪಾರಿಗಳು ಬಂದು ನೆಲೆಸಿ ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ವ್ಯಾಪಾರ ಬಹುತೇಕ ನಗದು ರೂಪದಲ್ಲಿಯೇ ನಡೆಯುತ್ತಿತ್ತು. ಶಿರಾದಿಂದ ತುಪ್ಪ, ಎಣ್ಣೆ, ಒಣಶುಂಠಿ, ಚಿಪ್ಪು ಸುಣ್ಣ, ತೆಂಗಿನಕಾಯಿ ಮತ್ತು ಗುಬ್ಬಿಯಿಂದ ಅಡಿಕೆ, ಸಕ್ಕರೆ, ಕಲ್ಲು ಸಕ್ಕರೆ, ಜೀರಿಗೆ, ಕಂಬಳಿಗಳು, ಮದ್ರಾಸಿನ ಸರಕುಗಳು ಹೆಚ್ಚಾಗಿ ವ್ಯಾಪಾರಕ್ಕಾಗಿ ಬರುತ್ತಿದ್ದಂತಹ ವಸ್ತುಗಳಾಗಿದ್ದವು (Buchanan *(Vol.2)*, 1988:32). ಇದರ ಜೊತೆಗೆ ಸೈನ್ಯಕ್ಕೆ ಬೇಕಾದ ಪೂರಕ ವಸ್ತುಗಳು ಹೆಚ್ಚಾಗಿ ಮಾರಾಟವಾಗುತ್ತಿದ್ದವು.

ಹೀಗೆ ಒಂದು ದೊಡ್ಡ ಆರ್ಥಿಕ ಕೇಂದ್ರವಾಗಿದ್ದ ಷಹರ್ ಗಂಜಾಂ ಟಿಪ್ಪುವಿನ ಮರಣ ಮತ್ತು ಬ್ರಿಟಿಷರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ನಂತರ ಸೈನಿಕ ಕಾರ್ಯಾಚರಣೆ ಪ್ರದೇಶವಾಗಿ ಬದಲಾಯಿತು. ಷಹರ್ ಗಂಜಾಂನಲ್ಲಿ ಉತ್ಪಾದನೆಯಾಗುತ್ತಿದ್ದ ವಸ್ತುಗಳೆಲ್ಲಾ ಶ್ರೀರಂಗಪಟ್ಟನದಲ್ಲಿಯೆ ಮಾರಾಟವಾಗಿ ಬಿಡುತ್ತಿದ್ದವು. ಕ್ರಿ.ಶ.1799ರ ಶ್ರೀರಂಗಪಟ್ಟಣದ ಪತನಾನಂತರ ಇಲ್ಲಿನ ವಸ್ತುಗಳಿಗೆ ಬೇಡಿಕೆ ಇಲ್ಲದೆ ಹಾಗೂ ಬ್ರಿಟಿಷರು ತಮ್ಮ ವಸ್ತುಗಳಿಗೆ ಹೆಚ್ಚಾಗಿ ಮದ್ರಾಸನ್ನು ಅವಲಂಭಿಸಿದ್ದರಿಂದ ಷಹರ್ ಗಂಜಾಂನಲ್ಲಿದ್ದ ಬಹುತೇಕ ಕೈಗಾರಿಕೆಗಳು ಮತ್ತು ಮಾರುಕಟ್ಟೆಗಳು ನಾಶ ಹೊಂದಿದವು.

**ಉಪಸಂಹಾರ:** ಷಹರ್ ಗಂಜಾಂ ಕೇವಲ ವ್ಯಾಪಾರಿ ನಗರ ಕೇಂದ್ರವಾಗಿರದೇ ಒಂದು ಉತ್ಪಾದನಾ ಕೇಂದ್ರವೂ ಆಗಿತ್ತು. ಭಾರತದಲ್ಲಿ ಎಲ್ಲಾ ಕೈಗಾರಿಕೆಗಳು 18ನೆಯ ಶತಮಾನದಲ್ಲಿ ಅವನತಿ ಹೊಂದುತ್ತಿರುವಾಗ ಹೈದರ್–ಟಿಪ್ಪು ಸುಲ್ತಾನರು ಬ್ರಿಟನ್ನಿನಲ್ಲಿ ಕೈಗಾರಿಕಾ ಕ್ರಾಂತಿ ನಡೆಯುತ್ತಿದ್ದ ಮಾದರಿಯಲ್ಲಿ ಮೈಸೂರು ಸಂಸ್ಥಾನದಲ್ಲೂ ಕೈಗಾರಿಕಾ ಕ್ರಾಂತಿಯನ್ನು ಉಂಟು ಮಾಡಿದ್ದರೆಂದರೆ ತಪ್ಪಾಗದು. ಆ ಮೂಲಕ ಬ್ರಿಟಿಷರಿಗೆ ಸೆಡ್ಡು ಹೊಡೆದರು. ಭಾರತದಾದ್ಯಂತ ಯುರೋಪಿಯನ್ನರು ವ್ಯಾಪಾರದ ಮೇಲೆ ಏಕಸ್ವಾಮ್ಯವನ್ನು ಸಾಧಿಸಿದ್ದರೆ ಸುಲ್ತಾನರು ಮಾತ್ರ ಮೈಸೂರು ಸಂಸ್ಥಾನದ ವ್ಯಾಪಾರ ವ್ಯವಹಾರವನ್ನು ವಿದೇಶಿಯರ ಕೈಗೆ ನೀಡದೆ ಸ್ವತಃ ತಾವೇ ನಿರ್ವಹಿಸುತ್ತಿದ್ದರು. ಅದಕ್ಕಾಗಿ ದೇಶ–ವಿದೇಶಗಳಲ್ಲಿ ವ್ಯಾಪಾರ ಕೇಂದ್ರವನ್ನು ತೆರೆದಿದ್ದರು. ಹೀಗೆ ಸುಲ್ತಾನರು ತಂದ ಬದಲಾವಣೆಗಳು ಅಂದಿನ ಭಾರತದಲ್ಲಿಯೇ ಮಾದರಿಯಾಗಿತ್ತು. ಅದರಿಂದ ಶಕ್ತಿಶಾಲಿಯಾಗಿಯೂ ಮೈಸೂರು ರಾಜ್ಯ ಹೊರ ಹೊಮ್ಮಿತು. ಇವರು ಕೃಷಿ–ಕೈಗಾರಿಕೆಗೆ ಹಾಕಿದ ಭದ್ರ ಬುನಾದಿಯೆ ಮುಂದೆ ಮೈಸೂರು ಮಾದರಿ ರಾಜ್ಯವಾಗಿ ಬೆಳೆಯಲು ಸಾಧ್ಯವಾಯಿತು. ಹೈದರ್–ಟಿಪ್ಪು ಕಾಲದಲ್ಲಿ ಕೃಷಿ–ಕೈಗಾರಿಕೆಯಲ್ಲಿ ತೀವ್ರತರ ಬದಲಾವಣೆ ತಂದ ಮೈಸೂರು ರಾಜ್ಯದ ಪ್ರಮುಖ ಕೇಂದ್ರವೂ ಷಹರ್ ಗಂಜಾಂ ಆಗಿತ್ತು. ಇದು ನಗರವಾಗಿ ಬೆಳೆದು ಟಿಪ್ಪು ನಂತರ ಬೆಳೆದಷ್ಟೇ ವೇಗವಾಗಿ ಅವನತಿ ಕಂಡಿದ್ದು ಐತಿಹಾಸಿಕ ದೃಷ್ಟಾಂತವೆನಿಸುತ್ತದೆ.

---

* ಬೆಂಗಳೂರಿನ ವಿವಾಕಾನಂದ ಕಾಲೇಜ್‌ನಲ್ಲಿ 28.11.2012 ರಂದು ನಡೆದ 'Process of Urbanisation in South India' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧದ ಪರಿಷ್ಕೃತ ರೂಪ ಈ ಲೇಖನವಾಗಿದೆ.





## ಪರಾಮರ್ಶನ ಗ್ರಂಥ


- ಪಾರ್ಥಸಾರಥಿ ಟಿ.ಎ. (ಸಂ.). 2003 *ಮಂಡ್ಯ ಗ್ಯಾಸೆಟಿಯರ್*. ಬೆಂಗಳೂರು: ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ.
- ಹಸನ್, ಮೊಹಿಬುಲ್ (ಮೂಲ). ಸಮೇತನಹಳ್ಳಿ ರಾಮರಾಯ (ಅನು:). 1988. *ಟೀಪೂ ಸುಲ್ತಾನನ ಇತಿಹಾಸ*. ಮೈಸೂರು: ಪ್ರಸಾರಾಂಗ ಮೈಸೂರು ವಿ.ವಿ.
- ಅಂತಪ್ಪ, ಐ ಸ್ವಾಮಿ. 1994. *ಶ್ರೀರಂಗಪಟ್ಟಣದಲ್ಲಿ ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ*. ಬೆಂಗಳೂರು: ಕಥೋಲಿಕ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ.
- ಷೌಕತ್‌ಅಲಿ, ಮಹಮ್ಮದ್. 1965. *ಮೈಸೂರು ಹುಲಿ ಟಿಪೂ ಸುಲ್ತಾನ್*. ಬೆಂಗಳೂರು: ಶಾಂತಿ ಸಾಹಿತ್ಯ ಪ್ರಕಾಶನ.
- ಗಿದ್ವಾನಿ ಎಸ್, (ಮೂಲ). ರಂಗನಾಥ್ ಎಸ್.ಬಿ(ಅನು.): 1990. *ಟಿಪ್ಪು ಸುಲ್ತಾನನ ಖಡ್ಗ*. ಚಿತ್ರದುರ್ಗ: ತರಳಬಾಳು ಪ್ರಕಾಶನ.
- ಮನು ದೇವದೇವನ್ ವಿ. 2009. *ಪೃಥ್ವಿಯಲ್ಲೊದಗಿದ ಘಟವು... ಕರ್ನಾಟಕದ ನಿನ್ನೆಗಳು*. ಹೆಗ್ಗೋಡು: ಅಕ್ಷರ ಪ್ರಕಾಶನ.
- ಅನಂತರಾಮು ಕೆ. 1982. *ಸಕ್ಕರೆ ಸೀಮೆ*. ಮೈಸೂರು: ಅನಂತ ಪ್ರಕಾಶನ.
- ರೈ, ಮೋಹನ್ ಕೃಷ್ಣ. 2006.*ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ*. ಹಂಪಿ: ಪ್ರಸಾರಾಂಗ ಕನ್ನಡ ವಿ.ವಿ.
- ವೆಂಕಟ ಕೃಷ್ಣ, ತೈಲೂರು. 2004. *ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ*. ಮಂಡ್ಯ: ಬಾನು ಪ್ರಕಾಶನ.
- ನಮಿತಾ ಪಿ. 2008. *ಷಹರ್ ಗಂಜಾಂ–ಒಂದು ಅಧ್ಯಯನ* (ಅಪ್ರಕಟಿತ ಎಂಫಿಲ್ ನಿಬಂಧ). ಮೈಸೂರು: ಮೈಸೂರು ವಿ.ವಿ.
- ಮಹದೇವಮ್ಮ. 2009. *ಮೈಸೂರು ರಾಜ್ಯದ ವ್ಯಾಪಾರ–ವಾಣಿಜ್ಯದ ಅಭಿವೃದ್ಧಿಗೆ ಹೈದರ್‌ಅಲಿ ಮತ್ತು ಟಿಪ್ಪು ಸುಲ್ತಾನರ ಕೊಡುಗೆ (1761–1799)* (ಅಪ್ರಕಟಿತ ಮಹಾ ಪ್ರಬಂಧ). ಮೈಸೂರು ವಿ.ವಿ.
- Rice, B .L. 1897. *Mysore Gazetteer (Vol.-2)*, Mysore.
- Rao, Hayavadana. 1946. *History of Mysore (Vol.-3)*, Mysore.
- Rao, Hayavadana. 1930. *Mysore Gazetteer (Vol.-5)*. Bangalore: Govt. Press..
- *M A R – 1930*. Mysore: Archaeological Dept
- Buchanan, Francis. 1988. *A Journey from Madras through the Countries of Mysore Canar and Malabar, madras, (Vol.-1 & 2).*
- Habib, Irfan. 1999. *Resistance and Modernization Under Haider Ali and Tippu Sultan, (Confronting colonialism)*, Tulik Publication, New Delhi.
- Sheik Ali, (Ed.): 1993. *Tipu Sultan A Great Martyr*, Bangalore University.
- Bipan Chandra, 2006. *Modern Indian History*, Orient Block Swan, Chennai.


**ಸಂದರ್ಶನ:** ಕರೀಮುದ್ದಿನ್, ಉಪನ್ಯಾಸಕರು, ಟಿಪ್ಪು ಸಂಶೋಧನಾ ಕೇಂದ್ರ, ಶ್ರೀರಂಗಪಟ್ಟಣ.

# ಹತ್ತೊಂಬತ್ತನೇ ಶತಮಾನದ ಕರ್ನಾಟಕದಲ್ಲಿನ ಬ್ರಿಟಿಷ್ ವಿರೋಧಿ ದಂಗೆಗಳು

## (ನರಗುಂದ ಸಂಸ್ಥಾನವನ್ನು ಅನುಲಕ್ಷಿಸಿ)

□□ **ಎ.ಬಿ. ವಗ್ಗರ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ,
ಶ್ರೀ.ಸಿದ್ಧೇಶ್ವರ ಸರಕಾರಿ
ಪ್ರಥಮ ದರ್ಜೆ ಕಾಲೇಜು,
ನರಗುಂದ, ಗದಗ ಜಿಲ್ಲೆ.

**ಹ**ತ್ತೊಂಭತ್ತನೆಯ ಶತಮಾನ ಎರಡು ಬಗೆಯಲ್ಲಿ ಮಹತ್ವಪೂರ್ಣವಾಗಿದೆ. ಭಾರತದ ಸಂಸ್ಥಾನಗಳನ್ನು ತಮ್ಮ ಆಧೀನಕ್ಕೆ ಒಳಪಡಿಸಿಕೊಳ್ಳುವಲ್ಲಿ ಬ್ರಿಟಿಷರು ಅನುಸರಿಸಿದ ವಿವಿಧ ನೀತಿಗಳು, ಇನ್ನೊಂದೆಡೆ ಬ್ರಿಟಿಷರ ಈ ನೀತಿಗಳಿಂದ ತಮ್ಮ ಅಸ್ತಿತ್ವದ ಹೆದರಿಕೆಯಿಂದಾಗಿ ರೋಸಿ ಹೋಗಿ ಹೂಡಿದ ದಂಗೆಗಳು. ಕರ್ನಾಟಕದಲ್ಲಿನ ಬ್ರಿಟಿಷ ವಿರೋಧಿ ದಂಗೆಗೆ ದತ್ತು ನಿರಾಕರಣೆ, ಶಸ್ತ್ರಾಸ್ತ್ರ ನಿಷೇಧ ಕಾಯ್ದೆ, ಇನಾಂ ಕಮೀಷನ್ ನೇಮಕ ಮುಂತಾದವು ಕಾರಣವಾದವು. ನಮ್ಮ ಇತಿಹಾಸದ ಓದಿನಲ್ಲಿ ಈ ದಂಗೆಗಳ ನೇತೃತ್ವ ವಹಿಸಿಕೊಂಡ ಮುಖಂಡರ ಹೆಸರುಗಳನ್ನು ಮಾತ್ರ ಗಮನಿಸಿದ್ದೇವೆ. ಆದರೆ ಇವರೊಂದಿಗೆ ವಿವಿಧ ಜಾತಿ ವರ್ಗಗಳ ಜನ ಹುತಾತ್ಮರಾಗಿದ್ದಾರೆ. ಇಲ್ಲಿ ಇವರ ಹೋರಾಟದ ವಿಷಯ ಚರ್ಚೆ ಮಾಡದೆ, ಇವರ ಹೆಸರುಗಳನ್ನು ಮತ್ತು ಶಿಕ್ಷೆಗಳ ವಿವರಗಳನ್ನು ಸಾದರಪಡಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ದಂಗೆಗಳಲ್ಲಿ ಪಾಲ್ಗೊಂಡವರ ನ್ಯಾಯಾಂಗ ವಿಚಾರಣೆಯ ಕಡತಗಳನ್ನು ಮುಂಬೈ ಪತ್ರಾಗಾರದ ರಾಜಕೀಯ ಇಲಾಖೆಯ ಸಂಪುಟಗಳಲ್ಲಿ ಸಂಗ್ರಹಿಸಿಡಲಾಗಿದೆ. ಈ ವರದಿಗಳನ್ನು ಬಳಸಿ ಈ ಲೇಖನ ಸಿದ್ಧಪಡಿಸಲಾಗಿದೆ.

**ಧೋಂಡಿಯಾ ವಾಘ:** ಹತ್ತೊಂಬತ್ತನೆಯ ಶತಮಾನದ ಕರ್ನಾಟಕದಲ್ಲಿ ಬ್ರಿಟಿಷ ವಿರುದ್ಧ ಬಂಡಾಯ ಹೂಡಿದ ಮೊದಲಿಗನೆಂದರೆ ಧೋಂಡಿಯಾ ವಾಘ. ಮೂರು ಪ್ರಪಂಚಗಳ ರಾಜ* ಎಂದು ಕರೆದುಕೊಂಡ ಈತ ಪ್ರಸ್ತುತ

* ಈ ಅರ್ಥದ ಬಿರುದು ತ್ರೈಲೋಕಾಧೀಶ್ವರ ಎಂದಾಗುತ್ತದೆ. ಆದರೆ ದೋಂಡಿಯಾ ವಾಘನಿಗೆ ಉಭಯ ಲೋಕಾಧೀಶ್ವರ ಎಂಬ ಬಿರುದಿತ್ತು ಎಂದು ತಿಳಿದುಬರುತ್ತದೆ. **–ಸಂಪಾದಕರು.**





ದಾವಣಗೆರೆ ಜಿಲ್ಲೆಗೆ ಸೇರಿದ ‘ಚೆನ್ನಗಿರಿ’ಯವನು. ಮೊದಲು ಇದು ಬಿದನೂರಿನ ಭಾಗವಾಗಿತ್ತು. “ನಾವು ನೆಮ್ಮದಿಯಿಂದ ಇರಬೇಕಾದರೆ, ಧೋಂಡಿಯಾನ ನಾಶ ಅವಶ್ಯ” ಎಂಬ ಜನರಲ್ ವೆಲ್ಲೆಸ್ಲಿಯ ಮಾತನ್ನು ನೋಡಿದರೆ, ಬ್ರಿಟಿಷರಿಗೆ ಧೋಂಡಿಯಾನ ಬಗೆಗಿನ ಹೆದರಿಕೆ ಅರ್ಥವಾಗುತ್ತದೆ (Parasnis ೧೯೧೭:೨೬). ಧೋಂಡಿಯಾ ಕ್ರಿ.ಶ ೧೭೮೦ ರಲ್ಲಿ ಹೈದರಲಿಯ ಸೈನ್ಯ ಸೇರಿದನು. ನಂತರ ಮೈಸೂರಿನ ಸೈನ್ಯ ತೊರೆದು, ಮತ್ತೇ ಟಿಪ್ಪುವಿನಲ್ಲಿ ಸೇವೆಗೆ ಸೇರಿದನು. ರಾಜದ್ರೋಹಿ ಚಟುವಟಿಕೆಗಳಿಂದಾಗಿ ಈತನನ್ನು ಟಿಪ್ಪು ಸೆರೆಮನೆಯಲ್ಲಿಟ್ಟನು. ಕ್ರಿ.ಶ ೧೭೯೯ ರಲ್ಲಿ ಟಿಪ್ಪುವಿನ ಮರಣಾ ನಂತರ ಧೋಂಡಿಯಾ ಬಂಧಮುಕ್ತನಾದನು. ನಂತರ ತನ್ನದೇ ಸೈನ್ಯ ಕಟ್ಟಿಕೊಂಡು ಬ್ರಿಟಿಷ್, ನಿಜಾಮ ಮತ್ತು ಮರಾಠರಿಗೆ ಸೇರಿದ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡನು, ಅವರ ವಕ್ರ ದೃಷ್ಟಿಗೆ ಗುರಿಯಾದನು. ಕೊನೆಗೆ ೧೦ ಸೆಪ್ಟೆಂಬರ್ ೧೮೦೦ರಲ್ಲಿ ವೆಲ್ಲೆಸ್ಲೆಯು ನಿಜಾಮ ಮತ್ತು ಮರಾಠರ ಸಹಾಯದೊಂದಿಗೆ ಧೋಂಡಿಯಾನನ್ನು ಕೊಂದು ಹಾಕಿದನು. ಈತನ ರಕ್ತಸಿಕ್ತವಾದ ಮೀಸೆಯನ್ನು ವೆಲ್ಲೆಸ್ಲೆಯು ತನ್ನ ವಿಜಯದ ಸಂಕೇತವಾಗಿ ಇಂಗ್ಲೆಂಡಕ್ಕೆ ಒಯ್ದನೆಂದು ಮರಾಠಿಯ ಒಂದು ನಿಯತಕಾಲಿಕದಲ್ಲಿ ಉಲ್ಲೇಖಿಸಲಾಗಿತ್ತು (Parasnis ೧೯೧೭:೩೨). ಅಷ್ಟೇಅಲ್ಲದೇ, ಧೋಂಡಿಯಾನ ಸಾಹಸಮಯ ವ್ಯಕ್ತಿತ್ವವು ಸರ್ ವಾಲ್ಟರ್ ಸ್ಕಾಟನ ಒಂದು ಐತಿಹಾಸಿಕ ಕಾದಂಬರಿಗೆ ಕಥಾವಸ್ತು ಆಯಿತು (Parasnis ೧೯೧೭:೨೪). ಒಟ್ಟಿನಲ್ಲಿ ಧೋಂಡಿಯಾ ವಾಘ ಬ್ರಿಟಿಷ್ ದಾಖಲೆಗಳಲ್ಲಿ ಒಬ್ಬ ದರೋಡೆಕೋರನಾದರೆ, ರಾಷ್ಟ್ರೀಯವಾದಿಗಳಿಗೆ ಬ್ರಿಟಿಷ್ ವಿರುದ್ಧದ ದಂಗೆಯಲ್ಲಿ ಆಕರ್ಷಕ ವ್ಯಕ್ತಿಯಾದನು.

ನಂತರದ ಅವಧಿಯಲ್ಲಿ ೧೮೦೩ರಲ್ಲಿ ಐಗೂರಿನ ವೆಂಕಟಾದ್ರಿಯ ದಂಗೆ, ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ಹೈದರಾಬಾದಿನ ನಿಜಾಮ ವಿರುದ್ಧ ಕೊಪ್ಪಳ ರೈತರ (೧೮೧೯) ದಂಗೆ, ಬೀದರ್‌ನ ದೇಶಮುಖರ (೧೮೨೦) ದಂಗೆ, ಸಿಂದಗಿಯ (೧೮೨೪) ದಂಗೆ ಪ್ರಮುಖವಾಗಿವೆ.

**ಕಿತ್ತೂರ ದಂಗೆ (೧೮೨೪):** ವಿಜಾಪುರದ ಆದಿಲ್ ಷಾಹಿಗಳ ಆಳ್ವಿಕೆಯಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥಾನವು ಹಿರೇ ಮಲ್ಲಶೆಟ್ಟಿ ಮತ್ತು ಚಿಕ್ಕ ಮಲ್ಲಶೆಟ್ಟಿಯರಿಂದ ಸ್ಥಾಪಿಸಲ್ಪಟ್ಟಿತು. ಬ್ರಿಟಿಷರ ಅವಧಿಯಲ್ಲಿ ಮುಂಬೈ ಪ್ರಾಂತದಲ್ಲಿನ ಸಂಸ್ಥಾನವಾಗಿತ್ತು. ಕಿತ್ತೂರ ದೇಸಾಯಿ ಶಿವಲಿಂಗರುದ್ರ ಸರ್ಜನಿಗೆ ಗಂಡು ಸಂತಾನ ಇಲ್ಲದ್ದರಿಂದ ದತ್ತು ಪಡೆಯುವುದಕ್ಕಾಗಿ ನಡೆದ ಚರ್ಚೆ ೧೮೨೪ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯ ಸ್ವರೂಪ ಪಡೆದು ಅವಸಾನ ಹೊಂದಿತು. ಕಿತ್ತೂರ ದಂಗೆಯಲ್ಲಿ ಧಾರವಾಡದ ಕಲೆಕ್ಟರ್ ಮತ್ತು ಪೋಲಿಟಿಕಲ್ ಏಜೆಂಟ್ ಥ್ಯಾಕರೆ, ಕ್ಯಾಪ್ಟನ್ ಬ್ಲ್ಯಾಕ್, ಲೆಫ್ಟಿನೆಂಟ್ ಡಯಟನ್ ಮತ್ತು ಲೆಫ್ಟಿನೆಂಟ್ ಸಿವೆಲ್ ಮರಣ ಹೊಂದಿದರು (ಒಡೆಯರ್ ೧೯೮೧:೫೮–೫೯). ನಂತರ ಮೈಸೂರು, ಚಿತ್ರದುರ್ಗ, ಮದ್ರಾಸ್, ಅರ್ಕಾಟ್, ಸೋಲ್ಲಾಪೂರ, ಸಾತಾರ, ಮುಂಬೈ, ಪುಣೆ, ವೆಂಗುರ್ಲಾ ಮುಂತಾದ ಕಡೆಗಳಿಂದ ಬಂದ ಬ್ರಿಟಿಷ್ ಸೈನ್ಯವು ಕಿತ್ತೂರನ್ನು ನಾಶ ಮಾಡಿತು. ೧೮೨೪ ಡಿಸೆಂಬರ ೫ ರಂದು ಮುಂಜಾನೆ ಕಿತ್ತೂರ ಮೇಲೆ ಬ್ರಿಟಿಷರ ಧ್ವಜ ಹಾರಿತು. ಕಿತ್ತೂರಿನ ನಂದಿ ಧ್ವಜದ ರಕ್ಷಣೆಗೆ ಬಂದ ಸಂಗೊಳ್ಳಿಯ ಬರಮಣ್ಣ ಬ್ರಿಟಿಷರ ಗುಂಡೇಟಿಗೆ ಬಲಿಯಾದನು (Bombay Archives ೧೮೨೪:ಸಂ–೨೨೪, ಪತ್ರ.ಸಂ:೯೨೨). ಚೆನ್ನಮ್ಮ,

ವಿಧವೆಯಾದ ಶಿವಲಿಂಗರುದ್ರ ಸರ್ಜನ ಹೆಂಡತಿ ವೀರವ್ವ, ಅವಳ ಮಡಿದ ಮಗ ಶಿವಬಸವರಾಜನ ಪತ್ನಿ ವಿಧವೆ ಜಾನಕಿ ಇವರನ್ನು ಬೈಲಹೊಂಗಲದಲ್ಲಿ ರಾಜಕೀಯ ಕೈದಿಗಳನ್ನಾಗಿ ಇಡಲಾಯಿತು. ೧೮೨೯ ಫೆಬ್ರುವರಿ ೨ ರಂದು ಚೆನ್ನಮ್ಮ ಮತ್ತು ೧೮೨೯ ಜುಲೈ ೩೦ ರಂದು ಸೊಸೆ ಜಾನಕಿಬಾಯಿ ಅಸುನೀಗಿದರು (ಒಡೆಯರ್ ೧೯೮೧:೧೧೩). ಇವರ ಹೋರಾಟವನ್ನು ಮುಂದುವರೆಸಿದ ಸಂಗೊಳ್ಳಿಯ ರಾಯಣ್ಣ ೧೮೩೧ ಜನವರಿ ೨೬ ರಂದು (Stokes ೧೮೭೬:೮೫) ಗಲ್ಲು ಶಿಕ್ಷೆಗೆ ಗುರಿಯಾದನು (Stokes ೧೮೭೬:೮೫).

**ಹಲಗಲಿಯ ಬೇಡರ ದಂಗೆ:** ಹಲಗಲಿಯು ಮುಧೋಳ ಸಂಸ್ಥಾನದಲ್ಲಿನ ಗ್ರಾಮವಾಗಿತ್ತು. ೧೧ ಸೆಪ್ಟೆಂಬರ್ ೧೮೫೭ರಲ್ಲಿ ಬ್ರಿಟಿಷ್ ಸರ್ಕಾರ ಜಾರಿಗೆ ತಂದ ಶಸ್ತ್ರಾಸ್ತ್ರ ನಿಷೇಧ ಕಾಯ್ದೆಯನ್ನು ೧೦ ನವೆಂಬರ ೧೫೮೭ರಂದು ಮುಧೋಳ ಸಂಸ್ಥಾನದ ಎಲ್ಲ ಹಳ್ಳಿಗಳಲ್ಲಿಯೂ ಜಾರಿಗೆ ತರಲಾಯಿತು (Divekar ೧೯೯೩:೧೯೬). ಮೂಲತಃ ಬೇಟೆಗಾರ ಜನಾಂಗವಾಗಿದ್ದ ಹಲಗಲಿಯ ಬೇಡರು ಬೇಟೆಗಾಗಿ ಆಯುಧಗಳನ್ನು ಸಂಗ್ರಹಿಸಿದ್ದರು. ಆದ್ದರಿಂದ ಈ ಕಾಯ್ದೆಯನ್ನು ವಿರೋಧಿಸಿ ದಂಗೆ ಪ್ರಾರಂಭಿಸಿದರು. ಇದರಲ್ಲಿ ಬುದ್ನಿ, ಮಂಟೂರ ಮತ್ತು ಆಲಗುಂಡಿ ಹಳ್ಳಿಗಳ ಬೇಡರು ಪಾಲ್ಗೊಂಡರು. ಈ ದಂಗೆಯನ್ನು ಲೆಪ್ಟಿನೆಂಟ್ ಕೇರ್‌ನು ಮಹಿಕಾಂತಾ ಮತ್ತು ಗಾಯಕವಾಡ ಪ್ರಾಂತಗಳಲ್ಲಿ ಅನುಸರಿಸಿದ ನೀತಿಯನ್ನೇ ಅನುಸರಿಸಿ ಹಲಗಲಿ ಗ್ರಾಮದ ಎಲ್ಲ ಮನೆಗಳನ್ನು ಸುಟ್ಟನು (Govt. of Bombay ಕುಂಟೆ ೧೯೭೭:೩೨೭). ಹಲಗಲಿ ಬೇಡರ ದಂಗೆಯನ್ನು ಹತ್ತಿಕಲು ಲೆಪ್ಟಿನೆಂಟ್ ಕೇರ್, ಲೆಪ್ಟಿನೆಂಟ್ ಲಾ. ಟರ್ಚ, ಡಬ್ಲ್ಯೂ.ಹೆಚ್.ಹಾವಲೋಕ್, ಲೆಪ್ಟಿನೆಂಟ್ ಕರ್ನಲ್ ಮಾಲ್ಕೊಮರು ವಹಿಸಿಕೊಂಡಿದ್ದರು.

ದಂಗೆಯೆದ್ದವರಲ್ಲಿ ೨೯೦ ಜನರನ್ನು ಬಂಧಿಸಿದರು. ಬಂಧಿತರ ವಿಚಾರಣೆಯನ್ನು ಧಾರವಾಡದ ಕ್ರಿಮಿನಲ್ ನ್ಯಾಯಾಲಯದಲ್ಲಿ, ಕಮಿಷನರ್, ಎಫ್. ಸ್ನೈಡರನ ಮುಂದೆ ೧೮ ಸೆಪ್ಟೆಂಬರ್ ೧೮೫೭ ರಂದು ನಡೆಯಿತು. ಇವರ ಮೇಲೆ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆಯ ಖಟ್ಲೆ ಹಾಕಿ ತೀರ್ಮಾನ ನೀಡಿದರು (Bombay Archives ೧೮೫೭:೨೪,೩೬,೩೭). ೨೯೦ ಜನರಲ್ಲಿ ೧೯ ಜನರನ್ನು ದಂಗೆಯ ಪ್ರಮುಖ ಪಾತ್ರಧಾರಿಗಳೆಂದು ತೀರ್ಮಾನಿಸಿ ಕೋರ್ಟ್ ಮಾರ್ಷಲ್‌ನಲ್ಲಿ ಮರಣ ದಂಡನೆ ಶಿಕ್ಷೆ ನೀಡಿದರು. ಅವರಲ್ಲಿ ೧೩ ಜನರನ್ನು ೧೧ ಡಿಸೆಂಬರ್ ೧೮೫೭ರ ಶುಕ್ರವಾರ ವಾರದ ಸಂತೆ ದಿನದಂದು ಮುಧೋಳದ ವೆಂಕಟೇಶ ಟ್ಯಾಂಕ್ ಬಳಿ ಮುಕ್ತ ಮೈದಾನದಲ್ಲಿ ನೆರೆದ ಜನಜನಂಗುಳಿಯ ಮುಂದೆ ಗಲ್ಲಿಗೇರಿಸಿದರು. ಉಳಿದ ಆರು ಜನರನ್ನು ಹಲಗಲಿಗೆ ಕೊಂಡೊಯ್ದು, ೧೪ ಡಿಸೆಂಬರ್ ೧೮೫೭ರ ಸೋಮವಾರದಂದು ಮುಕ್ತ ಮೈದಾನದಲ್ಲಿ ತೋಫಿನ ಬಾಯಿಗೆ ಆಹುತಿ ನೀಡಿದರು.

ಹಲಗಲಿ ದಂಗೆಯ ಮುಖ್ಯ ಸಂಘಟಕನಾದ ಬಾಬಾಜಿ ಸೋಮಾಜಿ ನಿಂಬಾಳ್ಕರ್, ಹಣಮ ಪೂಜಾರಿ, ಜಡಗಪ್ಪ ಜಡಗನ್ನವರ, ದ್ಯಾಮವ್ವ, ದಾದ್ದಣ್ಣ, ಬಾಲಪ್ಪ, ದ್ಯಾಮಣ್ಣ ಮಾದರ, ರಾಮ ಇವರು ೩೦ ನವೆಂಬರ್ ೧೮೫೭ರಂದು ನಡೆದ ಹಲಗಲಿಯಲ್ಲಿನ ದಂಗೆಯಲ್ಲಿ ಹತರಾದರು. ಕಾವಲುಗಾರನಾದ ಮೊಂಡಗ್ಯೆ ಭೀಮಣ್ಣನನ್ನು ೧೪ ಡಿಸೆಂಬರ್





೧೮೫೭ ರಂದು ಹಲಗಲಿಯಲ್ಲಿ ಗುಂಡಿಕ್ಕಿ ಸಾಯಿಸಿದರು. ೨೯-೩೦ ನವೆಂಬರ್ ೧೮೫೭ ರಂದು ಬ್ರಿಟಿಷರು ಸಂಪೂರ್ಣ ಗ್ರಾಮಕ್ಕೆ ಬೆಂಕಿ ಹಚ್ಚಿದಾಗ ನೂರಕ್ಕೂ ಹೆಚ್ಚು ಜನ ಸುಟ್ಟು ಹೋದರು. ೬೦ ಜನರು ೩೦ ನವೆಂಬರ್ ೧೮೫೭ರ ದಂಗೆಯಲ್ಲಿ ಹತರಾದರು. ಉಳಿದಂತೆ ಹಲಗಲಿಯ ಬೇಡ ಜನಾಂಗದ ಶೇತ ಸನದಿಯಾದ ೫೦ ವರ್ಷದ ಮಲ್ಯಾ ಮತ್ತು ೨೫ ವರ್ಷದ ಮಲ್ಯಾ ಯಲ್ಲಪ್ಪ ಮಾಚಕನೂರ ಇವರಿಗೆ ೧೪ ವರ್ಷ ಕಠಿಣ ಶಿಕ್ಷೆ (Govt. of Bombay ಪತ್ರ ಸಂಖ್ಯೆ: ೩೫೫೧/೧೮೫೭ ದಿನಾಂಕ: ೭ ಅಕ್ಟೋಬರ ೧೮೫೮) ನೀಡಿದರು.

**ನರಗುಂದ ಬಾಬಾಸಾಹೇಬ ಭಾವೆಯ ದಂಗೆ:** ಮುಂಬೈ ಪ್ರಾಂತದಲ್ಲಿನ ಒಂದು ಚಿಕ್ಕ ಸಂಸ್ಥಾನವನ್ನು ಬಾಬಾಸಾಹೇಬ ಭಾವೆ ಆಳ್ವಿಕೆ ನಡೆಸುತ್ತಿದ್ದನು. ಕಿತ್ತೂರ ದಂಗೆಯ ನಂತರ ಬ್ರಿಟಿಷರ ವಿರುದ್ಧ ದಂಗೆ ಎದ್ದು ಅಸ್ತಂಗತವಾದ ಸಂಸ್ಥಾನವೆಂದರೆ, ನರಗುಂದ ಆಗಿದೆ. ಬಾಬಾಸಾಹೇಬನಿಗೆ ಗಂಡು ಸಂತಾನವಿಲ್ಲದ್ದರಿಂದ ದತ್ತು ಪಡೆಯುವ ಬೇಡಿಕೆಯನ್ನು ಬ್ರಿಟಿಷರು ನಿರಾಕರಿಸಿದರು. ಜೊತೆಗೆ ಇನಾಂ ಕಮೀಶನ್ ನೇಮಕ, ಶಸ್ತ್ರಾಸ್ತ್ರ ನಿಷೇಧ ಕಾಯ್ದೆಯಿಂದಾಗಿ ರೋಷಿ ಹೋಗಿ ದಂಗೆಯೆದ್ದನು. ೨೯ ಮೇ ೧೮೫೭ರಂದು ಬಾಬಾಸಾಹೇಬ್ ತನ್ನ ಸಹಚರರೊಂದಿಗೆ ಸೇರಿ ದಕ್ಷಿಣ ಮರಾಠಾ ದೇಶದ ಪೋಲಿಟಿಕಲ್ ಏಜೆಂಟ್ ಮ್ಯಾನ್ಸನ್‌ನ ರುಂಡ ಕತ್ತರಿಸಿದರು. ಇದರಿಂದಾಗಿ ತೀವ್ರ ಸ್ವರೂಪ ಪಡೆದುಕೊಂಡ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ನರಗುಂದ ಮೇಲೆ ದಾಳಿ ಮಾಡಿ ೩ ಜೂನ್ ೧೮೫೭ರಂದು ನರಗುಂದ ಕೋಟೆಯನ್ನು ಸಂಪೂರ್ಣವಾಗಿ ವಶಪಡಿಸಿಕೊಂಡರು. ಬಾಬಾಸಾಹೇಬ ಭಾವೆ ಮತ್ತು ಇತನೊಂದಿಗೆ ದಂಗೆಯಲ್ಲಿ ಭಾಗಿಯಾದ ಎಲ್ಲರನ್ನೂ ಬಂಧಿಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ವಿವಿಧ ಶಿಕ್ಷೆಗಳನ್ನು ನೀಡಿದರು (Bombay Archives : ೨೯,೩೦,೩೧,೩೨,೩೩ ಮತ್ತು ೩೫/೧೮೫೮).

ಮೊದಲನೆಯ ಮೊಕದ್ದಮೆಯ ವಿಚಾರಣೆಯನ್ನು ೯ ಜೂನ್ ೧೮೫೮ರಂದು ನರಗುಂದದಲ್ಲಿ ಕರ್ನಲ್ ಮಾಲ್ಕೊಮನು ನಡೆಸಿದನು. ಈತನ ತೀರ್ಪಿನ ಅನ್ವಯ ೧೦ ಜೂನ್ ೧೮೫೮ರಂದು ಸಂಜೆ ೫ ಗಂಟೆಗೆ ನರಗುಂದ ಪೇಟೆಯಲ್ಲಿ ೧೪ ಜನರನ್ನು ಗುಂಡಿಟ್ಟು ಕೊಲ್ಲಲಾಯಿತು. ಅವರುಗಳೆಂದರೆ: ಜಮಾಲನ ಮಗ ಇಮಾಮ್ ಇಸ್ಮಾಯಿಲ್, ಲಕ್ಷ್ಮಣ ಜನಾರ್ಧನ, ತೆಲ್ಲನ ಮಗ ರಾಮ, ಮಲ್ಲನ ಮಗ ಬಾಪು, ಫೀರಾಜಿ, ಮಹಿಪತಿಯ ಮಗ ತುಕಾರಾಮ, ವೆಂಕಟನ ಮಗ ಖಾಂಡು, ಲಕ್ಷ್ಮಣನ ಮಗ ರಘೋಬ, ಹುಸೇನನ ಮಗ ಗೂಡು, ಫಕೀರ ಮೊಹ್ಮದ್, ಮೋವಿಸಖಾನನ ಮಗ ಪಾರಸಖಾನ, ದುಮಪ್ಪನ ಮಗ ಬಸಪ್ಪ, ಸುಬ್ಬರಾವ್ ಜ್ಯೋತಿಬಾ, ಯೆಲಗುಡ್ಡನ ಮಗ ಬಾಲ.

ಎರಡನೆಯ ಮೊಕದ್ದಮೆಯ ವಿಚಾರಣೆಯನ್ನು ೧೨ ಜೂನ್ ೧೮೫೮ರಂದು ನರಗುಂದದಲ್ಲಿ ಕರ್ನಲ್ ಮಾಲ್ಕೊಮ್ ನಡೆಸಿದನು. ಇದರಲ್ಲಿ ಡಂಬಳ ಮತ್ತು ಸೊರಟೂರಗಳ ಸರ್ದೇಸಾಯಿಯಾದ ಶೀನಪ್ಪ ದೇಸಾಯಿಯ ವಿಚಾರಣೆ ನಡೆಸಿದರು. ಬಾಬಾಸಾಹೇಬನೊಂದಿಗೆ ದಂಗೆಯಲ್ಲಿ ಭಾಗಿಯಾಗಿದ್ದು ಮುಂತಾದ ಆಪಾದನೆಗಳ ಮೇಲೆ ಈತನನ್ನು ೧೨ ಜೂನ್ ೧೮೫೮ ರಂದು ಸಂಜೆ ೫ ಗಂಟೆಗೆ ಗುಂಡಿಟ್ಟು ಕೊಲ್ಲಲಾಯಿತು.

ಮೂರನೆಯ ಹಂತದಲ್ಲಿ ಕರ್ನಲ್ ಮಾಲ್ಕೊಮ್ ಏಳು ಅಪರಾಧಿಗಳ ವಿಚಾರಣೆಯನ್ನು ೧೨ ಜೂನ್ ೧೮೫೮ರಂದು ನರಗುಂದದಲ್ಲಿ ನಡೆಸಿದನು. ಇವರು ೨೪ ಮೇ ಮತ್ತು ೨ ಜೂನ್ ೧೮೫೮ ರಂದು ನಡೆದ ದಂಗೆಯಲ್ಲಿ ಭಾಗಿಯಾಗಿದ್ದರೆಂಬ ಆಪಾದನೆ ಮೇಲೆ ಅದೇ ದಿನ ಇಡಗಲ್ ಗ್ರಾಮದ ಬಾಲಪ್ಪ ಮಗನಾದ ಮಲ್ಲಪ್ಪ, ನರಗುಂದದ ಧನಗರ ಗೋವಿಂದ, ಬಸಪ್ಪ ಶಿಂದಗಿ, ರೆಹಮಾನ ಖಾನ, ಮೋಹಿನುದ್ದೀನ ಇವರನ್ನು ಗುಂಡಿಟ್ಟು ಕೊಲ್ಲಲಾಯಿತು. ಉಳಿದ ಇಬ್ಬರಿಗೆ ೨೪ ಚಾಟಿ ಏಟಿನ ಶಿಕ್ಷೆ ನೀಡಲಾಯಿತು.

ನಾಲ್ಕನೆಯ ವಿಚಾರಣೆಯನ್ನು ಬೆಳಗಾವಿಯಲ್ಲಿ ನಡೆಸಲಾಯಿತು. ನರಗುಂದದ ಬಾಬಾಸಾಹೇಬ ಮತ್ತು ಇತರ ಐದು ಜನರ ವಿಚಾರಣೆಯನ್ನು ಕ್ರಿಮಿನಲ್ ಕೋರ್ಟ್‌ನಲ್ಲಿ ಕ್ಯಾ. ಸ್ನೈಡರ್ ನಡೆಸಿದರು. ದಂಗೆ ಪ್ರಾರಂಭಿಸಿದ ಮತ್ತು ಮ್ಯಾನ್ಸನ್‌ನನ್ನು ಕೊಂದ ಆಪಾದನೆಯ ಮೇಲೆ ಇವರಿಗೆ ಶಿಕ್ಷೆಗಳನ್ನು ಘೋಷಿಸಿ ೧೦ ಜೂನ್ ೧೮೫೮ ರಂದು ತೀರ್ಪು ನೀಡಿದರು. ಅದರಂತೆ– ಬಾಬಾಸಾಹೇಬ ಭಾವೆಯನ್ನು ೧೨ ಜೂನ್ ೧೮೫೮ ರಂದು ಸಂಜೆ ಬೆಳಗಾವಿಯಲ್ಲಿನ ಗುಡ್ಡದ ಮೇಲಿನ ಸಾರ್ವಜನಿಕವಾಗಿ ಬಯಲಿನಲ್ಲಿ ಗಲ್ಲಿಗೇರಿಸಲಾಯಿತು. ಗೋವಿಂದ ನಾರಾಯಣ ಅಲಿಯಾಸ್ ಅಣ್ಣಾ ಪರಚೂರೆ, ಗಂಗಾಧರ ಚಿಂತಾಮಣಿ ಅಲಿಯಾಸ್ ಅಣ್ಣಾ ಸಹಸ್ರಬುದ್ಧೆ, ಬಸಪ್ಪ ಬಾಲಪ್ಪ ತಾಂಬೆ, ಕಾಶೀರಾವ್ ನೇಮಾಜಿ ನಲ್ವಡೆ, ಮರಿತಮ್ಮನ ಮಗ ಹನುಮಂತ ಇವರನ್ನು ೧೮೫೮ ಜೂನ್ ಕೊನೆಯ ವಾರ ಧಾರವಾಡದಲ್ಲಿ ಗಲ್ಲಿಗೇರಿಸಲಾಯಿತು. ಹಿರೇಕೊಪ್ಪ ವಿಷ್ಣು ಕೃಷ್ಣ ಕುಲಕರ್ಣಿಯು ಆಗ ತಲೆ ಮರೆಸಿಕೊಂಡನು ನಂತರ ಸುಮಾರ ೧೮೬೦ರಲ್ಲಿ ಗಲ್ಲಿಗೇರಿಸಲಾಯಿತು.

ಆರನೆಯ ನ್ಯಾಯಾಂಗ ವಿಚಾರಣೆಯು ೧೫ ಜೂನ್ ೧೮೫೮ರಂದು ನರಗುಂದದಲ್ಲಿ ಲೆಫ್ಟಿನೆಂಟ್ ಕರ್ನಲ್ ಮಾಲ್ಕೊಮ್ ನಡೆಸಿದನು. ನರಗುಂದ ಬಾಬಾಸಾಹೇಬನೊಂದಿಗೆ ಸೇರಿ ಬ್ರಿಟಿಷರ ವಿರುದ್ಧ ದಂಗೆಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ರಘೋಬ್ ಲಿಮೆಯನ್ನು ಗಲ್ಲು ಶಿಕ್ಷೆ ನೀಡಿ, ೧೬ ಜೂನ್ ೧೮೫೮ರ ಸಂಜೆ ೬ ಗಂಟೆಗೆ ಗಲ್ಲಿಗೇರಿಸಿದರು.

ಆರನೆಯ ಹಂತದ ವಿಚಾರಣೆಯನ್ನು ೧೬ ಜೂನ್ ೧೮೫೮ರಂದು ನರಗುಂದದಲ್ಲಿ ಲೆಫ್ಟಿನೆಂಟ್ ಕರ್ನಲ್ ಮಾಲ್ಕೊಮ್ ನಡೆಸಿ, ೧೬ ಅಪರಾಧಿಗಳ ವಿಚಾರಣೆಯ ತೀರ್ಪನ್ನು ೧೭ ಜೂನ್ ೧೮೫೮ರಂದು ನೀಡಿದರು. ಅಮರಗೋಳದ ಲಿಂಗಪ್ಪನ ಮಗ ಬಸಪ್ಪ, ನರಗುಂದ ಶೇತಸನದಿ ಬಾಪು ನಾಯಕ, ನರಗುಂದ ಶೇತಸನದಿ ಲಕ್ಷ್ಮಪ್ಪನ ಮಗ ಲಿಂಗ ಇವರನ್ನು ನರಗುಂದ ಸಾರ್ವಜನಿಕ ಸ್ಥಳದಲ್ಲಿ ೧೮ ಜೂನ್ ೧೮೫೮ರ ಸಂಜೆ ಗುಂಡು ಹಾರಿಸಿ ಕೊಂದರು. ನರಗುಂದ ಕೋಟೆಯ ಶೇತಸನದಿಗಳಾದ ಚಿಮ್ನಾಜಿ ಯಾದವ, ನರಸಿಂಗ ಮಾನೆ, ಶಿವಪ್ಪನ ಮಗ ನರಸಿಂಗ್, ಲಿಂಗಪ್ಪನ ಮಗ ಫಕೀರ, ಶೇತಸನದಿ ಶಂಕ್ರಪ್ಪನ ಮಗ ವ್ಯಂಕಾ, ಹುಸೇನನ್ ಮಗ ಹಟೇಲ್, ಮೊಹಿನುದ್ದಿನನ ಮಗ ಅಬ್ದುಲ್, ಮೀರಾನ ಮಗ ರಾಜಾ, ನರಗುಂದದ ತೆಹಸಿಲ್ದಾರ ಫಕ್ರು, ಲಿಂಗನ ಮಗ ನರಸಾ, ಕೃಷ್ಣಾಜೀಯ ಮಗ ತುಕಾರಾಮ ಇವರಿಗೆ ಕರಿನೀರಿನ ಶಿಕ್ಷೆ ವಿಧಿಸಿದರು. ದೇವಸ್ಥಾನದ ಪೂಜಾರಿ ಪಾಮಾ ಇತನಿಗೆ ೨೪ ಛಾಟಿನ ಶಿಕ್ಷೆ ನೀಡಿದರು.





ಏಳನೆಯ ಹಂತದ ೧೫ ಅಪರಾಧಿಗಳ ವಿಚಾರಣೆಯನ್ನು ಲೆಫ್ಟಿನೆಂಟ್ ಕರ್ನಲ್ ಮಾಲ್ಕೊಮನು ೨೨ ಜೂನ್ ೧೮೫೮ರಂದು ನರಗುಂದದಲ್ಲಿ ನಡೆಸಿ, ದಂಗೆ ಮುಂತಾದ ಅಪಾದನೆಗಳ ಮೇಲೆ–ಕಳಸದ ದೇಸಾಯಿ ಶಂಕರೆಪ್ಪ, ನರಗುಂದ ಶೇತಸನದಿ ನಾಯಕ ವೆಂಕಪ್ಪ, ನರಗುಂದದ ಶಿಲೇದಾರನಾದ ಅರ್ಜುನ ಮತ್ತು ರಘು ಇವರನ್ನು ೨೪ ಜೂನ್ ೧೮೫೮ರಂದು ನರಗುಂದದ ಸಾರ್ವಜನಿಕ ಸ್ಥಳದಲ್ಲಿ ಗಲ್ಲಿಗೇರಿಸಲಾಯಿತು. ಕಣಕಿಕೊಪ್ಪ ಶೇತಸನದಿ ಗೌರಪ್ಪ, ತಡಸಿಯ ಶೇತಸನದಿ ಪರುಷ, ನರಗುಂದದ ಶಿಲೇದಾರನಾದ ವ್ಯೆಂಕಾ ಪವಾರ, ನರಗುಂದದ ಸಿಪಾಯಿಗಳಾದ ಸುಲ್ತಾನ ಘಾರಸ್, ಇಮಾಮಖಾನನ ಮಗ ಘಾರಸಖಾನ, ನರಗುಂದದ ಶೇತಸನದಿ ಗುಳಿಯಾ, ಶಿರೋಳ ಶೇತಸನದಿ ಅಯ್ಯಪ್ಪ ಹಿದುಲ್ಲಾ ಇವರಿಗೆ ಕರಿನೀರಿನ ಶಿಕ್ಷೆ ನೀಡಲಾಯಿತು. ಜಕ್ಕಣ್ಣನ ಮಗ ಮುದಕಣ್ಣನಿಗೆ ೨೪ ಛಾಟಿ ಏಟಿನ ಶಿಕ್ಷೆ ನೀಡಲಾಯಿತು.

ಎಂಟನೆಯ ಹಂತದಲ್ಲಿ ದಂಗೆಗೆ ಸಹಾಯ ಮಾಡಿದ ಮತ್ತು ಮ್ಯಾನ್ಸನ್‌ನನ್ನು ಕೊಂದ ಆಪಾದನೆಯ ಮೇಲೆ ಭೀಕಾಜಿಪಂತ ಗಣೇಶ ಘೋಖಲೆ ಇವರನ್ನು ಲೆಫ್ಟಿನೆಂಟ್ ಕರ್ನಲ್ ಮಾಲ್ಕೊಮನು ೧೯ ಜೂನ್ ೧೮೫೮ರಂದು ನರಗುಂದದಲ್ಲಿ ವಿಚಾರಣೆ ನಡೆಸಿದರು. ೨೩ ಜೂನ್ ೧೮೫೮ರಂದು ಕರಿನೀರಿನ ಶಿಕ್ಷೆಯ ತೀರ್ಪು ನೀಡಿ ಅಂಡಮಾನಕ್ಕೆ ಕಳುಹಿಸಿದರು.

ಒಂಭತ್ತನೆಯ ಹಂತದದಲ್ಲಿ ದಂಗೆ ಮುಂತಾದ ಅಪಾದನೆಗಳ ಮೇಲೆ ೨೨ ಜನರ ವಿಚಾರಣೆಯನ್ನು ಲೆ. ಕ. ಮಾಲ್ಕೊಮನು ೨೬ ಜೂನ್ ೧೮೫೮ರಂದು ನರಗುಂದದಲ್ಲಿ ನಡೆಸಿದರು. ೨೮ ಜೂನ್ ೧೮೫೮ರಂದು ತೀರ್ಪು ನೀಡಿದರು. ಅದರಂತೆ– ನರಗುಂದದ ಕಾರಕೂನ ತಿಮ್ಮಪ್ಪ ಅಲಿಯಾಸ ರಂಗಪ್ಪ ಜಯಪ್ಪ ಮಜುಂದಾರ, ಶಿರೋಳದ ಹುಲಿಗೆಪ್ಪ ಕಲ್ಲಪ್ಪ, ನರಗುಂದದ ಶಿಲೇದಾರ ಹನುಮಂತ ಘಾಟಗೆ, ನರಗುಂದದ ಶಿಲೇದಾರ ವ್ಯಂಕಟರಾವ್ ಭೋಸ್ಲೆ, ಶೇತಸನದಿಯರ ನಾಯಕ ತಮ್ಮಣ್ಣ ಇವರಿಗೆ ನೀಡಿದ ಗಲ್ಲು ಶಿಕ್ಷೆಯನ್ನು ಕ. ಜಾಕೋಬ, ಕಮೀಷನರ್ ಪತ್ರದನ್ವಯ ರದ್ದುಪಡಿಸಿ, ಕರಿನೀರಿನ ಶಿಕ್ಷೆ ನೀಡಲಾಯಿತು. ಜೊತೆಗೆ ಸೋಮಾಪೂರದ ಫೀರಸಾಹೇಬನ ಮಗ ಬುದ್ಯಾ, ಸೋಮಾಪೂರದ ಕಾವಲುಗಾರ ಭೀಮಾ, ಸೋಮಾಪೂರದ ಸಪಾಯಿ ಮಬಾಲ, ಸಂಕದಾಳದ ಶಿಲೇದಾರ ರುದ್ರಪ್ಪನ ಮಗ ಭೀಮಾ, ನರಗುಂದ ಶೇತ ಸನದಿಗಳಾದ ವ್ಯೆಂಕಟನ ಮಗ ರಾಜಾ, ಶಂಕ್ರೆಪ್ಪನ ಮಗ ಲಿಂಗಪ್ಪ, ಸಂಗಪ್ಪನ ಮಗ ಶಿವಪ್ಪ, ಯೆರೆಪ್ಪನ ಮಗ ಗಂಗಾರಾಮ ಇವರಿಗೂ ಕರಿನೀರಿನ ಶಿಕ್ಷೆ ನೀಡಿದರು. ನರಗುಂದ ಶೇತಸನದಿ ಭೀಮಪ್ಪನ ಮಗ ನೀಲಪ್ಪ, ಬೆಳವಣಿಕೆಯ ತಿಮ್ಮಪ್ಪನ ಮಗ ಭೀಮಾ ಇವರಿಗೆ ೧೪ ವರ್ಷ ಮತ್ತು ಸಿದ್ದಾಪೂರದ ಶಿದ್ದನಾಯಕನ ಮಗ ರಾಮ, ನರಗುಂದ ಶೇತಸನದಿ ಜೂಲ್ ಫಕ್ಕೀರನ ಮಗ ರಾಜಾ ಇವರಿಗೆ ಏಳು ವರ್ಷ ಕಠಿಣ ಶಿಕ್ಷೆಯಾಯಿತು. ಸೋಮಾಪೂರದ ಕಾರಕೂನ ಯಂಕಪ್ಪನ ಮಗ ಫಕೀರ, ಸೋಮಾಪೂರದ ಜಾಲೆಹಳ್ಳಿಯ ಯಲ್ಲಪ್ಪನ ಮಗ ಗೌರಯ್ಯಾ, ನರಗುಂದದ ಫೀರಾಜಿ ಚೌವ್ಹಾಣ ಇವರಿಗೆ ೨೪ ಛಾಟಿ ಏಟಿನ ಶಿಕ್ಷೆ ನೀಡಿದರು.

೮ ಜುಲೈ ೧೮೫೮ ರಂದು ಕಲಾದಗಿಯಲ್ಲಿ ಲೆ. ಕ. ಮಾಲ್ಕೊಮ್ ವಿಚಾರಣೆ ನಡೆಸಿ ನರಗುಂದದ ಅಮೀನ ಸಾಹೇಬನ ಮಗ ಬಡೆಮೀಯಾನಿಗೆ ಕರಿನೀರಿನ ಶಿಕ್ಷೆ,

ಸಯ್ಯದ ಬಡೇನನ ಮಗ ಖಾದರನಿಗೆ ೭ ವರ್ಷ, ರಾಮು ದೇವಜಿ ಭೋಸ್ಲೆಗೆ ೨ ವರ್ಷ ಕಠಿಣ ಶಿಕ್ಷೆ ಮತ್ತು ಇಬ್ಬರಿಗೆ ೨೪ ಛಾಟಿ ಏಟಿನ ಶಿಕ್ಷೆಯ ತೀರ್ಪು ನೀಡಿದನು. ನಂತರ ದಿನಾಂಕ ೨೪ ಜೂನ್, ೧೬ ಜೂಲೈ, ೨೧ ಆಗಸ್ಟ್, ೧ ಸೆಪ್ಟೆಂಬರ್ ೧೮೫೮ ರಂದು ನಡೆಸಲಾದ ವಿಚಾರಣೆಗಳಲ್ಲಿ ಕೃಷ್ಣಜೀಪಂತ ಜೋಷಿ, ಶೇಷಗಿರಿ ರಾವ್, ರಘೋಬಾ, ಲಿಂಗಪ್ಪ ಇವರಿಗೆ ಕರಿನೀರನ ಶಿಕ್ಷೆ ನೀಡಿದರು. ಕೃಷ್ಣಾಜಿ ಪಂತ ಅಲಿಯಾಸ ಬನ್ಯಾಬಾಪುಗೆ ೧೪ ವರ್ಷ, ಆವುದಾ ಕೃಷ್ಣಾಜಿ ದಳವಾಯಿ, ಫಕೀರಾ ಲಿಂಗಪ್ಪ ಅಳಗೋಡಿ ಇವರಿಗೆ ಎರಡು ವರ್ಷ, ಭೀಮಾ ನಾಯಕ, ಯಲ್ಲೂಜೀ ಸುಬ್ಬರಾವ್ ಇವರಿನಿಗೆ ಮೂರು ವರ್ಷ ಬಸವಂತ ಪರಪ್ಪ ನಾಗಹಳ್ಳಿ ನಾಲ್ಕು ವರ್ಷಗಳ ಶಿಕ್ಷೆಯಾಯಿತು.

**ಕೊಪ್ಪಳ ದಂಗೆ:** ಮುಂಡರಗಿ ಭೀಮರಾವ್, ಹೆಮ್ಮಗೆಯ ಕೆಂಚನಗೌಡ ಇವರು ಇತರರೊಂದಿಗೆ ರಹಸ್ಯ ಒಪ್ಪಂದಗಳನ್ನು ಮಾಡಿಕೊಂಡು ದಂಗೆ ಪ್ರಾರಂಭಿಸಿದರು. ಇವರು ಕೊಪ್ಪಳದ ಯುದ್ಧದಲ್ಲಿ ಬ್ರಿಟಿಷರನ್ನು ಎದುರಿಸಿದರು. ವಿಫಲರಾಗಿ ಗಲ್ಲು, ಗುಂಡೇಟು, ಕಠಿಣ ಜೈಲು ಶಿಕ್ಷೆಗೆ ಗುರಿಯಾದರು (Bombay Archives:೨೯,೩೨,೩೩,೩೫ ಮತ್ತು ೩೬)ಅವು ಈ ಕೆಳಗಿನಂತಿದೆ.

೧ ಜೂನ್ ೧೮೫೮ರ ಕೊಪ್ಪಳ ಯುದ್ಧದಲ್ಲಿ ಭೀಮರಾವ್ ರಂಗರಾವ್ ಮುಂಡರಗಿ, ಕೆಂಚನಗೌಡ ಖಾನಗೌಡ ಇವರ ಜೊತೆಗೆ ನೂರಕ್ಕೂ ಹೆಚ್ಚು ಜನರು ಮೃತರಾದರು.

ಕೊಪ್ಪಳದಲ್ಲಿ ಜೂನ್ ೧೮೫೮ ರಂದು ನಡೆದ ಕೋರ್ಟ್ ಮಾರ್ಷಲ್‌ನಲ್ಲಿ ಮರಣ ದಂಡನೆ ಶಿಕ್ಷೆ ನೀಡಿದರು. ತೀರ್ಪಿನಂತೆ ವೆಂಕಪ್ಪ ಅಲಿಯಾಸ ಶೀನಪ್ಪನ್ ಈತನನ್ನು ೧೨ ಜೂನ್ ೧೮೫೮ರಂದು, ಜೂನ್ ೧೮೫೮ರಲ್ಲಿ ಹೆಮ್ಮಗಿಯ ಮಾನೆಬಸಪ್ಪ ವೀರಭದ್ರಪ್ಪ ಮತ್ತು ಕೊಪ್ಪಳದ ಮೊಹಿನುದ್ದೀನ, ಕುರ್ಲಹಳ್ಳಿಯ ಲಿಂಗಾ, ಗಿರಿಯಣ್ಣ, ಲಕ್ಷ್ಮಣ, ಹನುಮಂತ, ಬರಮಾ, ಹಲಗ್ಯಾ, ಭೀಮಾ, ಮುಲ್ಲಾ, ಕಜಹಾ, ಬರಮಾ, ದುರ್ಗಾ, ಹುಸೇನ ಸಾಹೇಬ್, ಮುಲ್ಲಾ, ಹಮೀದ ಸಾಹೇಬ್, ಹುಸೈನ ಸಾಹೇಬ್, ಹಾಯತ್ ಸಾಹೇಬ್, ಫಕೀರ ಸಾಹೇಬ್, ಉಕುಂದ, ರಂಗಾ, ತಿಮ್ಮ, ಪೊಂಗಾರಿ, ರಂಗಾ, ಲಿಂಗಾ, ಭೀಮಾ, ಹುಸೇನ ಸಾಹೇಬ್, ಬಾವಾ ಸಾಹೇಬ್, ಹರೇಹಾ ಸಾಹೇಬ, ಇಮಾಮ್ ಸಾಹೇಬ, ಹಣ್ಣಗೌಡಾ, ಹನುಮಣ್ಣ, ಮಲ್ಯಾ, ಹನ್ಮಾ, ಬಸಯ್ಯಾ, ರಾಮಣ್ಣ, ಚನ್ನ, ಬಾನಿ ಸಾಹೇಬ, ಜೀವನ ಸಾಹೇಬ, ಯಲ್ಯಾ, ಉರ್ವಿ, ಕರ್‍ಯನ್ನ, ಕರ್ಕ, ಉರ್ವಿ, ಲಿಂಗಾ, ಯಲ್ಯಾ, ಗೊಗ್ರಪ್ಪ, ಚನ್ನಾ ವೀರಪ್ಪ, ಭೀಮಣ್ಣ, ಬರಮಣ್ಣ, ಹರಿಯಪ್ಪ, ಗುರಡಾ, ಲಿಂಗಾ, ಬಸವ, ಬಸಯ್ಯ ತಲಾರಿ, ಜುನಹಾ, ದಾವುದ್ ಸಾಹೇಬ, ಲಕ್ಷ್ಮಣ, ಶಿದ್ದಾ, ಹನುಮಣ್ಣ, ವಲ್ಲಭದಾಸ, ಹನುಮಣ್ಣ, ತಮ್ಮನ್ನ ತಲಾರಿ, ತಮ್ಮಯ್ಯಾ, ಮುದರಂಗಾ, ಹನುಮಣ್ಣ, ಪೆರು, ಮುದಲ್ಲನೇರ, ಉರ್ವಿ, ಚೆನ್ನಪ್ಪ, ಭೀಮಪ್ಪ, ಅವಣ್ಣ, ಹಯತ್ ಸಾಹೇಬ, ಸಯ್ಯದ ಸಾಹೇಬ, ಮಕದುಮ್ ಹೀಗೆ ೮೩ ಜನರನ್ನು ಗುಂಡಿಟ್ಟು ಕೊಲ್ಲಲಾಯಿತು. ೪೦ ಜನರಿಗೆ ೧೪ ವರ್ಷ, ಎಂಟು ಜನರಿಗೆ ಐದು ವರ್ಷ, ೧೨ ಜನರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದರು.

ಕಾರವಾರದಲ್ಲಿಯೂ ಸಹ ೧೮೫೮ ಫೆಬ್ರವರಿ ಇಂದ ೧೮೫೯ ಡಿಸೆಂಬರ್ ವರೆಗೆ ದಂಗೆ ನಡೆದು ಸುಮಾರು ೧೪ ಜನರಿಗೆ ಮರಣ ದಂಡನೆ, ಹಲವು ಜನರಿಗೆ ವಿವಿಧ ಶಿಕ್ಷೆಗಳನ್ನು ನೀಡಿದ್ದಾರೆ.





ಹೀಗೆ ಹತ್ತೊಂಭನೆಯ ಶತಮಾನದಲ್ಲಿ ಕರ್ನಾಟಕದ ಮೈಸೂರ, ಬೆಂಗಳೂರ, ಬೆಳಗಾವಿ, ವಿಜಾಪೂರ ಮುಂತಾದ ಹಲವಾರು ಪ್ರದೇಶಗಳಲ್ಲಿ ಬ್ರಿಟಿಷ್ ವಿರೋಧಿ ದಂಗೆಗಳು ನಡೆದವು. ಈ ದಂಗೆಗಳು ನಂತರದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿದವು ಎಂಬುದರಲ್ಲಿ ಸಂದೇಹವಿಲ್ಲ. ಈ ಇತಿಹಾಸ ರಚನೆಗೆ ಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಹೋರಾಟಗಾರರಿಗೆ ಕೇಳಲಾದ ಪ್ರಶ್ನೆ ಮತ್ತು ಉತ್ತರಗಳ ವಿಶ್ಲೇಷಣೆ ಮಾಡುವ ದಿಶೆಯಲ್ಲಿ ಹೆಚ್ಚಿನ ಸಂಶೋಧನೆಗಳ ಅವಶ್ಯಕತೆ ಇದೆ.

### ಪರಾಮರ್ಶನ ಗ್ರಂಥಗಳು


- ಒಡೆಯರ ಸದಾಶಿವ. ೧೯೮೧. ರಾಣಿ ಚೆನ್ನಮ್ಮ, ಹೊಸ ದೆಹಲಿ, ನ್ಯಾಶನಲ್ ಬುಕ್ ಟ್ರಸ್ಟ್.
- Bombay Archives: Political Department Volumes
- Stokes H.J. 1870, an Historical Account of the Belgaum District In the Bombay Presidency. Bombay The Education Society's.
- Govt. of Bombay, 1977, Source Materials for a History of The Freedom Movement in India, Collected from the Bombay Govt. Records Vol:I ( 1818-1885), Bombay.
- Divekar. V.D. 1993, South India in 1857 War of Independence. Pune, Lokamanya Tilak Smarak Trust.
- Parasnis D.B. 1917. The Sangli State, Bombay Lakshmi Art Printing Works.
- West E.W 1869. A memoir of the States of The Southern Maratha country, Byculla, At the Education Society's Press.
- Bider Disturbance File No: 283 A., in Poona Archives. Poona.

# ಉದಾರೀಕೃತ ಭಾರತ ಮತ್ತು ಶಿಕ್ಷಣ : ಗುಸ್ತೆವೋ ಎಸ್ತೆವಾ ವಾಗ್ವಾದಗಳು

▯▯ **ಪ್ರದೀಪ್‌ಕುಮಾರ್ ಶೆಟ್ಟಿ ಕೆ.**

ಇತಿಹಾಸ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ
ಕಾಲೇಜು, ಬೈಂದೂರು
ಕುಂದಾಪುರ ತಾಲ್ಲೂಕು
ಉಡುಪಿ ಜಿಲ್ಲೆ–576214

**ಸು**ಮಾರು 1990ರ ದಶಕದಲ್ಲಿ ಭಾರತಕ್ಕೆ ಕಾಲಿಟ್ಟ LPG- Libaralisation, Privatisation, Globalisation ಪ್ರಕ್ರಿಯೆಗಳು ಬರೀ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಆಯಾಮಗಳಲ್ಲಿ ಮಾತ್ರ ತನ್ನ ಪರಿಣಾಮಗಳನ್ನು ಉಂಟುಮಾಡಲಿಲ್ಲ. ಬದಲಿಗೆ ಶಿಕ್ಷಣವನ್ನೂ ಒಳಗೊಂಡಂತೆ ಸಾಂಸ್ಕೃತಿಕವಾಗಿ ಅದು ಉಂಟುಮಾಡಿದ ಪರಿಣಾಮ ಅತ್ಯಂತ ಮಹತ್ವದ್ದು. ಅದು ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳೆರಡನ್ನೂ ಮಾಡಿತಾದರೂ ಕೂಡಾ, ಸಿಂಹಪಾಲು ಪರಿಣಾಮ ಅಧನಾತ್ಮಕವಾದುದು. ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಅದು ಸಾಕಷ್ಟು ರಚನೀಯ ಬದಲಾವಣೆಯನ್ನು ಉಂಟುಮಾಡಿತು. ಭಾರತದಲ್ಲಿನ ಕೇಂದ್ರ ಶಿಕ್ಷಣ ವ್ಯವಸ್ಥೆಯ ಭಾಗಗಳಾದ UGC, AICTE ಗಳು ಜಾಗತೀಕೃತ ವಿಶ್ವ ಆರ್ಥಿಕ ವ್ಯವಸ್ಥೆಗೆ ಅನುರೂಪವಾಗಿ ತಮ್ಮ ನೀತಿ ನಿಲುವುಗಳನ್ನು ಬದಲಾಯಿಸಿಕೊಂಡವು. ಇಂತಹ ಪ್ರಯತ್ನ ಇಡೀ ಭಾರತದಲ್ಲಿ ಒಂದು ಶಿಕ್ಷಣ ಉದ್ಯಮವನ್ನು ಸೃಷ್ಟಿ ಮಾಡಿತು. ಬಂಡವಾಳ, ಮಾರುಕಟ್ಟೆ, ವಿನಿಮಯ ಉತ್ಪಾದನೆಗಳೇ ಅದರ ಮಂತ್ರವಾದವು. ಇದು ಮುಖ್ಯವಾಗಿ 3 ಸಮಸ್ಯೆಗಳನ್ನು ಸೃಷ್ಟಿಸಿತು. ಒಂದು– ಶಿಕ್ಷಣವನ್ನು ಔಪಚಾರಿಕ ಉದ್ಯಮ–ಮಾರುಕಟ್ಟೆಯನ್ನಾಗಿಸಿ ಭಾರತದ ಶಿಕ್ಷಣ ವ್ಯವಸ್ಥೆಯ ಉದ್ಯಮವನ್ನು ಅಂತರರಾಷ್ಟ್ರೀಯ ಶಿಕ್ಷಣ ವಾಣಿಜ್ಯದ ಜೊತೆಗೆ ಜೋಡಿಸಲು ಪ್ರಯತ್ನಿಸಿದ್ದು, ಎರಡು– ಮಾರುಕಟ್ಟೆಯ ಭರದಲ್ಲಿ ಶಿಕ್ಷಣವನ್ನು ಉದ್ಯಮವಾಗಿಸಿ ಕಲಿಕೆ ಅತ್ಯಂತ ಮಹತ್ವದ ಗುರಿಗಳನ್ನು ಮೂಲೆಗುಂಪಾಗಿಸಿದ್ದು, ಮೂರು– ಭಾರತೀಯ ಅಥವಾ ದೇಶೀಯ ಅನ್ನಬಹುದಾದ ಹಲವು ಶಿಕ್ಷಣ ಪರಂಪರೆ, ಯೋಚನೆ, ಚಿಂತನಾಕ್ರಮ, ಅತ್ಯಂತ





ಮುಖ್ಯವಾಗಿ ಕಲಿಕೆಯ ಕ್ರಮವನ್ನು ನಿರಾಕರಿಸುತ್ತಾ ಇದು ಸಾಗಿತು ಮತ್ತು ಪ್ರಜ್ಞೀಯ ಮತ್ತು ಅಪ್ರಜ್ಞೀಯ ನೆಲೆಯಲ್ಲಿ ತನ್ನದಲ್ಲದ ಕ್ರಮವನ್ನು ಮೂಲೆಗುಂಪಾಗಿಸಿತು. ಅಮೆರಿಕಾ–ಯುರೋಪ್ ಪ್ರಣೀತ 'ಶಿಕ್ಷಣ'ವೆನ್ನುವ ಮಾದರಿ ಬಹು ವೈವಿಧ್ಯದ ಕಲಿಕೆಯ ಕ್ರಮವನ್ನು ಸಾಯಿಸಿತು. ಭಾರತದಲ್ಲಿ ಕಲಿಕೆಯ ಕ್ರಮದ ವಿಶ್ವಗಳಿದ್ದುವು, ಇದನ್ನು ನಿರಾಕರಿಸಿ ಜಾಗತೀಕರಣ ಶಿಕ್ಷಣವನ್ನು ಪ್ರಭಾವಿಸಿ ಒಂದು ಏಕಶಿಲೀಯ (ಮೂನೋಲಿಥಿಕ್) ನೆಲೆಯ ಕ್ರಮವನ್ನು ಹೇರಿತು. ಇದು ಭಾರತದ ಮಟ್ಟಿಗೆ ಒಂದು ರೀತಿಯಲ್ಲಿ ಹೇಳುವುದಾದರೆ ಹೊಸದಾಗಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಮಾಡಬಹುದಾದ ಆಕ್ರಮಣವನ್ನು ಅಥವಾ ಒಂದು ನೆಲೆಯ ನಿಯೋಕಲ್ಚರಲ್ ಇಂಪೀರಿಯಲಿಸಂನ್ನು ಕ್ರಮವನ್ನು ಸೃಷ್ಟಿಸಿತು ಎನ್ನಬಹುದಾಗಿದೆ. ಥಾಮಸ್ ಫ್ರೀಡಮನ್ ಬಳಸುವ ಕಲ್ಚರಲ್ ಇಂಪೀರಿಯಲಿಸಂ ಪರಿಭಾಷೆ ಕೂಡಾ ಇದನ್ನೇ ಧ್ವನಿಸುತ್ತದೆ. ಈ ಒಂದು ಪ್ರಕ್ರಿಯೆ ಭಾರತದಂತಹ ರಾಷ್ಟ್ರಕ್ಕೆ ತುಂಬಾ ಅಪಾಯಕಾರಿ. ಇದು ಇಲ್ಲಿನ ವೈವಿಧ್ಯತೆ, ಸಹಜತೆ ಮತ್ತು ಸೃಜನಶೀಲತೆಯನ್ನೇ ಹೊಸಕಿ ಹಾಕಬಲ್ಲದು ಎಂಬುದು ಈ ಸಂದರ್ಭದ ಭಾರತೀಯ ಶಿಕ್ಷಣತಜ್ಞ ಮಧು ಎಸ್. ಪ್ರಕಾಶ್ ಸೇರಿದಂತೆ ಹಲವರ ಅಭಿಪ್ರಾಯ.

ಶಿಕ್ಷಣ ಯುಗ ಅಥವಾ ಶಿಕ್ಷಣ ಎನ್ನುವ ಪ್ರಕ್ರಿಯೆ ಕೊನೆಗೊಂಡಿದೆ. ಅದರ ನಾಶ ಆರಂಭವಾಗಿದೆ. ಶಿಕ್ಷಣ ಎನ್ನುವ ಕ್ರಮವನ್ನು ಯಾರಿಂದಲೂ ಕೂಡಾ ರಿಪೇರಿ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಶಿಕ್ಷಣ ಎನ್ನುವ ಸಂಗತಿಯೇ ಸಂಪೂರ್ಣ ನಿರುಪಯುಕ್ತ. ನಿರುಪಯುಕ್ತ ಸಂಗತಿಯನ್ನು ಬಿಸಾಡುವುದು ಒಳಿತೇ ಹೊರತು ಬಳಸಲು ಯೋಗ್ಯವಲ್ಲ. ಇಂತಹ ಶಿಕ್ಷಣ, ಶಿಕ್ಷಣಕ್ರಮ ಮಾನವನನ್ನು, ಆತನ ಬದುಕನ್ನು ತಯಾರು ಮಾಡುತ್ತಿಲ್ಲ, ಬದಲು ನಿರರ್ಥಕವಾಗಿದೆ ಎನ್ನುವ ಕಾರಣಕ್ಕೆ ಶಿಕ್ಷಣ ಸಾಯುತ್ತಿದೆ ಎನ್ನುವ ವಾದವಿರುವುದು. ಇದನ್ನು ತುರ್ತುಚಿಕಿತ್ಸೆ ಮತ್ತು ತೀವ್ರ ನಿಗಾಘಟಕದಲ್ಲಿಟ್ಟು ಕೂಡಾ ಸಂರಕ್ಷಿಸಲು ಸಾಧ್ಯವಿಲ್ಲ.

'ಶಿಕ್ಷಣ' ಅನ್ನುವ ಸ್ವರ್ಗಸದೃಶ ಸಂಗತಿ ಇಡೀ ಮಾನವ ಜನಾಂಗವನ್ನು ಉನ್ನತೀಕರಿಸುತ್ತದೆ ಎನ್ನುವ ಭ್ರಮೆಯಿಂದಲೇ ಸುಮಾರು 16ನೇ ಶತಮಾನದ ಫ್ರೆಂಚ್ ಸಮಾಜದಲ್ಲಿ ಈ ಶಿಕ್ಷಣ ಊಹೆ ಮತ್ತು ಅಂದಾಜಿನ ಮೇಲೆ ಆರಂಭವಾಯಿತು. ಇಂತಹ ಶಿಕ್ಷಣ ನಿಖರತೆ, ಸ್ಪಷ್ಟತೆ, ಅನುಭವಜನ್ಯತೆಯಂತಹ ಗುಣಗಳನ್ನು ತನ್ನ ಮೇಲೆ ಆರೋಪಿಸಿಕೊಂಡ ಕ್ರಮವಂತೂ ಒಂದು ವಿಡಂಬನೆ. ಅಕ್ಷರಶಃ ಇಂತಹ ಎರವಲು ಪಡೆದ ಶಿಕ್ಷಣ ಎನ್ನುವ ಕ್ರಮ ಭಾರತೀಯ ಸಮಕಾಲೀನ ಸಂದರ್ಭದಲ್ಲಿ ಹುಟ್ಟುಹಾಕಿದ ಸಮಸ್ಯೆ, ಸಂಕೀರ್ಣತೆಗಳು ನಿಜವಾಗಿಯೂ ಘೋರರೂಪಿಯಾದದ್ದು. ಇಂತಹ ಸಮಸ್ಯೆಗಳನ್ನು ನಿವಾರಿಸಲು ಒಂದು ಕಮ್ಯೂನಿಸ್ಟ್ ಸಮಾನತೆ ಸ್ಥಾಪನೆ ಆಶಯದ ಹೋರಾಟವೋ ಅಥವಾ ಇಡೀ ಜಗತ್ತಿನ ಒಂದು ಆದರ್ಶವೆಂಬಂತೇನೇ ಬಿಂಬಿತವಾದ 'ಗಾಂಧಿ–ಅಹಿಂಸಾತ್ಮಕ ತಾತ್ವಿಕ ಹೋರಾಟವೋ ಮಾಡಬೇಕು' ಎನ್ನುವ ಕೆಲವು ಚಿಂತಕರ ಅಭಿಪ್ರಾಯಗಳು ಅತ್ಯಂತ ಪ್ರಮುಖವೆಂದೇ ನನ್ನ ಗ್ರಹಿಕೆ. ಅತ್ಯಂತ ಮುಖ್ಯವಾಗಿ ಬಂಡವಾಳೀಕೃತ ಶಿಕ್ಷಣ ವ್ಯವಸ್ಥೆಯು ಸೃಷ್ಟಿಸಿರುವ 2 ವರ್ಗಗಳು. ಅಂದರೆ ಸಮಕಾಲೀನ ಜಗತ್ತಿನ ಪ್ರಮುಖ ಶಿಕ್ಷಣ ಚಿಂತಕರುಗಳಾದ ಇವಾನ್ ಇಲ್ಲಿಚ್ ಮತ್ತು ಎಸ್ತೆವಾ ಗುಸ್ತೆವೊ ಹೇಳುವ ಹಾಗೆ, ಜ್ಞಾನ ಬಂಡವಾಳಿಗರು ಮತ್ತು 'ಜ್ಞಾನ ದರಿದ್ರರು' ಎನ್ನುವ ಸಮಾಜೋ–ಸಾಂಸ್ಕೃತಿಕ ಅಸಮಾನತೆಯ ಮಾದರಿಯ ವರ್ಗಗಳನ್ನು ನಿರ್ಮಾಣ ಮಾಡಿದೆ. ಇದು

ಬರಿಯ ವರ್ಗ ಸೃಷ್ಟಿಯಾಗಿರದೇ 'ಜ್ಞಾನ ದರಿದ್ರರ' ಅಸ್ತಿತ್ವ ಮತ್ತು ಆತ್ಮಸಾಕ್ಷಿಯನ್ನೇ ನಾಶಮಾಡುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಭಾರತೀಯ ಮತ್ತು ಕನ್ನಡದ ಸಂದರ್ಭದಲ್ಲಂತೂ, ಒಂದು ಕಡೆ ಶ್ರೀಮಂತ, ಮಾಹಿತಿ ಇರುವ ಮತ್ತು ಜ್ಞಾನ ಉದ್ಯಮ–ಬಂಡವಾಳದ ಕ್ರಿಯೆಯಲ್ಲಿ ಭಾಗಿಯಾಗಿರುವ ಜನ ವ್ಯಾಪಕವಾಗಿ IIT, IIM, IISC, BITS PILANI ಮುಂತಾದ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರೆ, ಈ ಪ್ರಕ್ರಿಯೆಯ ಕೇಂದ್ರ ಮತ್ತು ಪರಿಧಿ–ಎರಡೂ ಕಡೆ ಇಲ್ಲದೇ ತ್ರಿಶಂಕುಗಳಾಗಿರುವ ಬಡವರು, ಆದಿವಾಸಿಗಳು, ಬುಡಕಟ್ಟು ಜನರು ಮತ್ತು ಭಾರತದ ಬಹುಪಾಲು ಹಳ್ಳಿಗಳಲ್ಲಿ ವಾಸವಾಗಿರುವ ಕುಗ್ರಾಮವಾಸಿಗಳು ಈ ವ್ಯವಸ್ಥೆ ಒಳಗೆ ಬರುವುದಿರಲಿ, ಬದಲು ಈ ವ್ಯವಸ್ಥೆಯ ಬಣ್ಣ, ಭಾಷೆ, ಸ್ವರೂಪ, ಆಕೃತಿ, ಔಪಚಾರಿಕತೆಯನ್ನು ಕಂಡು ಭಯಭೀತರಾಗಿದ್ದಾರೆ ಮತ್ತು ಹೆಚ್ಚು ಹೆಚ್ಚು ಗೊಂದಲಕ್ಕೆ ಒಳಗಾಗಿದ್ದಾರೆ. ಹೀಗೆ ಅತ್ಯಂತ ಸ್ಪಷ್ಟವಾಗಿ ಈ ಶಿಕ್ಷಣವೆಂಬ ತಥಾಕಥಿತ ವಿದ್ಯಮಾನ ಸೃಷ್ಟಿಸಿರುವ ಮನೋಭಾವ–ದೃಷ್ಟಿಯಂತೂ ಅಪಾಯಕಾರಿಯಾಗಿದೆ. ಅದು ಮಾನವ ಸಮಾನತೆ, ಮಾನವ ಘನತೆಯನ್ನು ಅತ್ಯಂತ ವ್ಯವಸ್ಥಿತವಾಗಿ ಸಾಮಾಜೀಕರಣಗೊಳಿಸುವುದೇ ಇಲ್ಲ, ಬದಲಿಗೆ ಬಂಡವಾಳ ವ್ಯವಸ್ಥೆಯ ಭಾಗವಾಗಿರುವ ಅಸಮಾನತೆ, ವರ್ಗ ತಾರತಮ್ಯವನ್ನು ಪ್ರಚೋದಿಸುತ್ತದೆ. ಒಟ್ಟಾರೆ ಪ್ರಜಾಪ್ರಭುತ್ವದ ಸೂಕ್ಷ್ಮ ಬೇರುಗಳನ್ನೂ ಕೂಡಾ ನಾಶಮಾಡಹೊರಟಿದೆ ಎಂಬುದೇ ನನ್ನ ಅಭಿಮತ. ವೃತ್ತಿಪರ ನೆಲೆಯಿಂದ ಕೂಡಾ 'ಶಿಕ್ಷಣ' ಎನ್ನುವ ಪರಿಸ್ಥಿತಿ ವಿಫಲವಾಗಿದೆಯೆಂದೇ ನನ್ನ ಅಭಿಮತ. ಅದು ತನ್ನ ಉದ್ಯಮ–ಬಂಡವಾಳ–ಮಾರುಕಟ್ಟೆಯ ಪ್ರಕ್ರಿಯೆಯಲ್ಲಿ ಮೊದಲು ಒಂದು ವರ್ಗಕ್ಕೆ ಭಾಗವಹಿಸಲು ಅವಕಾಶ ಕೊಡುವುದಿಲ್ಲ. ಅದೇ ರೀತಿ ಅವರನ್ನು ಮಾನವ ಸಂಪನ್ಮೂಲಗಳೆಂದು ಪರಿಗಣಿಸದೇನೇ ಅವರನ್ನು ವೃತ್ತಿಪರತೆಯ ಅವಕಾಶಗಳಿಂದ ವಂಚಿಸುತ್ತದೆ. ಅಂತಹ ಜ್ಞಾನದರಿದ್ರರು ಅಕ್ಷರಶಃ ಅಕ್ಷರ ಅಸ್ಪೃಶ್ಯರಾಗಿ ಉಳಿದುಬಿಡುತ್ತಾರೆ. ಶಿಕ್ಷಣದ ಉದ್ಯಮದಲ್ಲಿ, ಹೊಸ ವರ್ಗ ಸಂಘರ್ಷದಲ್ಲಿ ಹೆಚ್ಚು ಜ್ಞಾನವನ್ನು ಬಳಸುವ ಜನವರ್ಗಕ್ಕೆ ಹೆಚ್ಚು ಮೌಲ್ಯ. ಸಮಾಜ ಅವರ ಮೇಲೆ ಸಾಕಷ್ಟು ಹಣ ಹೂಡಿ ಅವರನ್ನು ಮಾನವ ಸಂಪನ್ಮೂಲವಾಗಿ ರೂಪಿಸಿರುತ್ತದೆಯಾದ್ದರಿಂದ ಉತ್ಪಾದನಾ ಸಾಧನಗಳು ಬಹುವಾಗಿ ಅವರಿಗಾಗಿಯೇ ಮೀಸಲು. ಅಂಥ ಶಿಕ್ಷಿತರು ಮಾತ್ರವೇ ಈ ಸಮಾಜದಲ್ಲಿ ಎಲ್ಲ ಅನುಕೂಲಗಳಿಗೆ ಹಕ್ಕುದಾರರಾಗುತ್ತಾರೆ. ಉಳಿದ ಬಹುಸಂಖ್ಯಾತರ ಸಾಲಿಗೆ ಉಳಿಯುವುದು ದಾರಿದ್ರ್ಯ ಮತ್ತು ಅನರ್ಹತೆಗಳು ಮಾತ್ರ. ಮುಖ್ಯವಾಗಿ ನಾನು ಶಿಕ್ಷಣವೆಂಬ, ಕಲಿಕೆಯ ವಿರುದ್ಧದ ಪ್ರಕ್ರಿಯೆ ನಿವಾರಣೆಯಾಗಬೇಕೆಂದೇ ಅಭಿಪ್ರಾಯಪಡುತ್ತೇನೆ. ಈ ಶಿಕ್ಷಣವೆಂಬುದರ ಬದಲಿಗೆ ಜಗತ್ತಿನ ಅದೆಷ್ಟೋ ನಾಗರೀಕತೆ ಮತ್ತು ಸಮುದಾಯಗಳಲ್ಲಿ ಕಾಲ–ದೇಶ–ಭೂಗೋಳ ಸಾಪೇಕ್ಷವಾದ ಅತ್ಯಂತ ಅನನ್ಯವಾದ, ವೈವಿಧ್ಯಮಯವಾದಂತಹ 'ಕಲಿಕೆ'(Learning)ಯ ಕ್ರಮಗಳು ಇಂತಹ 'ಶಿಕ್ಷಣ'ವೆನ್ನುವ ಸಂಗತಿಯನ್ನು ಪುನಃ ಸ್ಥಾಪಿಸಿದರೆ ಮಾತ್ರ ಇದು ಕೈಗೂಡುತ್ತದೆ. ಅದೂ ಅಲ್ಲದೆ ಈ 'ಶಿಕ್ಷಣ'ವೆನ್ನುವ ಮಹಾಮಂತ್ರ ಅಥವಾ ಅಜೆಂಡಾ ಅಥವಾ ಕಾರ್ಯಸೂಚಿ ಅಥವಾ ಉದ್ಯಮಸೂಚಿಯು ಜನರನ್ನು ಬದುಕುವುದಕ್ಕಾಗಲೀ ಅಥವಾ ಕೆಲಸ ಮಾಡುವುದಕ್ಕಾಗಲೀ ತಯಾರು ಮಾಡುತ್ತಿಲ್ಲ. ಅದು ಅಕ್ಷರಶಃ ಯಾಂತ್ರಿಕವಾಗಿ ಕಾರ್ಖಾನೆಯಲ್ಲಿ ಹೆಂಚನ್ನು, ಪದಾರ್ಥವನ್ನು ಉತ್ಪಾದಿಸುವ ಹಾಗೆ, ಅದರ ಪ್ರಯೋಜನ, ನಿಷ್ಪ್ರಯೋಜನದ ವಿವಕ್ಷೆಯ ಹೊರತಾಗಿಯೂ ಕೂಡಾ





ಉತ್ಪಾದಿಸುತ್ತದೆ. ಅರ್ಥಶಾಸ್ತ್ರ ಮತ್ತು ಸಾಮಾನ್ಯ ಗ್ರಹಿಕೆಯೂ ಹೇಳುವ ಹಾಗೆ ಬೇಡಿಕೆಗಿಂತ ಜಾಸ್ತಿ ಒಂದು ವಸ್ತು ಉತ್ಪಾದಿತವಾದರೆ ಅದು ಸಹಜವಾಗಿ ತನ್ನ ಬೇಡಿಕೆಯನ್ನು ಕಳೆದುಕೊಳ್ಳುತ್ತದೆ. ಒಂದು ಹಂತದಲ್ಲಿ ಕೊನೆಗೆ ಅದು ಅಕ್ಷರಶಃ ತ್ಯಾಜ್ಯವಾಗುತ್ತದೆ, ಜಂಕ್ ಆಗುತ್ತದೆ. ಒಬ್ಬ ವ್ಯಕ್ತಿ 3 ವರ್ಷ ಪದವಿ ಪಡೆದರೂ ಕೂಡಾ ಅದು ಆತ ಎಷ್ಟು ದಿನ ತರಗತಿಯ ಬೆಂಚ್‌ನಲ್ಲಿ ಕುಳಿತಿದ್ದ ಎನ್ನುವುದನ್ನು ಸೂಚಿಸುತ್ತದೆಯೇ ಹೊರತು, ಆತ ಕಸುಬು ಕಲಿತದ್ದಕ್ಕಾಗಲೀ ಅಥವಾ ತಜ್ಞತೆಯನ್ನು ಗಳಿಸಿದ್ದಕ್ಕಾಗಲೀ ಪ್ರಮಾಣ ಪತ್ರವಾಗಲಾರದು. ಉದ್ಯೋಗ ಭರವಸೆಗಿಂತ ಅದು ಖಾಯಂ ನೈರಾಶ್ಯವನ್ನು ಉಂಟುಮಾಡುತ್ತದೆ. ಟ್ಯಾಕ್ಸಿ ಚಾಲಕರಾಗಿ ಅಥವಾ ಹೋಟೆಲು ಕೆಲಸಗಾರರಾಗಿ ದುಡಿಯಬೇಕಾಗಿ ಬರುವ ಇಂಜಿನಿಯರ್‌ಗಳು ಮತ್ತು ಲಾಯರ್‌ಗಳು ಅನುಭವಿಸುವ ಅವಮಾನವೇ ಇದಕ್ಕೆ ಸಾಕ್ಷಿ. ಆದರೆ ಇನ್ನೊಂದು ದಿಕ್ಕಿನಿಂದ, ಶಿಕ್ಷಿತರ ಇಂಥ ಅವಮಾನವೇ ಅಂಥ ಪದವಿಗಳಿಲ್ಲದವರಿಗೆ ಒಂದು ಬಿಡುಗಡೆಯ ಅನುಕೂಲವಾಗಿ ಕಾಣಿಸುವುದೂ ಇದೆ. ಯಾಕೆಂದರೆ ಅಂಥ ಸ್ಥಿತಿಯಲ್ಲಿಯೇ ಅವರು ತಮ್ಮಲ್ಲಿರುವ ಬುದ್ಧಿ, ಕೌಶಲ ಮತ್ತು ಕಸುಬುಗಾರಿಕೆಯನ್ನು ಅರಿತು ತಮ್ಮನ್ನೇ ಪುನರ್ ಮೌಲ್ಯೀಕರಿಸಿಕೊಳ್ಳುತ್ತಾರೆ, ಬದುಕುತ್ತಾರೆ.

ಜಾಗತೀಕೃತ ಮತ್ತು ಜಾಗತೀಕೃತೋತ್ತರ ವಿಶ್ವದಲ್ಲಿ ಶಿಕ್ಷಣ ಎಂಬ ವ್ಯವಸ್ಥೆ ಬೇಡ ಎಂಬ ವಾದವನ್ನು ಮತ್ತು ಈ ಕ್ಷೇತ್ರಗಳಲ್ಲಿ ಸುಧಾರಣೆಯನ್ನು ತರಬೇಕೆನ್ನುವ ಮೂರು ವರ್ಗಗಳಿವೆ: ಒಂದು– ಶಿಕ್ಷಣ ಕೇಂದ್ರದ ಭೌತಿಕ ಪರಿಸರ ಸುಧಾರಿಸಬೇಕು, ಎರಡು– ಪ್ರತೀ ಸಮುದಾಯ ಮತ್ತು ಮಕ್ಕಳ ಪಾಲಕರಿಂದಲೇ ಅವರ ಇಚ್ಛೆಯ ಶಿಕ್ಷಣ ವ್ಯವಸ್ಥೆಯ ಐಚ್ಛಿಕ ಆಯ್ಕೆ, ಮೂರು– ಸಮಾಜವೇ ಕಲಿಕೆಯ ಕೇಂದ್ರವಾಗಬೇಕು, ಅಂದರೆ ಶಿಕ್ಷಣ ಮುಕ್ತವಾಗಿ ಸಿಗಬೇಕು ಎನ್ನುವುದು ಮತ್ತು ಈ ಮುಕ್ತತೆ–ಮಾರುಕಟ್ಟೆ ಪರಸ್ಪರ ಸಂಪರ್ಕವನ್ನು ಪಡೆಯಬೇಕು ಎನ್ನುವುದು ತಾತ್ವಿಕವಾಗಿ ಶಿಕ್ಷಣ ಸುಧಾರಣೆ, ಮುಕ್ತ ಶಿಕ್ಷಣ ಮತ್ತು ಜಾಗತೀಕೃತ ವಿಶಾಲವಾದ ನೆಲೆಯನ್ನು ಹೊಂದಿದ ಸಂಗತಿಗಳನ್ನು ಸೃಷ್ಟಿಸುವುದಾಗಿದೆ. ಆದರೆ ಇವುಗಳು ವ್ಯಕ್ತಿಗಳನ್ನೂ, ವ್ಯಕ್ತಿಶಃ ಮತ್ತು ಸಾಂಸ್ಥಿಕವಾಗಿ ನಿಯಂತ್ರಿಸುವ ಸಾಧನಗಳಾಗಿ ಬಿಡುವ ಅಪಾಯವೇ ಜಾಸ್ತಿ. ಇವುಗಳು ಕ್ರಮೇಣ Close Circuit Camera ಗಳಾಗಿ ಬಿಡುವ ಸಾಧ್ಯತೆಗಳೇ ಹೆಚ್ಚು, ಮತ್ತವು ಸೃಜನಶೀಲ ಸಾಧ್ಯತೆಗಳನ್ನು ನಿರಾಕರಿಸುತ್ತಾ ಸಾಗುತ್ತದೆ.

ಶಿಕ್ಷಣ ಎನ್ನುವ ಮಾಯಾಮೃಗದ ಇನ್ನೊಂದು ಬಣ್ಣವೆಂದರೆ ಅದು ಚರಿತ್ರೆಯಿಂದ ಆಕರ್ಷಿಸಿ ಗಳಿಸಿಕೊಳ್ಳುವ ಮಾನ್ಯತೆ. ಆಧುನಿಕ ವಿದ್ಯಮಾನವಾದ ರಾಷ್ಟ್ರವೆಂಬ ಆಲೋಚನೆ ಚರಿತ್ರೆಯನ್ನು ಚಿತ್ತಾಕರ್ಷಕವಾಗಿ ಬಳಸಿಕೊಳ್ಳುವ ಹಾಗೆಯೇ ಇದೂ ಕೂಡಾ ಚರಿತ್ರೆಯಿಂದ ಮಾನ್ಯತೀಕರಣಕ್ಕೊಳಪಡುತ್ತದೆ. ಅದೇನೆಂದರೆ, ಈ ಶಿಕ್ಷಣವೆನ್ನುವುದು ಸೂರ್ಯಚಂದ್ರರಷ್ಟೇ ಪ್ರಾಚೀನವಾದುದು, ಜಡಶಿಲೆಗಳಷ್ಟೇ ಚಾರಿತ್ರಿಕವಾದುದು ಎಂಬ ಮಿಥಿಕ್ ರೂಪೀ ಸಂಗತಿಯನ್ನು ಶಿಕ್ಷಣದ ಜೊತೆ ಹಾರಿಸಿ ಬಿಟ್ಟಿರುವುದು. ಶಿಕ್ಷಣವೆಂಬ ವಿದ್ಯಮಾನ ಆಧುನಿಕತೆಯ ಹಸುಗೂಸು ಮತ್ತು ಪಶ್ಚಿಮದ ಮತ್ತು ಯುರೋಪಿನ ಬಂಡವಾಳಶಾಹೀ ಭೌತಿಕತೆಯಲ್ಲಿಯೇ ಅದು ಹುಟ್ಟಿತು. ಅದು ಕ್ಯಾಪಿಟಲಿಸಂನ ಆಶೋತ್ತರ, ಉದ್ದೇಶಗಳನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆಯೇ ಹೊರತು, ಬೇರೆ ಕಾಲಘಟ್ಟದ, ಯುಗದ ಧರ್ಮವನ್ನಲ್ಲ. ಇಡೀ ಜಗತ್ತು ಮತ್ತು ವಿಶೇಷವಾಗಿ ತೃತೀಯ ಜಗತ್ತು

ನಿರ್ವಸಾಹತೀಕರಣವನ್ನು (Decolonization) ಬೌದ್ಧಿಕ, ಸಾಂಸ್ಕೃತಿಕವಾಗಿ ಆಗ್ರಹಿಸುವಂತಹ ಈ ಸಂದರ್ಭದಲ್ಲಿ, ಮರುವಸಾಹತೀಕರಣಕ್ಕೆ (Re-colonization) ಒಳಪಡುವ ಪ್ರಕ್ರಿಯೆಯ ಭಾಗವಾಗಿ ಕೂಡಾ ಅದನ್ನು ನಾವು ಗಮನಿಸಬಹುದು. ಶಿಕ್ಷಣ ಉತ್ಪನ್ನಗೊಂಡ ಕಾಲ-ಅವಕಾಶದ ಗತವನ್ನು ಕೂಡಾ ಪುನಃ ವಸಾಹತೀಕರಣಕ್ಕೆ ಒಗ್ಗಿಸುವ ವಿಚಿತ್ರ ಪ್ರಕ್ರಿಯೆಯೆಂದೇ ನಾವಿದನ್ನು ಬಗೆಯಬಹುದು. ಅಂತೆಯೇ ನಾನು ಈಗಾಗಲೇ ಉಲ್ಲೇಖಿಸಿದ ಹಾಗೆ 'ಶಿಕ್ಷಣ'ವೆಂಬ ಈ ಆಧುನಿಕ ಪರಿಕಲ್ಪನೆಯ ಪದ ಬಳಕೆಯಾಗಿದ್ದೇ ಹದಿನೆಂಟನೆಯ ಶತಮಾನದ ಫ್ರಾನ್ಸ್ ದೇಶದಲ್ಲಿ. ಅದು ಮೂಲತಃ ಕ್ರಿಶ್ಚಿಯನ್ ಥಿಯಾಲಜಿಯ ಭಾಗ ಮತ್ತು ವಾದದ ರೂಪದಲ್ಲಿ ಉದ್ಭವವಾಯಿತೇ ವಿನಃ ಮಾನವನ ಚರಿತ್ರೆಯ ಆರಂಭದಲ್ಲೇ ಇದ್ದ ಒಂದು ಭೂಗೋಳಶಾಸ್ತ್ರೀಯ, ಪುರಾಣಶಾಸ್ತ್ರೀಯ ಮತ್ತು ಚಾರಿತ್ರಿಕ ಸತ್ಯವಲ್ಲ. ಇಂತಹ ಹೇಳಿಕೆ ಅಂದರೆ ಚರಿತ್ರೆ ರೇಖೀಯ ಚಲನೆಯ ಆರಂಭದಲ್ಲೇ ಅದು ಇತ್ತು ಎನ್ನುವುದು ಶಿಕ್ಷಣದ Capitalistic ಆಯಾಮದ ಪ್ರಚಾರವಷ್ಟೇ ಆಗಿದೆ. ಅಷ್ಟಕ್ಕೂ ಶಿಕ್ಷಣವೆಂಬ ಪರಿಕಲ್ಪನೆ ಸಂಸ್ಕಾರಕ್ಕೆ ಹೆಚ್ಚು ಹತ್ತಿರವಾಗಿತ್ತೇ ಹೊರತು ಔಪಚಾರಿಕ ಶಿಕ್ಷಣವೆಂಬುದರ ನೆಲೆಗಲ್ಲ.

ಶಿಕ್ಷಣದ ಇನ್ನೊಂದು ಗಿಲೀಟುವಾದವೆಂದರೆ ಆಧುನಿಕ ಪ್ರಜಾಪ್ರಭುತ್ವೀಯ ನೆಲೆಯ ಎರಡು ಮಹತ್ವದ ಸಮಾಜೋ-ರಾಜಕೀಯ ಮೌಲ್ಯಗಳಾದ ಸಮಾನತೆ ಮತ್ತು ನ್ಯಾಯಗಳ ಜೊತೆಯಲ್ಲಿ ಅದನ್ನು ಸೂತ್ರೀಕರಿಸುವುದು. ಶಿಕ್ಷಣದ ಗುರಿ ಮತ್ತು ಮೂಲಸ್ರೋತವೇ ಸಮಾನತೆ ಮತ್ತು ನ್ಯಾಯವೆಂದು ಬಿಂಬಿಸುವ ಪ್ರಯತ್ನವಿದಷ್ಟೇ. ಆದರೆ ಶಿಕ್ಷಣವೆನ್ನುವುದು ಮೂಲಭೂತ ಪರಿಕಲ್ಪನೆಯೇ ಸಮಾನತೆಯನ್ನು ಧ್ವನಿಸುವುದಿಲ್ಲ ಮತ್ತು ಶುದ್ಧ ಅಸಮಾನತೆಯ ಪರವಾಗಿರುವ ಬಂಡವಾಳಶಾಹೀ ಪರವೆನ್ನುವುದು ಗುಸ್ತೆವೋ ಎಸ್ತೆವಾ ವಾದ. ಈ ನೆಲೆಯಲ್ಲಿಯೇ ಗುಸ್ತೆವೋ ಎಸ್ತೆವಾ ಶಿಕ್ಷಣವನ್ನು ಪ್ರಾಚೀನ ಗ್ರೀಕ್ ದೇಶದ ಟ್ರಾಯ್ ಮರದ ಕುದುರೆಗೆ ಹೋಲಿಸುವುದು. ಸಮಾಜ, ಪ್ರಭುತ್ವ ತನ್ನ ವೈವಿಧ್ಯದ ಸಂಪನ್ಮೂಲಗಳನ್ನು ವ್ಯಯಿಸಿ ಶಿಕ್ಷಣವನ್ನು ನೀಡಿದರೂ ಕೂಡಾ ಸಮಾನವಾಗಿ ಅದು ಸಮಾಜದ ಸಾಮಾಜಿಕರನ್ನು ತಲುಪುವುದಿಲ್ಲ. ಬರೀ ಅಲ್ಪಸಂಖ್ಯಾತ ಜನ ಮಾತ್ರ ಪಡೆದು ಬಹು ಸಂಖ್ಯೆಯ ಜನ ಇದರಿಂದ ವಂಚಿತರಾಗುತ್ತಾರೆ. ಒಂದು ಹಂತದಲ್ಲಿ ವಂಚಿತ ಬಹುಸಂಖ್ಯೆಯ ಜನರನ್ನು ಶಿಕ್ಷಿತ ಸಮಾಜದಲ್ಲಿ ಬದುಕಲೂ ಕೂಡಾ ಅನರ್ಹರೆಂದು ಘಂಟಾಘೋಷವಾಗಿ ಸಾರಲಾಗಿ ಇದು ಅತ್ಯಂತ ದಮನಕಾರಿಯಾದ ಎರಡು ವರ್ಗಗಳನ್ನು ಸೃಷ್ಟಿಸುತ್ತದೆ; ಕ್ರಮೇಣ ವರ್ಗ ಸಂಘರ್ಷಗಳನ್ನೂ ಕೂಡಾ ಸೃಷ್ಟಿಸುವುದರ ಮೂಲಕ ಅತ್ಯಂತ ಮೂಲಭೂತವಾದ ಸಾಮಾಜಿಕ ಪರಿಕಲ್ಪನೆಗಳಾದ ಸಮಾನತೆ ಮತ್ತು ನ್ಯಾಯವನ್ನು ತಾತ್ವಿಕವಾಗಿ, ಪ್ರಾಯೋಗಿಕವಾಗಿ ಇದು ನಿರಾಕರಿಸುತ್ತದೆ. ಎಸ್ತೆವಾ ಪ್ರಕಾರ ಈ ಶಿಕ್ಷಣವೆಂಬುದು Elimination Agent ಇರುವ ಹಾಗೆ. ಇದು ತಥಾಕಥಿತ ಅರ್ಹರನ್ನು ಅನರ್ಹರನ್ನು ಒಟ್ಟುಗಿರಿಸಿದ ನಂತರ, ಅನರ್ಹರನ್ನು ಜರಡಿ ಹಿಡಿದಾಗ ಸಿಗುವ ನಿರುಪಯುಕ್ತ ವಸ್ತುಗಳೆಂದು ಪೃಥಕ್ಕರಿಸಿ, ಭಿನ್ನವಾಗಿ ಬಗೆಯುವ ಕ್ರಮ. ಸಮಕಾಲೀನ UNESCO ಮತ್ತು UNDP ವರದಿಗಳೂ ಕೂಡಾ ಈ ರೀತಿ ಶಿಕ್ಷಣ ಜರಡಿ ಹಿಡಿಯುವ ಪ್ರಕ್ರಿಯೆಯಲ್ಲಿ ಬಹಳ ಮುಂಚೂಣಿಯಲ್ಲಿರುವುದನ್ನೂ ಮತ್ತು ಬಹುಸಂಖ್ಯಾತ ಜನರನ್ನು ತಲುಪದಿರುವುದನ್ನೂ ಕೂಡಾ ತಿಳಿಸುತ್ತದೆ. ಒಂದು UNESCO ವರದಿ ಪ್ರಕಾರ, ಒಂದನೆಯ ತರಗತಿಗೆ ಪ್ರವೇಶ





ಪಡೆಯುವ ಶೇ. 60ರಷ್ಟು ವಿದ್ಯಾರ್ಥಿಗಳು ಶಿಕ್ಷಣದ ವ್ಯವಸ್ಥೆಯಲ್ಲಿ ಮುಂದೆ ಸಾಗುವುದಿಲ್ಲ ಮತ್ತು ಶಿಕ್ಷಣ ಎನ್ನುವ ಸಮ್ಮೋಹಿನಿಯಿಂದ ಹೊರಗೆ ಉಳಿಯುತ್ತಾರೆ. ಕೆಲವು ರಾಷ್ಟ್ರಗಳಲ್ಲಿ, 'ಅಕ್ಷರಸ್ಥ' ಎನ್ನುವ ಹಂತವನ್ನೂ ಕೂಡಾ ಮುಟ್ಟುವುದಿಲ್ಲ. ಹೀಗೆ ಕಲಿಕೆ ಮತ್ತು ಸಾಂಸ್ಕೃತಿಕವಾಗಿ ಅವರು ಹಿಂದುಳಿಕೆಯನ್ನು ಹೊಂದುತ್ತಾರೆ. ಹೀಗೆ ಅತ್ಯಂತ ಪ್ರಾಥಮಿಕ ರಾಜಕೀಯ ಮೌಲ್ಯಗಳಾದ ನ್ಯಾಯ ಮತ್ತು ಸಮಾನತೆಯನ್ನು 'ಶಿಕ್ಷಣ' ಅನ್ನುವ ವಿದ್ಯಮಾನ ಉಂಟುಮಾಡುತ್ತದೆ ಎಂಬುದು ಅಕ್ಷರಶಃ ಭ್ರಮೆಯಷ್ಟೇ. ಇಂತಹ 'ಶಿಕ್ಷಣ' ಎಂಬ ವ್ಯವಸ್ಥೆ ವಿಫಲತೆಯನ್ನು ಸಾಧಿಸಿದ್ದರಲ್ಲಿ ಯಾವ ಸಂಶಯವೂ ಕೂಡಾ ಬರದು. ಶಿಕ್ಷಣ, ನಿರಾಶಾವಾದವನ್ನೂ ಕೂಡಾ ಸೃಷ್ಟಿಸುತ್ತಾ, ಶಿಕ್ಷಿತರೂ ಕೂಡಾ ಉದ್ಯೋಗ ವಿರಹಿಗಳಾಗಿ ಶಿಕ್ಷಣದ ಬುಡವನ್ನೇ ಪ್ರಶ್ನಿಸತೊಡಗಿರುವುದೂ ಈ ನೆಲೆಯಿಂದ. ಅಂದರೆ ಶಿಕ್ಷಣ ಜಗತ್ತಿನ ಬಗ್ಗೆ ಕಲಿಯುವುದನ್ನು ತಿಳಿಸುತ್ತದೆಯೇ ಹೊರತು ಜಗತ್ತಿನಿಂದ ಕಲಿಯುವ ಬಗ್ಗೆ ಅಲ್ಲ. ಶಿಕ್ಷಣದ ವಿಫಲತೆಯಿರುವುದೇ ಈ ಬೀಜದಲ್ಲಿ. ಸಮಕಾಲೀನ ಸಂದರ್ಭ ಕಲಿಕೆಯ-ಜೀವನ ಕೌಶಲದ ಚರ್ಚೆಯ ಹೊತ್ತಿಗೆ ಗಾಂಧಿಯನ್ನು ಆಹ್ವಾನಿಸಿ ಪರ್ಯಾಯವನ್ನು ಯೋಚಿಸುವ ರೀತಿಯಲ್ಲೇ ಗುಸ್ತೆವೋ ಎಸ್ತೆವಾ ಚರ್ಚಿಸಿರುವುದು ನಿಜಕ್ಕೂ ಚೋದ್ಯವೇ ಸರಿ. ಗಾಂಧಿ, ಶಿಕ್ಷಣದ ಈ ಸಾಧ್ಯತೆ ಮತ್ತು ಭವಿಷ್ಯವನ್ನು 1930ರ ದಶಕದಲ್ಲಿಯೇ ಚಿಂತಿಸಿದ್ದರು. ಗಾಂಧೀಜಿಯ ಯೋಚನೆ ಹೆಚ್ಚು ಸಹಜವೂ, ಸಾವಯವವೂ ಆದದ್ದಾಗಿತ್ತು. ಅಂತಹ ದೂರದೃಷ್ಟಿಯ ಯೋಚನೆಯ ಕೆಲವು ತುಣುಕುಗಳನ್ನೇ ಗುಸ್ತೆವೋ ಎಸ್ತೆವಾ ಈಗ ಜಾರಿಯ ಜರೂರಿಗೆ ಇಡುತ್ತಿದ್ದಾರೆ.

ಶಿಕ್ಷಣದ ಇತಿಹಾಸ ಮತ್ತು ಕಥನದ ಗತಿಯನ್ನು ಗಮನಿಸಿದಾಗ ಅದು ಬಂಡವಾಳಶಾಹೀ ಬೆಳವಣಿಗೆಯ ಜೊತೆಜೊತೆಗೆ ಸಮಾನಾಂತರವಾಗಿ ಸಾಗಿರುವುದನ್ನು ಕಾಣಬಹುದು. ಇವು ಪರಸ್ಪರ ಪೂರಕ ಮತ್ತು ಅನುರೂಪವಾದವುಗಳೂ ಕೂಡಾ. ಇವೆರಡರ ಉಗಮದಲ್ಲಿ ಪ್ರಭುತ್ವ ಮತ್ತು ರಾಷ್ಟ್ರರಾಜ್ಯಗಳು ಪ್ರಭಾವ ಬೀರಿದ್ದನ್ನು ಕೂಡಾ ಗಮನಿಸಬಹುದು. ಸೈನ್ಯ, ಬಂಡವಾಳ ಮತ್ತು ತನ್ನನ್ನು ಮಾನ್ಯತೀಕರಿಸುವ ಅನೇಕ ಮಾಧ್ಯಮಗಳ ಹಾಗೆ ಶಿಕ್ಷಣವನ್ನೂ ಕೂಡಾ ಪ್ರಭುತ್ವ ಬಳಸಿದ್ದನ್ನು ಮತ್ತು ಅದರ ಮೇಲೆ ನಿಯಂತ್ರಣ, ಹತೋಟಿ ಸಾಧಿಸಿದ್ದನ್ನೂ ಕೂಡಾ ಕಾಣಬಹುದು. ಇಂತಹ 'ಶಿಕ್ಷಣ' ಬಂಡವಾಳಶಾಹೀ ವ್ಯವಸ್ಥೆಯ ಉಪಉತ್ಪನ್ನವೇ ಹೊರತು, ನಿರ್ವಾತದಿಂದ ಹುಟ್ಟಿದ ಪ್ರಕ್ರಿಯೆಯಲ್ಲ ಎಂಬ ಅಂಶವನ್ನೂ ಕೂಡಾ ಇದು ಮನಗಾಣಿಸುತ್ತದೆ. ಪ್ರಭುತ್ವ ತಾನು ಸೇನೆ, ಪೊಲೀಸ್‌ನ ಮೂಲಕ ಸಮಾಜದ ನಿಯಂತ್ರಣ ಮಾಡಿದ ಹಾಗೆಯೇ ಶಿಕ್ಷಣವನ್ನೂ ಕೂಡಾ ಬಳಸಿತು. ಶಿಕ್ಷಣ, ಬಂಡವಾಳಕ್ಕಿಂತ ಭಿನ್ನವಾದರೂ ಕೂಡಾ ಅದು ಸೃಷ್ಟಿಸಿದ ಕೆಲವು ಭ್ರಮೆಗಳು, ಮುಖ್ಯವಾಗಿ ಶಿಕ್ಷಣ ಸಾಮುದಾಯಿಕ ಅಗತ್ಯವೆಂದು ಬಿಂಬಿಸಿದ ಕ್ರಮ ಇತ್ಯಾದಿಗಳು ಪ್ರಭುತ್ವ ಮತ್ತು ಅಧಿಕಾರಶಾಹಿಯು ಹೇರಿದ ಹೇರಿಕೆಯ ಭಾಗವಾಗಿಯೇ ಇದೆ. ಇಂತಹ ಶಿಕ್ಷಣ, ಶಿಕ್ಷಿತರನ್ನು ಜ್ಞಾನದ ಗ್ರಾಹಕರನ್ನಾಗಿ ಮಾಡುತ್ತಾ ಜ್ಞಾನ ಬಂಡವಾಳ ಮತ್ತು ಶಿಕ್ಷಣದ ಉದ್ಯಮ ಮತ್ತು ಬಂಡವಾಳಶಾಹಿಯನ್ನು ಪೋಷಿಸುತ್ತಾ ಜಾಗತಿಕ ಕ್ಯಾಪಿಟಲ್ ಪ್ರಭುಗಳ ಎದುರು ಕೈ ಕಟ್ಟಿ ನಿಲ್ಲುವ ಕೆಲಸದಾಳುಗಳನ್ನಾಗಿ ಮಾಡಿರುವುದೂ ಕೂಡಾ ಶಿಕ್ಷಣ-ಬಂಡವಾಳಶಾಹೀ ಒಂದೇ ಚಾರಿತ್ರಿಕ ಸಂದರ್ಭದ ಶಿಶುಗಳು ಎಂಬುದನ್ನು ಶ್ರುತಪಡಿಸಿದೆ. ಇಂತಹ ಶಿಕ್ಷಣ ಎಂಬ ವ್ಯವಸ್ಥೆ ಲಿಯೋ ಟಾಲ್‌ಸ್ಟಾಯ್ ಹೇಳುವ ಹಾಗೆ

"ಶಿಕ್ಷಣ ಒಬ್ಬರನ್ನು ಏನಾದರೂ ಒಂದಾಗಿ ಪ್ರಜ್ಞಾಪೂರ್ವಕವಾಗಿ ರೂಪಿಸುವ ಕೆಲಸ" ಎಂಬುದನ್ನು ಮೀರಿ ಒಂದು ನಿರ್ದಿಷ್ಟ ಬಂಡವಾಳಶಾಹೀ–ಅಧಿಕಾರಶಾಹೀ ವ್ಯವಸ್ಥೆಗೆ ಅಧೀನವಾಗಿ ರೂಪಿಸುವ ಕಸುಬಾಗಿದೆ. ಒಂದು ಶೋಷಕ ವ್ಯವಸ್ಥೆಗೆ ವರ್ಗಗಳನ್ನು ವಿಭಜಿಸಿ ಮತ್ತೊಂದು ಸಂಘರ್ಷವನ್ನು ಎದುರು ನೋಡುತ್ತಿದೆ. ಬಂಡವಾಳಶಾಹೀ ವ್ಯವಸ್ಥೆಯು ಉದ್ಯುಕ್ತವಾಗಿದ್ದ, "ಉತ್ಪಾದಕ ವಸ್ತುಗಳನ್ನು ಉತ್ಪಾದಿಸುವ ವ್ಯಸನದ ಓಟ"ದಲ್ಲಿ ಭಾಗವಹಿಸಿ ಅಂತಿಮವಾಗಿ ನಿರುಪಯುಕ್ತ ಶಿಸ್ತು, ಮಾನವರನ್ನು ಸೃಷ್ಟಿಸಿದೆ. ಇಂತಹ ಬಂಡವಾಳಶಾಹೀ ಹಸುಗೂಸು ಶಿಕ್ಷಣಕ್ಕೆ, ತನ್ನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಶಿಕ್ಷಿತರಾದ ಎಲ್ಲರಿಗೂ ಕೂಡಾ ಸ್ಥಾನ–ಮಾನ–ಉದ್ಯೋಗ–ಅಂತಸ್ತನ್ನು ಕರುಣಿಸಲಾಗದೇ ಜೀರ್ಣಿಸಿಕೊಳ್ಳುವ, ಸಮರಸ ಮಾಡಲಾಗದ ಪರಿಸ್ಥಿತಿಯೂ ಅದನ್ನು ಪ್ರಶ್ನಿಸಲು ಕಾರಣ. ಆದ್ದರಿಂದ ಈಗ ಜಗತ್ತಿನ ಅನೇಕ ಭಾಗಗಳಲ್ಲಿ, ತೃತೀಯ ಜಗತ್ತಿನ ಅನನ್ಯ ಜಗತ್ತಿನಲ್ಲಿ ಅನೇಕ ಸಮುದಾಯ, ಮನಸ್ಸು, ಜನ ಮತ್ತು ಪ್ರಜ್ಞೆ ಶಿಕ್ಷಣ ಸಾಕು ಎನ್ನುತ್ತಿದ್ದಾರೆ ಮತ್ತು ಕಲಿಕೆ ಬೇಕು ಎನ್ನುತ್ತಿದ್ದಾರೆ.

ಈ ಮೇಲಿನ ಶಿಕ್ಷಣ ಸೃಷ್ಟಿಸಿದ ಕೆಲವು ಚರ್ಚೆ, ಸಮಸ್ಯೆಗಳಿಗೆ ಪರಿಹಾರವೇನು? ಜಗತ್ತಿನ ಆಫ್ರಿಕಾ, ಲ್ಯಾಟಿನ್ ಅಮೆರಿಕಾದ ಮೆಕ್ಸಿಕೋ–ಚಿಲಿ–ಪೆರು, ಭಾರತದಂತಹ ರಾಷ್ಟ್ರಗಳಲ್ಲಿ ಒಂದು ಹೊಸ ಅಲೆ ಎದ್ದಿದೆ. ಅದೆಂದರೆ 'ಶಿಕ್ಷಣ' ಸಾಕು, ಬದಲು ಹಳೆಯ ಸೃಜನಶೀಲ ಕಲಿಕೆಯ ಮಾರ್ಗಗಳು ಬೇಕು ಎಂಬ ಹೊಸ ಜಂಜಾವಾತ. ಅಂತಹ ಕಲಿಕೆಯನ್ನು ಅಗತ್ಯಕ್ಕೆ ತಕ್ಕಂತೆ ಆರ್ಥಿಕ ರೂಪಾಂತರ ಮಾಡಬೇಕು ಎಂಬುದು ಈ ರೀತಿಯ ಹೊಸ ಕಾಣ್ಕೆಯನ್ನರಸುತ್ತಿರುವ ತೃತೀಯ ಜಗತ್ತು ಮತ್ತು ಅಲ್ಲಿನ ಚಿಂತಕರ, ಶಿಕ್ಷಣತಜ್ಞರ ಅಂಬೋಣ. ಭಾರತದಲ್ಲಿ 'ಎಜುಕೇಶನ್' (ಶಿಕ್ಷಣ) ಎಂಬ ಪದವನ್ನು, ಹೊಸ ಪರ್ಯಾಯ ಪದವಾದ 'ಟು ಲರ್ನ್' (ಕಲಿಯುವುದು) ಎಂಬ ಕ್ರಿಯಾಪದ ಸ್ಥಳಾಂತರಗೊಳಿಸುತ್ತಿದೆ. ಇದರೊಳಗೆ ಇರುವ ಪ್ರತಿಯೊಬ್ಬನೂ ಸರ್ಕಾರಿ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಅವಲಂಬಿಸುವುದು ಅನಿವಾರ್ಯ. ಆದರೆ ಕಲಿಯುವುದು ಎಂಬ ಕ್ರಿಯಾರೂಪವು ವ್ಯಕ್ತಿಯ ಒಳಗೆ ಇರುವ ಶಕ್ತಿ–ಸಾಮರ್ಥ್ಯವೊಂದರ ಆವಿಷ್ಕಾರ. ಅದು ಇತರರೊಂದಿಗೂ, ಪ್ರಕೃತಿಯೊಂದಿಗೂ ಇದ್ದುಕೊಂಡು ಮುನ್ನಡೆಯುವ ಒಂದು ಕ್ರಿಯಾಶೀಲ ಸಂಬಂಧ. ಅಂದರೆ ಕಲಿಯುವ ಪ್ರಕ್ರಿಯೆ ವೈಯಕ್ತಿಕವಾದ ಒಂದು ಕೆಲಸ. ಹಾಗೆ ಕಲಿಯುವುದಕ್ಕೂ ಮತ್ತು ಆ ಮೂಲಕ ಬದುಕುವ ಕ್ಷಮತೆಯನ್ನು ವರ್ಧಿಸಿಕೊಳ್ಳಲಿಕ್ಕೂ ಇರುವ ಮಾರ್ಗ ಒಂದೇ, ಅದು ನಿಸರ್ಗ ಮತ್ತು ಜಗತ್ತಿನಿಂದ ಕಲಿಯುವುದು. ಅದು ಜಗತ್ತಿನ ಬಗ್ಗೆ ಕಲಿಯುವುದಲ್ಲ. ಇಂತಹ ಹೊಸ ದೃಷ್ಟಿ, ಬೆಳಕು ಜಗತ್ತಿನ ಪ್ರತಿ ಪ್ರದೇಶವನ್ನು ವ್ಯಾಪಿಸಬೇಕಾಗಿದೆಯೇನೋ ಅತ್ಯಂತ ಶೀಘ್ರವಾಗಿ.

ಶಿಕ್ಷಣ ಮತ್ತು ಕಲಿಕೆಯ ಸಂದರ್ಭದಲ್ಲಿ ಪ್ರಸ್ತುತ ಸಂದರ್ಭ ನೈತಿಕತೆಯ ಮೇಲೂ ಕೂಡಾ ಹೊಸ ಚರ್ಚೆಯನ್ನು ಹುಟ್ಟುಹಾಕುವ ಅನಿವಾರ್ಯತೆಯನ್ನು ಸೃಷ್ಟಿಸಿದೆ. ವಿವೇಕಾನಂದರು ಹೇಳುವ ಹಾಗೆ, 'ಮಾನವನ ಪರಿಪೂರ್ಣ ವಿಕಾಸವೇ ಶಿಕ್ಷಣ' ಮತ್ತು 'ಶಿಕ್ಷಣ ಕೊನೆಗೊಳ್ಳುವುದು ಗುಣಗಳ ವಿಕಾಸದ ಮೂಲಕ' ಎನ್ನುವ ಎರಡು ವಾಕ್ಯಗಳನ್ನು ನೆನೆದರೆ ಶಿಕ್ಷಣ ಒಂದು ಹಂತದಲ್ಲಿ ತಾನು ಸಾಧಿಸಬೇಕಾದುದನ್ನು ಸಾಧಿಸದೆ ವಿಫಲವಾಗಿದೆ, ಕೃತಕವಾಗಿ ಸೊರಗಿದೆ ಎಂದೇ ನನ್ನ ಅಭಿಪ್ರಾಯ. ಶಿಕ್ಷಣದಿಂದ ಮಾನವ ಸಂಪನ್ಮೂಲವಾಗಿ





ರೂಪುಗೊಳ್ಳುತ್ತಿದ್ದಾನೆಯೇ ಹೊರತು ಮಾನವ ಸಂಬಂಧ, ನಿಸರ್ಗ ಪ್ರೀತಿ, ತಾದಾತ್ಮ್ಯ, ಸಹಬಾಳ್ವೆ, ಸಂತುಲಿತ ಅಭಿವೃದ್ಧಿ ಮುಂತಾದ ಗುಣ ಪ್ರವೃತ್ತಿಗಳನ್ನು ಸಾಧಿಸಿಲ್ಲವೇನೋ ಎಂಬ ಭಾವನೆ ಮತ್ತು ಆತಂಕವನ್ನು ಮೂಡಿಸುತ್ತಿದೆ. ಒಟ್ಟಿನಲ್ಲಿ ಹೊಸ ಆತಂಕದ ಸ್ಥಿತಿ ಮತ್ತು ಒತ್ತಡದ ಮೌನಕ್ಕೂ ಇದು ಕಾರಣವಾಗಿಸಿದೆ.

* ಕುಂದಾಪುರ ತಾಲ್ಲೂಕಿನ ಬಸರೂರಿನಲ್ಲಿ ಜುಲೈ 15, 16, 2013 ರಂದು ನಡೆದ UGC ಪ್ರಾಯೋಜಿತ Liberalised India ; Polity, Economy and Society ಕಾರ್ಯಕ್ರಮದಲ್ಲಿ ಮಂಡಿತವಾದ ಪ್ರಬಂಧದ ಪರಿಷ್ಕೃತ ಲೇಖನ.

## Selected Readings


- Berry Vendel. 2000. *Life is a Miracle*. Counter Point Press.
- M.K. Gandhi. 1995. *Towards New Education*. Ahmedabad: Navajeevan Press.
- M.K. Gandhi. 2013. *Hind Swaraj*. Ahmedabad: Navajeevan Press.
- Evan Illich. 1971. *D-Scholling Society*. Newyork :Harper Publications.
- Evan Illich and Barry Sanders. 1998. *The Alphabatisation of the Popular Mind*. Sanfrancisco: North Point Press.
- Prakash Madhu S. and Gusteva Esteva. 1998. *Escaping Education*. Newyork: Lang Publication.
- Thomas Friendman. 2000. *Lexus and Olive Tree*. Anchor.
- Manfred Stiger.2008. *Globalisation.* New Delhi :OUP.
- Vivekananda. 2013. *Education*. Calcutta :Ramakrishna Matt.
- ಐಜಾಝ್ ಅಹಮದ್.2013. ಪೋಸ್ಟ್ ಮಾರ್ಡನಿಸಂ. ಬೆಂಗಳೂರು: ಚಿಂತನ ಪ್ರಕಾಶನ.

## ನುಡಿ ನಮನ



# ರಾವ್. ಎಸ್.ಆರ್.
# (1922–2013)

ಎಮ್.ವಿ.ವಿಶ್ವೇಶ್ವರ
ನಿವೃತ್ತ ಉಪ ಅಧೀಕ್ಷಕ
ಪುರಾತತ್ತ್ವವಿದ, ಭಾ.ಪು.ಸ.,
ಬೆಂಗಳೂರು ವಲಯ,
ಬೆಂಗಳೂರು

**ಭಾರತದ ಪ್ರಖ್ಯಾತ ಪುರಾತತ್ವವಿದರಾದ ಎಸ್.ಆರ್. ರಾವ್ ಅವರು ಪುರಾತತ್ವ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿದವರು. ಇವರು ನಮ್ಮ ಕನ್ನಡಿಗರೆಂಬ ಹೆಮ್ಮೆ ನಮಗಿದೆ. ಇವರು ಜನವರಿ 3, 2013 ರಂದು ಬೆಂಗಳೂರಿನಲ್ಲಿ ನಿಧನರಾದರು. ನಮ್ಮನ್ನಗಲಿದ ಎಸ್.ಆರ್. ರಾವ್‌ರವರಿಗೆ ಇತಿಹಾಸ ದರ್ಪಣವು ನುಡಿ ನಮನ ಸಲ್ಲಿಸುತ್ತದೆ. –ಸಂ.**

ಪ್ರಸಿದ್ಧ ಪುರಾತತ್ತ್ವಜ್ಞರು ಹಾಗೂ ಸಿಂಧೂಲಿಪಿ ತಜ್ಞರೂ ಆದ ಶಿಕಾರಿಪುರ ರಂಗನಾಥರಾವ್, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರದಲ್ಲಿ 1922ರಲ್ಲಿ ಜನಿಸಿದರು. ಅವರದು ಮಧ್ಯಮವರ್ಗದ ಸಂಪ್ರದಾಯನಿಷ್ಠ ಮಾಧ್ವ ಬ್ರಾಹ್ಮಣ ಮನೆತನ. ಜಡೆ ಶಿವಮೊಗ್ಗಗಳಲ್ಲಿ ಪ್ರೌಢಶಾಲೆಯ ವರೆಗಿನ ವ್ಯಾಸಂಗವನ್ನು ಪೂರೈಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು, ತಾತಯ್ಯನವರೆಂದು ಪ್ರಸಿದ್ಧರಾದ ಎಮ್.ವೆಂಕಟಕೃಷ್ಣಯ್ಯನವರ ಅನಾಥಾಲಯ ದಲ್ಲಿದ್ದು, ಇತಿಹಾಸದಲ್ಲಿ ಬಿ.ಎ.(ಆನರ್ಸ್) ಪದವಿ ಪಡೆದರು. ಪ್ರೊ. ಮೆಕಿಂತಾಷ್ ಮತ್ತು ಡಾ.ಎಂ.ಎಚ್. ಕೃಷ್ಣ ಅವರಿಂದ ಇವರು ಹೆಚ್ಚು ಪ್ರಭಾವಿತರಾದರು. ಪ್ರಥಮ ಶ್ರೇಣಿಯಲ್ಲಿ ಪದವಿ ಗಳಿಸಿದ ಇವರಿಗೆ ಸರ್ ಹ್ಯೂಸ್ ಕಾಂಡಿ ಚಿನ್ನದ ಪದಕ ದೊರೆಯಿತು. ಅನಂತರ ನಾಗಪುರ ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಗಳಿಸಿದರು. ಇವರ 'ಲೋಥಲ್ ಅಂಡ್ ದಿ ಇಂಡಸ್ ಸಿವಿಲೈಜೇಷನ್' ಎಂಬ ಕೃತಿಗೆ 1981ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಡಿ.ಲಿಟ್ ಪದವಿ ನೀಡಿ ಗೌರವಿಸಿದೆ.

ಶಾಸನಶಾಸ್ತ್ರ ಮತ್ತು ನಾಣ್ಯಶಾಸ್ತ್ರಗಳಲ್ಲಿ ತರಬೇತಿ ಹೊಂದಿದ ಇವರಿಗೆ ಬರೋಡದ ಕಲಾಭವನದಿಂದ ಸಂರಕ್ಷಣೆ





ಮತ್ತು ಉತ್ಖನನ ವಿಷಯಗಳಲ್ಲಿ ಪರಿಣತಿ ದೊರೆಯಿತು. ಪ್ರಾಗೈತಿಹಾಸಿಕ ಪುರಾತತ್ತ್ವ ಕ್ಷೇತ್ರದಲ್ಲಿ ಎಫ್.ಈ. ಜಾಯ್ನರ್ ಹಾಗೂ ಹೆಚ್.ಡಿ. ಸಂಕಾಲಿಯ ಅವರಿಂದ, ಪಶ್ಚಿಮ ಏಷ್ಯದ ಕಂಚುಯುಗದ ಪುರಾತತ್ತ್ವದಲ್ಲಿ ಕ್ಲಾಡ್ ಸೊಬೊರ್ನ್ ಅವರಿಂದ ಹಾಗೂ ಪ್ರಾಚೀನ ಲಿಪಿಶಾಸ್ತ್ರದಲ್ಲಿ ನೌಗಯರ್ಡ್ ಅವರಿಂದ ತರಬೇತಿ ಹೊಂದಿದರು.

1947ರಲ್ಲಿ ಬರೋಡ ಸಂಸ್ಥಾನದ ಪುರಾತತ್ತ್ವ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ತಮ್ಮ ವೃತ್ತಿಜೀವನ ಪ್ರಾರಂಭಿಸಿದರು. ಭಾರತ ಸ್ವಾತಂತ್ರ್ಯ ಪಡೆದ ಅನಂತರ ಸ್ಥಳೀಯ ಅರಸೊತ್ತಿಗೆಯ ಅಧೀನದಲ್ಲಿದ್ದ ಸ್ವತಂತ್ರ ಪ್ರಾದೇಶಿಕ ರಾಜ್ಯಗಳೆಲ್ಲವೂ, ಬರೋಡವೂ ಸೇರಿದಂತೆ, ಸ್ವತಂತ್ರ ಭಾರತ ಗಣರಾಜ್ಯದ ಒಕ್ಕೂಟದಲ್ಲಿ ವಿಲೀನಗೊಂಡವು. ಇದರಿಂದ ಅದುವರೆಗೆ ರಾಜ್ಯಸರ್ಕಾರದ ಸೇವೆಯಲ್ಲಿದ್ದ ರಾವ್ ಅವರು ಕೇಂದ್ರಸರ್ಕಾರದ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯಲ್ಲಿ(ಮುಂದೆ ಭಾ.ಪು.ಸ. ಎಂದು ಸಂಕ್ಷೇಪಿಸಲಾಗಿದೆ) ಬರೋಡದ ಪಶ್ಚಿಮವಲಯದಲ್ಲಿ ಉಪ ಅಧೀಕ್ಷಕ ಪುರಾತತ್ತ್ವವಿದರಾಗಿ ನಿಯುಕ್ತರಾದರು. ಕ್ರಮೇಣ ಅಧೀಕ್ಷಕ ಪುರಾತತ್ತ್ವವಿದರಾಗಿ ಪದೋನ್ನತಿಗಳಿಸಿ ಅದೇ ವಲಯದಲ್ಲಿದ್ದು, ನಿವೃತ್ತರಾಗುವ ವರೆಗೂ (1980) ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿನ ಈ ಇಲಾಖೆಯ ವಿವಿಧ ವಲಯಗಳ ಮುಖ್ಯಾಧಿಕಾರಿಯ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ನವದೆಹಲಿಯಲ್ಲಿನ ಭಾ.ಪು.ಸ.ದ ಮಹಾನಿರ್ದೇಶಕರ ಕಾರ್ಯಾಲಯದಲ್ಲಿ ಮೂರು ವರ್ಷಗಳಕಾಲ ಉಪ ಮಹಾ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. ಯುರೋಪಿನ ರಾಷ್ಟ್ರಗಳು, ಪಶ್ಚಿಮ ಏಷ್ಯ ಮತ್ತು ಅಮೇರಿಕಗಳಲ್ಲಿ ಪ್ರವಾಸ ಮಾಡಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸಿಂಧೂ ಸಂಸ್ಕೃತಿ, ಲಿಪಿಯನ್ನು ಕುರಿತು ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ.

ಸ್ಥಳಪರಿಶೋಧನೆಗಳು: ಭಾ.ಪು.ಸ.ಇಲಾಖೆಯಲ್ಲಿ ಸೇರ್ಪಡೆಗೊಂಡನಂತರ ಡಾ.ರಾವ್ ಭಾರತದ ವಿವಿಧ ಪ್ರದೇಶಗಳಲ್ಲಿ ಅನೇಕ ಸ್ಥಳಪರಿಶೋಧನೆಗಳನ್ನು ಕೈಗೊಂಡರು. ಅವುಗಳ ಮೂಲಕ ಬೆಳಕಿಗೆ ಬಂದ ಪ್ರತಿಯೊಂದು ಮಾಹಿತಿಯೂ ಭಾರತದಲ್ಲಿ ಪುರಾತತ್ತ್ವೀಯ ಅಧ್ಯಯನದ ವ್ಯಾಪ್ತಿ, ವಿಸ್ತಾರಗಳಿಗೆ ಹೊಸ ಆಯಾಮವನ್ನೊದಗಿಸಿವೆಯೆನ್ನುವುದು ಗಮನಾರ್ಹವಾದ ಅಂಶ. 1954–58 ರ ನಾಲ್ಕು ವರ್ಷಗಳ ಅವಧಿಯಲ್ಲಿ ಗುಜರಾತಿನ ಮೆಹಸಾನಾ ಮತ್ತು ಸೂರತ್ ವರೆಗಿನ ಪ್ರದೇಶ ಮತ್ತು ಕಾಥೇವಾಡ್ ಹಾಗೂ ಕಚ್ಛ್ ಪರ್ಯಾಯ ದ್ವೀಪಗಳಲ್ಲಿ ಪರಿಶೋಧನೆ ನಡೆಸಿದರು. ಈ ಶೋಧನೆಗಳ ಪರಿಣಾಮವಾಗಿ ಆದಿ ಹರಪ್ಪ ಸಂಸ್ಕೃತಿಯ ಭಗತ್ರಾವ್, ಹರಪ್ಪ ಸಂಸ್ಕೃತಿಯ ಲೋಥಲ್, ಕೋಥ್; ಅಂತ್ಯ ಹರಪ್ಪ ಸಂಸ್ಕೃತಿಯ ಮೇಘಮ್, ತೇಲೋಡ್ ಮುಂತಾದ ಪ್ರಮುಖ ದಿಕ್ಸೂಚಕ ನಿವೇಶನಗಳು ಸೇರಿದಂತೆ 50 ನಿವೇಶನಗಳನ್ನು ಸಂಶೋಧಿಸಿದರು. ಇದರಿಂದ ಸ್ವಾತಂತ್ರ್ಯೋತ್ತರ ಕಾಲದಲ್ಲಿ ನೂತನವಾಗಿ ವಿಭಜಿತವಾದ ಭಾರತದ ಭೂಭಾಗದಲ್ಲಿಯೇ ಹರಪ್ಪ ಸಂಸ್ಕೃತಿಯ ವಿವಿಧ ಹಂತಗಳನ್ನು ಪ್ರಕಾಶಪಡಿಸುವ ಉತ್ತಮ ನಿವೇಶನಗಳನ್ನು ಮೊದಲಬಾರಿಗೆ ಕಂಡುಹಿಡಿದ ಕೀರ್ತಿ ಇವರದಾಯಿತು. ಅದರಂತೆಯೇ 1960–61ರ ಸುಮಾರಿಗೆ ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿನ ಇತರ್–ಪಹಾರ್ ಬೆಟ್ಟಸಾಲಿನಲ್ಲಿ ವರ್ಣಚಿತ್ರಗಳಿಂದ ಕೂಡಿದ 10 ಕಲ್ಲಾಸರೆಗಳನ್ನು ಬೆಳಕಿಗೆ ತಂದರು. ಗಾಢ ಕೆಂಪು ಬಣ್ಣದಲ್ಲಿರುವ ವರ್ಣಚಿತ್ರಗಳಲ್ಲಿ ಮನುಷ್ಯರು, ಪ್ರಾಣಿಗಳು ಮತ್ತು ಕೆಲವು ಬೇಟೆಯ ಸನ್ನಿವೇಶವಿರುವ ಚಿತ್ರಗಳಿವೆ. ಜೊತೆಗೆ

ಇವೇ ಕಲ್ಲಾಸರೆಗಳಲ್ಲಿ ಮಧ್ಯಶಿಲಾಯುಗ ಹಾಗೂ ಸೂಕ್ಷ್ಮಶಿಲಾಯುಗಕಾಲಕ್ಕೆ ಸೇರಿಸ ಬಹುದಾದ ಶಿಲಾಯುಧಗಳ ನಾಲ್ಕು ಉತ್ಪಾದನಾ ಕೇಂದ್ರನಿವೇಶನಗಳನ್ನು ಕಂಡುಹಿಡಿದರು.

ತಮಿಳುನಾಡಿನ ನಾರ್ತ್ ಆರ್ಕಾಟ್ ಜಿಲ್ಲೆಯ ಪೈಯಂಪಳ್ಳಿಯ ಬಳಿಯಲ್ಲಿರುವ ವೊಂಟೆಗುಡ್ಡ ಹಾಗೂ ತಲತಪ್ಪಮಲೆ ಬೆಟ್ಟಸಾಲುಗಳ ನಡುವಿನ ಕಣಿವೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ಪ್ರಮುಖ ನಿವೇಶನ ಒಂದನ್ನು1963–64ರಲ್ಲಿ ಸಂಶೋಧಿಸಿದರು. ಮುಂದಿನ ವರ್ಷ (1964–65) ಆ ನಿವೇಶನ ದಲ್ಲಿ ಕೈಗೊಂಡ ಉತ್ಖನನದಲ್ಲಿ ಇಡೀ ತಮಿಳುನಾಡಿನ ನವಶಿಲಾಯುಗ ಸಂಸ್ಕೃತಿಗಳ ಅಧ್ಯಯನಕ್ಕೆ ಹೊಸ ಆಯಾಮ ದೊರಕಿತು.ಈ ಫಲಿತಾಂಶದಿಂದ ಸಾಕಷ್ಟು ಉತ್ತೇಜಿತರಾದ ಡಾ.ರಾವ್ 1967–68ರಲ್ಲಿ ಇತಿಹಾಸಪೂರ್ವ ಕಾಲದ ಸಂಸ್ಕೃತಿಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಎರಡು ಪ್ರಮುಖ ಸ್ಥಳ ಪರಿಶೋಧನೆಗಳನ್ನು ನಡೆಸಿದರು. ಅವುಗಳಲ್ಲಿ ಮೊದಲನೆಯದು ದಖನ್ನಿನ ಹಾಗೂ ದಕ್ಷಿಣಭಾರತದಲ್ಲಿ ಅದುವರೆಗೆ ನಡೆದ ಪುರಾತತ್ತ್ವೀಯ ಅಧ್ಯಯನ ಗಳ ನಡುವಣ ಪರಸ್ಪರ ಸಂಬಂಧವನ್ನು ಗ್ರಹಿಸುವುದು ಮತ್ತು ಅರ್ಥೈಸುವುದು. ಅಂದರೆ ಕಳೆದ ಶತಮಾನದ 70ರ ದಶಕದವರೆಗೆ ಅನೇಕ ಪ್ರಾದೇಶಿಕ ಪುರಾತತ್ತ್ವೀಯ ಅಧ್ಯಯನಗಳು ಪ್ರತ್ಯೇಕವಾಗಿ ನಡೆದಿದ್ದವು. ಉದಾಹರಣೆಗೆ ಗೋದಾವರೀ–ನರ್ಮದಾ ನದೀಕಣಿವೆಯಲ್ಲಿ ಪಸರಿಸಿದ್ದ ನವಶಿಲಾಯುಗ–ತಾಮ್ರಶಿಲಾಯುಗೀನ ಸಂಸ್ಕೃತಿಗಳು, ಕರ್ನೂಲ್ ಪರಿಸರದಲ್ಲಿ ಬೆಳಕಿಗೆ ಬಂದಿದ್ದ ಚಿತ್ರಿತ ಮೃತ್ಪಾತ್ರೆ ಸಂಸ್ಕೃತಿಗಳು ಹಾಗು ದಕ್ಷಿಣಭಾರತದಲ್ಲಿ ವಿಶೇಷವಾಗಿ ಪಾಲಾರ್ ನದೀತೀರದಲ್ಲಿನ ಲೋಹತಂತ್ರಜ್ಞಾನದ ಅರಿವೇ ಇಲ್ಲದಿದ್ದ ನವಶಿಲಾಯುಗ ಸಂಸ್ಕೃತಿಗಳು. ಇವುಗಳ ಉಗಮ, ಕಾಲಾನುಕ್ರಮಣಿಕೆ ಮತ್ತು ಪ್ರಸರಣ ಮಾತ್ರವಲ್ಲದೆ ಅವುಗಳ ನಡುವೆ ಇದ್ದಿರಬಹುದಾದ ಪರಸ್ಪರ ಸಂಭಾವ್ಯ ಸಾಂಸ್ಕೃತಿಕ ಸಂಬಂಧ, ಸಂಪರ್ಕಾದಿಗಳ ಬಗೆಗೆ ಹೆಚ್ಚಿನ ಮಾಹಿತಿ ಬೆಳಕಿಗೆ ಬಂದಿರಲಿಲ್ಲ. ಇಂತಹ ವಿಶಿಷ್ಟ ವಿಶ್ಲೇಷಣಾತ್ಮಕ ಹಾಗೂ ತೌಲನಿಕ ಅಧ್ಯಯನಕ್ಕೆ ಅತ್ಯವಶ್ಯಕವಾದ ಪುರಾತತ್ತ್ವೀಯ ಆಧಾರಸಾಮಗ್ರಿಗಳನ್ನು ಕಲೆಹಾಕುವ ಉದ್ದೇಶದಿಂದ ಮೊದಲನೆಯ ಸಂಶೋಧನಾಕಾರ್ಯ ನಡೆಯಿತು. ಎರಡನೆಯದು ಆಂಧ್ರಪ್ರದೇಶದ ಪೆನ್ನಾರ್ ನದೀತೀರ (ಕರ್ನೂಲ್ ಪರಿಸರ)ದ ನವಶಿಲಾಯುಗ ಸಂಸ್ಕೃತಿಗಳನ್ನು ತಮಿಳುನಾಡಿನ ಪಾಲಾರ್ ನದೀತೀರ (ನಾರ್ತ್ ಆರ್ಕಾಟ್ ಜಿಲ್ಲೆಯ ಪರಿಸರ)ದ ಸಂಸ್ಕೃತಿಗಳೊಡನೆ ಹೋಲಿಸಲು, ತುಲನಾತ್ಮಕ ಅಧ್ಯಯನ ನಡೆಸಿ, ಕರ್ನೂಲ್ ಪರಿಸರದ ಚಿತ್ರಿತ ಮೃತ್ಪಾತ್ರೆ ಸಂಸ್ಕೃತಿಯು ಕರ್ನಾಟಕದ ಕೋಲಾರ ಜಿಲ್ಲೆಯ ನವಶಿಲಾಯುಗ ಸಂಸ್ಕೃತಿಯನ್ನು ಪ್ರಭಾವಿತಗೊಳಿಸಿದೆಯೇ ಎನ್ನುವುದನ್ನು ಪರಿಶೀಲಿಸುವುದಕ್ಕೆ ಅವಶ್ಯಕವಾದ ಪುರಾತತ್ತ್ವೀಯ ಆಧಾರಗಳನ್ನು ಸಂಗ್ರಹಿಸುವ ಉದ್ದೇಶದಿಂದ ನಡೆದುದು.

ಇವುಗಳ ಜೊತೆಜೊತೆಗೆ ದಕ್ಷಿಣಭಾರತದ ಬೃಹತ್ ಶಿಲಾಯುಗ ಸಂಸ್ಕೃತಿಯ ಉಗಮ, ವೈವಿಧ್ಯ, ಪ್ರಸರಣ ಮತ್ತು ವೈಶಿಷ್ಟ್ಯಗಳನ್ನು ತಿಳಿಯಲು ಭಾ.ಪು.ಸ. ವು ಕೈಗೊಂಡ ವಿಶೇಷ ಸ್ಥಳಪರಿಶೋಧನಾ ಯೋಜನೆಯನ್ನೂ ಪ್ರಾರಂಭಿಸಿದರು. ಈ ಯೋಜನೆಗಳ ಪರಿಣಾಮವಾಗಿ ಕೋಲಾರ ಜಿಲ್ಲೆಯ ಬನಹಳ್ಳಿ, ದೊಡ್ಡಕಡತ್ತೂರ್, ಟೇಕಲ್, ಅರಾಭಿಕೊತ್ತನೂರು ಮತ್ತು ಕೆಂದಟ್ಟಿಗಳಲ್ಲಿ ಪ್ರಮುಖ ನವಶಿಲಾಯುಗ–ಬೃಹತ್ ಶಿಲಾಯುಗ ಸಂಸ್ಕೃತಿಗಳ ನಿವೇಶನಗಳನ್ನೂ ಗೊನಕನಹಳ್ಳಿಯಲ್ಲಿ ವಿಸ್ತಾರವಾದ ಪ್ರದೇಶದಲ್ಲಿ ಹರಡಿದ ಬೃಹತ್ ಶಿಲಾಯುಗ ಸಂಸ್ಕೃತಿಯ ವಸತಿ ನಿವೇಶನವನ್ನೂ ಕಂಡುಹಿಡಿದರು. 1968–69ರಲ್ಲಿ ಪ್ರಾಚೀನ ಬೌದ್ಧಸಾಹಿತ್ಯ ಹಾಗೂ ಗ್ರೀಕ್ ಪ್ರವಾಸಸಾಹಿತ್ಯಗಳಲ್ಲಿ ಉಲ್ಲೇಖಿತವಾದ





ಪ್ರಸಿದ್ಧ ಬಂದರು ಮತ್ತು ಒಳನಾಡಿನ ಪ್ರಮುಖ ಪಟ್ಟಣ ಹಾಗೂ ಇವೆರಡನ್ನೂ ನಿಯಂತ್ರಿಸುತ್ತಿದ್ದ ಪ್ರಭುತ್ವಕೇಂದ್ರ ಮುಂತಾದುವನ್ನು ಗುರುತಿಸುವ ಉದ್ದೇಶದಿಂದ ಗೋವಾದಿಂದ ಉತ್ತರಕನ್ನಡ ಜಿಲ್ಲೆಯವರೆಗಿನ ಪಶ್ಚಿಮ ಕರಾವಳಿ ಮತ್ತು ಪರಿಸರದ ಒಳನಾಡಿನ ಸ್ಥಳಪರಿಶೋಧನೆಯನ್ನು ನಡೆಸಿದರು. ಇದರ ಪರಿಣಾಮವಾಗಿ ಬನವಾಸಿ, ಹೊನ್ನಾವರ, ಗೋಕರ್ಣಗಳಲ್ಲಿ ಆದಿ ಇತಿಹಾಸಯುಗದ ನಿವೇಶನಗಳು ಮತ್ತು ಹೊನ್ನಾವರ, ಗೋಕರ್ಣಗಳ ಪರಿಸರದಲ್ಲಿ ನವಶಿಲಾಯುಗ ಕಾಲದ ಮಣ್ಣಿನಪಾತ್ರೆಚೂರುಗಳು ಹಾಗೂ ಉಜ್ಜಿ ಹೊಳಪು ನೀಡಿದ ಶಿಲಾಯುಧಗಳು ಬೆಳಕಿಗೆ ಬಂದವು. ಹಂಪೆಯ ಬಳಿ ತುಂಗಭದ್ರಾನದಿಯ ಉತ್ತರದಡದಲ್ಲಿ ಸ್ಥಳಪರಿಶೋಧನೆ ಕೈಗೊಂಡು ವಿಠ್ಠಲ ದೇವಾಲಯ ಸಮುಚ್ಚಯದ ಹತ್ತಿರವಿರುವ ಮಸಲಯ್ಯನ ಗುಡ್ಡದಲ್ಲಿ ನವಶಿಲಾಯುಗ–ತಾಮ್ರಶಿಲಾಯುಗ ಸಂಸ್ಕೃತಿಯ ವಸತಿ ನಿವೇಶನವನ್ನು ಕಂಡುಹಿಡಿದರು.

**ಉತ್ಖನನಗಳು :** ಈ ಮೊದಲು ತಿಳಿಸಿರುವಂತೆ ಭಾ.ಪು.ಸ.ದಲ್ಲಿ 1952–53 ರಿಂದ 1980 ರವರೆಗಿನತಮ್ಮ ಸೇವಾವಧಿಯಲ್ಲಿ ಡಾ. ರಾವ್ ಅವರು ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಪುರಾತತ್ತ್ವೀಯ ಹಾಗೂ ಸಾಂಸ್ಕೃತಿಕ ಮಹತ್ತ್ವದ 22 ನಿವೇಶನಗಳಲ್ಲಿ ಉತ್ಖನನಗಳನ್ನು ಕೈಗೊಂಡರು. ಆ ನಿವೇಶನಗಳನ್ನು ಕೆಳಗೆ ಕಾಣಿಸಿರುವಂತೆ ಸಂಸ್ಕೃತಿವಾರು ವರ್ಗೀಕರಿಸಬಹುದು. ಸಿಂಧೂ/ಹರಪ್ಪ ಸಂಸ್ಕೃತಿಯ ನಿವೇಶನಗಳು: ರಂಗಪುರ್, ಲೋಥಲ್, ಭಗತ್ರಾವ್, ಮೇಘಮ್ ಮತ್ತು ದೈಮಾಬಾದ್ (5ನಿವೇಶನಗಳು), ನವ ಶಿಲಾಯುಗ/ತಾಮ್ರ ಶಿಲಾಯುಗ/ಕಬ್ಬಿಣಯುಗ : ಪೈಯಂಪಳ್ಳಿ, ಸಿಂಗನಪಲ್ಲಿ, ಹೂಣೂರು, ಥೇವೂರು ಮತ್ತು ಸಸ್ತೇವಾಡಿ (5 ನಿವೇಶನಗಳು), ಪ್ರಾಚೀನ ಲೋಹ ಶಾಸ್ತ್ರ/ಗಣಿಗಾರಿಕೆ: ಕಲ್ಯಾಡಿ (1ನಿವೇಶನ), ಪ್ರಾಚೀನ ಬಂದರು ಪಟ್ಟಣ : ಕಾವೇರೀಪಟ್ಟಣಮ್, ದ್ವಾರಕಾ, ರಾಜ್ ಬಂದರ್(3 ನಿವೇಶನಗಳು), ಆದಿ ಇತಿಹಾಸ ಯುಗ: ಅಮ್ರೋಲಿ, ಕನ್ಹೇರಿ, ಐಹೊಳೆ, ಪಟ್ಟದಕಲ್ಲು ಮತ್ತು ಚಂದ್ರಾಪುರ (ಚಾಂದೋರ್) (5ನಿವೇಶನಗಳು), ಮಧ್ಯ ಇತಿಹಾಸ ಯುಗ : ಚಿತ್ತೋರ್ ಗಢ್, ಹಂಪಿ ಮತ್ತು ರಾಯಗಢ (3 ನಿವೇಶನಗಳು). ವೈಜ್ಞಾನಿಕ ವಿಧಾನಗಳನ್ನು ಉಪಯೋಗಿಸಿ ಮುಚ್ಚಿಹೋದ ಸ್ಮಾರಕದ ವಾಸ್ತು ಭಾಗಗಳನ್ನು ಅನಾವರಣ ಗೊಳಿಸುವುರಿಂದ ಮೊದಲುಗೊಂಡು ವಿಸ್ತೃತರೀತಿಯ ವೈಜ್ಞಾನಿಕ ಉತ್ಖನನದವರೆಗಿನ ವಿವಿಧ ತಾಂತ್ರಿಕ ವಿಧಿವಿಧಾನಗಳನ್ನು ಅನುಸರಿಸಿ ಈ ಉತ್ಖನನಗಳನ್ನು ನಡೆಸಲಾಯಿತು.

1948ರಲ್ಲಿ ಶಿಶುಪಾಲಗಢದಲ್ಲಿ ನಡೆಸಲಾದ ಉತ್ಖನನದಲ್ಲಿ ವೈಜ್ಞಾನಿಕ ಉತ್ಖನನದ ತಂತ್ರವಿಧಾನಗಳ ಬಗ್ಗೆ ಅನುಭವಗಳಿಸಿದ್ದ ಇವರು ಗುಜರಾತಿನ ಅಮ್ರೋಲಿಯಲ್ಲಿ ಚಿಕ್ಕ ಪ್ರಮಾಣದಲ್ಲಿಯಾದರೂ ವೈಜ್ಞಾನಿಕ ಸ್ವರೂಪದ ಉತ್ಖನನ ನಡೆಸಿ ಅಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳಿರುವ ದಹನಾನಂತರ ಅಸ್ಥಿ ಸಂಚಯನ ಸಂಸ್ಕಾರದ ವಿಶಿಷ್ಟ ಪದ್ಧತಿಯೊಂದನ್ನು ಬೆಳಕಿಗೆ ತಂದರು.

ಸಿಂಧು ಸಂಸ್ಕೃತಿಗೆ ಸಂಬಂಧಿಸಿದಂತೆ ಗುಜರಾತ್–ಕಚ್ಛ್ ಪ್ರದೇಶದಲ್ಲಿಯೇ ಸು.50ಕ್ಕೂ ಹೆಚ್ಚು ನೆಲೆಗಳನ್ನು ಪತ್ತೆ ಮಾಡಿದ ಅನಂತರ, ರಂಗಪುರ ಮತ್ತು ಲೋಥಲ್‌ಗಳಲ್ಲಿ ಉತ್ಖನನ ನಡೆಸಿ ಇಟ್ಟಿಗೆಯಲ್ಲಿ ಕಟ್ಟಿದ ಅಲ್ಲಿಯ ರಚನೆಗಳು ಮತ್ತು ಮಾನವ ನಿರ್ಮಿತ ಹಲವುರೀತಿಯ ಪ್ರಾಚ್ಯ ವಸ್ತುಗಳು ಸಿಂಧೂ ಸಂಸ್ಕೃತಿಯ ಪ್ರೌಢಹಂತವೊಂದನ್ನು ಪ್ರತಿನಿಧಿಸುವಲ್ಲಿ ಹೇಗೆ ಮಹತ್ತ್ವದ್ದಾಗಿವೆ ಎಂಬುದನ್ನು ಪ್ರಮಾಣೀಕರಿಸಿದು. 1954ರಲ್ಲಿ

ಪರಿಶೋಧಿತವಾದ ಲೋಥಲ್‌ನಲ್ಲಿ 1955–62ರವರೆಗೆ ನಡೆದ ಉತ್ಖನನಗಳಿಂದ ಸಿಂಧೂ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕು ಬಿದ್ದಿತು. ಲೋಥಲ್ ಪ್ರಪಂಚದಲ್ಲಿಯೇ ಪ್ರಾಚೀನ ಬಂದರುಗಳಲ್ಲೊಂದಾಗಿದ್ದು ಇಲ್ಲಿಯ ಜನರು ಬಹರೇನ್ ದ್ವೀಪ, ಇಂದಿನ ಇರಾನ್ ಮತ್ತು ಇರಾಕ್ ಪ್ರದೇಶಗಳ ಪ್ರಾಚೀನ ಜನರೊಂದಿಗೆ ವಾಣಿಜ್ಯ ಹಾಗೂ ಸಾಂಸ್ಕೃತಿಕ ಸಂಪರ್ಕ ಸಂಬಂಧ ಹೊಂದಿದ್ದರೆಂದು ತಿಳಿದುಬಂತು. ಲೋಥಲ್‌ನಲ್ಲಿ 213ಮೀ ಉದ್ದ, 37.20ಮೀ ಅಗಲದ ಮೊತ್ತ ಮೊದಲ ಪ್ರಾಚೀನ ಹಡಗುಕಟ್ಟೆಯ ಸಂಶೋಧನೆ ಇವರಿಗೆ ಅಂತರರಾಷ್ಟ್ರೀಯ ಖ್ಯಾತಿ, ಗೌರವ ಒದಗಿಸಿತು.

ಸಮುದ್ರ ಹಾಗು ನದಿತೀರದ ನೆಲೆಗಳು ಸಮುದ್ರದ ಏರಿಳಿತ ಹಾಗೂ ಪ್ರವಾಹಗಳಿಗೆ ತುತ್ತಾಗಿ ಅವನತಿ ಹೊಂದುತ್ತಿದ್ದ ಅಂಶವನ್ನು ಲೋಥಲ್ ಸ್ಪಷ್ಟವಾಗಿ ತೋರಿಸಿಕೊಟ್ಟಿತು. ಕ್ರಿ.ಪೂ. 1900ರ ಅನಂತರ ಅಂತ್ಯ ಹರಪ್ಪ ಸಂಸ್ಕೃತಿಯ ಜನರು ವಿವಿಧ ಪ್ರದೇಶಗಳಲ್ಲಿ ಹರಡಿ ಹಂಚಿಹೋಗಿ ಅಲ್ಪಪ್ರಮಾಣದ ಹಳ್ಳಿಗಳನ್ನು ಕಟ್ಟಿಕೊಂಡು ಮೊದಲಿನ ವೈಭವವಿಲ್ಲದೆ ಸರಳರೀತಿಯಲ್ಲಿ ವಾಸಮಾಡ ತೊಡಗಿದರು. ಕಾಲಿಬಂಗನ್ ಮತ್ತು ಲೋಥಲ್ ಉತ್ಖನನಗಳಿಂದ ಅಂದಿನ ಜನರು ಅಗ್ನಿಪೂಜಕರಾಗಿದ್ದ ಅಂಶ ಬೆಳಕಿಗೆ ಬಂದಿದೆ. ಅದುವರೆಗೆ ವಿದ್ವಾಂಸರು ಭಾವಿಸಿದ್ದಂತೆ ಸಿಂಧೂ ಸಂಸ್ಕೃತಿಯ ಜನರಿಗೆ ಕುದುರೆಗಳ ಪರಿಚಯವಿರಲಿಲ್ಲ ಎಂಬ ವಾದಕ್ಕೆ ಪ್ರತ್ಯುತ್ತರವಾಗಿ ಲೋಥಲ್ ಮತ್ತು ಸುರಕೋಟದ ಉತ್ಖನನಗಳಲ್ಲಿ ಕುದುರೆಯ ಎಲುಬುಗಳು ದೊರೆತಿವೆ.

ತಮಿಳುನಾಡಿನ ಪೈಯಂಪಲ್ಲಿ ಮತ್ತು ಆಂಧ್ರಪ್ರದೇಶದ ಶಿವರಂಗಳಲ್ಲಿ ಇವರು ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು ಕಂಡುಹಿಡಿದರು. ಐಹೊಳೆ, ಪಟ್ಟದಕಲ್ಲಿನ ಚಾಲುಕ್ಯ ಕಾಲದ ಹಾಗೂ ಗುಜರಾತಿನ ದ್ವಾರಕಾಧೀಶ ದೇವಾಲಯಗಳ ಮುಚ್ಚಿಹೋದ ಅಧಿಷ್ಠಾನ ವಾಸ್ತು ಭಾಗಗಳನ್ನು ಬೆಳಕಿಗೆ ತರುವ ಪ್ರಯತ್ನಗಳಲ್ಲಿ ಬಹುಶಃ ಸ್ವತಃ ರಾವ್ ಅವರೂ ಊಹಿಸದಂತಹ ಅನೇಕ ಹೊಸ ವಿಷಯಗಳು ತಿಳಿದುಬಂದವು. ಐಹೊಳೆಯ ಅಂಬಿಗೇರಗುಡಿಯ ಕೆಳಗೆ ಚಾಲುಕ್ಯಪೂರ್ವಕಾಲದ ಇಟ್ಟಿಗೆ ಕಟ್ಟಡದ ಅವಶೇಷ, ಲಾಡಖಾನ್ ದೇವಾಲಯದ ಕೆಳಗೆ ಶಾತವಾಹನಕಾಲದ ನಾಣ್ಯ, ಮಡಕೆಯ ಚೂರುಗಳು, ಹುಚ್ಚಪ್ಪಯ್ಯಮಠದ ಪರಿಸರದಲ್ಲಿ ದೊರೆತ ಚಾಲುಕ್ಯಪೂರ್ವಕಾಲದ ಚಿನ್ನದ ನಾಣ್ಯ, ಆಭರಣಗಳು; ಪಟ್ಟದಕಲ್ಲಿನ ಸಂಗಮೇಶ್ವರ(ವಿಜಯೇಶ್ವರ)ದೇವಾಲಯದ ಕೆಳಗೆ ಶಾತವಾಹನಕಾಲದ ವಿಶಾಲ ಇಟ್ಟಿಗೆ ಕಟ್ಟಡದ ಅವಶೇಷ,ಜೈನ ದೇವಾಲಯದ ಪರಿಸರದಲ್ಲಿ ಚಾಲುಕ್ಯ ಪೂರ್ವಕಾಲದ ವಿಸ್ತಾರವಾದ ಇಟ್ಟಿಗೆ ಕಟ್ಟಡದ ಅವಶೇಷ ಜೈನ ತೀರ್ಥಂಕರ ಭಗ್ನಪ್ರತಿಮೆ ಹಾಗೂ ಇನ್ನಿತರ ವಿವರಗಳು ಬೆಳಕಿಗೆ ಬಂದುವು. ಇದರಿಂದ ಆಯಾ ಪರಿಸರ/ಸಮುಚ್ಚಯದಲ್ಲಿರುವ ಇತರ ದೇವಾಲಯಗಳ ನಿರ್ಮಾಣ ಕಾಲದ ಹಿನ್ನೆಲೆಯಲ್ಲಿ ಪ್ರಸ್ತುತ ದೇವಾಲಯ ನಿರ್ಮಾಣವಾದ ಕಾಲವನ್ನು ಸಾಕಷ್ಟು ನಿಖರವಾಗಿ ನಿರ್ಧರಿಸಲು ಅವಶ್ಯಕವಾದ ಪುರಾತತ್ತ್ವೀಯ ಆಧಾರ/ಆಕರಗಳು ದೊರೆತವು. ಅಲ್ಲದೆ ಐಹೊಳೆ, ಪಟ್ಟದಕಲ್ಲುಗಳು ಬಾದಾಮಿ ಚಾಲುಕ್ಯರ ಆಡಳಿತ, ವಾಸ್ತುನಿರ್ಮಾಣ ಚಟುವಟಿಕೆಗಳು ಪ್ರಾರಂಭವಾಗುವುದಕ್ಕೂ ಮುಂಚೆಯೇ, ಅಂದರೆ ಬಹುಶಃ ಶಾತವಾಹನ–ಕದಂಬರ ಕಾಲದಲ್ಲಿಯೇ ಅವು ಸಾಕಷ್ಟು ಪ್ರಾಮುಖ್ಯಗಳಿಸಿದ್ದ ಸಾಂಸ್ಕೃತಿಕ ಕೇಂದ್ರವಾಗಿ ಅರಳಿದ್ದು. ಈ ಪ್ರದೇಶದಲ್ಲಿ ಇಟ್ಟಿಗೆಯನ್ನು ಉಪಯೋಗಿಸಿ ಕಟ್ಟಿದ, ವಿವಿಧಗಾತ್ರದ, ಸಾಮಾಜಿಕ





ಹಾಗೂ ಧಾರ್ಮಿಕ ಉಪಯೋಗದ ಅನೇಕ ಕಟ್ಟಡಗಳಿದ್ದವೆಂಬ ಅಂಶವೂ ಬೆಳಕಿಗೆ ಬಂದಿತು.

ಆದಿ ಇತಿಹಾಸ ಯುಗ ಕಾಲದ ಸಂಸ್ಕೃತಿಯ ಬಗೆಗಿನ ಇವರ ಪರಿಶೋಧನ ಕಾರ್ಯಗಳು ಕಾವೇರಿಪಟ್ಟಣ, ಎಲಿಫೆಂಟ, ಚಂದ್ರಪುರ ಮುಂತಾದ ಹಲವೆಡೆ ನಡೆದವು. ಮಧ್ಯಕಾಲೀನ ಇತಿಹಾಸಕ್ಕೆ ಸಂಬಂಧಿಸಿದಂತೆ ಇವರು ಪರಿಶೋಧನ ನಡೆಸಿದ ನೆಲೆಗಳಲ್ಲಿ ಮಹಾರಾಷ್ಟ್ರದ ರಾಯಗಡ ಮತ್ತು ಕರ್ನಾಟಕದ ಹಂಪಿ ಮುಖ್ಯವಾದವು. ಹಂಪಿಯಲ್ಲಿ ಪತ್ತೆಯಾದ ಬೌದ್ಧಶಾಸನ ಮತ್ತು ಕಟ್ಟಡ ಅವಶೇಷಗಳಿಂದ ಹಂಪಿಯ ಪ್ರಾಚೀನತೆ ಒಮ್ಮೆಲೇ ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಯಿತು.

**ಅಂತಸ್ಸಾಗರ ಪುರಾತತ್ತ್ವೀಯ ಅಧ್ಯಯನಗಳು :** ಭಾ.ಪು.ಸ. ಇಲಾಖೆಯಿಂದ ನಿವೃತ್ತರಾದ ಅನಂತರ ರಾವ್ ಅವರು ತಮ್ಮ ಮೊದಲ ಆದ್ಯತೆಯ ವಿಷಯವಾದ ಮತ್ತು ಭಾರತದ ಸಂದರ್ಭದಲ್ಲಿ ಇನ್ನೂ ಬಹುತೇಕ ಕನ್ನೆನೆಲವಾಗಿದ್ದ ಅಂತಸ್ಸಾಗರ ಪುರಾತತ್ತ್ವೀಯ ಅಧ್ಯಯನಗಳಿಗೆ ಹೆಚ್ಚು ಗಮನ ನೀಡಿದರು. ಅವರ ಅವಿರತ ಪ್ರಯತ್ನಗಳಿಂದಾಗಿ ಭಾರತ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಆರ್ಥಿಕ ನೆರವಿನಿಂದ ಪ್ರಪ್ರಥಮವಾಗಿ ಗೋವಾದಲ್ಲಿನ ದೋನಾಪೌಲಾದ ಭಾತೀಯ ಸಾಗರ ಶಾಸ್ತ್ರ ಸಂಶೋಧನಾ ಸಂಸ್ಥೆಯಲ್ಲಿ ಭಾರತದ ಸಮುದ್ರ ತಟ/ಕರಾವಳಿಯಲ್ಲಿ ಮುಳುಗಿಹೋದ ಪ್ರಾಚೀನ ನಗರ / ಗ್ರಾಮ / ಹಡಗು / ಪ್ರಾಚ್ಯವಸ್ತುಗಳಿಗೆ ಸಂಬಂಧಿಸಿದಂತೆ ಅಂತಸ್ಸಾಗರ ಪುರಾತತ್ತ್ವ ಅಧ್ಯಯನಗಳನ್ನು ಕುರಿತು ಸಂಶೋಧನೆ ಕೈಗೊಳ್ಳಲು ಸಮಗ್ರ ಯೋಜನೆಯು ರೂಪುಗೊಂಡಿತು. ಯೋಜನೆಯ ಪ್ರಮುಖ ರೂವಾರಿಯಾದ ರಾವ್ ಅವರು ಮೊದಲ ಗೌರವ ಪ್ರಾಧ್ಯಾಪಕ (1981–1995) ಮತ್ತು ಪ್ರಧಾನ ಸಲಹೆಗಾರರಾಗಿ (1996–97) ಇದರ ನೇತೃತ್ವ ವಹಿಸಿ ಕೆಲಸ ಮಾಡಿದರು. ಕಾರ್ಯರೂಪಕ್ಕೆ ಬಂದ ಮೊದಲ 12 ವರ್ಷಗಳಲ್ಲಿ ರಾವ್ ಮತ್ತು ಅವರು ಹೊಸದಾಗಿ ರೂಪಿಸಿದ ಪರಿಣತ ತಂಡವು ದ್ವಾರಕಾ ಮತ್ತು ಬೆಟ್‌ದ್ವಾರಕಾದ ಸಾಗ ಪರಿಸರದಲ್ಲಿ 12 ಬಾರಿ ಸ್ಥಳಪರಿಶೋಧನೆ, ಅಧ್ಯಯನಗಳನ್ನು ಯಶಸ್ವಿಯಾಗಿ ಕೈಗೊಂಡಿತು. ಜೊತೆಗೆ ಹಾಗೂ ಸಂಶೋಧನಾಕಾರ್ಯಗಳನ್ನು ತಮಿಳುನಾಡಿನ ಕಾವೇರಿಪಟ್ಟಣಮ್ ಮತ್ತು ಲಕ್ಷದ್ವೀಪಗಳಿಗೂ ವಿಸ್ತರಿಸಿತು. ಇದರ ಪರಿಣಾಮವಾಗಿ ಸಮುದ್ರದಲ್ಲಿ ಮುಳುಗಿಹೋದ ಮಹಾಭಾರತ ಪ್ರಸಿದ್ಧಿಯ ಶ್ರೀಕೃಷ್ಣನ ದ್ವಾರಕಾ ನಗರದ ಅವಶೇಷಗಳು ಬೆಳಕಿಗೆ ಬಂದವು.

ಈ ಸಂಶೋಧನೆಯಿಂದ ಉತ್ಸಾಹಿತರಾದ ರಾವ್ ಮುಳುಗಿಹೋದ ದ್ವಾರಕಾ ನಗರದ ಅವಶೇಷಗಳನ್ನು ಒಳಗೊಂಡಂತೆ 'ಸಾಗರ ತಳದ ವಸ್ತು ಸಂಗ್ರಹಾಲಯ' ಮತ್ತು ಅದುವರೆಗಿನ ಕ್ಷೇತ್ರಕಾರ್ಯದಲ್ಲಿ ದೊರಕಿದ್ದ ಎಲ್ಲ ಪ್ರಾಚ್ಯವಸ್ತು ಮತ್ತಿತರ ಆಕರಸಾಮಗ್ರಿಗಳ ಸಂರಕ್ಷಣೆ ಹಾಗೂ ವ್ಯವಸ್ಥಿತ ಪ್ರದರ್ಶನಕ್ಕಾಗಿ 'ಸಾಮುದ್ರಿಕ ವಸ್ತು ಸಂಗ್ರಹಾಲಯ' ಗಳ ಸ್ಥಾಪನೆಗೆ ಸಮಗ್ರ ಯೋಜನೆ ರೂಪಿಸಿದರು. ಅಂತಸ್ಸಾಗರ ಪುರಾತತ್ತ್ವೀಯ ಅಧ್ಯಯನಗಳಿಗಾಗಿಯೇ ಮೀಸಲಾದ 'ಜರ್ನಲ್ ಆಫ್ ಮೆರೀನ್ ಆರ್ಕಿಯಾಲಜಿ'ಯನ್ನು ತಮ್ಮದೇ ಸಂಪಾದಕತ್ವದಲ್ಲಿ ಹೊರತಂದರು. ಹೀಗೆ ಭಾರತದ ಸಂದರ್ಭದಲ್ಲಿ ವೈಜ್ಞಾನಿಕ ಅಂತಸ್ಸಾಗರ ಪುರಾತತ್ತ್ವೀಯ ಅಧ್ಯಯನಗಳಿಗಾಗಿ ಪ್ರಪ್ರಥಮವಾಗಿ ಯೋಜನೆ ರೂಪಿಸಿ, ಸಮರ್ಥವಾಗಿ ಸಾಕಾರಗೊಳಿಸಿ ಭಾರತೀಯ ಪುರಾತತ್ತ್ವ ಅಧ್ಯಯನ ವಿಭಾಗಗಳಲ್ಲಿ

ಮುಖ್ಯ ವಿಷಯವಾಗಿ ಬೆಳೆಯಲು ಭದ್ರ ಬುನಾದಿ ಒದಗಿಸಿದ ಕೀರ್ತಿ ಡಾ. ರಾವ್ ಅವರಿಗೆ ಸಲ್ಲುತ್ತದೆ.

ಸ್ಮಾರಕಗಳ ಸಂರಕ್ಷಣೆ ಹಾಗೂ ಪರಿಸರ ಅಭಿವೃದ್ಧಿ ಕಾರ್ಯಗಳು : ಸ್ವಾತಂತ್ರೋತ್ತರ ಕಾಲದ ಭಾರತದಲ್ಲಿ ಭಾರತೀಯ ಪುರಾತತ್ತ್ವೀಯ ಅಧ್ಯಯನದ ವಿವಿಧ ಶಾಖೆಗಳಿಗೆ ಡಾ.ರಾವ್ ಅವರ ಕೊಡುಗೆ ಅಪಾರವೂ  ಅಪೂರ್ವವೂ ಆಗಿದ್ದಂತೆಯೇ ಕೇಂದ್ರ ಪರಿರಕ್ಷಿತ ಸ್ಮಾರಕಗಳ ಸಂರಕ್ಷಣೆ ಹಾಗೂ ಅವುಗಳ ಪರಿಸರದಲ್ಲಿನ ಸೌಂದರ್ಯಾಭಿವೃದ್ಧಿ ಕಾರ್ಯಗಳಿಗೂ ಅವರ ಕೊಡುಗೆ ಅಮೂಲ್ಯವಾದ್ದು.  ಹೊಸ ಸ್ಥಳದಲ್ಲಿ ನಿಯುಕ್ತರಾಗುತ್ತಿದ್ದಂತೆಯೇ ಆಯಾ ವಲಯದ ಪರಿಮಿತಿಯಲ್ಲಿ ಬರುವ ಎಲ್ಲ ಪ್ರಮುಖ ಸ್ಮಾರಕಗಳಿಗೆ ಮತ್ತೆ ಮತ್ತೆ ಅಧ್ಯಯನ ಪ್ರವಾಸ ಕೈಗೊಳ್ಳುತ್ತಿದ್ದರು.  ಆಯಾ ಸ್ಮಾರಕಗಳನ್ನು ಪರಿಶೀಲಿಸಿ, ಪ್ರಥಮ ಮಾಹಿತಿ ಪಡೆದುಕೊಂಡು, ಅಲ್ಲಿನ ಸಮಸ್ಯೆಗಳನ್ನು ಅರ್ಥೈಸಿಕೊಂಡು, ಅಲ್ಲಿ ಆಗಬೇಕಾದ ಸಂರಕ್ಷಣಾ ಕಾರ್ಯಗಳ ಒಂದು ಪಟ್ಟಿಯನ್ನು ತಯಾರಿಸಿಕೊಳ್ಳುತ್ತಿದ್ದರು. ಆ ಸಂರಕ್ಷಣಾ ಕಾರ್ಯಗಳಲ್ಲಿ ತುರ್ತಾಗಿ ಆಗಬೇಕಾದ್ದು, ಸ್ವಲ್ಪ ತಡವಾಗಿ ಆರಂಭಿಸಬಹುದಾದ್ದು, ಶೀಘ್ರವಾಗಿ ಮುಗಿಯುವಂತಹುದು, ದೀರ್ಘಕಾಲ ನಡೆಯುವಂತಹುದು ಹೀಗೆ ವಿಭಾಗಿಸಿಕೊಂಡು ಕಾರ್ಯಸೂಚಿಯನ್ನು ಸಿದ್ಧಮಾಡಿಕೊಳ್ಳುತ್ತಿದ್ದರು. ಸ್ಮಾರಕಗಳ ಬಳಿ ಸಾಕಷ್ಟು ಸಮಯ ಕಳೆದು ಸ್ಮಾರಕದ ಒಳಗೆ, ಹೊರಗೆ, ಮೇಲೆಲ್ಲ ಹತ್ತಾರು ಸಲ ಓಡಾಡಿ, ಅಲ್ಲಿನ ಸ್ಥಳೀಯರಿಂದಲೂ ಸ್ಮಾರಕದ ಸಮಸ್ಯೆಗಳ ಬಗೆಗೆ ಮಾಹಿತಿ ಪಡೆದುಕೊಂಡು ಪರಿವೀಕ್ಷಣೆ, ಅಧ್ಯಯನ ನಡೆಸುತ್ತಿದ್ದರು. ಇದರಿಂದಾಗಿ ಆಯಾ ಸ್ಮಾರಕದ ಸಮಸ್ಯೆ, ದುಸ್ಥಿತಿಗೆ ವಿಶಿಷ್ಟವೂ, ನಿರ್ದಿಷ್ಟವೂ ಆದ ಕಾರಣಗಳು ಬೆಳಕಿಗೆ ಬಂದು ಅದನ್ನು ಸುಸ್ಥಿತಿಗೆ ತರಲು ಅವಶ್ಯಕವಾಗಿ ಕೈಗೊಳ್ಳಬೇಕಾದ ಸಂರಕ್ಷಣಾ ಕಾರ್ಯಗಳು, ಅನುಸರಿಸಬೇಕಾದ ವಿಶಿಷ್ಟ ವೈಜ್ಞಾನಿಕ ವಿಧಾನ ಇವುಗಳ ಸ್ಪಷ್ಟ, ನಿಖರ ಚಿತ್ರಣ ದೊರಕುತ್ತಿತ್ತು. ಇಲಾಖೆಯಲ್ಲಿನ ತಮ್ಮ ಸೇವಾಕಾಲದಲ್ಲಿ ಸುಮಾರು 350 ಕೇಂದ್ರ ಪರಿರಕ್ಷಿತ ಸ್ಮಾರಕಗಳ ಸಂರಕ್ಷಣೆ ಹಾಗೂ ಪರಿಸರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಹೀಗೆ ಸಂರಕ್ಷಿತವಾದ ಸ್ಮಾರಕಗಳಲ್ಲಿ ದೇವಾಲಯ, ಬಸದಿ, ಮಸೀದಿ, ಚರ್ಚು ಮುಂತಾದ ವಿವಿಧ ಧಾರ್ಮಿಕ ಕಟ್ಟಡಗಳು, ಅಲಂಕೃತ ಪುಷ್ಕರಿಣಿಗಳು, ಕೋಟೆ–ಕೊತ್ತಳ–ಪ್ರಾಕಾರಗಳು, ಅರಮನೆ ಆವರಣಗಳು, ಉತ್ಖನನದಲ್ಲಿ ಬೆಳಕಿಗೆ ಬಂದ ಕಟ್ಟಡಾವಶೇಷಗಳು ಸೇರಿವೆ.

ಡಾ. ರಾವ್ ಅವರು ಸಂರಕ್ಷಣಾ ಕಾರ್ಯಗಳಿಗೆ ಸಂಬಂಧಪಟ್ಟಂತೆ ಸೂಕ್ಷ್ಮ ವಿವರಗಳಿಗೂ ಗಮನ ನೀಡುತ್ತಿದ್ದರು. ಅವರ ಶ್ರದ್ಧೆ, ದೂರದರ್ಶಿತ್ವ, ಅನುಭವಗಳ ಫಲವಾಗಿ ಅಜಂತಾ, ಎಲ್ಲೋರ, ಎಲೆಫೆಂಟಾದಲ್ಲಿನ ಗುಹಾದೇವಾಲಯ ಸಮೂಹಗಳು, ಪಟ್ಟದಕಲ್ಲಿನ ದೇವಾಲಯ ಸಮೂಹಗಳು, ಹಂಪಿಯ ಸ್ಮಾರಕಾವಶೇಷಗಳು ಮತ್ತು ಚಂಪಾನೇರ್ ನಿವೇಶನಗಳಲ್ಲಿ ಅವರು ಪ್ರಾರಂಭಿಸಿದ ಸಂರಕ್ಷಣೆ,ಪರಿಸರಾಭಿವೃದ್ಧಿಹಾಗೂ ಪ್ರವಾಸಿಮಿತ್ರ ಕಾರ್ಯಗಳು ದೀರ್ಘಕಾಲೀನ ಯೋಜನೆಗಳಾಗಿ ರೂಪುಗೊಂಡುವು. ಅವ ಅನಂತರದ ಅಧಿಕಾರಿಗಳು ಈ ಯೋಜನೆಗಳ ಮಹತ್ತ್ವವನ್ನು ಮನಗಂಡು ಅವುಗಳನ್ನು ಸಮರ್ಥವಾಗಿ ಮುಂದುವರೆಸಿ ಕಾರ್ಯಗತಗೊಳಿಸಿದುದರಿಂದ, ಇಂದು ಆ ಸ್ಮಾರಕ/ನಿವೇಶನಗಳೆಲ್ಲ ಪ್ರಪಂಚದಾದ್ಯಂತ ಮನ್ನಣೆಗಳಿಸಿ ಭಾರತದ ಹೆಮ್ಮೆಯ' ವಿಶ್ವ ಪರಂಪರೆ ಸ್ಮಾರಕ/ನಿವೇಶನ'ಗಳಾಗಿ ಅಭಿವೃದ್ಧಿ ಹೊಂದುತ್ತಿವೆ.





**ವಸ್ತುಸಂಗ್ರಹಾಲಯಗಳು:** ಭಾರತದಾದ್ಯಂತ ಡಾ. ರಾವ್ ಅವರು ಸೇವೆ ಸಲ್ಲಿಸಿದ ವಿವಿಧ ಪದೇಶಗಳಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ ವಸ್ತುಸಂಗ್ರಹಾಲಯಗಳ ಸ್ಥಾಪನೆ, ಬೆಳವಣಿಗೆಗಳಿಗೆ ಗಮನಾರ್ಹ ಕೊಡುಗೆ ಸಲ್ಲಿಸಿದ್ದಾರೆ. ಆಯಾ ಸ್ಥಳದಲ್ಲಿ ನಡೆದ ಸ್ಥಳಪರಿಶೋಧನೆ, ಉತ್ಖನನ, ಸ್ಮಾರಕ ಸಂರಕ್ಷಣಾ ಕಾರ್ಯದ ಸಂದರ್ಭದಲ್ಲಿ ಐತಿಹಾಸಿಕ ಹಾಗೂ ಕಲಾತ್ಮಕ ಮಹತ್ತ್ವದ ಅನೇಕ ಪ್ರಾಚ್ಯವಸ್ತುಗಳು ದೊರೆಯುತ್ತಿದ್ದವು. ಹೀಗೆ ದೊರೆತ ಶಾಸನ, ವೀರಗಲ್ಲು, ಮಾಸ್ತಿಕಲ್ಲು, ಸತಿಕಲ್ಲು, ಶಿಲ್ಪ, ಅಲಂಕೃತ ವಾಸ್ತುಭಾಗಗಳು ಮೊದಲಾದುವನ್ನು ಒಂದೆಡೆ ಸಂಗ್ರಹಿಸುತ್ತಿದ್ದರು. ಇವುಗಳ ಸಂರಕ್ಷಣೆ, ಪ್ರದರ್ಶನಕ್ಕಾಗಿ ಅವಶ್ಯವಿದ್ದೆಡೆ ಶಿಲ್ಪ ಸಂಗ್ರಹಾಲಯಗಳನ್ನು ಕಟ್ಟಿಸಿದರು. ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಳ್ಳಿಗಾವಿ, ಲಕ್ಕುಂಡಿ, ಹೂಲಿ, ಬನವಾಸಿ, ಬಾಗಳಿ ಮುಂತಾದ ಸ್ಥಳಗಳಲ್ಲಿ ಇಂತ ಶಿಲ್ಪ ಸಂಗ್ರಹಾಲಯಗಳು ಸ್ಥಾಪಿತವಾಗಿವೆ. ಜೊತೆಗೆ ರಾಜ್ಯ ಸರ್ಕಾರ ಹಾಗೂ ಬೇರೆ ಬೇರೆ ಸ್ಥಳೀಯ ಸಂಘಸಂಸ್ಥೆ, ಶಾಲಾ ಕಾಲೇಜುಗಳಲ್ಲಿಯೂ ವಸ್ತುಸಂಗ್ರಹಾಲಯಗಳು ರೂಪುಗೊಳ್ಳಲು ಸೂಕ್ತ ಸಲಹೆ, ಸಹಕಾರ ನೀಡುತ್ತಿದ್ದರು. ಧರ್ಮಸ್ಥಳ, ಕೆಳದಿ, ಬೆಂಗಳೂರಿನ ಎನ್.ಎಮ್.ಕೆ.ಆರ್.ವಿ. ಕಾಲೇಜು, ಚಿತ್ರಕಲಾ ಪರಿಷತ್ತು ಮುಂತಾದ ಕಡೆಗಳಲ್ಲಿರುವ ವಸ್ತುಸಂಗ್ರಹಾಲಯಗಳ ಉಗಮ, ಬೆಳವಣಿಗೆಯ ಹಿಂದೆ ಡಾ. ರಾವ್ ಅವರ ಪ್ರೇರಣೆ, ಪ್ರೋತ್ಸಾಹಗಳು  ಸ್ಮರಣೀಯವಾದುವು.

ಇವರ ಸೇವಾವಧಿಯಲ್ಲಿ ಸಂರಕ್ಷಿತವಾದ ಸ್ಮಾರಕಗಳು ನೂರಾರು. ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಳ್ಳಿಗಾವೆ, ಲಕ್ಕುಂಡಿ ಮುಂತಾದವು. ಭಾರತದ ಪ್ರಾಚೀನ ಕಾಲದ ಗಣಿಗಾರಿಕೆ ಮತ್ತು ಲೋಹವಿದ್ಯೆ ಎಂಬ ವಿಷಯವನ್ನು ಕುರಿತು ಇತರ ತಜ್ಞರೊಡನೆ ಸೇರಿ ಪ್ರಬಂಧ ಸಿದ್ಧಪಡಿಸಿ ಎಡಿನ್ ಬರ್ಗ್‌ನಲ್ಲಿ ನಡೆದ 15ನೆಯ ಅಂತಾರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಮಂಡಿಸಿ ವಿದ್ವಾಂಸರ ಮೆಚ್ಚುಗೆ ಗಳಿಸಿದರು (1977).

**ಸಿಂಧೂಲಿಪಿಯ ಓದುವಿಕೆ:** ಭಾ.ಪು.ಸ.ಇಲಾಖೆಯ ವಲಯಗಳ ಮುಖ್ಯಾಧಿಕಾರಿಯಾಗಿ ಡಾ. ರಾವ್ ಸಿಂಧೂಕಣಿವೆಯ ಸಂಸ್ಕೃತಿಯ ಹೊಸ ನಿವೇಶನಗಳ ಪರಿಶೋಧನೆ, ಉತ್ಖನನಗಳಿಂದ ಬೆಳಕಿಗೆ ಬಂದ ಆ ಸಂಸ್ಕೃತಿಯ ವಿಶಿಷ್ಟ ಆಯಾಮಗಳ ಬಗೆಗೆ ವಿಶೇಷ ಆಸ್ಥೆವಹಿಸಿದರು. ಭಾರತ ಹಾಗೂ ನೆರೆಯ ರಾಷ್ಟ್ರಗಳಲ್ಲಿನ ಸಿಂಧೂ ಸಂಸ್ಕೃತಿಯನಿವೇಶನಗಳಲ್ಲಿ ಬೆಳಕಿಗೆ ಬಂದಿದ್ದ ನೂರಾರು ಮುದ್ರೆಗಳ ಮೇಲಿನ ಲಿಪಿಯಬಗೆಗೆ ಅದುವರೆಗೆ ಅನೇಕ ಅಧ್ಯಯನಗಳು ನಡೆದಿದ್ದರೂ ಎಲ್ಲ ವಿದ್ವಾಂಸರಿಗೂ ಒಪ್ಪಿತವಾಗುವಂತೆ ಲಿಪಿಯನ್ನು ಅರ್ಥೈಸಲು ಸಾಧ್ಯವಾಗಿರಲಿಲ್ಲ.ಈ ವಿಷಯವಾಗಿ ಇವರು 1960ರಿಂದ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ನಡೆಸಿದ ಸತತ ಸಂಶೋಧನೆ ಇವರ ಅತಿಮುಖ್ಯ ಸಾಧನೆಗಳಲ್ಲಿ ಒಂದು. ಸಿಂಧೂ ಸಂಸ್ಕೃತಿ ಮತ್ತು ಲಿಪಿಯನ್ನು ಕುರಿತು ಉಂಟಾಗಿದ್ದ ಸಿಕ್ಕುಗಳನ್ನೆಲ್ಲ ಬಿಡಿಸಿಕೊಂಡು, ಅವುಗಳ ಬೆಳವಣಿಗೆಯ ವಿವಿಧ ಹಂತಗಳ ಕಾಲಮಾನವನ್ನು ನಿಖರವಾಗಿ ಗುರುತಿಸಿದರು. ನಿರಂತರ ಅಧ್ಯಯನದ ಫಲವಾಗಿ ರಾವ್ ಈ ಲಿಪಿಯನ್ನು ಎಡಗಡೆಯಿಂದ ಬಲಗಡೆಗೆ ಬರೆಯಲಾಗುತ್ತಿತ್ತೆಂದೂ,  ಚಿತ್ರಲಿಪಿಯಾಗಿ ಉಗಮವಾಗಿ ಕ್ರಮೇಣ ಕ್ರಿ.ಪೂ. 2000–1900ರ ಸುಮಾರಿಗೆ ಪೂರ್ಣಬೆಳವಣಿಗೆ ಹೊಂದಿದ 21 ಅಕ್ಷರಗಳಿದ್ದ ಅಕ್ಷರಲಿಪಿಯಾಯಿತೆಂದೂ ಪ್ರತಿಪಾದಿಸಿದರು. 1981ರ ವರೆಗೆ ದೊರಕಿದ್ದ ಸುಮಾರು 3100 ಮುದ್ರೆಗಳಲ್ಲಿ ಹೆಚ್ಚು ತೃಟಿತವಾಗದೆ ಸಾಕಷ್ಟು ಸುಸ್ಥಿತಿಲ್ಲಿದ್ದು, ಓದುವಿಕೆಯ ದೃಷ್ಟಿಯಿಂದ  ಮುಖ್ಯವಾದವು

ಕೇವಲ 2100 ಮುದ್ರೆಗಳು. ಇವುಗಳಲ್ಲಿ 1621 ಶಾಸನಗಳನ್ನು ರಾವ್ ಸಮರ್ಥವಾಗಿ ಓದಿದರು. ಬ್ರಾಹ್ಮಿಲಿಪಿಯನ್ನು ಆಧಾರವಾಗಿಟ್ಟುಕೊಂಡು ಸಿಂಧೂಲಿಪಿಯ ಮೂಲಚಿಹ್ನೆಗಳನ್ನು ಪತ್ತೆ ಹಚ್ಚುವಲ್ಲಿ ಹೆಚ್ಚು ಸಫಲರಾದರು. ಅವುಗಳಿಗೆ ಧ್ವನಿಮೌಲ್ಯ ಕೊಡುವ ನಿಟ್ಟಿನಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಛಾಡ್ವಿಗ್ ಅವರ ಸಲಹೆಯಂತೆ ಸೆಮಿಟಿಕ್ ಲಿಪಿಯನ್ನು ಅಭ್ಯಸಿಸಿದರು. ಎರಡೂ ಲಿಪಿಗಳ ಸಾದೃಶ್ಯವನ್ನು ಗಮನಿಸಿದರು. ಸೆಮಿಟಿಕ್ ಲಿಪಿಯ ಧ್ವನಿಮೌಲ್ಯವನ್ನು ಸಿಂಧೂಲಿಪಿಗೆ ಅನ್ವಯಿಸಿದಾಗ ಸಿಂಧೂಲಿಪಿಯ ಭಾಷೆಯು ಅದುವರೆಗೆ ಭಾವಿಸಿದ್ದಂತೆ ದ್ರಾವಿಡ ಅಥವ ಮಧ್ಯ ಏಷಿಯಾದಲ್ಲಿ ಆಗ ಪ್ರಚಲಿತವಿದ್ದ ಇಂಡೋ–ಯೂರೋಪಿಯನ್ ಭಾಷಾವರ್ಗಕ್ಕೆ ಸೇರಿದ್ದಲ್ಲವೆಂದು ತಿಳಿದು ಬಂದಿತು. ಈ ದಿಕ್ಕಿನಲ್ಲಿ ಸಂಶೋಧನೆ ಮುಂದುವರೆಸಿದ ರಾವ್ ಸಿಂಧೂಲಿಪಿಯ ಭಾಷೆಯು ಇಂಡೋ–ಆರ್ಯನ್ ಗುಂಪಿಗೆ ಸೇರಿದ ಋಗ್ವೇದಪೂರ್ವ ಅಥವ ಋಗ್ವೇದಕಾಲೀನ ಸಂಸ್ಕೃತವೆಂದು ಸಾಧಾರವಾಗಿ ಪ್ರಮಾಣೀಕರಿಸಿದರು. ಡಾ. ರಾವ್ ಅವರ ಓದುವಿಕೆ ಇದುವರೆಗಿನ ಎಲ್ಲ ಓದುವಿಕೆಗಳಿಗಿಂತ ವಸ್ತುನಿಷ್ಠ, ವೈಜ್ಞಾನಿಕ ಹಾಗೂ ತರ್ಕಬದ್ಧವಾದ ಅರ್ಥೈಸುವಿಕೆಯೆಂದೂ ಬಹುತೇಕ ಲಿಪಿತಜ್ಞರು ಭಾವಿಸಿದ್ದಾರೆ.

**ಗೌರವ, ಸನ್ಮಾನಗಳು :** ಇವರ ಅಮೂಲ್ಯ ಸಾಧನೆ ಸಿದ್ಧಿಗಳಿಗಾಗಿ ಅನೇಕ ಸನ್ಮಾನಗಳು ದೊರೆತಿವೆ. ಭಾರತೀಯ ಪುರಾಭಿಲೇಖ ಸಂಸ್ಥೆಯ ಆರನೆಯ ವಾರ್ಷಿಕ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಅಲ್ಲಿ ಇವರಿಗೆ ತಾಮ್ರಪತ್ರ ನೀಡಿ ಗೌರವಿಸಲಾಯಿತು. 1977 ರಲ್ಲಿ ಕೇಂದ್ರ ಸರ್ಕಾರದ ಡಾ. ಕರಣ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ಅಂತರ ರಾಷ್ಟ್ರೀಯ ಮಹತ್ತ್ವದ ನೂತನ ಸಂಶೋಧನೆಯನ್ನು ಕೈಗೊಳ್ಳಲು ಅಥವ ಮುಂದುವರೆಸಲು ನೀಡುವ ಜವಾಹರ್ ಲಾಲ್ ನೆಹರೂ ಫೆಲೋಶಿಪ್ ಅನ್ನು ಇವರಿಗೆ ನೀಡಿತು. ಇವರು ಈ ಫೆಲೋಶಿಪ್ ಪಡೆದ ಮೊದಲ ಕನ್ನಡಿಗ. ಸಾಂಸ್ಕೃತಿಕ ಪರಂಪರೆಯ ಉತ್ತಮ ಉದಾಹರಣೆಗಳಾದ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಕಾಲದ ಸ್ಮಾರಕಗಳ ಸಂರಕ್ಷಣೆ, ಅಭಿವೃದ್ಧಿಗೆ ಇವರ ಕೊಡುಗೆಯನ್ನು ಗಮನಿಸಿ 1985 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿನೀಡಿ ಗೌರವಿಸಿದೆ. ಮುಳುಗಿಹೋದ ದ್ವಾರಕೆಯ ಶೋಧಕ್ಕಾಗಿ ಮಹಾರಾಷ್ಟ್ರದ ಇಂಧನ ಚೋದಕ ಅಭಿಯಂತರರು ಔದ್ಯೋಗಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿ ಮಾಡಿದ ಮಹತ್ತರ ಸಂಶೋಧನೆಗಾಗಿ ಕೊಡುವ ಎಫ್.ಐ.ಇ ಪ್ರತಿಷ್ಠಾನದ 1991ರ ಪ್ರಶಸ್ತಿಯನ್ನು ಇವರಿಗೆ ನೀಡಿದೆ. ಅದೇ ವರ್ಷ ಇದೇ ಕಾರ್ಯಕ್ಕಾಗಿ ಲಂಡನ್ನಿನ ವಿಶ್ವ ನೌಕಾ ಸಂಸ್ಥೆ (ವರ್ಲ್ಡ್ ಶಿಫ್ ಫೌಂಡೇಶನ್) ವೈಯುಕ್ತಿಕ ನೆಲೆಯಲ್ಲಿ ಮಾಡಿದ ಅನುಪಮ ಸಂಶೋಧನೆಗಾಗಿ ಸ್ಥಾಪಿಸಿದ ಮೊಟ್ಟಮೊದಲ ಪ್ರಶಸ್ತಿಯನ್ನು ರಾವ್ ಅವರಿಗೆ ನೀಡಿತು. 1994 ರಲ್ಲಿ ಆಂಧ್ರಪ್ರದೇಶದ ಗುಪ್ತ ಫೌಂಡೇಷನ್ ಪ್ರಶಸ್ತಿಯೂ ಲಭಿಸಿದೆ. ಮಿಥಿಕ್ ಸೊಸೈಟಿಯು ಇವರನ್ನು 1981 ವರ್ಷದ ವಿದ್ವಾಂಸರೆಂದು ಗೌರವಿಸಿದೆ. ಕರ್ನಾಟಕ ನಾಡು,ನುಡಿಗೆ ಇವರ ಗಣನೀಯ ಕೊಡುಗೆಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ನಾಡೋಜ ಪ್ರಶಸ್ತಿಯನ್ನೂ ನೀಡಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯು ಆರಂಭವಾಗಿ 150 ವರ್ಷಗಳು ಪೂರ್ಣವಾದ ಸಂದರ್ಭದಲ್ಲಿ ಇಲಾಖೆಯ ಸರ್ವತೋಮುಖ ಅಭಿವೃದ್ಧಿಗೆ ಅಪಾರ ಸೇವೆ ಸಲ್ಲಿಸಿದುದಕ್ಕಾಗಿ 2012ರಲ್ಲಿ ಇಲಾಖೆಯು ಪಾರಿತೋಷಕ ಸಹಿತವಾಗಿ ಪುರಸ್ಕರಿಸಿದ 10 ಶ್ರೇಷ್ಠ ಪುರಾತತ್ತ್ವವಿದರಲ್ಲಿ ಡಾ. ರಾವ್ ಅವರೂ ಸೇರಿದ್ದಾರೆ. ಪುರಾತತ್ತ್ವೀಯ ಅಧ್ಯಯನಗಳ ಪುರೋಭಿವೃದ್ಧಿಗೆ





ಇವರ ಅಪೂರ್ವ ದೇಣಿಗೆಯನ್ನು ಸಂಸ್ಮರಿಸಿ ಇವರಿಗೆ ಗೌವಪೂರ್ವಕವಾಗಿ ಸಮರ್ಪಿಸಿದ ಸನ್ಮಾನ ಗ್ರಂಥಗಳು 'ಮಂಜೂಷಾ', 'ರಂಗವಲ್ಲೀ' ಮತ್ತು 'ನ್ಯೂ ಟ್ರೆಂಡ್ಸ್ ಇನ್ ಇಂಡಿಯನ್ ಆರ್ಟ್ ಅಂಡ್ ಆರ್ಕಿಯಾಲಜಿ'.

ಡಾ. ರಾವ್ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಅನೇಕ ಮೌಲಿಕ ಗ್ರಂಥಗಳನ್ನು ರಚಿಸಿದ್ದಾರೆ. 'ಭಾರತೀಯ ಪುರಾತತ್ತ್ವ' (1961), 'ಸಮುದ್ರದಲ್ಲಿ ಮುಳುಗಿದ ಶ್ರೀ ಕೃಷ್ಣನ ದ್ವಾರಕೆ' (2005) ಇವರ ಕನ್ನಡ ಕೃತಿಗಳು.

* Amreli: A Kshatrapa-Gupta Town(1966).
* Lothal and The Indus Civilization, Bombay: Asia Publishing House, (1973).
* Lothal: A Harappan Port Town(1955-1962), vols.I and II, Memoirs of the Archaeological Survey of India, no.78,New Delhi,(1979 and 1985).
* Traditional Paintings of Karnataka (with B.V.K . Sastry, 1980).
* The Decipherment of the Indus Script (1982).
* Lothal, New Delhi: the Diector General, Archaeological Survey of India(1985).
* Dawn and Devolution of the Indus Civilization, Delhi: Aditya Prakashan(1991).
* New Frontiers of Archaeology, Bombay: Popular Prakashan, (1994)
* The Lost City of Dvaraka, National Institute of Oceanography, (1999)
* Progress and Prospects of Marine Archaeology in India, Delhi: Publications Division, (2001).
* Aksaram: The Alphabet Gallery (2004).
* Reminiscences of an Archaeologist (2008).
* The Language and scipt of the Indus Civilization (2011).

ಇವು ಇಂಗ್ಲೀಷಿನಲ್ಲಿ ಬರೆದವು.ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯ ವಿದ್ವದ್ ಪತ್ರಿಕೆಗಳಲ್ಲಿ, ಸನ್ಮಾನ ಗ್ರಂಥಗಳಲ್ಲಿ ಶ್ರೀಯುತರ ನೂರಾರು ಸಂಶೋಧನಾ ಲೇಖನಗಳು ಪ್ರಕಟವಾಗಿವೆ.

'ಪ್ರತ್ನಕೀರ್ತಿಮಪಾವೃಣು' ಎಂಬುದು ಭಾ.ಪು.ಸ. ಇಲಾಖೆಯ ಧ್ಯೇಯವಾಕ್ಯ. (ಭಾರತದ) ಪ್ರಾಚೀನ ವೈಭವ, ಕೀರ್ತಿಗಳನ್ನು ಅನಾವರಣಗೊಳಿಸು ಎಂದು ಅದರ ಅರ್ಥ. ಈ ಧ್ಯೇಯವಾಕ್ಯವನ್ನು ಸಾರ್ಥಕವಾಗಿ ಸಾಕಾರಗೊಳಿಸುವುದಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದ ಡಾ.ರಾವ್ 2013ರ ಜನವರಿ 3 ರಂದು ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. 91ವರ್ಷದ ಇಳಿವಯಸ್ಸಿನಲ್ಲಿಯೂ ಸಂಶೋಧನಾಸಕ್ತಿ, ಕ್ರಿಯಾಶೀಲತೆಯನ್ನು ಉಳಿಸಿಕೊಂಡಿದ್ದ ಶ್ರೀಯುತರು ಕ್ಷೇತಕಾರ್ಯ ನಿರತರಿಗೆ, ಸಂಶೋಧನಾಸಕ್ತರಿಗೆ ಮತ್ತು ಪುರಾತತ್ತ್ವೀಯ ಅಧ್ಯಯನಗಳಲ್ಲಿ ಗಂಭೀರವಾಗಿ ತೊಡಗಬಯಸುವವರಿಗೆ ಒಂದು ಆದರ್ಶವಾಗಿದ್ದಾರೆ.

ದಿ. ರಾವ್ ಅವರಿಗೆ ನುಡಿನಮನ ರೂಪದ ಈ ಶ್ರದ್ಧಾಂಜಲಿ ಸಲ್ಲಿಸಲು ಅನುವು ಮಾಡಿಕೊಟ್ಟ 'ಇತಿಹಾಸದರ್ಪಣ'ದ ಸ್ನೇಹಿತರಿಗೆ ನನ್ನ ಕೃತಜ್ಞತೆಗಳು.

## ನುಡಿ ನಮನ



# ಶಾಸನತಜ್ಞ ಡಾ. ಕೆ. ವಿ. ರಮೇಶ

**ಎಸ್. ಕಾರ್ತಿಕ್**
# 65 [1 ಮಹಡಿ], 3 ನೆಯ
ಅಡ್ಡರಸ್ತೆ , ಶಿಕ್ಷಕರ ಬಡಾವಣೆ,
1 ನೆಯ ಹಂತ,
ಜೆ.ಪಿ. ನಗರ ಅಂಚೆ,
ಬೆಂಗಳೂರು–560078

**ದೇಶ ಕಂಡ ಪ್ರತಿಭಾನ್ವಿತ ಶಾಸನಶಾಸ್ತ್ರಜ್ಞ, ಇತಿಹಾಸಕಾರ, ನಾಣ್ಯಶಾಸ್ತ್ರಜ್ಞ, ಪುರಾತತ್ತ್ವವಿದ ಹಾಗೂ ಬಹುಭಾಷಾ ಪಂಡಿತರಾದ ಡಾ. ಕೆ.ವಿ.ರಮೇಶ ಅವರು ಜುಲೈ 10, 2013ರಂದು ಮೈಸೂರಿನಲ್ಲಿ ನಿಧನರಾದರು. ಭಾರತದ ಪುರಾತತ್ತ್ವ ಇಲಾಖೆಯ ಜಂಟಿ ಮಹಾ ನಿರ್ದೇಶಕ ಹುದ್ದೆಯೂ ಸೇರಿದಂತೆ ರಾಷ್ಟ್ರಮಟ್ಟದ ಹತ್ತು ಹಲವು ಹುದ್ದೆಗಳಲ್ಲಿ ಸೇವೆಸಲ್ಲಿಸಿದ ಇವರು ಕನ್ನಡಿಗರೆಂಬುದು ಹೆಮ್ಮೆಯ ಸಂಗತಿ. ದೇಶೀಯ ಮತ್ತು ವಿದೇಶೀಯ ಇತಿಹಾಸಕಾರರು ಹಾಗೂ ಶಾಸನತಜ್ಞರೂ ಇವರ ಜೊತೆಗೆ ನಿಕಟ ಬಾಂಧವ್ಯ ಹೊಂದಿದ್ದರು. ನಮ್ಮನ್ನಗಲಿದ ಕೆ.ವಿ.ರಮೇಶ ಅವರಿಗೆ 'ಇತಿಹಾಸ ದರ್ಪಣ'ವು ನುಡಿ ನಮನ ಸಲ್ಲಿಸುತ್ತಿದೆ –ಸಂಪಾದಕರು.**

**ಭಾ**ರತದ ಶ್ರೇಷ್ಠ ಶಾಸನತಜ್ಞರಲ್ಲೊಬ್ಬರಾದ ಕೋಳುವೈಲ್ ವ್ಯಾಸರಾಯ ಶಾಸ್ತ್ರೀ ರಮೇಶ ಅವರು ಕ್ರಿ.ಶ. 8–6–1935 ರಲ್ಲಿ ಕೇರಳದ ಫಾಲ್ಘಾಟ್‌ನ ಉಪಗ್ರಾಮ ಕಲ್ಪಾತಿಯಲ್ಲಿ ಜನಿಸಿದರು. ಇವರದು ಸುಸಂಸ್ಕೃತ ಮಾಧ್ವ ಬ್ರಾಹ್ಮಣ ಮನೆತನ. ಮೂಲತಃ ದಕ್ಷಿಣಕನ್ನಡ ಜಿಲ್ಲೆಯವರು. ಕೋಳುವೈಲ್ ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಪಾವಂಜೆ ಬಳಿಯ ಒಂದು ಕುಗ್ರಾಮ. ತಂದೆ ಕೊ.ಲ. ವ್ಯಾಸರಾಯ ಶಾಸ್ತ್ರಿಗಳು, ತಾಯಿ ಕಮಲಾಬಾಯಿ ಅವರು. ಇವರೊಂದಿಗೆ ಒಡಹುಟ್ಟಿದವರು ಒಬ್ಬಳೇ ಸಹೋದರಿ, ನಾಲ್ವರು ಅಣ್ಣತಮ್ಮಂದಿರು. ರಮೇಶ ಅವರ ಪತ್ನಿ ಶ್ರೀಮತಿ ಪ್ರೇಮಾ ಅವರು. ಇವರಿಗೆ ಸುಫಲಾ, ಶಾಂತಲಾ, ಮೇಖಲಾ ಹೆಸರಿನ ಮೂವರು ಹೆಣ್ಣುಮಕ್ಕಳು.

ವ್ಯಾಸರಾಯ ಶಾಸ್ತ್ರಿಗಳು ಫಾಲ್ಘಾಟಿನ ವಿಕ್ಟೋರಿಯಾ ಕಾಲೇಜಿನಲ್ಲಿ ಸಂಸ್ಕೃತ ಪಂಡಿತರಾಗಿ ಸೇವೆ ಸಲ್ಲಿಸುತ್ತಿದ್ದರು. ನಂತರ ಅವರಿಗೆ ಕುಂಭಕೋಣಕ್ಕೆ ವರ್ಗವಾಯಿತು. ರಮೇಶ ಅವರ ಮೊದಲ ಮೂರು ತರಗತಿಗಳ ವಿದ್ಯಾಭ್ಯಾಸ ಇಲ್ಲಿಯೇ





ನಡೆಯಿತು. 1944 ರ ಸುಮಾರಿನಲ್ಲಿ ವ್ಯಾಸರಾಯ ಶಾಸ್ತ್ರಿಗಳಿಗೆ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ವರ್ಗವಾಯಿತು. ಇಲ್ಲಿನ ಕಾರ್ಪೋರೇಷನ್ ಸ್ಕೂಲಿನಲ್ಲಿ ನಾಲ್ಕು ಮತ್ತು ಐದನೆಯ ತರಗತಿಗಳ ವ್ಯಾಸಂಗ ನಡೆಯಿತು. ಆರನೆಯ ತರಗತಿಯಿಂದ ಹಿಂದೂ ಹೈಸ್ಕೂಲಿನಲ್ಲಿ ವ್ಯಾಸಂಗ ಮುಂದುವರಿಯಿತು. ಆರನೆಯ ತರಗತಿ ಮತ್ತು ಏಳನೆಯ ತರಗತಿಯನ್ನು ತೆಲುಗು ಮಾಧ್ಯಮದಲ್ಲಿ ಓದಬೇಕಾಯಿತು. ಎಂಟನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೂ ತಮಿಳು ಮಾಧ್ಯಮದಲ್ಲಿ ಓದು ಮುಂದುವರೆಯಿತು. ಈ ರೀತಿಯ ಓದು ಮುಂದೆ ಅವರು ಬಹುಭಾಷಾವಿದರಾಗಿ ಬೆಳೆಯಲು ಅನುಕೂಲವಾಯಿತು. ಮದ್ರಾಸಿನ ಮೈಲಾಪುರದಲ್ಲಿರುವ ವಿವೇಕಾನಂದ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ (=ಪಿ.ಯುಸಿ) ವ್ಯಾಸಂಗ ನಡಸಿದರು. ರಮೇಶ ಅವರಿಗೆ ವೈದ್ಯಕೀಯ ಕ್ಷೇತ್ರವನ್ನು ಸೇರಬೇಕೆಂಬ ಆಸೆಯಿದ್ದು ಇಂಟರ್‌ಮೀಡಿಯಟ್‌ನಲ್ಲಿ ನಿರೀಕ್ಷಿತ ಮಟ್ಟದ ಅಂಕಗಳು ಬಾರದೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಂಸ್ಕೃತ ಎಂ.ಎ ಪದವಿಗೆ ಸೇರಿದರು. ಇದರಲ್ಲಿ ಪ್ರಥಮ ರ್‍ಯಾಂಕ್ ಪಡೆದು ಮೂರು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು. 26–9–1956 ರಲ್ಲಿ ತಮಿಳು ಭಾಷೆಯ ಸಹಾಯಕ ಶಾಸನತಜ್ಞರಾಗಿ ಅಂದು ಉದಕಮಂಡಲದಲ್ಲಿದ್ದ ಭಾರತ ಸರ್ಕಾರದ ಕೇಂದ್ರಶಾಸನ ಇಲಾಖೆಯಲ್ಲಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಅಲ್ಲಿ ಡಿ.ಸಿ. ಸರ್ಕಾರ್, ಜಿ.ಎಸ್. ಗಾಯಿ, ಕೆ.ಜಿ. ಕೃಷ್ಣನ್ ಮುಂತಾದ ಖ್ಯಾತ ವಿದ್ವಾಂಸರ ಮಾರ್ಗದರ್ಶನ ದೊರೆಯಿತು. ತಮಿಳು ಭಾಷೆಯ ಶಾಸನ ಸಹಾಯಕರೆಂದು ನೇಮಕಗೊಂಡರೂ ಮುಂದೆ ಕನ್ನಡ ಭಾಷೆಯ ಶಾಸನ ತಜ್ಞರೆಂದು ಬದಲಾವಣೆಯಾದುದು ಒಂದು ವಿಶೇಷ. 1966 ರಲ್ಲಿ ಉಪಅಧೀಕ್ಷಕ ಶಾಸನತಜ್ಞ , 1976 ರಲ್ಲಿ ಅಧೀಕ್ಷಕ ಶಾಸನತಜ್ಞ , 1981 ರಲ್ಲಿ ಶಾಸನ ಇಲಾಖೆಯ ಮುಖ್ಯ ಶಾಸನತಜ್ಞ , 1984 ರಲ್ಲಿ ಶಾಸನ ಇಲಾಖೆಯ ನಿರ್ದೇಶಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. ಮೇ 1992 ರಲ್ಲಿ ಭಾರತದ ಪುರಾತತ್ತ್ವ ಇಲಾಖೆಯ ಜಂಟಿ ಮಹಾ ನಿರ್ದೇಶಕರಾಗಿ ನೇಮಕವಾದರು. 1993 ರಲ್ಲಿ ನಿವೃತ್ತರಾದರು. ನಿವೃತ್ತಿಯ ನಂತರ 1998–2006 ರ ವರೆಗೂ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಗೌರವ ನಿರ್ದೇಶಕರಾಗಿದ್ದರು. 11–9–2012 ರಿಂದ ಶಾಸನಶಾಸ್ತ್ರದ ರಾಷ್ಟ್ರೀಯ ಪ್ರಾಧ್ಯಾಪಕರಾಗಿ ಗೌರವ ಪಡೆದು ತಮ್ಮ ಸೇವೆಯನ್ನು ನಡಸುತ್ತಿದ್ದರು. ರಮೇಶ ಅವರಿಗೆ ಹಲವು ಪ್ರಶಸ್ತಿಗಳು ಮತ್ತು ಗೌರವಗಳು ಸಂದಿವೆ. ವಿದೇಶಗಳಿಗೂ ಪ್ರವಾಸ ಮಾಡಿ ಅಲ್ಲಿಯೂ ಸಂಪ್ರಬಂಧಗಳನ್ನು ಮಂಡಿಸಿದ್ದಾರೆ. ವಿಚಾರ ವಿನಿಮಯ ನಡಸಿದ್ದಾರೆ.

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಗೌರವ ನಿರ್ದೇಶಕರಾದ ಸಮಯದಲ್ಲಿ ಆ ಸಂಸ್ಥೆಯ ಕಟ್ಟಡವನ್ನು ಸುಸ್ಥಿತಿಯಲ್ಲಿಡಲು ಶ್ರಮಿಸಿದರು. ಸರ್ಕಾರದಿಂದ ಹಣವನ್ನು ಮಂಜೂರಾತಿ ಮಾಡಿಸಿಕೊಂಡು ಆ ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ನಡಸಿದರು. ಇದರಂತೆಯೇ Epigraphical Society of India ಮತ್ತು Place Names Society of India ಸಂಸ್ಥೆಗಳ ಅಧ್ಯಕ್ಷರಾಗಿ ಅವುಗಳನ್ನು ಬಹುಕಾಲ ಮುನ್ನಡೆಸಿದರು. ಇವುಗಳೇ ಅಲ್ಲದೇ ಇನ್ನೂ ಅನೇಕ ಸಂಘ ಸಂಸ್ಥೆಗಳ ನಿಕಟ ಸಂಬಂಧವನ್ನು ಹೊಂದಿದ್ದರು.

ಶಾಸನ ಕ್ಷೇತ್ರಕ್ಕೆ ರಮೇಶ ಅವರ ಕೊಡುಗೆ ಅಪಾರವಾದುದು. ರಮೇಶ ಅವರ ಸ್ವತಂತ್ರ ಕೃತಿಗಳು ಕಡಮೆ ಸಂಖ್ಯೆಯಲ್ಲಿದ್ದರೂ ಗುಣ ಮತ್ತು ಸಂಶೋಧನೆಯ ದೃಷ್ಟಿಯಿಂದ

ಮಹತ್ತ್ವಪೂರ್ಣವಾದವುಗಳೆಂದು ಹೇಳಬಹುದು. ಇವುಗಳ ಬಗೆಗೆ ಪ್ರತ್ಯೇಕವಾಗಿ ಅಧ್ಯಯನ ನಡಸಬೇಕಾಗಿದೆ. ಇಲ್ಲಿ ಕಿರಿದಾಗಿ ಮಾತ್ರ ಒಂದೆರಡು ಮಾತುಗಳನ್ನು ಹೇಳಲು ಸಾಧ್ಯ. **ತುಳುನಾಡಿನ ಇತಿಹಾಸ** ಕೃತಿಯು 1963–65 ರವರೆಗೆ ಜಿ.ಎಸ್. ದೀಕ್ಷಿತರ ಮಾರ್ಗದರ್ಶನದಲ್ಲಿ ಕೈಕೊಂಡ ಪಿ.ಎಚ್.ಡಿ ಅಧ್ಯಯನದ ಫಲ. **ತುಳುನಾಡಿನ ಇತಿಹಾಸ**ವನ್ನು ಶಾಸನಗಳ ಆಧಾರದಿಂದ ವ್ಯವಸ್ಥಿತವಾಗಿ ನಿರೂಪಿಸಲಾಗಿದೆ. ಇದೇ ಕೃತಿ ಇಂಗ್ಲಿಷಿನಲ್ಲಿಯೂ ಪ್ರಕಟವಾಗಿದೆ. ಬಾದಾಮಿ ಚಲುಕ್ಯರ ಬಗೆಗಿನ ಇಂಗ್ಲಿಷ್ ಕೃತಿ ವಿನೂತನ ಮಾದರಿಯಲ್ಲಿ ರಚಿತವಾಗಿದ್ದು ಬಾದಾಮಿ ಚಲುಕ್ಯರ ಬಗೆಗೆ ವಸ್ತುನಿಷ್ಠವಾಗಿ ವಿಶ್ಲೇಷಿಸಿರುವ ಅಧಿಕೃತ ಕೃತಿಯಾಗಿದೆ. **ಕರ್ಣಾಟಕ ಶಾಸನ ಸಮೀಕ್ಷೆ** ಕೃತಿಯಲ್ಲಿ ಅನೇಕ ಹೊಸ ಅಂಶಗಳನ್ನು ಕಾಣುತ್ತೇವೆ. ತಲಕಾಡು ಗಂಗರ 159 ಶಾಸನಗಳನ್ನು ಎಪಿಗ್ರಾಫಿಯಾ ಇಂಡಿಕಾ ಮಾದರಿಯಲ್ಲಿ ಸೊಗಸಾಗಿ ಸಂಪಾದಿಸಿಕೊಟ್ಟಿದ್ದಾರೆ. ಈಚೆಗೆ ದಕ್ಷಿಣ ಭಾರತದ ನಾಲ್ಕು ಭಾಷೆಗಳ ಶಾಸನ ನಿಘಂಟನ್ನು ಸಂಪಾದಿಸಿಕೊಟ್ಟಿದ್ದಾರೆ. ರಮೇಶ ಅವರ ಪ್ರತಿಯೊಂದು ಪುಸ್ತಕ ಮತ್ತು ಕನ್ನಡ ಇಂಗ್ಲಿಷ್ ಲೇಖನಗಳಲ್ಲಿಯೂ ನೂತನ ದೃಷ್ಟಿಕೋನವನ್ನು ಕಾಣುತ್ತೇವೆ.

ರಮೇಶ ಅವರು ಶಾಸನ ಅಧ್ಯಯನದಲ್ಲಿ ನಡೆಯಬೇಕಾದ ಕೆಲಸಗಳ ಬಗೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಅಧ್ಯಯನ ನಿಯತಕಾಲಿಕೆಗೆ ನೀಡಿರುವ ದೀರ್ಘವಾದ ಸಂದರ್ಶನದಲ್ಲಿ ಹೇಳಿದ್ದಾರೆ (ನೋಡಿ : ಶಾಸನ ಅಧ್ಯಯನ, ಸಂಪುಟ–3, ಸಂಚಿಕೆ–2, ಜುಲೈ–ಡಿಸೆಂಬರ್ 2006, ಪುಟ 148–172). ಇದನ್ನು ಅಗತ್ಯವಾಗಿ ಗಮನಿಸಬೇಕು. ಸಿಂಧೂ ಲಿಪಿಯ ಬಗೆಗೆ ಎಸ್. ಆರ್. ರಾಯರಂತೆಯೇ ಶೋಧನೆ ನಡಸಿ ತಮ್ಮ ದೃಷ್ಟಿಕೋನವನ್ನು ಮಂಡಿಸಿದ್ದಾರೆ. ಶಾಸನಗಳಲ್ಲಿನ ಐತಿಹಾಸಿಕ, ಸಾಮಾಜಿಕ ಅಂಶಗಳು ಮತ್ತು ಆರ್ಥಿಕಾಂಶಗಳ ಬಗೆಗೆ ನಡೆಯಬೇಕಾದ ಕೆಲಸಗಳ ಬಗೆಗೆ ಒತ್ತಿ ಹೇಳಿದ್ದಾರೆ. ರಮೇಶ ಅವರು ಕನ್ನಡದಲ್ಲಿ ಬರೆದಿರುವ ಬರಹಗಳು ಬಹಳ ಕಡಮೆ ಎಂದು ಹೇಳಬಹುದು. ಆದರೆ ಇಂಗ್ಲಿಷ್‌ನಲ್ಲಿ ಬರೆದಿರುವ ಬರಹಗಳು ಬಹುಪಾಲು ಕರ್ನಾಟಕದ ಇತಿಹಾಸ, ಶಾಸನಗಳು ಈ ವಿಷಯಗಳಿಗೇ ಸಂಬಂಧಪಟ್ಟಿವೆ. ಶಾಸನಗಳ ಪುನರ್ ಪರಿಷ್ಕರಣದ ಅಗತ್ಯವನ್ನು ಒತ್ತಿ ಹೇಳಿರುವವರು ರಮೇಶ ಅವರನ್ನು ಬಿಟ್ಟರೆ ಇಬ್ಬರೋ, ಮೂವರೋ ಇರಬಹುದು. ಇದನ್ನು ರಮೇಶ ಅವರ ಅನೇಕ ಬರಹಗಳಲ್ಲಿ ಕಾಣುತ್ತೇವೆ. ಶಾಸನಗಳಲ್ಲಿ ಕಂಡುಬರುವ ಪುರಾತತ್ತ್ವೀಯ ಮಾಹಿತಿಯನ್ನು ಅಭ್ಯಸಿಸಿ ಅವುಗಳನ್ನು ಬಳಸಿಕೊಂಡು ಸಂಪ್ರಬಂಧಗಳನ್ನು ಮಂಡಿಸಿದವರಲ್ಲಿ ರಮೇಶ ಅವರು ಒಬ್ಬರು. ಇಂತಹ ಹಲವು ರೀತಿಯ ಮಾಹಿತಿಗಳನ್ನು ರಮೇಶ ಅವರ ಬರಹಗಳಲ್ಲಿ ಕಾಣುತ್ತೇವೆ. ಅಯೋಧ್ಯೆಯಲ್ಲಿ ಈಗ ಬಾಬರೀ ಮಸೀದಿಯೆಂದು ಹೇಳಲಾಗುವ ಸ್ಥಳದಲ್ಲಿ ದೊರಕಿದ ಸಂಸ್ಕೃತ ಭಾಷೆಯ ಶಾಸನವನ್ನು ಅತ್ಯಂತ ಶ್ರೇಷ್ಠವಾಗಿ ಸಂಪಾದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ದೊರೆತ ಅಶೋಕನ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಹಲವು ವಿದ್ವಾಂಸರ ಅಭಿನಂದನ ಗ್ರಂಥಗಳು ಮತ್ತು ಸಂಸ್ಮರಣ ಗ್ರಂಥಗಳ ಸಂಪಾದಕರು ಹಾಗೂ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಗ್ರಂಥಗಳೆಲ್ಲವೂ ಉತ್ತಮವಾಗಿ ಸಂಪಾದಿತಗೊಂಡಿವೆ. ಒಟ್ಟಾರೆಯಾಗಿ ರಮೇಶ ಅವರ ಬರಹಗಳು ಒಂದೆಡೆ ಸಂಕಲನಗೊಂಡು ಅಧ್ಯಯನ ನಡೆಯಬೇಕಾಗಿದೆ.





## ಡಾ. ಕೆ. ವಿ. ರಮೇಶ ಅವರ ಬರಹಗಳ ಸೂಚಿ

### ಸ್ವತಂತ್ರ ಕೃತಿಗಳು

1. **ತುಳುನಾಡಿನ ಇತಿಹಾಸ,** ಗೀತಾ ಬುಕ್ ಹೌಸ್, ಮೈಸೂರು ಮತ್ತು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ–1968
2. **ಕರ್ಣಾಟಕ ಶಾಸನ ಸಮೀಕ್ಷೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–1971
3. **ತುಳುನಾಡಿನ ಅರಸುಮನೆತನಗಳು ಮತ್ತು ಧರ್ಮಸಮನ್ವಯ,** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನಮಾಲೆ, ಉಜಿರೆ–1985 (ಸಹಲೇಖಕರು–ಎಂ.ಜೆ.ಶರ್ಮ)
4. **A History of South Kanara**: From the Earliest Times to the Fall of Vijayanagara, Karnatak University, Dharwad-1970
5. **Chalukyas of Vatapi**, Agam Kala Prakashan, Delhi-1984
6. **Indian epigraphy** (Volume-1), Sundeep Prakashan, Delhi-1984
7. **Indian Inscriptions : A Study in Comparison and Contrast**, Indian Council of Historical Research, Bangalore-2006

### ಸಂಪಾದಿತ ಕೃತಿಗಳು

1. **ತುಳುನಾಡಿನ ಶಾಸನಗಳು** (ಸಂಪುಟ–1), ಗೀತಾ ಬುಕ್ ಹೌಸ್, ಮೈಸೂರು–1978 {ಸಹ ಸಂಪಾದಕರು–ಎಂ.ಜೆ. ಶರ್ಮ}
2. **ಶ್ರೀತತ್ತ್ವನಿಧಿ** (ದ್ವಿತೀಯ ಸಂಪುಟ, ವಿಷ್ಣುನಿಧಿ), ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ–2002 (ಪ್ರಧಾನ ಸಂಪಾದಕರು)
3. **ಶ್ರೀತತ್ತ್ವನಿಧಿ** (ತೃತೀಯ ಸಂಪುಟ, ಶಿವನಿಧಿ), ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ–2004 (ಪ್ರಧಾನ ಸಂಪಾದಕರು)
4. **ಶ್ರೀ ಕಾಶೀ ಪೀಠ : ಪರಂಪರೆ ಮತ್ತು ಇತಿಹಾಸ,** ಶ್ರೀ ವೀರಶೈವ ಅನುಸಂಧಾನ ಸಮಿತಿ, ಬೆಂಗಳೂರು (ಪ್ರಧಾನ ಸಂಪಾದಕರು)
5. **Srikanthika** (Dr.S.Srikantha Sastri Felicitation Volume), Geetha Book House, Mysore-1973 (Joint Editor)
6. **Jaina Literature in Tamil** by Chakravarti, A,. Bharatiya Jnanapitha, New Delhi- 1974 (First Revised Edition) [with an introduction, Footnotes, Appendix and Index by K.V. Ramesh]
7. **Inscriptions of The Western Gangas**, I.C.H.R. and Agam Prakashan, New Delhi-1984
8. **Svasti Sri** (Dr. B. Ch. Chhabra Felicitation), Agam Kala Prakashan, Delhi-1984 (Joint Editor)
9. **Copper Plate Inscriptions from Karnataka Recent Discoveries**, Directorate of Archaeology and Museums, Mysore-1985 {Joint Editor- M.S. Nagaraja Rao}
10. **Giridharasri :** Essays on Indology (Dr. G.S.Dikshit Felicitation Volume), Agam Kala Prakashan, Delhi-1987 (Joint Editor)

11. **A Copper Plate Hoard of the Gupta Period from Bagh, Madhya Pradesh**, Archaeological Survey of India -1990 (Joint Editor)

12. **Indian History & Epigraphy** (Dr. G.S. Gai Felicitation Volume), Agam Kala Prakashana, Delhi-1990 (Joint Editor)

13. **Gauravam** : Recent Researches in Indology (Prof. B.K. Gururaja Rao Felicitation Volume), Harman Publishing House, Delhi-1996 (Joint Editor)

14. **Copper Plate Inscriptions from Karnataka** {In the Directorate of Archaeology and Museums} Directorate of Archaeology and Museums, Mysore-1997 {Joint Editor- M.S. Nagaraja Rao}

15. **Sudarsana** (Dr.B.R.Gopal Commemoration Volume), Shrihari Prakashana, Dharwad-1998 (Joint Editor)

16. **Sri Puspanjali** : Recent Researchers in Prehistory, Art, Architecture, Numismatics, Iconography and Epigraphy (Dr. C.R. Srinivasan commemoration volume, 2 Volumes), Bharatiya Kala Prakashan, Delhi-2004 (Chief Editor)

17. **Sri Kashi Jnanapeeta Tradition And History** , Sri Virashaiva Anusamdhana Samstana, Bangalore-2008 (Main Editor)

18. **Dictionary of Social, Economic and Administrative terms in South Indian Inscriptions (volume-1, A to D),** Oxford University press, New Delhi & Indian Council of Historical Research, New Delhi-2012

19. **Re-Examination Of Sanskrit And Pali Inscriptions Of South-East Asia** (Thai Inscriptions), Somaiya Publications Pvt Ltd, Mumbai-2012 (Chief Editor)

20. **Annual Report on Indian Epigraphy 1979-1980**, Archaeological survey of India, New Delhi-1992

21. **Annual Report on Indian Epigraphy 1981-1982**, Archaeological survey of India, New Delhi-2003

22. **Annual Report on Indian Epigraphy 1983-1984**, Archaeological survey of India, New Delhi-1991

23. **Epigraphia Indica** (volume-41, 1975-76), Archaeological survey of India, New Delhi-1989

24. **Epigraphia Indica** (volume-42, 1977-78), Archaeological survey of India, New Delhi-1992

25. **Epigraphia Indica** (volume-43, Part-1. 2011-12), Archaeological survey of India, New Delhi-2011





**ಕನ್ನಡ ಲೇಖನಗಳು**

1. **ವಿಜಯನಗರಕಾಲದ ತುಳುನಾಡು**, ಪ್ರಬುದ್ಧ ಕರ್ಣಾಟಕ, 40–3, 1958, ಪುಟ 5–17
2. **ಮನೆವೆಗ್ಗಡೆ ಚಟ್ಟಪ**, ಪ್ರಬುದ್ಧ ಕರ್ಣಾಟಕ, 48–4, 1967, ಪುಟ 182–185
3. **ಕುಮಾರ ಬಮ್ಮಿದೇವ ದಂಡನಾಯಕ**, ಪ್ರಬುದ್ಧ ಕರ್ಣಾಟಕ, 49–1, 1967, ಪುಟ 125–132
4. **ಮಹಾಪ್ರಧಾನ ಕೇಶಿರಾಜ ದಂಡನಾಯಕ**, ಪ್ರಬುದ್ಧ ಕರ್ಣಾಟಕ, 51–1, 1969, ಪುಟ 3–14
5. **ರಾಷ್ಟ್ರಕೂಟ 1 ನೆಯ ಅಮೋಘವರ್ಷನ ರಾಮದುರ್ಗ ಶಾಸನ**, ಪ್ರಬುದ್ಧ ಕರ್ಣಾಟಕ, 51–2, 1969, ಪುಟ 89–93 (ಸಹಲೇಖಕರು– ಮಾಧವ ನಾ ಕಟ್ಟಿ)
6. **ಹಲ್ಮಿಡಿ ಶಾಸನದ ಸಟ್ಟಿಜ್ಜದರ್ ಮತ್ತು ಬಾಳ್ಗೞ್ಚು**, ಪ್ರಬುದ್ಧ ಕರ್ಣಾಟಕ, 51–3, 1969, ಪುಟ 23–27
7. **ಅಹದನಕರಂ ತಾಮ್ರಶಾಸನ : ಒಂದು ಪುನಃಪರಿಶೀಲನೆ**, ಮಾನವಿಕ ಕರ್ಣಾಟಕ 3–4, 1973, ಪುಟ 19–22 (ಸಹಲೇಖಕರು–ಶಿವಲೆಂಕ ಶ್ರೀರಾಮಚಂದ್ರಮೂರ್ತಿ)
8. **ವಡ್ಡರಾವುಳ ಮತ್ತು ಬಿಲ್ಕೊಡೆ,** ಸಾಧನೆ 1–3, 1972, ಪುಟ 189–195
9. **ಕನ್ನಡಿಗ : ಒಂದು ಐತಿಹಾಸಿಕ ವ್ಯಕ್ತಿಚಿತ್ರ** (ವಿಶೇಷ ಉಪನ್ಯಾಸ), ಇತಿಹಾಸ ದರ್ಶನ, **ಸಂ.3** (1988), ಪುಟ 267–274
10. **ಸಮ್ಮೇಳನಾಧ್ಯಕ್ಷರ ಭಾಷಣ**, ಇತಿಹಾಸ ದರ್ಶನ, **ಸಂ.8** (1993), ಪುಟ XI - XVI
11. **ಕದಂಬ–ಪಲ್ಲವ–ಗಂಗರ ಸಂಬಂಧ**, ಹರತಿಸಿರಿ [ಹೆಚ್.ವಿ. ವೀರನಾಯಕ ಹರತಿ ನೆನಪಿನ ಸಂಪುಟ, (ಸಂ) ಲಕ್ಷ್ಮಣ್ ತೆಲಗಾವಿ], ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು, ಚಿತ್ರದುರ್ಗ–1987, ಪುಟ 788–798
12. **ಸ್ಥಳನಾಮಶಾಸ್ತ್ರ,** ಸಂಶೋಧನ [ಎಂ. ಚಿದಾನಂದಮೂರ್ತಿ ಗೌರವ ಸಂಪುಟ (ಸಂ) ಲಕ್ಷ್ಮಣ್ ತೆಲಗಾವಿ] ಎಂ. ಚಿದಾನಂದಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು–1991, ಪುಟ 145–148
13. **ಅನಂತಪುರದ ತುಳು ಶಾಸನ {ಕೇರಳರಾಜ್ಯ, ಕಣ್ಣನೂರು ಜಿಲ್ಲೆ, ಕಾಸರಗೋಡು ತಾಲ್ಲೂಕು}**, ತುಳುವ {ತುಳುಭಾಷೆ, ನಾಡು ಮತ್ತು
ಸಂಸ್ಕೃತಿಗೆ ಸಂಬಂಧಿಸಿದ ತ್ರೈಮಾಸಿಕ}, ಸಂಪುಟ–1, ಸಂಚಿಕೆ–4, ಜುಲೈ–ಸೆಪ್ಟೆಂಬರ್ 1980, ಪುಟ 36–38
14. **ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ,** ಲೇಖಕರು : ಗಣಪತಿರಾವ್ ಐಗಳ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ,
ದ್ವಿತೀಯ ಮುದ್ರಣ ; ಚರಿತ್ರೆ ಅಧ್ಯಯನ, ಸಂಪುಟ–7, ಸಂಚಿಕೆ–1, ಜುಲೈ–ಡಿಸೆಂಬರ್ 2011, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ 156–194 (ಮುನ್ನುಡಿ ಮತ್ತು ವಿಮರ್ಶೆ)

**ಇಂಗ್ಲಿಷ್ ಲೇಖನಗಳು**

**Epigraphia Indica**

1. **Epigraphia Indica, Volume-31 (1955-56), Index,** pp 337-369
2. **Note on Madakasira Inscription of Diliparasa, Saka 870**, Vol-33 (1959-60), No-12, pp.77-78
3. **Two Songira Chauhan Inscriptions from Barlut**, Vol-36 (1965-66), No-4, pp. 33-38 and plates (jointly With D.C.Sircar)

4. **A Brahmi inscription from Belvadigi** (Gulbarga Dt), Vol-37 (1967-68), No-22, pp.131-32 and plate
5. **Kondguli Inscription of Bhulokamalla,** Vol-37 (1967-68), No-34, pp.189-92 and plate
6. **Varanga Inscription of Kundana** Vol-37 (1967-68), No-47, pp.269-88 and plate
7. **Four Stone Inscriptions from Goa**, Vol-37 (1967-68), No-50, pp.282-88 and plates
8. **Malkankoppa Inscription of Vikramaditya VI and Kadamba Guhalladeva, Saka 1026** Vol-37 (1967- 68), No-53, pp.307-12 and plate (jointly with M.N.Katti)
9. **Vaddarse Inscription of Aluvarasa,** Vol-37 (1967-68), No-54, pp.313-16 and plate)
10. **Bantra Inscription of Nripamallaraja**, Vol-38 (1969-70), No-3, pp.23-26 and plate
11. **Dharesvara Inscription of Hayvannarasa, Saka 1005**, Vol-38 (1969-70), No-14, pp. 66-68 and plate
12. **Uttaresvara plates of Kakatiya Rudramba, Saka1211,** Vol-38 (1969-70), No-16, pp. 76-93 and plates

(Jointly with V.S.Subrahmanyam)

13. **A Fragmentary Sarada Inscription from Hund**, Vol-38 (1969-70), No-17, pp. 94-98 and plate
14. **Raibag Inscription of Vikramaditya VI**, Vol-38 (1969-70), No-19, pp.106-10 and plate
15. **Senagalaguduru Inscription of Bana Chandiyanna**, Vol-38 (1969-70), No-21, pp. 119-21 and plate
16. **Kaligi Inscription of Kalachuri Soyideva**, Vol-38 (1969-70), No-39, pp. 231-42 and plate
17. **Sakrai Inscription of Govinda, V.S.[10*]55**, Vol-38 (1969-70), No-54, pp. 323-26 and plate
18. **Seven Inscriptions of the Badami Chalukyas**, Vol-38 (1969-70), No-56, pp. 331-42 and plates (jointly

with S.S.Ramachandramurthy)

19. **Two Nolamba-Pallava Inscriptions**, Vol-39 (1971-73), No-5, pp. 27-34 and plates
20. **Two Early Telugu-Chola Inscriptions from Badinenipalle,** Vol-39 (1971-73), No-19, pp. 135-38 & plates
21. **Three Telugu Inscriptions from Pulivendla Taluk**, Vol-39 (1971-73), No-23, pp. 157-66





22. **Bilpank Inscription of Chalukya Jayasimha Siddharaja**, Vol-40 (1973-74), No-5, pp. 23-30 and plate
23. **Vala (or Vada) Inscription of Suketuvarman, Saka 322** Vol-40 (1973-74), No-10, pp. 51-54 and plate
24. **Pudur Inscription of Hallavarasa**, Vol-40 (1973-74), No-13, pp. 81-86 and plate (jointly with M.N.Katti)
25. **A New Charter of Kadamba Mrigesavarman, year 6**, Vol-40 (1973-74), No-19, pp. 109-12 and plates (Jointly with S.H.Ritti )
26. **Two grants of Bhoja Prithvimallavarman, year 31**, Vol-40 (1973-74), No-26, pp. 141-46 and plates
27. **Pottipadu Inscription of Dhavaleyarasa**, Vol-40 (1973-74), No-30, pp.163-64 (jointly with M.N.Katti)
28. **Three Early Charters from Sanjeli in Gujarat**, Vol-40 (1973-74), No-34, pp. 175-86 and plates
29. **An Unpublished Inscription in the Gwalior Museum**, Vol-40 (1973-74), No-37, pp.191-96 and

plate (jointly with C.L.Suri)

30. **Umadi Inscription of Kalachuri Soyideva, year 9**, Vol-40 (1973-74), No-40, pp. 203-210 and

plate (jointly with M.J.Sharma)

31. **Peddavaduguru Inscription of Satyasraya**, Vol-40 (1973-74), No-48, pp. 225-28 and plate
32. **Koppal Rock Inscription of Harihara I,** Vol-40 (1973-74), No-51, pp. 233-34 and plate (jointly with M.N.Katti)
33. **Belkere Grant of Bana Nandivarma, year 3**, Vol-40 (1973-74), No-55, pp. 247-52
34. **Aluru Plates of Vishnuvardhana III,** Vol-40 (1973-74), No-56, pp.253-61 and plate (Jointly with M.D.Sampath)
35. **An Inscription of Pratihara Vatsaraja, Saka 717**, Vol-41 (1975-76), No-6, pp. 49-57 and plate

(Jointly with S. P. Tewari)

36. **Kirumorekoli Grant of Western Ganga Mushkara**, Vol-41 (1975-76), No-11, pp. 105-13 and plates
37. **Kukke (Subrahmanya) grant of Madhavaraya, Kali 4488 and Saka 1309**, Vol-41 (1975-76),

No-13, pp. 118-139

38. **A Fragmentary Inscription from Vidisha**, Vol-41 (1975-76), No-19, pp. 186-88 and plate (Jointly with Dr.S.S.Iyer)
39. **Kannada Sahitya Parishat Plates of Western Ganga Simhavarman**, Vol-41 (1975-76), No-20, pp. 189-94 and plates

**40. Kalanda Copper plate charter of Nayapaladeva**, Vol-41 (1975-76), No-22, pp. 199-205 and plates (jointly with S.S.Iyer)

**41. A Fragmentary Inscription from Chidiya in Haryana**, Vol-41 (1975-76), No-23, pp. 206-08 and plate

**42. Kannada Sahitya Parishat Plates of Ganga Madhavavarman (III), year 1,** Vol-41 (1975-76), No-24,

pp. 209-13 and plate

**43. A New Grant of Chalukya Vikramaditya I, Saka 591, year 15**, Vol-42 (1977-78), No-1, pp. 1-7 and plates

**44. Malda District Museum Copper plate charter of Mahendrapaladeva, year 7**, Vol-42 (1977-78),

No-2, pp. 8-29 (jointly with S.S.Iyer)

**45. Katlaparru Grant of Vijayaditya**, Vol-42 (1977-78), No-4, pp. 35-43 and plates (jointly with

M.D.Sampath)

**46. Three Inscriptions of Balavarmma**, Vol-42 (1977-78), No-27, pp. 181-86 and plates (jointly with S.S.Ramachandramurthy)

**47. Basha (Bihar State) Minor Rock Inscription of Ashoka**, Vol-43, Part-1 (2011-12), No-1, pp. 1-4 (Jointly with T. S.Ravishankar)

**48. Phanigiri Inscription of Rudrapurushadatta, year-18**, Vol-43, Part-1 (2011-12), No-9, pp. 75-77 (Jointly with K Munirathnam)

**49. Preah Ko (Kampuchea) Sanskrit Inscription of Indravarman**, Vol-43, Part-1 (2011-12), No-16,

pp. 161-164; Kaveri (Professor Y. Subbarayalu Felicitation Volume), Panpattu Veliyiittakam, Chennai-2001, pp 159-163

### Quarterly Journal of the Mythic Society (QJMS)

1. **Origin and early History of the Santaras of Santalige- 1000**, Volume-**57** (1-4) 1966-67, pp.25-36 (Joint with Madhava N Katti)
2. **Buddhism in South India as Gleaned from Inscriptions**, Volume -**90** (1-2) 1999, pp.1-7; Buddhism In South India, Volume-1 {seminar Papers}, (Ed) S. Nagaraju, The Mythic Society, Bangalore-2002, pp 1-7
3. **Fifth Annual Congress of Epigraphical Society of India: A Report**, Volume -**68** (3-4) 1977, pp.75-77
4. **Historical Study of Dravidian r and l**, Volume - **52** (3) 1962, pp. 77-93
5. **Recent Inscriptions Relating to Karnataka History**, Volume -**74** (4) 1983, pp. 321-339
6. **Tulu Language: A Historical Survey**, Volume- **48** (1-4) 1957-58, pp. 90-101





### Journal of Epigraphical Society of India

1. **A History of South Kanara,** Souvenir, Third Annual Congress of The Epigraphical Society of India, March 25-27, 1977, Rashtrakavi Govind Pai Samshodhana Kendra, Udupi-1977, pp 23-24
2. **Kannada Inscriptions : A Brief Survey,** Souvenir, Third Annual Congress of The Epigraphical Society of India, March 25-27, 1977, Rashtrakavi Govind Pai Samshodhana Kendra, Udupi-1977, pp 31-33 (Jointly with S. S. Ramachandra Murthy)
3. **A Duplicate Inscription of Chalukya Polakesi-1 at Badami,** Volume-9, 1982, pp 12-13
4. **A Note on the Barsi Plates of Krishna-1,** Volume-11,1984, pp 120-121 (Jointly with S.S.Iyer)
5. **An Incomplete Eulogy of the Sun God at Udaipur,** Volume-8, 1981, pp 97-100 (Jointly with S.S.Iyer)
6. **Bhindhon Plates of Rashtrakuta Kakkaraja,** Volume-10, 1983, pp 30-35
7. **Chola Hegemony in south india-A Comparative and Critical Assessment,** Volume-2, pp 111-115
8. **Historical Archaeology Vis-à-vis Indian Epigraphy,** Volume-7, 1980, pp 84-85
9. **Kumbalur Plates of Govinda,** Volume-17, 1991, pp 45-50 (Jointly with M.D.Sampath)
10. **On Some Inscriptions Edited by Fleet,** Volume-4, 1977, pp 85-90
11. **Risthal Inscription of Aulikara Prakasadharmma [vikrama] year 572,** Volume-10, 1983, pp 96-103
12. **The Ahadanakaram Plates: A Critical Study,** Volume-1, 1975, pp124-131 (Jointly with S. S. Ramachandra Murthy)
13. **The [F*] Utility & [F] Utility of Palaeography in Dating Undated Inscriptions,** Vol -3, 1977,pp 156-162
14. **Three Weeks in the Mekong Delta,** Volume-18, 1992, pp 122-124
15. **Sindaghatta Sangamesvara Temple & Inscriptions in the Village**, Volume-29, 2003, pp 96-101

### Studies in Indian Place Names (Journal of the Place Names Society of India)

1. **Some observations on Indian place names**, Volume-1, 1979, pp 95-96
2. **Epigraphy & the Study Indian Place and Personal Names**, Volume -2, 1981, p 20-27
3. **On Some Place & Temple Names**, Volume-3, 1982, pp 95-99
4. **The Title Rajan & Its Extended Forms**, Volume-11, 1990, pp 76-80
5. **Need for A National Methodology for the Study of Indian Place Names,** Vol-12, 1991, pp 114-123

6. **Dictionary of Indian Place Names** (Sample Survey of Five Taluks of Mysore District), Volume-19, 1998, pp 83-96
7. **Dictionary of Indian Place Names**, Volume-22, pp 152
8. **Dictionary of Indian Place Names**, Volume-28, 2009, pp 189-204

**Felicitation, Commemoration & Other Volumes Articles**

1. **Jaina Art and Architecture**, Sudarsana (Dr. B .R. Gopal Commemoration Volume), Shrihari Prakashana, Dharwad-1998, pp 194-201
2. **Notes on some Imperial Dynasties of Karnataka,** Srikanthika (Dr. S. Srikantha Sastri *Felicitation Volume), Geetha Book House, Mysore-1973, pp 99-107*
3. **Inscriptions of India and Southeast Asia through the Ancient and Early Medieval Periods**, Pratnakirti : Recent Studies in Indian Epigraphy, History, Archaeology and Art (Essays in Honour of Prof. Shrinivas Ritti),Volume-2, Agam Kala Prakashan, Delhi-2012, pp 364-368
4. **Jaina Art and Architecture in Karnataka,** "Rishabh Saurabh" Published on the occasion of Seminar on Jaina Heritage of Karnataka, held at Bangalore (Organized by Rishabh Dev Foundation, Delhi ) on 4th & 5th April 1994
5. **Ayodhya¯ Vishnu-Hari Temple Inscription**, Pura¯tattva, XXXIII, 2002-03, pp 98-103
6. **The Jaina Art & Architecture of Tulunad** (A Study Based Mainly on Inscriptions), Aspects of Jaina Art & Architecture (Ed) A. Ghosh, Volume-1, Bharatiya Jnanapitha, New Delhi-1974-75, pp 109-122
7. **Epigraphy and Indian Art and Architecture,** Indian Epigraphy: Its Bearing on the Historty of Art (Ed) Frederick M Asher & G. S. Gai, Oxford and IBH Publishing co & American Institute of Indian Studies-1985, pp 77-82
8. **Handling of Source Materials in the Study of Regional History,** Indian Archaeological Heritage, Volume-2 (K. V. Soundara Rajan Felicitation Volume, (Ed) C Margabandhu & Others), Agam Kala Prakashan, Delhi-1991, pp 653-658
9. **Preservation of Inscriptions,** Madhu: Recent Researches in Indian Archaeology & Art, History (M.N. Deshapande Festschrift, (Ed) M.S.Nagaraja Rao), Agam Kala Prakashan, Delhi-1981, p 319-320
10. **Rajpur Copper Plate Grant of Paramara Naravarman,** Rangavalli (S.R. Rao Felicitation Volume, *(Ed) A.V. Narasimha Murthy & Others), Sundeep Prakashan, Delhi-1983, p 105-112 (jointly with S.S.Iyer)*
11. **Champassak (Laos) Inscription of Mangalaraja Alias Devanika,** Nagabhinandanam, Volume-2

[Dr. M.S. Nagaraja Rao Festschrift, (Ed) L.K. Srinivasan, S. Nagaraju], Dr. M.S. Nagaraja Rao Felicitation Committee, Bangalore-1995, P 699-708

12. **Kongu in South Indian History**, Srinidhih : Perspectives in Indian Archaeology, Art & Culture (K.R. Srinivasan Festschrift, (Ed) K.V. Raman & others) New Era Publications, Madras-1983, p 323-328





13. **A Pallava Charter and Two Copper Medallions from peddamudiyam,** Sri Ramachandrika (Prof Oruganti Ramachandraiya Festschrift, (Ed) A.V. Narasimha Murthy & Others) Book India Publishing Co. Delhi-1993, p 117-122
14. **Introducing Indian Epigraphy,** South Asian Workshop on Epigraphy, March 25-31,1985, Mysore {Papers Presented by The Epigraphy Branch Mysore}
15. **Geographical Factors in Tuluva History**, Academy Silver Jubilee Lecture (29-4-1981), Academy of Education Manipal-1981
16. **Rashtrakutas of Manyakheta : a Study**, Rupanjali (Memory of O.C. Gangoly), O.C.Gangoly Memorial Society, Calcutta, 1986, pp 129-132
17. **Chalukya Pulakesi-1**, Studies in Indian History and Culture (volume presented to Dr. P. B. Desai, **(Ed) B.R.Gopal, Shrinivas Ritti), P. B. Desai Felicitation Committee, Karnatak University, Dharwar-1971, pp 215-221**
18. **Kadamba-Pallava-Ganga Relationship**, Indological Studies (Essays in Memory of Shri S.P.Singhal), Caxton Publications, Delhi-1987, pp 23-30
19. **A Royal Memorial to Chalukya Vikramaditya-2,** Madhu : Recent Researches in Indian Archaeology & Art, History (M.N. Deshapande Festschrift, (Ed) M.S.Nagaraja Rao), Agam Kala Prakashan, Delhi-1981, pp 175-177 (Joint with M.S. Nagaraja Rao)
20. **On the Origin and Dissemination of the Brahmi Script,** Narasimhapriya: Essays on Indian Archaeology, Epigraphy, Numismatics, Art, Architecture, Iconography and Cultural History, Volume-1 (Prof A. V. N Murthy Felicitation Volume), Sundeep Prakashan, New Delhi- 2000, pp 71-76
21. **General Problems on Settlement and Further Expansion in the Middle Period**, Hemakuta: Recent Researches In Archaology And Museology, Volume-2 (Shri C. T. M. Kotraiah Felicitation Volume), Bharatiya Kala Prakashan, Delhi-2001, pp 301-306
22. **Origin and Early History of the Rashtrakutas of Manyakheta**, The Rashtrakutas of Malkhed: studies in the history and culture, Published on behalf of the Mythic Society, Bangalore by Geetha Book House, Mysore-1994, pp 32-38
23. **Pulakesin-2 His Career and Personality**, The Chalukyas of Badami: Seminar Papers, (Ed) M.S.Nagaraja Rao, The Mythic Society, Bangalore-1978, pp 53-65
24. **The Imperial Hegemony of the Vatapi & Kalyana Houses : A Comparative Study**, The Chalukyas of Kalyana: Seminar Papers, (Ed) M.S.Nagaraja Rao, The Mythic Society, Bangalore-1983, pp 26-32
25. **Recent Discoveries and Research Methods in the Field of South Asian Epigraphy**, Indus Valley to Mekong Delta (Explorations in Epigraphy) (Ed) Nobaru Karashima, New Era, Madras-1985, pp 1-32

26. **Patronage of South Indian Performing Arts : Evidences from Epigraphical Sources,** Sri Puspanjali: Recent Researchers in Prehistory, Art, Architecture, Numismatics, Iconography and Epigraphy (Dr. C.R. Srinivasan Commemoration Volume), Volume-1, Bharatiya Kala Prakashan, Delhi-2004, pp 193-203

27. **The Ashokan Inscriptions at Sannati**, Indian Historical Review, volume-14, No. 1-2, 1987-88, pp 36-42

28. **Notes on the Yelavatti Inscription of Tribhuvanamalla Veera Gamgi,** Journal of Indian History, Volume-40, part-2, 1962, pp 329-335

29. **Tamil Inscriptions in Karnataka** (T.N. Subramanian Endowment Lecture for 2001), Avanam, Vol-13, 2002, pp 150-161

30. **Vijayanagara and Territorial Re-Adjustments in Karnataka**, Kannada Studies, Volume-3, Number-1, 1966-67, pp 39-50

31. **On the Vakatakas and their Inscriptions**, Indian History & Epigraphy (Dr. G.S. Gai Felicitation Volume), Agam Kala Prakashana, Delhi-1990, pp 125-128

32. **Kannada inscriptions outside Karnataka**, Archaeology of Karnataka *(*Ed) A.V.Narasimha Murthy, University of Mysore, Mysore-1978, pp 203-209

33. **Inscriptions of the Merchant Guilds of Karnataka,** Triratna : Heritage, Governance & Equity (Hon'ble Shri T.N. Chaturvedi Festschrift), Volume-2, Agam Kala Prakashan, Delhi- 2003, pp 315-333

34. **Srilankan & Indian Inscriptions-A Study in Comparison & Contrast,** Pura-Prakash (Dr. Z.A. Desai Commemoration Volume), Bharatiya Kala Prakashan, Delhi-2003, pp 120-124

35. **Engravings in Stone,** Homage to Karnataka, Marg Publications, Mumbai-1982, pp 21-24

**ಮುನ್ನುಡಿಗಳು**

1. **ನಡೆದಿಹೆ ಬಾಳೌ ಕಾವೇರಿ** (ಲೇಖಕರು–ಬಿ.ಜಿ. ಎಲ್. ಸ್ವಾಮಿ), ಕಾವ್ಯಾಲಯ, ಪ್ರಕಾಶಕರು, ಮೈಸೂರು–2001

2. **Cultural heritage of Personal names & Sanskrit Literature** by S.P Tewari, Agam Kala Prakashan, Dehli-1982

3. **South Indian Feudatory Dynasties** by Venkatesha, Sharada Publishing House, New Delhi- 2000 **Review Articles**

1. **The Coins of Karnataka** by A.V.Narasimha Murthy, J E S I, Volume-1, 1975, pp 151-153

2. **Epigraphia Andhrica, Volume-2 (1974) & Volume-3 (1974)** Edited by N. Venkataramanayya, J E S I, Volume-3, 1977, pp 195-196

3. **Geographical Names in Ancient Indian Inscriptions** by Paramanand Gupta, JESI, Vol-4, 1977, pp 110

4. **The Cholas (Mathematics Reconstracts the Chronology)** by N Sethuraman, JESI, Volume-4, 1977, pp 111-112 (Jointly with C.R. Srinivasan)





5. **Hindu Iconography** by S.P Tewari, J E S I, Volume-5, 1978, pp 143-144

6. **The Imperial Pandyas (Mathematics Reconstruct the Chronology)** by N Sethuraman, J E S I, Volume-5, 1978, pp 144-146 (Jointly with C.R. Srinivasan)

7. **Kausambi Hoard of Magha Coins** by Ajay Mitra Shastri, J E S I, Volume-6, 1979, pp 68

8. **Studies in Ancient Townships of Pudukkottai** by R. Tirumalai, J E S I, Volume-9, 1982, pp 111-112

9. **Guptakalina Abhilekha** by S.R. Goyal, J E S I, Volume-11, 1984, pp 123-124

10. **Maukhari-Pushyabhuti-Chalukya Yugina Abhilekha** by S.R. Goyal, J E S I, Volume-14, 1987, pp 122

11. **Rashtrakutara Tamilu Shasanagalu (Rashtrakuta Inscriptions in the Tamil Country)** Edited by S. Swaminathan, J E S I, Volume-28, 2002, pp 99-100

12. **The Hatigumpha Inscription of Kharavela & Bhabru Edict of Ashoka-A Critical Study** by Shashikanth, J E S I, Volume-31, 2005, pp 149-150

13. **Village Names of Chingleput District** (Five Northern Taluks) by S. Jayaprakash, Journal of the Place Names Society of India, Volume-13, 1992, p 113-114.

ತಮಿಳು ಭಾಷೆಯಲ್ಲಿಯೂ ಬರಹಗಳಿದ್ದು ಇವುಗಳ ಮಾಹಿತಿ ಪ್ರಯತ್ನಪಟ್ಟರೂ ತಿಳಿಯಲಾಗಲಿಲ್ಲ. ಕನ್ನಡ ವಿಶ್ವಕೋಶ, ಕನ್ನಡ ವಿಷಯ ವಿಶ್ವಕೋಶಗಳಿಗೆ ಬರೆದ ಬರಹಗಳ ವಿವರಗಳನ್ನು ಇಲ್ಲಿ ಸೇರಿಸಲು ಸಾಧ್ಯವಾಗಿಲ್ಲ. ಇನ್ನೂ ಕೆಲವು ಬರಹಗಳು ನಮ್ಮ ಗಮನಕ್ಕೆ ಬಾರದೇ ಇರುವುದರಿಂದ, ಅವು ಪ್ರಕಟವಾದ ಆಕರಗಳು ಯಾವುವು ಎಂಬ ಮಾಹಿತಿಯೂ ಇಲ್ಲದೇ ಇರುವುದರಿಂದ ಪೂರ್ಣ ಪ್ರಮಾಣದ ಸೂಚಿಯನ್ನು ರೂಪಿಸಲು ಸಾಧ್ಯವಾಗದೇ ಇದೆ. ಇದಕ್ಕಾಗಿ ನಮಗೆ ವಿಷಾದವಿದೆ. ನಮ್ಮ ಬರಹದಲ್ಲಿಯೇ ಕೆಲವು ಅರೆಕೊರೆಗಳೂ ಇರಬಹುದು. ಬಲ್ಲವರು ಇವುಗಳನ್ನು ನೇರ್ಪಡಿಸಬೇಕಾಗಿ ವಿನಂತಿಸಿ ಕೊಳ್ಳುತ್ತೇವೆ.

**ಸಂದ ಪ್ರಶಸ್ತಿ, ಗೌರವಗಳು***

1. President of Section V of the XXXVII Indian History Congress, Calicut, 1976
2. Founder Member (1974) and Secretary & Executive Editor, Epigraphical Society of India
3. Founder Member (1978) and presently Chairman, Place Names Society of India
4. Served as Member of International Committee for Onamastic Sciences, Louvain, Belgium (1985-90)
5. Served for two terms (1988-93) as Council Member of the Indian Council of Historical Research (New Delhi) as a nominee of the Ministry of Education, Govt. of India

6. One of the five scholars honoured by the Govt. of Karnataka on the occasion of the Centenary Celebrations of the State's Department of Archaeology and Museums, 1985
7. Member, Editorial committee, Kannada-Kannada Dictionary (1982-94) and later of the ongoing Kannada-

   Kannada- English Dictionary, Kannada Sahitya Parishat, Bangalore
8. Honoured by His Holiness the Swamiji of Puttige Math on the occasion of his accession to the Paryaya

   Peetha of Udupi Shri Krishna Temple, January., 1992:
9. General President in the VI Annual Session of Karnataka Itihasa Academy (Bangalore) held at Raichur, July, 1992
10. General President in the XXI Annual Congress of the Epigraphical Society of India at Dharwar, 1995
11. Honoured with a Copper Plate Citation by the Epigraphical Society of India at its XXII Annual Congress

    at Mysore, May, 1996
12. Conferred 'Honorary Fellowship for life' by the General Body of the Asiatic Society of Bombay (founded in 1804), Mumbai, with all rights and privileges appertaining thereto, Aug., 1998:
13. Awarded 'Chidananda Prashasti' at Bangalore, May, 1999
14. Awarded the Polali Sheenappa Heggade Prashasti at Udupi, April 2000:
15. One of the five scholars honoured by the Jaina Matha, Shravanabelgola, Karnataka, Feb., 2001
16. Awarded 'Dr.Ba.Ra.Gopal Prashasti' by the Karnataka Itihasa Academy, October, 2001
17. Honoured by the Karnataka Tulu Sahitya Academy, Govt. of Karnataka, at Mangalore, May, 2002
18. Delivered the Inaugural Lecture in the Lecture Series started by ICHR Southern Regional Centre, Bangalore on Topic: 'Indian Inscriptions- A Study in Comparison and Contrast' (since published), June, 2003
19. Manipal Foundation's awarded on Prof. Achyuta Rao Memorial Fellowship for writing a treatise on 'The Philosophy of Indian History', 2003
20. Delivered the Maheshwar Neogi Memorial Endowment Lecture at Guwahati on 'Assam, the North-East and the rest of India', 13-9-2003:
21. Honoured "Man of the Year' award by The Academy of General Education, Syndicate Bank and Rotary Club of Udupi, Manipal, 2006
22. Delivered 'Dr. D.C.Sircar centenary Lecture' at the Asiatic Society, Kolkata on 8th June, 2007.
23. General President in the Conference on the 'History and Archaeology of Udupi District' conducted at Udupi by the Department of Archaeology and Museums, Govt. of Karnataka, Mysore.





24. Chief Guest at the Inaugural Function of the Centenary year celebrations of the Mythic Society, Bangalore, January, 2010
25. Nominated as a Member of the 'Central advisory Board of Archaeology, Department of Culture, Govt. of India, 2010
26. Delivered the Keynote address "The Invincible two decades of Indian History" on Krishnadevaraya at the Southern Centre of The Indian Council of Historical, Bangalore, January, 2010

* ಕೆ.ವಿ. ರಮೇಶ ಅವರು ತಯಾರಿಸಿದ್ದ ಪಟ್ಟಿಯನ್ನೇ ಯಥಾವತ್ತಾಗಿ ನೀಡಲಾಗಿದೆ.

\# He was felicitated with Honour of Excellence by Prime Minister Manmohan Singh in recognition of his contribution to the field of epigraphy, at a function held at New Delhi to mark the 150th year of the ASI.- Editor.

**ವಿದೇಶಿ ಪ್ರವಾಸ ಹಾಗೂ ವಿದೇಶದಲ್ಲಿ ಮಂಡಿಸಿದ ಪ್ರಬಂಧಗಳ ವಿವರ**

1. Visited Bulgaria for three weeks on a Cultural Exchange Programme; also visited Rome on way back to India, Sept. 1981
2. Visited Japan for a week and delivered the Key-Note address (since published) on South Asian Epigraphy in the International Conference on Asian and North African Studies, Aug.-Sept. 1983:
3. Visited Finland as a member of the official delegation' headed by Dr. M.S. Nagaraja Rao, the then Director General, Archaeological Survey of India, for 11 days to negotiate terms for the Cultural Exchange programmes between India and Finland for the next three years, June, 1984:
4. Nov.-Dec. 1986: Visited Finland for three weeks in connection with the preparation of a photographic Corpus of Indus Seals and Sealing as part of Indo-Finnish collaboration programme
5. Aug. 1987: Participated in the XVI International Congress on Onamastic Sciences held in Quebec City, Canada and presided over a Session and also presented a paper
6. Visited the United States of America for two weeks, Aug.-Sept. 1987:
7. Visited Srilanka and participated in the International Seminar 'Towards the Second Century of Archaeology in Srilanka' held in Colombo, July, 1990:
8. Visited Finland and participated in the XVII International Congress on Onamastic Sciences held in Helsinki and presented a paper, Aug. 1990:
9. Visited the United States of America for two weeks, Aug. 1990
10. As member of the Indo-Japanese team led by Prof. Noboru Karashima for the Archaeological-cum-Epigraphical exploration of South-east Asia
11. Visited (South and North) Vietnam and Laos, Dec. 1991-Jan. 1992:
12. Visited Malaysia and Thailand, Dec. 1992-Jan. 1993:
13. Visited Indonesia, Dec. 1993-Jan. 1994:

14. Visited Japan and presented a report at the Tokyo University on the results of the Epigraphical Explorations in South-East Asia during the 1991-94 seasons (since published), March, 1994
15. Visited (Central) Vietnam and Cambodia, March, 1995:
16. Visited Canada and the United States of America; delivered a talk on Southeast Asian Inscriptions at the Shastri Institute, Edmonton University, Canada, July 1995-Jan. 1996
17. Visited Denmark and Sweden. Participated in the 14th European Conference on Modern South Asian Studies at Copenhagen and presented a paper " The Ever Changing Face of the Indian Village"; also delivered a talk on 'Myths in Indian History' at the Dept. of Religions, University of Copenhagen, Denmark, Aug. 1996
18. As member of the Indo-Srilankan team of Explorers visited a number of historical sites in Srilanka for Two Weeks; also participated in the International Seminar at the University of Peradania, Kandy and presented two papers on the Merchant Guilds of Karnataka and Merchant Guilds and Urbanization in Karnataka; delivered a talk at the Indo-Srilankan Friendship Society, Colombo, Dec. 2002
19. Visited Malaysia and participated in the International Seminar on 'Asian-European Epics' and presented paper 'The Great Indian Poems', Oct. 2002
20. Participated in the International Conference held in Bangkok, Thailand, on 'Sanskrit in Asia: Unity in Diversity; Presided over a section in which I presented a paper on 'Sanskrit Inscriptions of India and Southeast Asia- A Study in Comparison and Contrast', June 20-26, 2006
21. Participated in the 2nd SSEASR Conference at Bangkok and presented a paper on 'The Nature and Degree of Influence exerted by Different Politico-Religious and Palaeographical Regions of India on Southeast Asia through the Ancient and Early Medieval Periods', 2007:
22. Participated in the 3rd SSEASR Conference at Bali, Indonesia, and presented a paper on 'Water Resources Management in Ancient and Medieval South and Southeast Asia', June, 2009

[ಈ ಲೇಖನವನ್ನು ಮತ್ತು ರಮೇಶ ಅವರ ಬರಹಗಳ ಸೂಚಿಯನ್ನು ಸಿದ್ಧಪಡಿಸಲು ದ ಮಿಥಿಕ್ ಸೊಸೈಟಿ, ಬೆಂಗಳೂರು, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್, ದಕ್ಷಿಣ ಪ್ರಾದೇಶಿಕ ವಲಯ, ಬೆಂಗಳೂರು, ಕೇಂದ್ರ ಪುರಾತತ್ತ್ವ ಇಲಾಖೆ, ಬೆಂಗಳೂರು ವಲಯ, ಈ ಸಂಸ್ಥೆಗಳ ಗ್ರಂಥಾಲಯಗಳನ್ನು ಬಳಸಿಕೊಳ್ಳಲಾಗಿದೆ. ಈ ಎಲ್ಲ ಸಂಸ್ಥೆಗಳಿಗೂ ಮತ್ತು ಅಲ್ಲಿನ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಡಾ. ಎಸ್. ನಾಗರಾಜು, ಎಂ. ವಿ. ವಿಶ್ವೇಶ್ವರ, ಡಾ. ಎ.ವಿ. ನರಸಿಂಹಮೂರ್ತಿ ಅವರ ವೈಯಕ್ತಿಕ ಗ್ರಂಥಭಂಡಾರಗಳನ್ನೂ ಸಹ ಬಳಸಿಕೊಂಡಿದ್ದು ಇದಕ್ಕೆ ಅವಕಾಶ ನೀಡಿದ ಈ ವಿದ್ವಾಂಸರಿಗೆ ಕೃತಜ್ಞನಾಗಿದ್ದೇನೆ. ಮೈಸೂರಿನ ಕೇಂದ್ರ ಶಾಸನ ಇಲಾಖೆಯ ಜಿ.ಎಸ್. ರವಿಶಂಕರ ಅವರೂ, ಅನಿಲ್ ಕುಮಾರ್ ಅವರೂ ಅನೇಕ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಒಟ್ಟಾರೆಯಾಗಿ ಈ ಲೇಖನವನ್ನು ಸಿದ್ಧಪಡಿಸಲು ನೆರವು ನೀಡಿರುವ ಸ್ನೇಹಿತರು, ಗುರುಗಳು ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.]



# ಪುಸ್ತಕ ವಿಮರ್ಶೆ

**–ರಡ್ಡೆಪ್ಪ ಪಂಪಣ್ಣ ಹಳ್ಳಿ (ಬಳಗಾನೂರು)**
ಇತಿಹಾಸ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ತುರ್ವಿಹಾಳ,
ತಾ॥ ಸಿಂಧನೂರು, ಜಿ॥ ರಾಯಚೂರು. ಮೊ: 9481941025



**ರಾಯಚೂರು ಜಿಲ್ಲೆಯ ಚರಿತ್ರೆ : ಶಾಸನಗಳ ಹಿನ್ನೆಲೆಯಲ್ಲಿ**

ಲೇಖಕರು : **ಡಾ. ಬಿ. ಚನ್ನಬಸಪ್ಪ**
ಪ್ರಕಾಶನ : **ಅಕ್ಷರ ಮಂಟಪ,**
624, 9ನೇ 'ಡಿ' ಮುಖ್ಯರಸ್ತೆ, ಹಂಪಿನಗರ,
ಬೆಂಗಳೂರು–560104

ಪುಟಗಳು : xiv+690, ಬೆಲೆ : ರೂ. 650
ಪ್ರಥಮ ಮುದ್ರಣ : 2010

**1**

ಚರಿತ್ರೆಯು ಸತ್ಯ ಕಥನ. ಪುರಾವೆಗಳೇ ಇದಕ್ಕೆ ಆಧಾರ. ಚರಿತ್ರೆ ರಚನೆಯಲ್ಲಿ ಪುರಾತತ್ವ ಆಧಾರಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಅದರಲ್ಲೂ ಶಾಸನಗಳು ವೈವಿಧ್ಯಮಯವಾದ ವಿಷಯವನ್ನು ಒಳಗೊಂಡಿರುತ್ತವೆ. ಇವುಗಳು ಸಮಕಾಲೀನ ಜನಜೀವನವನ್ನು ಅರಿಯುವಲ್ಲಿ ಬಹಳಷ್ಟು ಸಹಾಯ ಮಾಡುತ್ತವೆ. ಇಂಥ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಡಾ. ಬಿ. ಚನ್ನಬಸಪ್ಪನವರು ರಾಯಚೂರು ಜಿಲ್ಲೆಯ ಇತಿಹಾಸವನ್ನು ಈ ಪುಸ್ತಕದಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ ಸಂಶೋಧನಾ ಗ್ರಂಥದಲ್ಲಿ 8 ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಪದ್ಧತಿಯಂತೆ ಪ್ರಸ್ತುತ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಬಳಸಲಾದ ಆಕರ ಸಾಮಗ್ರಿಗಳ ಬಗ್ಗೆ ಮಾಹಿತಿ ಇದೆ. ಎರಡನೇ ಅಧ್ಯಾಯದಲ್ಲಿ ಶಾಸನಗಳ ಅರ್ಥ, ಅವುಗಳ ಪ್ರಕಾರ, ಶಾಸನ ಕವಿಗಳು, ಬರಹಗಾರರು, ಲಿಪಿಕಾರರು, ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡ ಶರಣರು. ಶಾಸನಗಳನ್ನು ಬರೆಯುವ ಕ್ರಮ. ಶಾಸನಗಳಲ್ಲಿ ಕಾಲ ಉಲ್ಲೇಖ ಜೆ.ಎಫ್. ಫ್ಲೀಟರಿಂದ ಮೊದಲ್ಗೊಂಡು, ತೀರಾ ಇತ್ತೀಚಿನವರೆಗಿನ ಜಿಲ್ಲೆಯ ಶಾಸನಗಳ ಸಂಶೋಧನಾಕಾರರು, ಅಧ್ಯಯನಕಾರರು, ಶಾಸನಗಳ ಬಗ್ಗೆ ಜನರ ಅಜ್ಞಾನ, ಅನಾದರ ಮೊದಲಾದವುಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ.

ಮೂರನೆ ಅಧ್ಯಾಯವು ರಾಜಕೀಯ ಚರಿತ್ರೆಯಾಗಿದ್ದು ಅಶೋಕ ಚಕ್ರವರ್ತಿಯಿಂದ ಮೊದಲ್ಗೊಂಡು ನಿಜಾಮನವರೆಗೆ ಈ ನೆಲದಲ್ಲಿ ನಡೆದ ರಾಜಕೀಯ ಏಳು–ಬೀಳಿನ ಚಿತ್ರಣವಿದೆ. ಇಲ್ಲಿ ಶಾಸನಗಳು ಹೆಚ್ಚಾಗಿ ದೊರೆತಿರುವ ಕಲ್ಯಾಣಿ ಚಾಳುಕ್ಯರು, ವಿಜಯನಗರದ ಅರಸರು

ಆದಿಲ್‌ಶಾಹಿಗಳ ಚರಿತ್ರೆಯನ್ನು ಸಂಶೋಧಕರು ವಿವರವಾಗಿ ನೀಡಿದ್ದಾರೆ. ಚರಿತ್ರೆಯೆಂದರೆ ದೊಡ್ಡ ದೊಡ್ಡ ರಾಜವಂಶಗಳ ಇತಿಹಾಸ ಮಾತ್ರ ಎಂಬ ಕಾಲ ಆಗಿಹೋಗಿದೆ. ಈಗ ನಿಜವಾಗಿಯೂ ಅಧ್ಯಯನಕ್ಕೆ ಒಳಪಡಿಸಬೇಕಾದ ಎಷ್ಟೋ ಸಣ್ಣಪುಟ್ಟ ಅರಸುಮನೆತನಗಳಿವೆ. ಅವುಗಳಿಗೆ ಚರಿತ್ರೆಯಲ್ಲಿ ಸರಿಯಾದ ಸ್ಥಾನಮಾನ ಸಿಕ್ಕಿಲ್ಲ. ಹಾಗಾಗಿ ಈ ಪುಸ್ತಕದ ವಿಶೇಷತೆಯೆಂದರೆ ಜಿಲ್ಲೆಯ ಪ್ರಾದೇಶಿಕ ಅರಸು ಮನೆತನಗಳಾದ ಕರಡಿಕಲ್ಲು ಕದಂಬರ (ಕ್ರಿ.ಶ. 10ನೇ ಶತಮಾನದಿಂದ 1215), ಸಾಲುಗುಂದೆಯ ಸಿಂಧರು (ಕ್ರಿ.ಶ. 1021–1153), ಹೈಹಯವಂಶ (ಕ್ರಿ.ಶ. 11ನೆಯ ಶತಮಾನದಿಂದ ಕ್ರಿ.ಶ. 13ನೆಯ ಶತಮಾನ) ಇವರುಗಳ ಬಗ್ಗೆ ವಿಶೇಷವಾಗಿ ಬರೆದಿದ್ದಾರೆ. ನಾಲ್ಕನೆ ಅಧ್ಯಾಯ ಆಡಳಿತ ವ್ಯವಸ್ಥೆ. ಜಿಲ್ಲೆಯ ಶಾಸನಗಳಲ್ಲಿ ಉಕ್ತವಾಗಿರುವ ಆಡಳಿತದ ವಿವಿಧ ಹಂತಗಳು ಆಡಳಿತಾಧಿಕಾರಿಗಳ ಬಗ್ಗೆ ಅಧ್ಯಯನವಿದೆ. ಚಕ್ರವರ್ತಿ, ರಾಣಿಯರು, ಯುವರಾಜ, ಮಂತ್ರಿಗಳು, ಸಂಧಿವಿಗ್ರಹಿ ನ್ಯಾಯಾಡಳಿತ, ಸೈನ್ಯ, ಆಯುಧಗಳು, ವೀರರು ಅಥವಾ ಅವನ ಸಂಬಂಧಿಕರಿಗೆ ಕೊಡಲಾದ ದತ್ತಿಗಳು ಪ್ರಾಂತೀಯ ಹಾಗೂ ಸ್ಥಾನಿಕ ಆಡಳಿತ ಹಾಗೂ ಅವುಗಳ ಅಧಿಕಾರಿಗಳು ಹೀಗೆ ಇದೊಂದು ದೊಡ್ಡ ಅಧ್ಯಾಯವಾಗಿದೆ. ವಿಷಯ ಅಲ್ಲಲ್ಲಿ ಪುನರಾವೃತ್ತಿಗೊಂಡಿದೆ ಎನಿಸುವಂತಿದೆ.

ಐದನೆ ಅಧ್ಯಾಯವು ಸಾಮಾಜಿಕ ವ್ಯವಸ್ಥೆಯಾಗಿದ್ದು, ಪ್ರಾಚೀನ ಚಾತುರ್ವರ್ಣದ ವಿವರಗಳು, ವೃತ್ತಿಗಳ ಆಧಾರದ ಮೇಲೆ ಹುಟ್ಟಿಕೊಂಡ ಜಾತಿಗಳು, ಸಮಾಜದಲ್ಲಿ ಅಸ್ಪೃಶ್ಯರು, ಮಹಿಳೆಯರ ಸ್ಥಾನ, ಮುಸ್ಲಿಮರು, ಹಬ್ಬ–ಹರಿದಿನ, ದಾನ–ಸಿಡಿತಲೆ ಮೊದಲಾದ ಸಾಮಾಜಿಕ ಆಚರಣೆಗಳು ವೀರತ್ವ, ಸತಿ ಮೊದಲಾದ ಮೌಲ್ಯಗಳನ್ನು ಸಾರುವ ಸ್ಮಾರಕ ಶಿಲೆಗಳು. ಪ್ರಾಚೀನ ವಿದ್ಯಾಕೇಂದ್ರಗಳಾದ ಅಗ್ರಹಾರ, ಬ್ರಹ್ಮಪುರಿ ಮೊದಲಾದವುಗಳ ಪಠ್ಯಕ್ರಮ, ಬೋಧನಾ ವ್ಯವಸ್ಥೆ, ಕುರಿತ ವಿಷಯ ಸಂಗ್ರಹವಿದೆ. ಆರನೆ ಅಧ್ಯಾಯವು ಆರ್ಥಿಕ ವ್ಯವಸ್ಥೆಯಾಗಿದ್ದು, ಹಣಕಾಸಿನ ವಿವಿಧ ಮೂಲಗಳಾದ ಒಕ್ಕಲುತನ, ನೀರಾವರಿ, ಭೂಕಂದಾಯ, ವಿವಿಧ ಬಗೆಯ ಕೈಗಾರಿಕೆಗಳು ಹಾಗೂ ಅವುಗಳ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆಗಳು, ನಾಣ್ಯಗಳು, ವ್ಯಾಪಾರ, ತೂಕ ಮತ್ತು ಅಳತೆ ಮೊದಲಾದ ಅನೇಕ ವಿಷಯಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಏಳನೆ ಅಧ್ಯಾಯವು ಧಾರ್ಮಿಕ ವ್ಯವಸ್ಥೆಯಾಗಿದ್ದು ಜಿಲ್ಲೆಯ ಶಾಸನಗಳಲ್ಲಿ ಕಂಡುಬರುವ ಧಾರ್ಮಿಕ ಅಂಶಗಳನ್ನು ವಿವರಿಸಲಾಗಿದೆ. ಬೌದ್ಧ, ಜೈನ, ವೈಷ್ಣವ, ಶೈವಮತಗಳು, ಅವುಗಳ ವಿಭಿನ್ನ ಪಂಥಗಳು ದೇವಾಲಯಗಳಲ್ಲಿರುವ ಮೂರ್ತಿಶಿಲ್ಪಗಳು, ಇಸ್ಲಾಂ ಧರ್ಮ ಮತ್ತು ಸೂಫಿ ಸಂಪ್ರದಾಯ, ಮುಸ್ಲಿಂ ಕಟ್ಟಡಗಳು ಮೊದಲಾದವುಗಳ ಕುರಿತು ಇಲ್ಲಿ ಸಾಕಷ್ಟು ವಿವರವಿದೆ. ಕೊನೆಯ ಅಧ್ಯಾಯ ಸಮಾರೋಪ. ಇಲ್ಲಿ ಅವರು ಸ್ವತಃ ಸಂಶೋಧಿಸಿದ ಶಾಸನಗಳ ಬಗ್ಗೆ ಮಾಹಿತಿ ನೀಡುವುದರೊಂದಿಗೆ, ತಮ್ಮ ಸಂಶೋಧನಾ ಗ್ರಂಥಧ ಸಾರವನ್ನು ನೀಡಿದ್ದಾರೆ. ಅದರೊಂದಿಗೆ ಹಾಳಾಗುತ್ತಿರುವ ಶಾಸನಗಳನ್ನು ಸಂರಕ್ಷಿಸಬೇಕೆಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

**2**

ಸಂಶೋಧಕರು ಜಿಲ್ಲೆಯ ಶಾಸನಗಳಲ್ಲಿ ದೊರೆಯುವ ಹಲವು ವಿಷಯಗಳನ್ನು ಸಂಗ್ರಹಿಸಿ, ಅವುಗಳಿಗೊಂದು ಮೂರ್ತರೂಪವನ್ನು ನೀಡುವ ಕಾರ್ಯ ಮಾಡಿದ್ದಾರೆ. ಧಾರ್ಮಿಕ ಪಂಥಗಳಾದ ಪಾಶುಪತ, ಕಾಳಾಮುಖ, ಗಾಣಪತ್ಯ, ಶಾಕ್ತ್ಯ, ಕೌಮಾರ ಸಂಪ್ರದಾಯಗಳು ಪ್ರಚಲಿತವಿದ್ದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನನಗೆ ತಿಳಿದಿರುವ ಮಟ್ಟಿಗೆ ಜಿಲ್ಲೆಯಲ್ಲಿದ್ದ ಪ್ರಾಚೀನ ಟಂಕಶಾಲೆಗಳು, ಮೊಸಂಗಿ ವೀಸದ ನಾಣ್ಯದ ಬಗ್ಗೆ ಇದೇ. ಮೊದಲ ಬಾರಿಗೆ ಸಂಶೋಧನಾ ಗ್ರಂಥದಲ್ಲಿ ಉಲ್ಲೇಖಗೊಂಡಿರಬೇಕೆನಿಸುತ್ತದೆ. ತಾವು ಹೊಸದಾಗಿ ಶೋಧಿಸಿದ 18 ಶಾಸನಗಳ ಪಠ್ಯ ಹಾಗೂ





ವಿವರಣೆಯನ್ನು ಅನುಬಂಧದಲ್ಲಿ ನೀಡಿರುವುದು, ಶಾಸನಾಭ್ಯಾಸಿಗಳಿಗೆ ಸಹಾಯವಾಗುವಂತಿದ್ದು ಗ್ರಂಥದ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಹೀಗೆ ಹಲವು ದೃಷ್ಟಿಯಿಂದ ಇದೊಂದು ಮಹತ್ವದ ಸಂಶೋಧನಾ ಗ್ರಂಥವೆನಿಸುತ್ತದೆ. ಅವರು ತಾವು ಹಾಕಿಕೊಂಡಿದ್ದ ಚೌಕಟ್ಟಿನ ಇತಿಮಿತಿಯಲ್ಲಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ಮತ್ತು ಪ್ರಾಮಾಣಿಕತೆಯಿಂದ ಮಾಡಿದ್ದಾರೆ.

ಆದರೂ ಇಲ್ಲಾಗಿರುವ ಒಂದೆರಡು ಲೋಪದೋಷಗಳನ್ನು ಉಲ್ಲೇಖಿಸಬೇಕಾಗುತ್ತದೆ. ಒಂದೆಡೆ (ಪುಟ 99) ಚನ್ನಬಸಪ್ಪನವರು ರಾಯಚೂರು ಜಿಲ್ಲಾ ಪ್ರದೇಶವನ್ನು ಕ್ರಿ.ಶ. 1699 ರಿಂದ 1724ರ ಕಾಲದಲ್ಲಿ ಬ್ರಿಟಿಷ್ ಅಧಿಕಾರಿಗಳ ಆಳಿರಬೇಕೆಂದು ಊಹಿಸಿದ್ದಾರೆ. ಇದು ಸರಿಯಾದುದಲ್ಲ. ಹೈದರಾಬಾದ ಸಂಸ್ಥಾನವು ಸ್ಥಾಪನೆಯಾದುದು 1724ರಲ್ಲಿ. ಅದರ ಮೂರನೆ ನಿಜಾಮ್ ಸಲಿಬತ ಜಂಗನ ಕಾಲದಲ್ಲಿ ಬ್ರಿಟಿಷರು ಹೈದರಾಬಾದಿಗೆ ಬಂದದ್ದು. ಅಂದಾಗ ಮೇಲೆ ಹೇಳಿದ ಕಾಲದಲ್ಲಿ ಬ್ರಿಟಿಷರು ಆಳಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆ ವೇಳೆಯಲ್ಲಿ ಇಲ್ಲಿ ನಾಯಕ ಮನೆತನಗಳೇ ಪ್ರಬಲವಾಗಿದ್ದವು. ಮತ್ತೊಂದೆಡೆ (ಪುಟ 197) ಇವರು ಯುದ್ಧವಾದ್ಯಗಳ ಬಗ್ಗೆ ಹೇಳುತ್ತಾ ಕೊಳಲನ್ನು ಯುದ್ಧವಾದ್ಯ ಎಂದು ಭಾವಿಸಿರುವುದು ತಪ್ಪು. ಕೊಳಲು ಆಹ್ಲಾದಕರವಾದ್ಯ. ಅದರಿಂದ ಬರುವ ಧ್ವನಿ ಇಂಪಾದುದು. ಇತರರನ್ನು ಆಕರ್ಷಿಸುವ ಶಕ್ತಿ ಅದಕ್ಕಿದೆ. ಇಂಥ ವಾದ್ಯ ಯುದ್ಧ ಸಂದೇಶವನ್ನು ಮುಟ್ಟಿಸುವುದಾಗಲಿ ಅಥವಾ ಜನರಲ್ಲಿ ಕೆಚ್ಚು ತುಂಬಿ ಬಡಿದೆಬ್ಬಿಸುವುದಾಗಲಿ ಹೇಗೆ ಸಾಧ್ಯ? ಅಲ್ಲದೆ ಇವರು ಹೇಳಿರುವ ಬಳಗಾನೂರು ಆಂಜನೇಯ ದೇವಾಲಯದ ಶಿಲೆ ಸ್ಮಾರಕ ಶಿಲೆಯೇ ಹೊರತು ವೀರಗಲ್ಲು ಅಲ್ಲ. ಇನ್ನೊಂದೆಡೆ (ಪುಟ 88 ಮತ್ತು 351) ಇವರು ಧರಣಿಕೋಟೆ ಅಮರೇಶ್ವರವನ್ನು ಲಿಂಗಸಗೂರು ತಾಲೂಕಿನ (ಗುಡಗುಂಟೆ) ಅಮರೇಶ್ವರ ಎಂದು ಕಲ್ಪಿಸಿರುವುದು ಸರಿಯಲ್ಲ. ಏಕೆಂದರೆ ಆ ಶಾಸನ ನೀಡುವುದು ದೂರದ ಆಂಧ್ರಪ್ರದೇಶದ ವಿವರಗಳನ್ನು. ಅಲ್ಲಿ ಗೆಲುವು ಪಡೆದ ರಾಯ ಇಲ್ಲಿ ಬಂದು ಧರ್ಮ ಆಚರಿಸಿದ ಎನ್ನುವುದು ಸರಿಯಲ್ಲ. ಬಹುಶಃ ರಾಯಚೂರಿನ ಮಲ್ಲೂಖಾನ, ಉದ್ದಂಡಖಾನರ ಸೋಲು, ಸೆರೆಯ ವಿಷಯ ಅವರ ನಿರ್ಣಯವನ್ನು ಇಲ್ಲಿಗೆ ಎಳೆತಂದಂತಿದೆ. ಅವರನ್ನು ಕಳಿಂಗ ದಂಡಯಾತ್ರೆಯ ಕಾಲದಲ್ಲಿ ಸೆರೆಸಿಕ್ಕ ರಾಯಚೂರು ಪ್ರಾಂತ್ಯದ ಆದಿಲ್‌ಶಾಹಿ ಸೇನಾಧಿಕಾರಿಗಳು ಎಂದು ಭಾವಿಸುವುದೇ ಸೂಕ್ತವಾದುದು. ಆದರೂ ಶಾಸನಗಳ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿರುವುದು ಸಂಶೋಧನಾ ಗ್ರಂಥದ ವೈಶಿಷ್ಟ್ಯತೆಯಾಗಿದೆ.

ಪ್ರಬಂಧ ರಚನೆಯಲ್ಲಿ ಚನ್ನಬಸಪ್ಪನವರು ತೋರಿದ ಕಾಳಜಿ, ಪಟ್ಟ ಪರಿಶ್ರಮ ಎದ್ದುಕಾಣುವಂತಿದೆ. ಜಿಲ್ಲೆಯನ್ನೆಲ್ಲ ಸಂಚರಿಸಿ, ಅಲ್ಲಿರುವ ಶಾಸನಗಳನ್ನು, ದೇವಾಲಯಗಳನ್ನು, ಮೂರ್ತಿಶಿಲ್ಪಗಳನ್ನು, ಸ್ಮಾರಕ ಶಿಲೆಗಳನ್ನು ಗಮನಿಸಿದ್ದಾರೆ. ಹಲವಾರು ಗ್ರಂಥಗಳ ಅಧ್ಯಯನವನ್ನು ಕೈಗೊಂಡಿದ್ದಾರೆ. ಆಯಾ ಅಧ್ಯಾಯದ ಕೊನೆಯಲ್ಲಿ ಕೊಟ್ಟಿರುವ ಅಡಿಟಿಪ್ಪಣಿಗಳು, ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಆಧಾರ ಗ್ರಂಥಗಳು ಅವರ ಅಧ್ಯಯನದ ವ್ಯಾಪ್ತಿಯನ್ನು ಸೂಚಿಸುತ್ತವೆ.

ಈ ಸಂಶೋಧನಾ ಗ್ರಂಥಕ್ಕೆ ಪ್ರೊ. ಬಿ. ರಾಜಶೇಖರಪ್ಪನವರು ಮುನ್ನುಡಿಯನ್ನು ಬರೆದಿದ್ದಾರೆ. ಸುಂದರವಾದ ರಕ್ಷಾಪುಟವನ್ನು ಹೊಂದಿದೆ. ಡಾ. ದೇವರ ಕೊಂಡಾರೆಡ್ಡಿ ಹಾಗೂ ಡಾ. ಎಂ.ವಿ. ಕೃಷ್ಣಪ್ಪನವರ ಬೆನ್ನುಡಿಯು ಪುಸ್ತಕದ ಮೌಲ್ಯವನ್ನು ಕೆಲವೇ ಮಾತುಗಳಲ್ಲಿ ತಿಳಿಸುತ್ತವೆ.